ಶನಿವಾರ, ಫೆಬ್ರುವರಿ 14, 2026 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಂಭ್ರಮ

ಪ್ರೇಮಿಗಳ ದಿನಕ್ಕಾಗಿ ಗುವಾಹಟಿಯಲ್ಲಿ ಯುವತಿಯರು ಉಡುಗೊರೆಗಳನ್ನು ಖರೀದಿಸಿದರು

ಪರಾಗ್‌ಗೆ ಸಾರಥ್ಯ

ಆಲ್‌ರೌಂಡರ್ ರಿಯಾನ್ ಪರಾಗ್ ಅವರನ್ನು ಮುಂಬರುವ ಐಪಿಎಲ್ ಟೂರ್ನಿಗೆ ರಾಜಸ್ಥಾನ ರಾಯಲ್ಸ್ ತಂಡವು ನಾಯಕನನ್ನಾಗಿ ಶುಕ್ರವಾರ ಹೆಸರಿಸಿದೆ

ಒಳಾಂಗಣ ಒಳಗೊಂಡಿದೆ

2.5 ಬಿಹೆಚ್‌ಕೆ ಡೂಪ್ಲೆಕ್ಸ್ ರೂ.1.33 ಕೋಟಿಯಿಂದ ಆರಂಭ 1586 ಚದರಡಿ	3.5 ಬಿಹೆಚ್‌ಕೆ ಡೂಪ್ಲೆಕ್ಸ್ ರೂ.1.52 ಕೋಟಿಯಿಂದ ಆರಂಭ 1692-1907 ಚದರಡಿ	4.5 & 5.5 ಬಿಹೆಚ್‌ಕೆ ಡೂಪ್ಲೆಕ್ಸ್ ರೂ.2.34 ಕೋಟಿಯಿಂದ ಆರಂಭ 2471-2807 ಚದರಡಿ	2&3 ಬಿಹೆಚ್‌ಕೆ ಪೆಂಟ್‌ಹೌಸಸ್ ರೂ.1.63 ಕೋಟಿಯಿಂದ ಆರಂಭ ಖಾಸಗಿ ಮೇಲ್ಛಾವಣಿಯೊಂದಿಗೆ

Watch video shot at site

Scan to chat

AIIKYA VILLAGE

SARJAPUR

741513 1234

RERA No.: PRM/KA/RERA/1251/308/PR/031025/008136

ಪ್ರತಿ ಅಡುಗೆ ಕೋಣೆಗೆ ಕೇಂದ್ರೀಕೃತ ಆರ್‌ಒ ನೀರು • ಬಿಸಿನೀರು ಸ್ನಾನಕ್ಕೆ ಕೇಂದ್ರೀಕೃತ ಸೌರಶಕ್ತಿ ಚಾಲಿತ ಹೀಟ್‌ಪಂಪ್ • ಯಂತ್ರರಹಿತ ಎಕೋ-ಎಸ್‌ಟಿಪಿ • ಕೇಂದ್ರೀಕೃತ ನೀರು ಸಂಸ್ಕರಣಾ ಘಟಕ • ಸುಸ್ಥಿರ ಪರಿಸರ ಗ್ರಾಮಕ್ಕೆ ಮಳೆನೀರು ಸಂಗ್ರಹ ಸಂಪುಗಳು

ಶನಿವಾರ, ಫೆಬ್ರುವರಿ 14, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹಬ್ಬದ ಸಿದ್ಧತೆ

ಪಶ್ಚಿಮ ಬಂಗಾಳದ ಕುಶಲಕರ್ಮಿಯೊಬ್ಬರು ಮಹಾ ಶಿವರಾತ್ರಿಗಾಗಿ ಮಣ್ಣಿನ ಮೂರ್ತಿಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದರು

ಆಸ್ಟ್ರೇಲಿಯಾಕ್ಕೆ ಆಘಾತ

ಜಿಂಬಾಬ್ವೆ ತಂಡದ ಬ್ರಯಾನ್ ಬೆನೆಟ್ (ಔಟಾಗದೇ 64) ಅವರು ಟಿ20 ವಿಶ್ವಕಪ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಅರ್ಧಶತಕ ದಾಖಲಿಸಿದರು. ಈ ಪಂದ್ಯವನ್ನು ಜಿಂಬಾಬ್ವೆ 23 ರನ್‌ಗಳಿಂದ ಗೆದ್ದಿತು

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಕರ್ನಾಟಕ ಸರ್ಕಾರ

ಉತ್ತಮ ಆಡಳಿತ ನಿಮಗಾಗಿ

ಜನಸೇವೆಯಲ್ಲಿ

ಸಾರ್ಥಕ ಸಾವಿರ ದಿನ

100000

ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ

ಸದ್ದಿಲ್ಲದೇ ನಡೆದ ಕ್ರಾಂತಿ - ಪ್ರಣಾಳಿಕೆಯಲ್ಲಿ ಹೇಳದೆ ಕೊಟ್ಟ ಗ್ಯಾರಂಟಿ

ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ

ಫೆಬ್ರವರಿ
14
ಶನಿವಾರ
11:00 ಗಂಟೆಗೆ, ಹಾವೇರಿ

ಐತಿಹಾಸಿಕ ಕ್ರಾಂತಿ

ಕುಟುಂಬಗಳಿಗೆ ಹಕ್ಕುಪತ್ರಗಳು

1,11,000
2023- ಮೇ 2025

1,00,000
ಮೇ 2025ರ ನಂತರ

1,39,476
ಮುಂದಿನ ಗುರಿ

ಹಿಂದೆಂದೂ ಆಗದ ವೇಗದಲ್ಲಿ ಸುಧಾರಣೆ

- **ಪೋಡಿ ಅಭಿಯಾನ:** 1.9 ಲಕ್ಷ ರೈತರ ಭೂಮಿ ಪೋಡಿ ಪ್ರಗತಿಯಲ್ಲಿ
- **ಪೌತಿ ಖಾತೆ:** 14,48,536 ಸರ್ವೇ ನಂಬರ್‌ಗಳ ಪೌತಿ ಖಾತೆ ಪೂರ್ಣ

ಡಿಜಿಟಲೀಕರಣ: 67+ ಕೋಟಿ ದಾಖಲೆಗಳ ಸ್ಕ್ಯಾನಿಂಗ್

ಸುರಕ್ಷತೆ: 22.15 ಕೋಟಿ ಆಸ್ತಿಗಳಿಗೆ ಆಧಾರ್ ಲಿಂಕ್

ಲ್ಯಾಂಡ್ ಬೀಟ್: 96% ಸರ್ಕಾರಿ ಆಸ್ತಿ ಜಿಯೋ ಫೆನ್ಸಿಂಗ್

ಕಾವೇರಿ 2.0: ನೋಂದಣಿಯಲ್ಲಿ ಸುಧಾರಣೆ

ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡ ಅವರೊಂದಿಗೆ ಸುದ್ದಿಗೋಷ್ಠಿಯೊಂದರಲ್ಲಿ ಮಾನ್ಯ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವಾನಂದ ಪಾಟೀಲ್ ಅವರು.

ಕಂದಾಯ ಸೇವೆಗಳು ಈಗ **ಸರಳ. ಸುಲಭ. ಸುಲಲಿತ.**

ಜನ ಸೇವೆಯ ಸಮರ್ಪಣೆ

ಭಾರತದ ಸಾರ್ವಭೌಮತ್ವ , ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

www.revenuecommissionerate.karnataka.gov.in

‘ಸರ್ಕಾರಕ್ಕೆ ಬಾರುಕೋಲಿನ ಏಟು ಕೊಡಿ’

ಭಾರತ–ಅಮೆರಿಕ ಒಪ್ಪಂದಕ್ಕೆ ವಿರೋಧ • ಕಿಸಾನ್ ಯೂನಿಯನ್ ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಆಕ್ರೋಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಮೆರಿಕ–ಭಾರತ ಒಪ್ಪಂದ ಕೃಷಿ ಕ್ಷೇತ್ರಕ್ಕೆ ಮಾರಕ
- ಒಪ್ಪಂದದಿಂದ ಭಾರತ ಹಿಂದೆ ಸರಿಯಲಿ
- ಪ್ರಧಾನಿ ನರೇಂದ್ರ ಮೋದಿ ಅವರೊ, ಟ್ರಂಪೋ ಎಂದು ಪ್ರಶ್ನೆ

ಚಾಮರಾಜನಗರ: ‘ರೈತರು ರಾಸುಗಳಿಗೆ ಬಾರುಕೋಲಿನ ಏಟು ಕೊಡುವಂತೆ, ಸರ್ಕಾರ ದಾರಿ ತಪ್ಪಿದಾಗಲೂ ದಂಡಿಸಬೇಕು’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಶುಕ್ರವಾರ ಇಲ್ಲಿ ಸಲಹೆ ಮಾಡಿದರು.

ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ, ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ 90ನೇ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ‘ಸ್ವಾಭಿಮಾನದೆಡೆಗೆ ಹಸಿರು ಸೇನಾನಿಗಳ ಕಾಲ್ನಡಿಗೆ ಹಾಗೂ ರೈತ ಸಮಾವೇಶ’ದಲ್ಲಿ ಅವರು ಮಾತನಾಡಿದರು.

‘ಅಮೆರಿಕ–ಭಾರತ ನಡುವಿನ ವ್ಯಾಪಾರ ಒಪ್ಪಂದ ದೇಶದ ಕೃಷಿ ಕ್ಷೇತ್ರಕ್ಕೆ ಮಾರಕವಾಗಲಿದೆ’ ಎಂದು ಹೇಳಿದರು.

‘ಅಮೆರಿಕದಿಂದ ಆಮದಾಗುವ ಕೆಲವು ಕೃಷಿ ಉತ್ಪನ್ನಗಳ ಮೇಲೆ ಶೂನ್ಯ ಸುಂಕ ವಿಧಿಸಿರುವುದು ದೇಶದಲ್ಲಿ ಕೃಷಿ ಕ್ಷೇತ್ರಕ್ಕೆ ದೊಡ್ಡ ಪೆಟ್ಟು ಕೊಡಲಿದೆ. ಕೂಡಲೇ ಭಾರತ ಈ ಒಪ್ಪಂದದಿಂದ ಹಿಂದೆ ಸರಿಯಬೇಕು. ಇಲ್ಲವಾದರೆ ರೈತರೇ ಬಾರುಕೋಲಿನಿಂದ ಬಿಸಿ ಮುಟ್ಟಿಸಲಿದ್ದಾರೆ’ ಎಂದು ಎಚ್ಚರಿಸಿದರು.

‘ಭವಿಷ್ಯದಲ್ಲಿ ಸಂಘರ್ಷದ ದಿನಗಳು ಬರಲಿದ್ದು, ರೈತ ಸಮುದಾಯ ಸಂಘಟಿತವಾಗಿ ಹೋರಾಟಕ್ಕೆ ಸಜ್ಜಾಗಬೇಕು’ ಎಂದು ಕೃಷಿಕರಿಗೆ ಹೇಳಿದರು.

ವಕೀಲ ರವಿವರ್ಮ ಕುಮಾರ್ ಮಾತನಾಡಿ, ‘ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸಿದ್ಧಉಡುಪುಗಳ ಮೇಲೆ ಶೇ 18ರಷ್ಟು ತೆರಿಗೆ ವಿಧಿಸುವ ಅಮೆರಿಕ, ಬಾಂಗ್ಲಾದೇಶದ ಸಿದ್ಧ ಉಡುಪುಗಳಿಗೆ ಶೂನ್ಯ ತೆರಿಗೆ ವಿನಾಯಿತಿ ನೀಡಿದೆ. ಭಾರತ– ಅಮೆರಿಕ ವ್ಯಾಪಾರ ಒಪ್ಪಂದ ಕೃಷಿ ಕ್ಷೇತ್ರದ ಮೇಲೆ ಪರಿಣಾಮ ಬೀರಲಿದೆ’ ಎಂದು ಎಚ್ಚರಿಸಿದರು.

ಚಾಮರಾಜನಗರದಲ್ಲಿ ಶುಕ್ರವಾರ ‘ಸ್ವಾಭಿಮಾನದೆಡೆಗೆ ಹಸಿರು ಸೇನಾನಿಗಳ ಕಾಲ್ನಡಿಗೆ ಹಾಗೂ ರೈತ ಸಮಾವೇಶ’ದಲ್ಲಿ ಅಮೆರಿಕ–ಭಾರತ ವ್ಯಾಪಾರ ಒಪ್ಪಂದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ರೈತರು ಪ್ರತಿಭಟಿಸಿದರು

ಚಲನಚಿತ್ರ ನಟ ಅಶೋಕ್ ಮಾತನಾಡಿ, ‘ಆಳುವ ಸರ್ಕಾರಗಳು ಜನರನ್ನು ಕುರಿಗಳನ್ನಾಗಿ ಮಾಡಿದ್ದು ದೇಶವನ್ನೇ ಮಾರುವ ಸಂಚು ರೂಪಿಸಿವೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರೋ ಅಥವಾ ಟ್ರಂಪೋ ತಿಳಿಯುತ್ತಿಲ್ಲ’ ಎಂದು ಟೀಕಿಸಿದರು.

ಬಿಕೆಯು ರಾಷ್ಟ್ರೀಯ ಕಾರ್ಯದರ್ಶಿ ಯುದ್‌ವೀರ್ ಸಿಂಗ್, ಅಧ್ಯಕ್ಷೀಯ ಮಂಡಳಿ ಸದಸ್ಯೆ ಚುಕ್ಕಿ ನಂಜುಂಡಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿ ಅರ್ಕೇಶ್ ಮಾತನಾಡಿದರು.

ಸುದ್ದಿ 2 ನಿಮಿಷ

‘ಕಂದಾಯ ಗ್ರಾಮ ಘೋಷಣೆಗೆ ದಾಖಲೆಗಳ ಸಂಗ್ರಹ’

ಹುಬ್ಬಳ್ಳಿ: ‘ರಾಜ್ಯದಲ್ಲಿ ದಾಖಲೆಯಿಲ್ಲದ 6,500 ವಸತಿ ಪ್ರದೇಶಗಳನ್ನು ಗುರುತಿಸಿ, 4,500ಕ್ಕೂ ಹೆಚ್ಚು ಪ್ರದೇಶಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ. ಉಳಿದ ವಸತಿ ಪ್ರದೇಶಗಳ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

‘ಯಾರಿಂದಲೂ ಅರ್ಜಿ ಪಡೆಯದೆ, ಸರ್ಕಾರವೇ ದಾಖಲೆಗಳನ್ನು ಸಂಗ್ರಹಿಸಿ ಕಂದಾಯ ಗ್ರಾಮವೆಂದು ಘೋಷಿಸುತ್ತಿದೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಉಳಿದ ವಸತಿ ಪ್ರದೇಶಗಳನ್ನು 2026ರ ಡಿಸೆಂಬರ್ ಒಳಗೆ ಕಂದಾಯ ಗ್ರಾಮಗಳೆಂದು ಘೋಷಿಸುವ ಗುರಿ ಇತ್ತು. ಕೇಂದ್ರ ಸರ್ಕಾರದ ಜನಗಣತಿ ಇರುವುದರಿಂದ, ಹೊಸ ಕಂದಾಯ ಗ್ರಾಮ ಘೋಷಿಸದಂತೆ ಸೂಚಿಸಿದೆ. ಸೂಚನೆ ಹಿಂಪಡೆದ ತಕ್ಷಣ ಹೊಸ ಕಂದಾಯ ಗ್ರಾಮಗಳನ್ನು ಘೋಷಿಸಲಾಗುವುದು’ ಎಂದರು.



‘ಸರ್ಕಾರಿ ಜಮೀನುಗಳ ಒತ್ತುವರಿ ತಡೆಯಲು ತಂತ್ರಜ್ಞಾನ ಆಧಾರಿತ ಲ್ಯಾಂಡ್ ಬೀಟ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಈಗಾಗಲೇ ಕಂದಾಯ ಇಲಾಖೆಯ ಜಮೀನುಗಳು ಆ ಸಾಫ್ಟ್‌ವೇರ್‌ನಲ್ಲಿ ದಾಖಲೆ ಸಹಿತ ಸೇರ್ಪಡೆಯಾಗಿವೆ. ಉಳಿದ ಇಲಾಖೆಗಳಿಗೂ ಅವಕಾಶ ಕಲ್ಪಿಸಲಾಗುತ್ತಿದ್ದು, ಆಸಕ್ತಿಯಿಂದ ತಮ್ಮ ಇಲಾಖೆಯಲ್ಲಿನ ಜಮೀನುಗಳನ್ನು ಸೇರ್ಪಡೆ ಮಾಡಬಹುದು’ ಎಂದರು.

ಯಾವ ಪುರುಷಾರ್ಥಕ್ಕೆ ಸಮಾವೇಶ: ಆರ್.ಅಶೋಕ

ಚಿತ್ರದುರ್ಗ: ‘ಕಾಂಗ್ರೆಸ್ ಸರ್ಕಾರದ ಆಡಳಿತದ ಸಾವಿರ ದಿನಗಳು ರಾಜ್ಯದ ಪಾಲಿಗೆ ಕರಾಳ ದಿನಗಳಾಗಿವೆ. ಈಗ ಯಾವ ಪುರುಷಾರ್ಥಕ್ಕೆ ಸಾವಿರ ದಿನಗಳ ಸಾಧನಾ ಸಮಾವೇಶ ಮಾಡುತ್ತಿದ್ದಾರೋ ಗೊತ್ತಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಡಾ ಹಗರಣದ ಮೂಲಕ ಸಿದ್ದರಾಮಯ್ಯ ಅವರು ಹಗರಣಗಳ ಮೂಲ ಪುರುಷ ಎನಿಸಿದ್ದಾರೆ. ಸಾವಿರ ದಿನಗಳು ಬರೀ ಲೂಟಿಯಿಂದ ಕೂಡಿದ್ದವು. ರಾಹುಲ್ ಗಾಂಧಿ ಅವರಿಗೆ ಲೂಟಿ ಹಣ ರವಾನೆಯಾಗುತ್ತಿದೆ. ಅಲಿಬಾಬಾ ಮತ್ತು 30 ಮಂದಿ ಕಳ್ಳರಿಂದ ಸಾಧನಾ ಸಮಾವೇಶ ನಡೆಯುತ್ತಿದೆ’ ಎಂದು ಆರೋಪಿಸಿದರು.

‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದೆಹಲಿಗೆ ಗಾಳಿ ಕುಡಿಯಲು ಬಂದಿಲ್ಲ, ರಾಜಕೀಯ ಮಾಡಲು ಬಂದಿದ್ದೇನೆ ಎನ್ನುತ್ತಾರೆ. ಸಿದ್ದರಾಮಯ್ಯ ಅವರೇ 5 ವರ್ಷ ಮುಖ್ಯಮಂತ್ರಿ ಎಂದು ಅವರ ಬೆಂಬಲಿಗರು ಹೇಳುತ್ತಾರೆ. ಈಗ ರಾಜ್ಯದಲ್ಲಿ ಯಾರು ಮುಖ್ಯಮಂತ್ರಿ ಎಂಬುದೇ ಗೊತ್ತಿಲ್ಲ’ ಎಂದು ಟೀಕಿಸಿದರು.

ಚಿಟಿಕೆ ಸುದ್ದಿ

ಕೆಎಂಎಫ್ ಅಧ್ಯಕ್ಷ ಸ್ಥಾನದ ಮೇಲೆ ಹಿಟ್ನಾಳ ಕಣ್ಣು

ರಾಘವೇಂದ್ರ ಹಿಟ್ನಾಳ

ಕೊಪ್ಪಳ: ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ (ರಾಬಕೊವಿ) ಹಾಲು ಒಕ್ಕೂಟದ ಅಧ್ಯಕ್ಷ, ಕೊಪ್ಪಳ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ ಅವರು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಇದಕ್ಕಾಗಿ ತೆರೆಮರೆಯಲ್ಲಿ ಕಸರತ್ತು ನಡೆಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೆಎಂಎಫ್ ಅಧ್ಯಕ್ಷನಾಗುವ ಆಸೆಯಿದೆ. ಪಕ್ಷದ ನಾಯಕರು ಹಾಗೂ ನಿರ್ದೇಶಕರ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವೆ. ಅಂತಿಮವಾಗಿ ಹೈಕಮಾಂಡ್ ಹೇಳಿದಂತೆ ಮಾಡುತ್ತೇನೆ. ನಾವೆಲ್ಲರೂ ಒಂದೇ ಇದ್ದು ಬಣ ರಾಜಕಾರಣ ಇಲ್ಲ’ ಎಂದರು.

ಕರಾವಳಿಯಲ್ಲಿ ಇನ್ನೆರಡು ದಿನ ಶಾಖ ಅಲೆ

ಕಾರವಾರ: ಉತ್ತರಕನ್ನಡ ಜಿಲ್ಲೆಯಲ್ಲಿ ಫೆ.14 ಮತ್ತು 15ರಂದು ಶಾಖದ ಅಲೆಯ ವಾತಾವರಣ ಇರಲಿದ್ದು, ಆರ್ದ್ರತೆ ಅಧಿಕವಾಗಿರುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ಮೂರು–ನಾಲ್ಕು ದಿನಗಳಿಂದ ಜಿಲ್ಲೆಯ ಕರಾವಳಿ ಭಾಗದಲ್ಲಿ ಸೆಕೆ ಇದೆ. ಬೇಸಿಗೆ ಆರಂಭದಲ್ಲೇ ಸೆಕೆ ಹೆಚ್ಚಳದ ಮುನ್ಸೂಚನೆ ನೀಡಿದೆ. ‘ಶಾಖ ಅಲೆ ಕಾರಣ ಎರಡು ದಿನ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಮಧ್ಯಾಹ್ನ 12 ರಿಂದ ಸಂಜೆ 4ರವರೆಗೆ ಮನೆಯಿಂದ ಹೊರಗೆ ಓಡಾಡುವುದನ್ನು ಸಾಧ್ಯವಾದಷ್ಟು ತಪ್ಪಿಸಬೇಕು’ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಸಲಹೆ ಮಾಡಿದ್ದಾರೆ.

ಫೆ.12ರಂದು ಕಾರವಾರದಲ್ಲಿ 37.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಇದು ದೇಶದಲ್ಲಿ ಅತಿ ಹೆಚ್ಚು ಉಷ್ಣಾಂಶವಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಶಾಸಕ ಬಂಧನ

‘ಬೈರತಿಗೆ ಆರೋಗ್ಯ ಸಮಸ್ಯೆ: ಚಿಕಿತ್ಸೆ ನೀಡಿ’

ಪ್ರಜಾವಾಣಿ ವಾರ್ತೆ

ಬೈರತಿ ಬಸವರಾಜ

ಮುಖ್ಯಾಂಶಗಳು

- ಬಸವರಾಜ ಅವರಿಗೆ ಹೃದಯ ಸಂಬಂಧಿ ಸಮಸ್ಯೆ
- ಸಿಐಡಿ ಕಚೇರಿಯಲ್ಲಿ ವಿಚಾರಣೆ ನಡೆಸಿದ್ದ ಪೊಲೀಸರು
- 14 ದಿನ ಸಿಐಡಿ ಕಸ್ಟಡಿಗೆ ನೀಡುವಂತೆ ಮನವಿ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಅವರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ, ಪ್ರಕರಣದ ಐದನೇ ಆರೋಪಿ ಬೈರತಿ ಬಸವರಾಜ ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಕಂಡುಬಂದಿದ್ದು, ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವಂತೆ 42ನೇ ಎಸಿಜೆಎಂ ನ್ಯಾಯಾಲಯ ಶುಕ್ರವಾರ ಸಿಐಡಿ ಪೊಲೀಸರಿಗೆ ಸೂಚಿಸಿತು.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ಗುರುವಾರ ರಾತ್ರಿ ಬೈರತಿ ಅವರನ್ನು ಪೊಲೀಸರು ಬಂಧಿಸಿ ಸಿಐಡಿ ಪೊಲೀಸರಿಗೆ ಹಸ್ತಾಂತರಿಸಿದ್ದರು.

ಸಿಐಡಿ ಕಚೇರಿಯಲ್ಲೇ ಗುರುವಾರ ರಾತ್ರಿ ಅವರನ್ನು ವಿಚಾರಣೆ ನಡೆಸಿದ್ದ ಪೊಲೀಸರು, ಶುಕ್ರವಾರ ಮಧ್ಯಾಹ್ನ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದರು. ಬಳಿಕ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು.

ಕೊಲೆ ಪ್ರಕರಣದಲ್ಲಿ ಬೈರತಿ ಬಸವರಾಜ ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದ್ದು, 14 ದಿನ ಸಿಐಡಿ ಕಸ್ಟಡಿಗೆ ನೀಡುವಂತೆ ಪ್ರಾಸಿಕ್ಯೂಷನ್ ಪರ ವಕೀಲರು ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ಇದೇ ವೇಳೆ ಆರೋಪಿ ಪರ ವಕೀಲರು, ಬೌರಿಂಗ್ ಆಸ್ಪತ್ರೆಯಲ್ಲಿ ಬೈರತಿ ಬಸವರಾಜ ಅವರನ್ನು ತಪಾಸಣೆಗೆ ಒಳಪಡಿಸಿದಾಗ ಹೃದಯ ಸಂಬಂಧಿ ಸಮಸ್ಯೆ ಪತ್ತೆಯಾಗಿದೆ. ವೈದ್ಯರು ನೀಡಿರುವ ವರದಿಯಲ್ಲೂ ಆ ಅಂಶ ಉಲ್ಲೇಖಿಸಿದ್ದಾರೆ. ಅವರಿಗೆ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ಕೋರಿದರು. ಹೆಚ್ಚಿನ ಚಿಕಿತ್ಸೆ ಕೊಡಿಸಿ ವೈದ್ಯಕೀಯ ವರದಿ ಸಹಿತ ಆರೋಪಿಯನ್ನು ಶನಿವಾರ ಹಾಜರು ಪಡಿಸುವಂತೆ ನ್ಯಾಯಾಧೀಶರು ಸಿಐಡಿ ಪೊಲೀಸರಿಗೆ ಸೂಚಿಸಿದರು.

ನ್ಯಾಯಾಲಯಕ್ಕೆ ಶನಿವಾರ ರಜೆಯಿರುವ ಕಾರಣಕ್ಕೆ ಆರೋಪಿಯನ್ನು ನ್ಯಾಯಾಧೀಶರ ಮನೆಗೆ ಹಾಜರು ಪಡಿಸುವ ಸಾಧ್ಯತೆಯಿದೆ.

2025ರ ಜುಲೈ15ರಂದು ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಆ ಕೊಲೆ ಪ್ರಕರಣದಲ್ಲಿ ಬೈರತಿ ಅವರು ಐದನೇ ಆರೋಪಿ ಆಗಿದ್ದಾರೆ. ಶಿವು ಅವರ ತಾಯಿ ನೀಡಿದ ದೂರಿನ ಮೇರೆಗೆ ಸಿಐಡಿ ತನಿಖೆ ನಡೆಯುತ್ತಿದೆ.

‘ಡಿವೈಎಸ್‌ಪಿ ಗೌತಮ್ ಅವರ ನೇತೃತ್ವದಲ್ಲಿ ಆರೋಪಿಯ ವಿಚಾರಣೆ ನಡೆಯುತ್ತಿದೆ. ಪ್ರಕರಣದ ಮೊದಲ ಆರೋಪಿ ಜಗ್ಗ ಅಲಿಯಾಸ್ ಜಗದೀಶ್ ಜತೆಗೆ ಹೊರ ರಾಜ್ಯಕ್ಕೆ ತೆರಳಿರುವ ವಿಡಿಯೊ ಹಾಗೂ ಫೋಟೊಗಳನ್ನು ಬೈರತಿ ಬಸವರಾಜ ಅವರಿಗೆ ತೋರಿಸಿ ಪ್ರಾಥಮಿಕ ಮಾಹಿತಿ ಪಡೆಯಲಾಗಿದೆ. ಜಗ್ಗ ಅವರ ಜತೆಗೆ ನಡೆದ ಫೋನ್ ಸಂಭಾಷಣೆಗಳ ಬಗ್ಗೆಯೂ ಪ್ರಶ್ನೆ ಕೇಳಿ ಹೇಳಿಕೆ ದಾಖಲು ಮಾಡಲಾಗಿದೆ. ನ್ಯಾಯಾಧೀಶರ ಎದುರು ಆರೋಪಿಯನ್ನು ಶನಿವಾರ ಹಾಜರು ಪಡಿಸಿ, 14 ದಿನ ತಮ್ಮ ಕಸ್ಟಡಿಗೆ ನೀಡುವಂತೆ ಮನವಿ ಮಾಡಲಾಗುವುದು’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ದಮನಿತ ಹಿಂದುಳಿದ ಜಾತಿಗಳ ಒಕ್ಕೂಟ’ ಅಸ್ತಿತ್ವಕ್ಕೆ

‘ಮುಖ್ಯಮಂತ್ರಿ’ ಚಂದ್ರು

ಮೈಸೂರು: ದಮನಿತ ಹಿಂದುಳಿದ ಜಾತಿಗಳ ಆರ್ಥಿಕ ಮತ್ತು ರಾಜಕೀಯ ಹಿತ ಕಾಯುವ ದೃಷ್ಟಿಯಿಂದ ‘ಕರ್ನಾಟಕ ರಾಜ್ಯ ದಮನಿತ ಹಿಂದುಳಿದ ಜಾತಿಗಳ ಒಕ್ಕೂಟ’ವನ್ನು ಅಸ್ತಿತ್ವಕ್ಕೆ ತರಲಾಗಿದೆ.

ಚಲನಚಿತ್ರ ನಟ ‘ಮುಖ್ಯಮಂತ್ರಿ’ ಚಂದ್ರು ಅವರನ್ನು ಅಧ್ಯಕ್ಷರನ್ನಾಗಿ, ಎ.ಎಚ್.ಪ್ರಶಾಂತ್ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಗಿದೆ. ಸಿ.ಎಸ್.ದ್ವಾರಕಾನಾಥ್ ಗೌರವ ಸಲಹೆಗಾರರಾಗಿದ್ದಾರೆ.

ಒಕ್ಕೂಟದಲ್ಲಿ ಮೂವರು ಗೌರವಾಧ್ಯಕ್ಷರು, ಇಬ್ಬರು ಕಾರ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಿದ್ದಾರೆ. ದಮನಿತ ಹಿಂದುಳಿದ ಜಾತಿಗೆ ಸೇರಿದ ಹಲವು ಗಣ್ಯರು ತೊಡಗಿಸಿಕೊಂಡಿದ್ದಾರೆ ಎಂದು ಎ.ಎಚ್.ಪ್ರಶಾಂತ್ ತಿಳಿಸಿದ್ದಾರೆ.

ಚಿಕ್ಕೋಡಿ: ಕೊನೆಯ ಭಾಗಕ್ಕೆ ತಲುಪದ ಕಾಲುವೆ ನೀರು

ಕಾಲುವೆಯಲ್ಲಿ ಮಲಗಿ ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಡೋಣವಾಡ ಗ್ರಾಮದ ಮಹಾಂತ ನಗರ ಸೇರಿ ವಿವಿಧ ತೋಟದ ವಸತಿ ಪ್ರದೇಶದ ಜನರು ಶುಕ್ರವಾರ ನೀರಾವರಿ ಕಾಲುವೆಯಲ್ಲೇ ಅಡ್ಡಲಾಗಿ ಮಲಗಿ, ಪ್ರತಿಭಟನೆ ಮಾಡಿದರು.

‘ಕೊಟಬಾಗಿ ಏತ ನೀರಾವರಿಯ ಕಾಲುವೆಗೆ ನೀರು ಹರಿಸದ ಕಾರಣ ಪ್ರತಿ ವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗುತ್ತದೆ. ಕೊನೆಯ ಭಾಗದವರೆಗೆ ನೀರು ಹರಿಸಿ’ ಎಂದು ಆಗ್ರಹಿಸಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ನಿರ್ವಹಣೆ ಆಗುವ 17 ಕಿ.ಮೀ ಉದ್ದದ ಕಾಲುವೆಯಲ್ಲಿ 178.62 ಕ್ಯೂಸೆಕ್ ನೀರು ಹರಿಯಬೇಕಿತ್ತು ಎಂದು ಪ್ರತಿಪಾದಿಸಿದರು.

‘ಉದ್ಯೋಗ ಖಾತ್ರಿ ಯೋಜನೆಯಡಿ ಕಾಲುವೆಯ ಹೂಳು ತೆರವು ಮಾಡಲಾಗಿದೆ. ಆದರೆ, ಅಧಿಕಾರಿಗಳು ನೀರು ಬಿಡುಗಡೆಗೆ ಮೀನ–ಮೇಷ ಎಣಿಸುತ್ತಿದ್ದಾರೆ’ ಎಂದು ರೈತ ಮುಖಂಡ ರಾಚಪ್ಪ ಶಿವಾಪೂರೆ ಆರೋಪಿಸಿದರು.

ಚಿಕ್ಕೋಡಿ ತಾಲ್ಲೂಕಿನ ಡೋಣವಾಡ ಗ್ರಾಮದ ಮಹಾಂತನಗರ ತೋಟದ ವಸತಿ ಪ್ರದೇಶದಲ್ಲಿ ಕಾಲುವೆಗೆ ನೀರು ಹರಿಸದೇ ಇರುವುದರಿಂದ ರೈತರು ಕಾಲುವೆಯಲ್ಲಿ ಮಲಗಿಕೊಂಡು ಪ್ರತಿಭಟನೆ ನಡೆಸಿದರು

–ಚಿತ್ರ: ಚಂದ್ರಶೇಖರ ಎಸ್ ಚಿನಕೇಕರ

‘ಕೆಲವೆಡೆ ಕಾಲುವೆ ನೀರನ್ನು ಹಳ್ಳಕ್ಕೆ ಬಿಡಲಾಗುತ್ತಿದೆ. ಕಾಲುವೆ ಕೊನೆವರೆಗೆ ನೀರು ಹರಿಯುತ್ತಿಲ್ಲ. ರೈತರು ನೀರಿಲ್ಲದೆ ಬೆಳೆಯನ್ನು ಉಳಿಸಿಕೊಳ್ಳುವುದು ಹೇಗೆ? ಜನ ಜಾನುವಾರುಗಳಿಗೆ ಕುಡಿಯುವ ನೀರಿಲ್ಲದೆ ತೊಂದರೆ ಅನುಭವಿಸುವಂತಾಗಿದೆ’ ಎಂದು ರೈತ ಬಾಬು ಮಗದುಮ್ಮ ತಿಳಿಸಿದರು.

ಶಿವರಾತ್ರಿ ಬಳಿಕ ಶುಭವಾಗಲಿದೆ: ಡಿಕೆಶಿ

ಒಂದೇ ವೇದಿಕೆಯಲ್ಲಿದ್ದರೂ ಮಾತನಾಡದ ಮುಖ್ಯಮಂತ್ರಿ– ಉಪ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು/ ತಿಪಟೂರು: ‘ಶ್ರಮಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂಬ ಭರವಸೆ ಇದೆ. ಅದು ಸಿಕ್ಕೇ ಸಿಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತುಮಕೂರು ಜಿಲ್ಲೆ ತಿಪಟೂರಿನಲ್ಲಿಯೂ ಈ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಶಿವರಾತ್ರಿ ಹಬ್ಬದ ನಂತರ ಶುಭವಾಗಲಿದೆ. ಎಲ್ಲರಿಗೂ ಒಳ್ಳೆಯದಾಗಲಿದೆ’ ಎಂದು ಹೇಳಿದರು.

ಬೆಂಗಳೂರಿನಲ್ಲಿ ಸುದ್ದಿಗಾರರು, ‘ಸರ್, ದೆಹಲಿ ಭೇಟಿಯ ನಂತರ ನೀವು ಹೆಚ್ಚು ಆತ್ಮವಿಶ್ವಾಸದಿಂದ ಇದ್ದಂತೆ ಕಾಣುತ್ತಿದೆ. ನಿಮ್ಮ ಭೇಟಿಗೆ ಫಲ ಸಿಕ್ಕಿದೆಯೇ’ ಎಂದು ಪ್ರಶ್ನಿಸಿದಾಗ, ನಸು ನಗುತ್ತಾ, ‘ಏನೇನಾಯಿತು ಎಂದು ಈಗ ಹೇಳಲಿಕ್ಕಾಗುವುದಿಲ್ಲ. ಶ್ರಮಕ್ಕೆ ಯಶಸ್ಸು ಸಿಗುತ್ತದೆ’ ಎಂದಷ್ಟೇ ಉತ್ತರಿಸಿದರು.

ಪಕ್ಕದಲ್ಲಿದ್ದರೂ ಮಾತಿಲ್ಲ: ಇದಕ್ಕೂ ಮುನ್ನ ಅಂತರರಾಷ್ಟ್ರೀಯ ಅಣೆಕಟ್ಟೆ ಸುರಕ್ಷತೆ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು.

ಉಭಯ ನಾಯಕರು ವೇದಿಕೆಯಲ್ಲಿ ಅಕ್ಕ–ಪಕ್ಕವೇ ಕುಳಿತಿದ್ದರು. ಆದರೆ ಇಬ್ಬರು ನಾಯಕರೂ ಪರಸ್ಪರ ಹೆಚ್ಚು ಮಾತನಾಡಲಿಲ್ಲ.

ತಿಪಟೂರಿನ ತಾಲ್ಲೂಕಿನ ಕಾಡಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿದ್ದ ಅವರು ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ

> ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ.ಸುರೇಶ್ ರಾಜಕೀಯ ಗನ್ ಹಿಡಿದು ಬೀದಿಗಿಳಿದಿದ್ದಾರೆ. ಯಾವಾಗ ಯಾರನ್ನು ರಾಜಕೀಯವಾಗಿ ಶೂಟ್ ಮಾಡುತ್ತಾರೋ?
>
> **ಆರ್.ಅಶೋಕ,** ವಿಧಾನಸಭೆ ವಿರೋಧಪಕ್ಷದ ನಾಯಕ

ಶಿವಕುಮಾರ್ ಅವರು, ‘ಮುಂದೆ ಏನಾಗುತ್ತದೆ ಎಂದು ಚರ್ಚಿಸುವುದಿಲ್ಲ. ಏನು ಮಾಡಬೇಕು ಎಂದಷ್ಟೇ ನಾನು ಚಿಂತಿಸುತ್ತೇನೆ’ ಎಂದರು.

‘ಅಜ್ಜಯ್ಯ ಅವರೊಂದಿಗೆ ವಿಶೇಷ ಸಂಬಂಧವಿದೆ. ಈ ಕ್ಷೇತ್ರದ ಶಕ್ತಿ ಎಲ್ಲರಿಗೂ ಗೊತ್ತಿದೆ. ಇದೇ ಶಕ್ತಿ, ಅಜ್ಜಯ್ಯನ ಆಶೀರ್ವಾದದಿಂದ ನಮ್ಮ ಸರ್ಕಾರ ಸ್ಥಾಪನೆಯಾಗಿ, ಮುಂದುವರಿದಿದೆ’ ಎಂದು ಅವರು ತಿಳಿಸಿದರು.

ಸಿ.ಎಂ ತ್ಯಾಗ ಮಾಡುವ ಪ್ರಶ್ನೆ ಬರಲ್ಲ: ‘ಕೈ’ ಶಾಸಕ

ಕೊಪ್ಪಳ: ‘ಹೈಕಮಾಂಡ್ ಹೇಳಿದರೆ ರಾಜೀನಾಮೆ ಕೊಡುತ್ತೇನೆ ಎಂದು ಖುದ್ದು ಸಿದ್ದರಾಮಯ್ಯ ಅವರೇ ತಿಳಿಸಿದ್ದಾರೆ. ಹೀಗಾಗಿ ತ್ಯಾಗದ ಪ್ರಶ್ನೆ ಬರುವುದಿಲ್ಲ. ಅವರು ತ್ಯಾಗ ಮಾಡುವುದಿಲ್ಲ’ ಎಂದು ಕಾಂಗ್ರೆಸ್ ಶಾಸಕ ಅಶೋಕ ಪಟ್ಟಣ ಶುಕ್ರವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡುತ್ತಾ, ‘ನನಗೆ ಇಬ್ಬರ ಜೊತೆಗೂ ಉತ್ತಮ ಬಾಂಧವ್ಯವಿದೆ. ಡಿಕೆಶಿ ಸಿ.ಎಂ. ಆದರೂ ನನಗೆ ಸಂತೋಷ. ರಾಹುಲ್ ಗಾಂಧಿ ಹಾಗೂ ಎಲ್ಲ ಶಾಸಕರ ಭಾವನೆ ಸಿದ್ದರಾಮಯ್ಯನವರೇ ಮುಂದುವರಿಯಬೇಕು ಎನ್ನುವುದಾಗಿದೆ’ ಎಂದರು.

‘2028ರ ಚುನಾವಣೆಗೆ ಬೇಕಾದರೆ ಶಿವಕುಮಾರ್ ತಮ್ಮ ಬೇಡಿಕೆ ಸಲ್ಲಿಸಲಿ. ಈಗ ಬೇರೆ ಯಾರೇ ಸಿ.ಎಂ. ಆದರೂ ಸರ್ಕಾರ ನಡೆಸುವುದು ಕಷ್ಟವಿದೆ’ ಎಂದು ಅಭಿಪ್ರಾಯಪಟ್ಟರು.

‘ಡಿಕೆಶಿ–ಸಿದ್ದರಾಮಯ್ಯ ಬಗೆಹರಿಸಿಕೊಳ್ಳಲಿ’

ಹಾಸನ: ‘ಸಿ.ಎಂ ಸ್ಥಾನ ಬದಲಾವಣೆ ಕುರಿತು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಏನು ಮಾತನಾಡಿಕೊಂಡಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಅವರಿಬ್ಬರಿಗಷ್ಟೆ ಅದು ಗೊತ್ತಿದ್ದು, ಅವರೇ ಬಗೆಹರಿಸಿಕೊಳ್ಳಲಿ’ ಎಂದು ಸಚಿವ ಕೆ.ಎಚ್.ಮುನಿಯಪ್ಪ ಪ್ರತಿಪಾದಿಸಿದರು.

‘ನಾಯಕತ್ವ ಬದಲಾವಣೆ ವಿಷಯ ನಮ್ಮ ಮಟ್ಟದಲ್ಲಿಲ್ಲ. ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತೇವೆ’ ಎಂದು ನಗರದಲ್ಲಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಶಾಸಕರ ವಿದೇಶ ಪ್ರವಾಸ ಕುರಿತ ಪ್ರಶ್ನೆಗೆ, ‘ಶಾಸಕರು ವೈಯಕ್ತಿಕವಾಗಿ ಪ್ರವಾಸ ಹೋದರೆ, ಪ್ರಶ್ನಿಸುವ ಅವಶ್ಯಕತೆ ಎಲ್ಲಿದೆ’ ಎಂದು ಪ್ರಶ್ನಿಸಿದರು.

‘2028ಕ್ಕೆ ವಿಜಯೇಂದ್ರ ಮುಖ್ಯಮಂತ್ರಿ’



ಶಾಂತಗೌಡ ಪಾಟೀಲ

ಬೀಳಗಿ (ಬಾಗಲಕೋಟೆ ಜಿಲ್ಲೆ): ‘ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ, 2028ಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಸಿ.ಎಂ ಆಗುವುದು ಅಷ್ಟೇ ಸತ್ಯ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ ಹೇಳಿದರು.

ಬೀಳಗಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಬಿ ಜಿ ರಾಮ್‌ಜಿ ಕಾಯ್ದೆ ಕುರಿತ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವಿಜಯೇಂದ್ರ ನಮ್ಮ ಯಡಿಯೂರಪ್ಪ ಅವರ ಮಗ, ನಮ್ಮ ಅಧ್ಯಕ್ಷರು ಎಂದು ಪ್ರೀತಿ ತೋರಿಸುತ್ತಿದ್ದಾರೆ’ ಎಂದರು.

‘ಯಡಿಯೂರಪ್ಪನವರು ಇಲ್ಲಿಗೆ ಬಂದು ಹೋದ ಬಳಿಕ ಮುಖ್ಯಮಂತ್ರಿ ಆಗಿದ್ದರು. ಈಗ ನೀವು ಬಂದಿದ್ದೀರಿ. ನೀವೂ ಮುಖ್ಯಮಂತ್ರಿಯಾಗುತ್ತೀರಿ ಎಂದು ಪ್ರತಿ ಗ್ರಾಮದಲ್ಲಿ ಜನರು ಹೇಳುತ್ತಿದ್ದಾರೆ’ ಎಂದರು.

ಗಣಿ ಗುತ್ತಿಗೆ ಅಕ್ರಮ: ಸ್ಪಷ್ಟನೆ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಣಿ ಗುತ್ತಿಗೆ ಪರವಾನಗಿಯನ್ನು ಅಕ್ರಮವಾಗಿ ನೀಡಿದ ಹಾಗೂ ಕಾನೂನು ಬಾಹಿರವಾಗಿ ನವೀಕರಣ ಮಾಡಿದ ಆರೋಪದಡಿ ತನಿಖೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲರಿಗೆ ಆದೇಶಿಸಬೇಕು’ ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಏ.17ಕ್ಕೆ ಮುಂದೂಡಿದೆ.

ಈ ಸಂಬಂಧ ನಗರದ ಉದ್ಯಮಿ ಎಂ.ಪಿ.ವೇಣುಗೋಪಾಲ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಕೆ.ಶಶಿಕಿರಣ ಶೆಟ್ಟಿ, ‘ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಈ ಹಿಂದೆ ರಾಮಮೂರ್ತಿ ಗೌಡ ಎಂಬುವರು ಖಾಸಗಿ ದೂರು (ಪಿಸಿಆರ್) ಸಲ್ಲಿಸಿದ್ದರು. ಆ ಖಾಸಗಿ ದೂರಿನಲ್ಲಿದ್ದ ವಿಷಯ ಮತ್ತು ಅಂಶಗಳನ್ನೇ ಪುಟ ಸಂಖ್ಯೆಗಳ ಸಮೇತ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲೂ ನಕಲು ಮಾಡಲಾಗಿದೆ. ಖಾಸಗಿ ದೂರಿನಲ್ಲಿಯೂ ಸಿದ್ದರಾಮಯ್ಯ ಸೇರಿದಂತೆ ಹಾಲಿ ಪಿಐಎಲ್‌ನಲ್ಲಿರುವ ಎಲ್ಲರನ್ನೂ ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಖಾಸಗಿ ದೂರಿನ ಅಂಶಗಳನ್ನೇ ಅರ್ಜಿಯಲ್ಲಿ ನಕಲು ಮಾಡಲಾಗಿದೆ ಎಂದು ಸಿದ್ದರಾಮಯ್ಯ ಪರ ವಕೀಲರು ಹೇಳುತ್ತಿದ್ದಾರೆ. ಆದ್ದರಿಂದ, ಖಾಸಗಿ ದೂರಿನ ಬಗ್ಗೆ ಸ್ಪಷ್ಟನೆ ನೀಡಿ’ ಎಂದು ಅರ್ಜಿದಾರರ ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆಯನ್ನು ಏಪ್ರಿಲ್ 17ಕ್ಕೆ ಮುಂದೂಡಿತು. ‘ಪ್ರಕರಣದ ತನಿಖೆ ನಡೆಸಲು ಸಿಬಿಐಗೆ ನಿರ್ದೇಶನ ನೀಡಬೇಕು’ ಎಂದೂ ಅರ್ಜಿದಾರರು ಕೋರಿದ್ದಾರೆ.

ಎಇಡಿಪಿ- ಪ್ರಯೋಗ, ಪ್ರಗತಿ, ಪ್ರಯೋಜನ ಕಾರ್ಯಕ್ರಮದಲ್ಲಿ ಸಚಿವ ಸುಧಾಕರ್ ಹೇಳಿಕೆ

ಅಪ್ರೆಂಟಿಸ್: ಕಲಾ, ವಿಜ್ಞಾನ ಪದವಿಗೂ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪ್ರೆಂಟಿಸ್‌ಶಿಪ್ ಎಂಬೆಡೆಡ್ ಪದವಿ ಕಾರ್ಯಕ್ರಮವನ್ನು (ಎಇಡಿಪಿ) ಕಲಾ ಹಾಗೂ ವಿಜ್ಞಾನ ಪದವಿಗೂ ಪರಿಚಯಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಎಇಡಿಪಿ–ಪ್ರಯೋಗ, ಪ್ರಗತಿ, ಪ್ರಯೋಜನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಶಿಷ್ಯವೇತನ ಸಹಿತವಾಗಿ ಉದ್ಯೋಗಕ್ಕೆ ಪೂರಕವಾದ ಶಿಕ್ಷಣ ಪಡೆಯಬೇಕು ಎನ್ನುವ ಉದ್ದೇಶದಿಂದ 2024ರಲ್ಲಿ ಬಿ.ಕಾಂನಲ್ಲಿ ನಾಲ್ಕು ಕೋರ್ಸ್‌ಗಳನ್ನು ಆರಂಭಿಸಲಾಯಿತು. ಇದರಲ್ಲಿ ಎರಡು ವರ್ಷ ಕಾಲೇಜು, ಮೂರನೇ ವರ್ಷ ಕೈಗಾರಿಕಾ ಆಧಾರಿತ ಅಪ್ರೆಂಟಿಸ್‌ಶಿಪ್ ಚಟುವಟಿಕೆಯಿದೆ. ಬ್ಯಾಂಕಿಂಗ್, ವಿಮೆ, ರಿಟೇಲ್, ಲಾಜಿಸ್ಟಿಕ್ ವಿಷಯದಲ್ಲಿ ಪದವಿ ನೀಡುತ್ತಿದ್ದು, ಸದ್ಯ 68 ಸರ್ಕಾರಿ ಕಾಲೇಜುಗಳಲ್ಲಿ 1,400 ವಿದ್ಯಾರ್ಥಿಗಳು ಈ ಪದವಿ ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ಶೋಭಾ, ಎನ್ ಮಂಜುಶ್ರೀ, ಡಾ.ಎಂ.ಸಿ.ಸುಧಾಕರ್, ಖುಷ್ಬು ಗೋಯಲ್ ಚೌಧರಿ, ಎಸ್‌ಆರ್‌ನಿರಂಜನ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ರಾಜ್ಯದಲ್ಲಿ ಇದನ್ನು ಆರಂಭಿಸಿದ ನಂತರ ವಿಶ್ವವಿದ್ಯಾಲಯ ಅನುದಾನ ಆಯೋಗ ದೇಶದಾದ್ಯಂತ ವಿಸ್ತರಿಸಿದೆ. ಉದ್ಯಮ ವಲಯದಿಂದಲೂ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ವಿದ್ಯಾರ್ಥಿಗಳಲ್ಲೂ ಆಸಕ್ತಿ ಹೆಚ್ಚುತ್ತಿರುವುದರಿಂದ ಭವಿಷ್ಯದಲ್ಲಿ ಇದನ್ನು ಇನ್ನು 11 ವಲಯಗಳಿಗೆ ವಿಸ್ತರಿಸಲು ಇಲಾಖೆ ಚಿಂತನೆ ನಡೆಸುತ್ತಿದೆ’ ಎಂದರು.

‘ವಿದ್ಯಾರ್ಥಿಗಳಲ್ಲಿ ಕೌಶಲ ಹೆಚ್ಚಿಸಿ ಉದ್ಯೋಗದ ಅನುಭವ, ಪ್ರಾಯೋಗಿಕ ಕಲಿಕೆಯೊಂದಿಗೆ ಶಿಷ್ಯವೇತನ ನೀಡುವ ಈ ಕಾರ್ಯಕ್ರಮದ ಕುರಿತು ನಿರ್ಲಕ್ಷ್ಯ ತೋರಬಾರದು. ಒಂದು ವರ್ಷದ ಅಪ್ರೆಂಟಿಸ್‌ಶಿಪ್ ಅವಧಿಯ ಸಮರ್ಪಕ ಉಪಯೋಗ ಪಡೆಯಬೇಕು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಈ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು’ ಎಂದರು.

ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಎಸ್.ಆರ್.ನಿರಂಜನ್ ಮಾತನಾಡಿ, ‘ನಳಂದ, ತಕ್ಷಶಿಲಾ ವಿಶ್ವವಿದ್ಯಾಲಯಗಳಲ್ಲಿ ಈ ಮೊದಲೇ ಉದ್ಯೋಗ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಲಾಗಿತ್ತು. ಆ ನಂತರ ಬದಲಾವಣೆಯಾಗುತ್ತಾ ಬಂದಿತು. ಈಗ ಮತ್ತೆ ಇಂತಹ ಕೋರ್ಸ್‌ಗಳಿಗೆ ಒತ್ತು ನೀಡಲಾಗುತ್ತಿದೆ. ಜಾಗತಿಕ ಮಟ್ಟದಲ್ಲೂ ನಮ್ಮ ಪದವೀಧರರನ್ನು ಉದ್ಯೋಗಕ್ಕೆ ಸಜ್ಜುಗೊಳಿಸಲು ಇದು ಸಹಕಾರಿಯಾಗಲಿದೆ’ ಎಂದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ ಕುಲಪತಿ ಬಿ.ರಮೇಶ್, ಕ್ರಿಸ್ಪ್ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಶ್ರೀನಿವಾಸ್, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಖುಷ್ಬು ಗೋಯಲ್ ಚೌಧರಿ, ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರಾದ ಎನ್.ಮಂಜುಶ್ರೀ, ನಿರ್ದೇಶಕಿ ಜಿ. ಶೋಭಾ, ಜಂಟಿ ನಿರ್ದೇಶಕ ರಾಮಕೃಷ್ಣ ರೆಡ್ಡಿ ಇದ್ದರು.

ಜಿಲ್ಲಾ ಆರೋಗ್ಯಾಧಿಕಾರಿಗೆ ಅಬಕಾರಿ ಡಿ.ಸಿ ಹುದ್ದೆ: ನಕಲಿ ಪತ್ರದ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯೊಬ್ಬರನ್ನು (ಡಿಎಚ್‌ಒ) ಅಬಕಾರಿ ಉಪ ಆಯುಕ್ತರ ಹುದ್ದೆಗೆ ನಿಯೋಜನೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ ಎನ್ನಲಾದ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಈ ನಕಲಿ ಪತ್ರದ ವಿರುದ್ಧ ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮುಖ್ಯಮಂತ್ರಿ ಅವರ ಅಧಿಕೃತ ಲೆಟರ್‌ಹೆಡ್ ರೀತಿ ಕಾಣುವ ಪತ್ರದಲ್ಲಿ ಮಂಡ್ಯ ಜಿಲ್ಲೆಯ ಡಿಎಚ್‌ಒ ಡಾ.ಕೆ. ಮೋಹನ್ ಅವರನ್ನು ಅಬಕಾರಿ ಇಲಾಖೆಯ ಮೈಸೂರು ಗ್ರಾಮಾಂತರ ವಿಭಾಗದ ಉಪ ಆಯಕ್ತರ ಹುದ್ದೆಗೆ ನಿಯೋಜನೆ ಮಾಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಲಾಗಿದೆ. ಪತ್ರದಲ್ಲಿ 2024 ಇಸವಿ ಇದ್ದು, ದಿನಾಂಕ, ತಿಂಗಳು ನಮೂದಿಸಿಲ್ಲ. ಆದರೆ, ಸಿದ್ದರಾಮಯ್ಯ ಅವರ ಸಹಿಯ ಹೋಲಿಕೆ ಇರುವ ಸಹಿ ಇದೆ.

> ಅನ್ಯ ಇಲಾಖೆಯ ಅಧಿಕಾರಿಗಳನ್ನು ಅಬಕಾರಿ ಉಪ ಆಯುಕ್ತರ ಹುದ್ದೆಗೆ ನೇಮಿಸಲು ನಿಯಮದಲ್ಲಿ ಅವಕಾಶವೇ ಇಲ್ಲ. ಇದುವರೆಗೂ ಇಂತಹ ಯಾವ ನೇಮಕಾತಿಯೂ ಆಗಿಲ್ಲ
>
> **ಟಿ.ನಾಗರಾಜಪ್ಪ,** ಜಂಟಿ ಆಯುಕ್ತ, ಅಬಕಾರಿ ಇಲಾಖೆ

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಈ ಪತ್ರವನ್ನು ಬಳಸಿ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕರಾದ ಸುರೇಶ್ ಕುಮಾರ್, ವಿ.ಸುನಿಲ್ ಕುಮಾರ್ ಅವರು ಸರ್ಕಾರ ಹಾಗೂ ಸಿದ್ದರಾಮಯ್ಯ ಅವರನ್ನು ಟೀಕಿಸಿದ್ದಾರೆ.

‘ಅಬಕಾರಿ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರ, ಕಿಕ್ ಬ್ಯಾಕ್ ದಂಧೆಯ ಹಿಂದೆ ಇಂಥ ಅವೈಜ್ಞಾನಿಕ, ನಿಯಮ ಬಾಹಿರ ವರ್ಗಾವಣೆಯ ಸೂಚನೆಗಳು ಕೆಲಸ ಮಾಡಿರುವ ಸಾಧ್ಯತೆಗಳು ದಟ್ಟವಾಗಿವೆ. ಮುಖ್ಯಮಂತ್ರಿಗಳೇ ಆಯಕಟ್ಟಿನ ಇಲಾಖೆಗೆ ಮಾತ್ರ ನೀವು ಈ ರೀತಿ ಎರವಲು ಸೇವೆಯ ಶಿಫಾರಸು ಮಾಡುತ್ತೀರಾ ಅಥವಾ ನಿಮ್ಮಿಂದ ಮಾಡಿಸುತ್ತಾರಾ’ ಎಂದು ಪ್ರಶ್ನಿಸಿದ್ದಾರೆ.

ನಕಲಿ ಪತ್ರದ ವಿರುದ್ಧ ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ ಅರುಣ್ ಫುರ್ಟಾಡೊ ಅವರು ವಿಧಾನಸೌಧದ ಠಾಣೆಗೆ ದೂರು ನೀಡಿದ್ದು, ‘ಟಿಪ್ಪಣಿಯು ಮುಖ್ಯಮಂತ್ರಿ ಅವರ ಸಚಿವಾಲಯದ ಇ–ತಂತ್ರಾಂಶದಲ್ಲಿ ನಮೂದಿಸಿಲ್ಲ. ಯಾವುದೇ ಇಲಾಖೆಗೆ ನೀಡಿಲ್ಲ. ಅಂತಹ ನಿಯೋಜನೆಯೂ ನಡೆದಿಲ್ಲ. ಆದರೂ, ಮುಖ್ಯಮಂತ್ರಿ ಹಾಗೂ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ದುರುದ್ದೇಶದಿಂದ ಇಂತಹ ಕೃತ್ಯ ಎಸಗಲಾಗಿದೆ. ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆ ಮಾಡಬೇಕು. ಕಾನೂನು ಕ್ರಮ ಜರುಗಿಸಬೇಕು’ ಎಂದು ದೂರಿನಲ್ಲಿ ಕೋರಿದ್ದಾರೆ.

f prajavani.net | prajavani | ಶನಿವಾರ, ಫೆಬ್ರುವರಿ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 45 | ಪುಟ 22 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಭಾರತೀಯನ ಸಾಧನೆ

ಭಾರತದ ಸತ್ಯೇಂದ್ರ ಸಿಂಗ್ ಲೋಹಿಯಾ ಅವರು ನ್ಯೂಜಿಲೆಂಡ್‌ನ ಕುಕ್ ಜಲಸಂಧಿಯನ್ನು ಯಶಸ್ವಿಯಾಗಿ ಕ್ರಮಿಸಿದ ಏಷ್ಯಾದ ಮೊದಲ ಪ್ಯಾರಾ ಈಜುಪಟು ಎನಿಸಿದರು

ಸೆನ್ಸೆಕ್ಸ್ 82,626 | ನಿಫ್ಟಿ 25,471 | $/₹ 90.66 | ಚಿನ್ನ (Std. 10g) ₹1,60,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,59,500 (ಬೆಂಗಳೂರು)

ಪಿಎಚ್‌.ಡಿ ನೈಜತೆ : ಎಸ್‌ಒಪಿ

440	49,702	20,504	10,972
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು	2025–26ನೇ ಸಾಲಿಗೆ ಅರ್ಜಿ ಸಲ್ಲಿಸಿದವರು	ಯುಜಿಸಿ ಅರ್ಹತೆ ಪಡೆದವರು	ನೇಮಕವಾದವರು

ಯುಜಿಸಿ ಅರ್ಹತೆ ಕಡ್ಡಾಯ: ಹಲವು ಅತಿಥಿ ಉಪನ್ಯಾಸಕರ ಪ್ರಮಾಣಪತ್ರಗಳು ನಕಲಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅತಿಥಿ ಉಪನ್ಯಾಸಕರು ಸಲ್ಲಿಸಿದ ಪಿಎಚ್‌.ಡಿ ಪ್ರಮಾಣಪತ್ರಗಳ ನೈಜತೆ ಪತ್ತೆ ಹಚ್ಚಲು ಪ್ರಮಾಣಿತ ಕಾರ್ಯಾಚರಣೆಯ ವಿಧಾನ (ಎಸ್‌ಒಪಿ) ಅಳವಡಿಸಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಮುಂದಾಗಿದ್ದು, ಅದಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ 2025–26ನೇ ಸಾಲಿನ ಎರಡು, ನಾಲ್ಕು ಹಾಗೂ ಆರನೇ ಸೆಮಿಸ್ಟರ್‌ಗೆ ಯುಜಿಸಿ ಅರ್ಹತೆ ಪಡೆದಿರುವ ಅತಿಥಿ ಉಪನ್ಯಾಸಕರನ್ನೇ ನೇಮಕ ಮಾಡಿಕೊಳ್ಳಲಾಗಿತ್ತು. ನೇಮಕಗೊಂಡ ಹಲವು ಅಭ್ಯರ್ಥಿಗಳು ನಕಲಿ ಪಿಎಚ್‌ಡಿ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ದೂರುಗಳು ಸಲ್ಲಿಕೆಯಾಗಿದ್ದವು.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಅಥವಾ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್‌) ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಮ ರೂಪಿಸಿದೆ. ಪ್ರಥಮ ದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿದೆ.

ಈ ಪ್ರಕರಣ ಕೋರ್ಟ್‌ ಮೆಟ್ಟಿಲೇರಿತ್ತು. ಯುಜಿಸಿ ಆದೇಶವನ್ನು ಹೈಕೋರ್ಟ್‌ ಎತ್ತಿ ಹಿಡಿದಿತ್ತು. ಹಾಗಾಗಿ, ಕಾಲೇಜು ಶಿಕ್ಷಣ ಇಲಾಖೆ ಯುಜಿಸಿ ಅರ್ಹತೆ ಇಲ್ಲದ ಸುಮಾರು ಆರು ಸಾವಿರ ಅತಿಥಿ ಉಪನ್ಯಾಸಕರನ್ನು ಕೈಬಿಟ್ಟು, ಅರ್ಹತೆ ಇರುವ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿತ್ತು.

▶6

200ಕ್ಕೂ ಹೆಚ್ಚು 'ಅತಿಥಿ'ಗಳ ರಾಜೀನಾಮೆ

ದಾಖಲೆಗಳ ಪರಿಶೀಲನೆಗೆ ಕಾಲೇಜು ಶಿಕ್ಷಣ ಇಲಾಖೆ ಪ್ರಮಾಣಿತ ಕಾರ್ಯಾಚರಣೆಯ ವಿಧಾನ ಅಳವಡಿಸಿಕೊಳ್ಳುವ ಮಾಹಿತಿ ಸಿಗುತ್ತಿದ್ದಂತೆ ಯುಜಿಸಿ ಅರ್ಹತೆ ಅನುಸಾರ ಪ್ರಮಾಣಪತ್ರಗಳನ್ನು ಸಲ್ಲಿಸಿ ಆಯ್ಕೆಯಾಗಿದ್ದ 200ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಎನ್‌.ಮಂಜುಶ್ರೀ, 'ಕೆಲ ಅತಿಥಿ ಉಪನ್ಯಾಸಕರು ರಾಜೀನಾಮೆ ಸಲ್ಲಿಸಿದ್ದಾರೆ. ರಾಜೀನಾಮೆ ನೀಡುವಾಗ ವೈಯಕ್ತಿಕ ಕಾರಣಗಳನ್ನು ನಮೂದಿಸಿದ್ದಾರೆ. ಅವರು ಸಲ್ಲಿಸಿದ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಯ ನಂತರವೇ ನಿಜವಾದ ಕಾರಣ ಗೊತ್ತಾಗುತ್ತದೆ' ಎಂದರು.

ಪಿಎಚ್‌.ಡಿ ಪ್ರಮಾಣಪತ್ರಗಳ ನೈಜತೆ ಪತ್ತೆ ಹಚ್ಚಲು ಪ್ರಮಾಣಿತ ಕಾರ್ಯಾಚರಣೆಯ ವಿಧಾನ (ಎಸ್‌ಒಪಿ) ಅಳವಡಿಸಿಕೊಳ್ಳಲಾಗುತ್ತಿದ್ದು, ಶೀಘ್ರ ಆದೇಶ ಹೊರಡಿಸಲಾಗುವುದು

ಎನ್‌.ಮಂಜುಶ್ರೀ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ

ಅತಿಥಿ ಉಪನ್ಯಾಸಕರ ಪ್ರಮಾಣಪತ್ರಗಳ ನೈಜತೆ ಪರಿಶೀಲನೆಯ ಮಾದರಿಯಲ್ಲೇ ಕಾಯಂ ಪ್ರಾಧ್ಯಾಪಕರ ಪಿಎಚ್‌.ಡಿ ಪ್ರಮಾಣಪತ್ರಗಳನ್ನೂ ಪರಿಶೀಲನೆ ನಡೆಸಬೇಕು. ನಕಲಿ ಸಾಬೀತಾದರೆ ಅವರನ್ನು ಕೆಲಸದಿಂದ ವಜಾ ಮಾಡಬೇಕು

ಅರುಣ್‌ ಹೊಸಕೊಪ್ಪ, ಕಾರ್ಯದರ್ಶಿ, ಸಂಸ್ಕೃತಿ ಎಜುಕೇಷನ್‌ ಟ್ರಸ್ಟ್‌

ಬೆಂಗಳೂರಿನ ವಿದ್ಯಾರ್ಥಿಗಳ ಜೀವ ಕಸಿದ ಸರಣಿ ಅಪಘಾತ

ಜಾಲಿರೈಡ್‌: ಏಳು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಈಥನ್ ಜಾರ್ಜ್ | ಫರಾನ್ | ಆಶ್ರಮ್ ಷರೀಫ್ | ಅಶ್ವಿನ್ | ಅಯಾನ್ ಅಲಿ

ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

ಗಗನ್

ಹೊಸಕೋಟೆ: ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ ವೇಯಲ್ಲಿ ಹೊಸಕೋಟೆ ಎಂ.ಸತ್ಯವಾರ ಬಳಿ ಶುಕ್ರವಾರ ಮುಂಜಾನೆ 4.30ಕ್ಕೆ ಸಂಭವಿಸಿದ ಸರಣಿ ಅಪಘಾತದಲ್ಲಿ ಕಾರಿನಲ್ಲಿದ್ದ ಆರು ವಿದ್ಯಾರ್ಥಿಗಳು, ಬೈಕ್ ಸವಾರ ಸೇರಿ ಏಳು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ದೇವನಹಳ್ಳಿ ತಾಲ್ಲೂಕಿನ ದೇವ-ನಾಯಕನಹಳ್ಳಿ ನಿವಾಸಿ, ಬೈಕ್ ಸವಾರ ಗಗನ್ (26), ಎಕ್ಸ್‌ಯುವಿ 700 ಕಾರಿನಲ್ಲಿದ್ದ ಕೇರಳ ಮೂಲದ ಬೆಂಗಳೂರು ಕೊತ್ತನೂರು ನಿವಾಸಿಗಳಾದ ಅಶ್ವಿನ್ ನಾಯರ್ (17), ಅಯಾನ್ ಅಲಿ (17), ಹುಳಿಮಾವು ಈಥನ್ ಜಾರ್ಜ್ (17), ಫ್ರೇಜರ್ ಟೌನ್ ಭರತ್ (17), ಎಚ್‌ಬಿಆರ್ ಬಡಾವಣೆಯ ಆಶ್ರಮ್ ಷರೀಫ್ (16), ಕಮ್ಮನಹಳ್ಳಿ ಫರಾನ್ ಶೇಖ್ (18) ಮೃತರು.

ಆಗಿದ್ದು ಏನು?: ಹೊಸಕೋಟೆಯಿಂದ ದೇವನಹಳ್ಳಿ ಕಡೆಗೆ ಜಾಲಿ ರೈಡ್ ಹೋಗಲು ವಿದ್ಯಾರ್ಥಿಗಳು ನಿರ್ಧರಿಸಿದ್ದರು. ಅದರಂತೆ ಅಯಾನ್ ಅಲಿ ಪೋಷಕರ ಎಕ್ಸ್‌ಯುವಿ 700ರಲ್ಲಿ ತೆರಳಿದ್ದು, ಅದನ್ನು ಅತಿ ವೇಗದಿಂದ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದೆ. ಬಳಿಕ ನಿಯಂತ್ರಣ ತಪ್ಪಿ ಮುಂದಿದ್ದ ಕ್ಯಾಂಟರ್‌ಗೂ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಕ್ಯಾಂಟರ್ ಚಾಲಕ ಬಾಲಸುಬ್ರಮಣ್ಯ ಅವರನ್ನು ಹೊಸಕೋಟೆ ಎಂವಿಜೆ ಆಸ್ಪತ್ರೆಗೆ ದಾಖಲಿಸಲಾಗಿದೆ.

▶6

ಇನ್ನೊಂದು ಸುದ್ದಿ ▶3

ಬಾಂಗ್ಲಾದೇಶ: ತಾರಿಕ್ ಪ್ರಧಾನಿ

ಢಾಕಾ: ವಿದ್ಯಾರ್ಥಿ ಚಳವಳಿಯ ಬಳಿಕ ಬಾಂಗ್ಲಾದೇಶಕ್ಕೆ ಮೊದಲ ಚುನಾವಣೆ ನಡೆದಿದ್ದು, ತಾರಿಕ್ ರೆಹಮಾನ್ ಅವರ ನೇತೃತ್ವದ ಬಾಂಗ್ಲಾದೇಶದ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮೂರನೇ ಎರಡು ಬಹುಮತದೊಂದಿಗೆ (212 ಸ್ಥಾನಗಳು) ಗೆಲುವು ಸಾಧಿಸಿದೆ. 60 ವರ್ಷದ ತಾರಿಕ್ ಅವರು ಮುಂದಿನ ಪ್ರಧಾನಿಯಾಗಲಿದ್ದಾರೆ.

ಚುನಾವಣಾ ಆಯೋಗವು ಶುಕ್ರವಾರ ಫಲಿತಾಂಶ ಘೋಷಿಸಿದೆ. ಜಮಾತ್ ಎ ಇಸ್ಲಾಮ್ ನೇತೃತ್ವದ ಮೈತ್ರಿಕೂಟವು 77 ಸ್ಥಾನಗಳನ್ನು ಗೆದ್ದು ಎರಡನೇ ಅತಿ ದೊಡ್ಡ ಕೂಟವಾಗಿ ಹೊರಹೊಮ್ಮಿದೆ. ವಿದ್ಯಾರ್ಥಿ ಚಳವಳಿಯಿಂದ ರೂಪುಗೊಂಡಿದ್ದ ಎನ್‌ಸಿಪಿ ಪಕ್ಷವು 6 ಸ್ಥಾನಗಳನ್ನು ಗೆದ್ದುಕೊಂಡಿದೆ. ವಿದ್ಯಾರ್ಥಿಗಳು ನಡೆಸಿದ್ದ ಚಳವಳಿಯು ಅವಾಮಿ ಲೀಗ್‌ನ ಶೇಖ್ ಹಸೀನಾ ಅವರ 15 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಿತ್ತು.

ವಿದ್ಯಾರ್ಥಿಗಳಿಗೆ ಪ್ರಯಾಣ ಉಚಿತ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪರೀಕ್ಷಾ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ.

ಫೆ.28ರಿಂದ ಮಾರ್ಚ್ 17ರವರೆಗೆ ನಿಗದಿಯಾಗಿರುವ ಪರೀಕ್ಷೆಗಳು, ಆಯಾ ವಿದ್ಯಾರ್ಥಿಗಳು ಕಲಿಯುತ್ತಿರುವ ವಿದ್ಯಾಸಂಸ್ಥೆಗಳ ಬದಲು ಬೇರೆ ವಿದ್ಯಾಸಂಸ್ಥೆಗಳಲ್ಲಿ ನಡೆಯುತ್ತವೆ. ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರಯಾಣಿಸಲು ಅನುಮತಿ ನೀಡುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧ್ಯಕ್ಷರು ಕೋರಿದ್ದರು.

▶12

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಇದೆ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ವಾತಾವರಣ ಇರಲಿದೆ.

ಮೊಬೈಲ್ ಗೀಳಿನಿಂದ ಪ್ರಾಣಕ್ಕೆ ಕುತ್ತು

ಕಲಾ ಪ್ರತಿಭೋತ್ಸವ ಉದ್ಘಾಟಿಸಿದ ಸಚಿವ ಶಿವರಾಜ ತಂಗಡಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಗೀಳು ಮಕ್ಕಳ ಪ್ರಾಣಕ್ಕೆ ಕುತ್ತು ತರುವ ಹಂತ ತಲುಪಿದೆ. ಮಕ್ಕಳನ್ನು ಮೊಬೈಲ್‌ನಿಂದ ದೂರ ಇರಿಸಿ ಕ್ರೀಡೆ, ಸಂಗೀತ, ಕಲೆ, ನಾಟಕ ಇನ್ನಿತರ ಪಠ್ಯೇತರ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಿದರೆ ಸಮಸ್ಯೆ ನಿವಾರಿಸಲು ಸಾಧ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್‌.ತಂಗಡಗಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ಆಯೋಜಿಸಿದ್ದ 'ಕಲಾ ಪ್ರತಿಭೋತ್ಸವ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಇಂದು ಮೊಬೈಲೇ ಎಲ್ಲವೂ ಆಗಿದೆ. ಮೊಬೈಲ್ ವಿಡಿಯೊ ಗೇಮ್ಸ್ ಮಕ್ಕಳನ್ನು ಸಾವಿನೆಡೆಗೆ ಒಯ್ಯುತ್ತಿರುವುದು ಅಪಾಯಕಾರಿ ಬೆಳವಣಿಗೆ. ಅಂಕದ ಜ್ಞಾನಕ್ಕೆ ಸೀಮಿತವಾದರೆ, ಲೋಕಜ್ಞಾನ ಸಿಗುವುದಿಲ್ಲ. ಮಕ್ಕಳನ್ನು ಹೊರಬಿಡದೇ ಇರುವುದರಿಂದ ಅವರು ಅಂಕಕ್ಕಾಗಿ ಓದುತ್ತಾರೆ. ಅದು ಬಿಟ್ಟರೆ ಮೊಬೈಲ್‌ಗೆ ಸೀಮಿತರಾಗುತ್ತಿದ್ದಾರೆ' ಎಂದು ಹೇಳಿದರು.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, 'ಮಕ್ಕಳ ಬೆಳವಣಿಗೆಗೆ ದೇಶ ಎಷ್ಟು ಆದ್ಯತೆ ನೀಡುತ್ತಿದೆ ಎಂಬುದನ್ನು ಗಮನಿಸಿದರೆ ದೇಶದ ಸಂವೇದನೆ ಗುರುತಿಸಲು ಸಾಧ್ಯ. ನಮ್ಮಲ್ಲಿ ಮಕ್ಕಳು, ಮಕ್ಕಳ ಸಾಹಿತ್ಯ ಹಾಗೂ ರಂಗಭೂಮಿಯನ್ನು ಕಡೆಗಣಿಸಲಾಗಿದೆ' ಎಂದು ವಿಷಾದಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ಕಲೆಯನ್ನು ನಾನು ಮತ್ತು ಕಲೆ ಎಂದು ವಿಭಾಗಿಸದೇ ಪ್ರದರ್ಶನ ಕಲೆಯಲ್ಲಿ ನಾವಿರುತ್ತೇವೆ ಎಂದು ನೋಡಬೇಕು. ಮಹಾಭಾರತದಲ್ಲಿ ತನ್ನ ಅಜ್ಜನ, ತಂದೆಯ ಕಥೆಯನ್ನು ತಾನೇ ಕೇಳುವ, ವಾಲ್ಮೀಕಿ ತನ್ನ ಕಾವ್ಯಕ್ಕೆ ತಾನೇ ಸಾಕ್ಷಿಯಾಗುವ, ರಾಮಾಯಣದಲ್ಲಿ ರಾಮ ತನ್ನ ಮಕ್ಕಳ ಮೂಲಕ ತನ್ನ ಕಥೆಯನ್ನೇ ಕೇಳುವ ಕಲೆಗಾರಿಕೆ ಭಾರತಕ್ಕೆ ಅತ್ಯುತ್ತಮವಾದ ರೂಪಕ' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ನಟಿ ಯಮುನಾ ಶ್ರೀನಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ, ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಕಲಾವಿದ ಪ.ಸ. ಕುಮಾರ್ ಉಪಸ್ಥಿತರಿದ್ದರು.

ಕಲಾ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಹಾಗೂ ಯಮುನಾ ಶ್ರೀನಿಧಿ ಡೊಳ್ಳು ಬಾರಿಸಿದರು. ಪುರುಷೋತ್ತಮ ಬಿಳಿಮಲೆ, ಮಾನಸ, ಶಿವರಾಜ ಎಸ್‌. ತಂಗಡಗಿ, ಕೆ.ವಿ. ನಾಗರಾಜಮೂರ್ತಿ, ಶುಭಾ ಧನಂಜಯ ಹಾಜರಿದ್ದರು —ಪ್ರಜಾವಾಣಿ ಚಿತ್ರ

ಸ್ಪರ್ಧೆಗೆ ನಗದು ಬಹುಮಾನ

'ಹದಿನೈದು ವರ್ಷಗಳಿಂದ ನಡೆಯದ ಕಲಾ ಪ್ರತಿಭೋತ್ಸವವನ್ನು ಮತ್ತೆ ಆರಂಭಿಸಲಾಗಿದೆ. ಇಂತಹ ಸ್ಪರ್ಧೆಗಳು ಮಕ್ಕಳ ಪ್ರತಿಭೆ ಅರಳಲು ಕಾರಣವಾಗುವುದರ ಜೊತೆಗೆ ಧೈರ್ಯವನ್ನು ತುಂಬುತ್ತವೆ. ಏಕವ್ಯಕ್ತಿ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ ₹15 ಸಾವಿರ, ₹10 ಸಾವಿರ, ₹7,500 ಹಾಗೂ ಸಮೂಹ ಪ್ರಕಾರದ ನಾಟಕ ಸ್ಪರ್ಧೆಯ ಮೊದಲ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ₹50 ಸಾವಿರ, ₹40 ಸಾವಿರ ಹಾಗೂ ₹30 ಸಾವಿರ ನೀಡುತ್ತಿದ್ದೇವೆ. ಇಲ್ಲಿ ಹಣ ಮುಖ್ಯವಲ್ಲ. ಪ್ರತಿಭೆ ಗುರುತಿಸುವುದು ಮುಖ್ಯ' ಎಂದು ಸಚಿವರು ಮಾಹಿತಿ ನೀಡಿದರು.

21ರಿಂದ ಲಿಂಗತ್ವ ಅಲ್ಪಸಂಖ್ಯಾತರ 'ಒಂದೆಡೆ ರಂಗೋತ್ಸವ'

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಉತ್ಸವ 'ಒಂದೆಡೆ ರಂಗೋತ್ಸವ'ವನ್ನು ಫೆ.21 ಮತ್ತು 22ರಂದು ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆ, ಭಾರತೀಯ ಸಾಮಾಜಿಕ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ ಸಹಕಾರದಲ್ಲಿ 'ಒಂದೆಡೆ' ಸಂಘಟನೆ ಈ ಉತ್ಸವವನ್ನು ಹಮ್ಮಿಕೊಂಡಿದೆ.

ಫೆ.21ರಂದು ಬೆಳಿಗ್ಗೆ 11.20ಕ್ಕೆ ಕಾರ್ಯಕ್ರಮ ಉದ್ಘಾಟನೆಯಾಗಲಿದೆ. ರಂಗಪಯಣ ತಂಡವು 'ಅಕ್ಕೈ–ಕರುಣೆಗೊಂದು ಸವಾಲು' ರಂಗ ಪ್ರಸ್ತುತಿ ನೀಡಲಿದೆ. ವೈಷ್ಣವಿ ನಾಟ್ಯಶಾಲಾ ತಂಡದ ಸದಸ್ಯರಿಂದ ಭರತನಾಟ್ಯ ಪ್ರದರ್ಶನಗೊಳ್ಳಲಿದೆ. ಕವಿಗೋಷ್ಠಿಯಲ್ಲಿ ಸಮುದಾಯದ ಸದಸ್ಯರು ಕವನ ವಾಚಿಸಲಿದ್ದಾರೆ. ಸಾಧನ ಮಹಿಳಾ ಸಂಘವು 'ಹಸಿವು ಕನಸು' ರಂಗ ಪ್ರಸ್ತುತಿ ನೀಡಲಿದೆ. ಒಂದೆಡೆ ರಂಗ ತಂಡವು 'ಕರಗತಂ' ಪ್ರಸ್ತುತಪಡಿಸಲಿದೆ. ಸಮುದಾಯದ ಸದಸ್ಯರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿದ್ದಾರೆ.

ಫೆ.22ರಂದು ಒಂದೆಡೆ ರಂಗತಂಡ ಮತ್ತು ಉತ್ತರ ಕರ್ನಾಟಕ ಜೋಗಪ್ಪ ಸಂಘದ ಸದಸ್ಯರು ಚೌಡಕಿ ಪದ ಹಾಡಲಿದ್ದಾರೆ. ಹೆಣ್ಣೊಬ್ಬಳು ಗಂಡಾಗಿ ಪರಿವರ್ತನೆ ಆದಾಗ ಉಂಟಾದ ಧ್ವನಿ ಬದಲಾವಣೆ, ನೋವು, ಪ್ರೇಮಿ, ಸಹಪ್ರಯಾಣ ಕಟ್ಟಿಕೊಡುವ 'ಎ ಟು ಇ' ಏಕವ್ಯಕ್ತಿ ಪ್ರದರ್ಶನವನ್ನು ರೂಮಿ ಹರೀಶ್ ನೀಡಲಿದ್ದಾರೆ. 'ಪರಿವರ್ತಿತ ಲಿಂಗತ್ವ' ಸಮುದಾಯವು 'ತಲ್ಕಿ' ನಾಟಕ ಪ್ರದರ್ಶನ ನೀಡಲಿದೆ. ಒಂದೆಡೆ ತಂಡದಿಂದ ಸಾಂಸ್ಕೃತಿಕ ಹಾಡುಗಳ ಗಾಯನ ಇರಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್': ಅತಿಥಿ: ಟಿ.ಡಿ. ಕೆಂಪರಾಜು, ಅಧ್ಯಕ್ಷತೆ: ಜಯಕರ್ ಎಸ್‌.ಎಂ., ಅತಿಥಿಗಳು: ಶಾಂತಲಾ ಕೆ.ಟಿ., ಸುದೇಶ್ ವಿ., ಸಂಪನ್ಮೂಲ ವ್ಯಕ್ತಿಗಳು: ಪ್ರದೀಪ್ ಕುಮಾರ್ ಮಿಶ್ರಾ, ಕೆ.ಶ್ರೀನಿವಾಸ್, ಆಯೋಜನೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಸ್ಥಳ: ಜ್ಞಾನ ಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 9

ವಿಜ್ಞಾನ ವಸ್ತು ಪ್ರದರ್ಶನ: ಉದ್ಘಾಟನೆ: ಡಾ. ಆಂಜನಪ್ಪ, ಅತಿಥಿಗಳು: ಲಗ್ಗೆರೆ ನಾರಾಯಣ ಸ್ವಾಮಿ, ಮಲ್ಲೇಶ್ ಗೌಡ, ಆಯೋಜನೆ ಹಾಗೂ ಸ್ಥಳ: ರಾಜೀವ್ ಗಾಂಧಿ ಪಬ್ಲಿಕ್ ಸ್ಕೂಲ್, ರಾಜೀವ್ ಗಾಂಧಿ ನಗರ, ಲಗ್ಗೆರೆ, ಬೆಳಿಗ್ಗೆ 9.30

'ಸೈನ್ಸ್ ಬಿಯಾಂಡ್ ಸೈಟ್' ಅಂಧ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ: ಆಯೋಜನೆ ಹಾಗೂ ಸ್ಥಳ: ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್, ಭಾರತ್ ನಗರ 2ನೇ ಹಂತ, ಮಾಗಡಿ ಮುಖ್ಯರಸ್ತೆ, ಬಿಇಎಲ್ ಲೇಔಟ್, ಬೆಳಿಗ್ಗೆ 10

ನೃತ್ಯ–ಸಂವಾದ–ಪುಸ್ತಕ ಬಿಡುಗಡೆ: ರಾಜಶೇಖರ ಜೋಗಿನ್ಮನೆ ಅವರ 'ಕೇಳು ಧನಂಜಯ...' ಕೃತಿ ಬಗ್ಗೆ ಸಂವಾದ: ಎಚ್. ದಂಡಪ್ಪ, ಕೆ. ಸತ್ಯನಾರಾಯಣ, ಶರತ್ ಭಟ್ ಸೇರಾಜೆ, ಬಿ. ಸತ್ಯನಾರಾಯಣ ಅವರ 'ಹಂಪಿಯಲ್ಲಿ ರಾಮಾಯಣ' ಪುಸ್ತಕ ಬಿಡುಗಡೆ: ದೇವರಕೊಂಡಾ ರೆಡ್ಡಿ, ಪುಸ್ತಕದ ಬಗ್ಗೆ ಮಾತು: ಚಿಂತಾಮಣಿ ಕೊಡ್ಲೆಕೆರೆ, 'ಮನಸ್ವಿನಿ' ನೃತ್ಯ ನಾಟಕ ಪ್ರದರ್ಶನ, ರಚನೆ: ದಿವಾಕರ ಹೆಗಡೆ, ರಾಗ ಸಂಯೋಜನೆ: ಚೇತನಾ ಉಮೇಶ ಹೆಗಡೆ, ನೃತ್ಯ ಸಂಯೋಜನೆ: ವಿದ್ಯಾಶ್ರೀ ಹೆಗಡೆ, ಆಯೋಜನೆ ಹಾಗೂ ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ಗುರುಪಾದ ಬೇಲೂರು ಅವರ 'ಅನಾತ್ಮ' ಕಾದಂಬರಿ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಡಾ.ಎಚ್. ರವಿಕುಮಾರ್, ಪುಸ್ತಕ ಪರಿಚಯ: ರಘುನಾಥ ಚ.ಹ., ಉಪಸ್ಥಿತಿ: ಸಿದ್ದನಗೌಡ ಪಾಟೀಲ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

'ಶ್ರೀ ಕೃಷ್ಣಂ ವಂದೇ ಜಗದ್ಗುರುಂ' ಪುಸ್ತಕ ಬಿಡುಗಡೆ: ಲಹರ್ ಸಿಂಗ್, ಅತಿಥಿಗಳು: ಸಿ.ಎನ್. ಅಶ್ವತ್ಥನಾರಾಯಣ, ರಾಧಾಕೃಷ್ಣ, ಶ್ರೀಧರ ಗುರೂಜಿ, ಆಯೋಜನೆ: ಎಸ್‌ಎಲ್‌ಎನ್ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠ, ಮಲ್ಲೇಶ್ವರ, ಬೆಳಿಗ್ಗೆ 11

ಎಸ್‌.ಪಿ. ವರದರಾಜು ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಅಂಬಿಕಾ, ಗೀತಾ, ರಾಮಕೃಷ್ಣ, ಮಂಜುಳ ಗುರುರಾಜ್, ಪ್ರಶಸ್ತಿ ಪುರಸ್ಕೃತರು: ಪುಷ್ಪಮಾಲಾ ಎ. ಅಣ್ಣಿಗೇರಿ, ಗುರುರಾಜು, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಆಯೋಜನೆ: ಎಸ್‌.ಪಿ. ವರದರಾಜು ಬಳಗ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಸಂಜೆ 5

ರಾಮಪ್ರಸಾದ್ ಮಿಟ್ಟೂರು ಅವರ 'ರಸ ಋಷಿಗೆ ಕಾವ್ಯ ನಮನ' ಕವನ ಸಂಕಲನ ಬಿಡುಗಡೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಅತಿಥಿಗಳು: ವೂಡೇ ಪಿ. ಕೃಷ್ಣ, ಬೈರಮಂಗಲ ರಾಮೇಗೌಡ, ಎಚ್‌.ಆರ್. ಲೀಲಾವತಿ, ಆಯೋಜನೆ: ಡಾ.ರಾಮಪ್ರಸಾದ್ ಮಿಟ್ಟೂರು ಮತ್ತು ಬಳಗ, ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್ ಪೂರ್ವ, ಸಂಜೆ 5

ಹಿಂದೂ ಸಮಾಜೋತ್ಸವ: ಸಾನ್ನಿಧ್ಯ: ರಮಾನಂದನಾಥ ಸ್ವಾಮೀಜಿ, ಅತಿಥಿ: ಪಿ.ಎಂ. ಗಿರಿಧರ ಉಪಾಧ್ಯಾಯ, ಆಯೋಜನೆ: ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿ, ಸ್ಥಳ: ವಾಲಿಬಾಲ್ ಕ್ರೀಡಾಂಗಣ, ಐ.ಟಿ.ಐ. ಬಡಾವಣೆ, ನಾಯಂಡಹಳ್ಳಿ, ಸಂಜೆ 5

ದತ್ತಿ ಉಪನ್ಯಾಸ: 'ಜೈಮಿನಿ ಭಾರತ: ಸ್ತ್ರೀಪರ ನೋಟಗಳು' ವಿಷಯದ ಬಗ್ಗೆ ಉಪನ್ಯಾಸ: ಶಿವಾನಂದ ಟವಳಿ, ಅಧ್ಯಕ್ಷತೆ: ಎಸ್. ಎಲ್. ಮಂಜುನಾಥ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್‌.ಆರ್. ಕಾಲೊನಿ, ಸಂಜೆ 5

ನರಸಿಂಹಮೂರ್ತಿ ಹೂವಿನಹಳ್ಳಿ ಅವರ 'ತುಂಬಿ ಬಂದಿತ್ತ: ಬೇಂದ್ರೆ ಕಾವ್ಯದ ಅಧ್ಯಯನ' ಪುಸ್ತಕ ಬಿಡುಗಡೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಚ್‌.ಎಸ್. ರಾಘವೇಂದ್ರ ರಾವ್, ಪುಸ್ತಕದ ಬಗ್ಗೆ ಮಾತು: ರಾಜಪ್ಪ ದಳವಾಯಿ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6

ಪ್ರೊ.ಎಂಪಿಎಲ್ ಶಾಸ್ತ್ರಿ ಸಂಗೀತೋತ್ಸವ–2026: ಅತಿಥಿ: ಎಂ.ಆರ್‌.ವಿ. ಪ್ರಸಾದ್, ಪಿಟೀಲು ಜುಗಲ್‌ಬಂದಿ: ಲಾಲ್ಗುಡಿ ಜಿ.ಜೆ.ಆರ್. ಕೃಷ್ಣನ್, ಲಾಲ್ಗುಡಿ ವಿಜಯಲಕ್ಷ್ಮಿ, ಮೃದಂಗ: ಬೆಂಗಳೂರು ವಿ. ಪ್ರಸಾದ್, ಖಂಜೀರ: ಸಿ.ಪಿ. ವ್ಯಾಸ ವಿಠ್ಠಲ, ಆಯೋಜನೆ:ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜಿನ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಜೆ.ನಂದಕುಮಾರ್ ಅವರ 'ನ್ಯಾಷನಲ್ ಸೆಲ್ಫ್‌ಹೂಡ್ ಇನ್ ಸೈನ್ಸ್' ಪುಸ್ತಕ ಬಿಡುಗಡೆ: ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ರಾಷ್ಟ್ರೋತ್ಥಾನ ಯೋಗ ಆ್ಯಂಡ್ ಫಿಟ್ನೆಸ್ ಸೆಂಟರ್, ಜಯನಗರ 4ನೇ ಬ್ಲಾಕ್, ಸಂಜೆ 6

'ಸುರ್‌ಸಂಧ್ಯಾ' ಸಂಗೀತ ಕಾರ್ಯಕ್ರಮ: ಗಾಯನ: ಕವಿತಾ ಕೃಷ್ಣಮೂರ್ತಿ, ನಾಗಚಂದ್ರಿಕಾ ಭಟ್, ಸಮನ್ವಿತಾ ಶರ್ಮಾ, ಶ್ರುತಿ ಭಿಡೆ, ಆರೋಹ್ ಶಂಕರ್, ಸುರೋಜಿತ್ ಗುಹಾ, ಸಂವಾದ ನಿರ್ವಹಣೆ: ಹರೀಶ್ ಭಿಮಾನಿ, ಆಯೋಜನೆ: ಸಂಧ್ಯಾ ಎಸ್. ಕುಮಾರ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 6

'ಭೂ ಕೈಲಾಸ' ಹರಿಕಥೆ: ಅನಘಾ ಪ್ರಸಾದ್, ವಾದ್ಯ ಸಹಕಾರ: ಮಧುಸೂದನ್, ವಸಂತ್, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರ ವನಿತಾ ವೃಂದ, 1ನೇ ಅಡ್ಡರಸ್ತೆ, ಮಾರುತಿ ಆಸ್ಪತ್ರೆ ಎದುರು, ಶೇಷಾದ್ರಿಪುರ, ಸಂಜೆ 7

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಅಭಿನಂದನಾ ಗ್ರಂಥ ಬಿಡುಗಡೆ: ಸಾವಯವ ಸಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತುಪ್ರದರ್ಶನ, ಉಚಿತ ಆರೋಗ್ಯ ಶಿಬಿರ, ಸರ್ವಜನಾಂಗದ ವಧು–ವರರ ಮುಖಾಮುಖಿ, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಜಯೇಂದ್ರಪುರಿ ಸ್ವಾಮೀಜಿ, ಉದ್ಘಾಟನೆ: ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ಡಿ.ವಿ.ಸದಾನಂದಗೌಡ, ಸಂಸ್ಮರಣಾ ಗ್ರಂಥ ಬಿಡುಗಡೆ: ಎನ್. ಚಲುವರಾಯಸ್ವಾಮಿ, ಮಲೆನಾಡು ಗಿಡ್ಡ ಹಸು ವಿತರಣೆ: ಎಚ್‌.ಡಿ. ರಂಗನಾಥ್, ಸಾವಯವ ಸಂತೆ ಉದ್ಘಾಟನೆ: ಹುಲ್ಲಹಳ್ಳಿ ಸುರೇಶ್, ಆರೋಗ್ಯ ಶಿಬಿರ ಉದ್ಘಾಟನೆ: ಎಸ್‌.ಟಿ. ಸೋಮಶೇಖರ್, ಆಯೋಜನೆ: ಒಕ್ಕಲಿಗ ಯುವ ಬ್ರಿಗೇಡ್, ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣ, ಕೆಂಗೇರಿ, ಬೆಳಿಗ್ಗೆ 10



ನಿರ್ಮಲಾನಂದನಾಥ ಸ್ವಾಮೀಜಿ

ಭೀಮಣ್ಣ ಖಂಡ್ರೆ ಅವರಿಗೆ ನುಡಿ ನಮನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಬಸವಲಿಂಗ ಪಟ್ಟದೇವರು, ಶಿವಾನಂದ ಸ್ವಾಮೀಜಿ, ಗುರುಬಸವ ಪಟ್ಟದೇವರು, ಸಿದ್ಧರಾಮ ಶರಣರು ಬೆಲ್ದಾಳ, ನುಡಿ ನಮನ: ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಿ.ಎಸ್. ಯಡಿಯೂರಪ್ಪ, ವೀರಪ್ಪ ಮೊಯಿಲಿ, ವಿ. ಸೋಮಣ್ಣ, ಬಸವರಾಜ ಬೊಮ್ಮಾಯಿ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅರವಿಂದ ಜತ್ತಿ, ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಸ್ಥಳ: ಗಾಯಿತ್ರಿ ವಿಹಾರ, ಗೇಟ್ ಸಂಖ್ಯೆ 4, ಅರಮನೆ ಮೈದಾನ, ಸಂಜೆ 5.30

ಭೀಮಣ್ಣ ಖಂಡ್ರೆ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಅಲೆಮಾರಿಗಳಿಗೆ ಆದ್ಯತೆ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಕ್ಷ್ಮ, ಅತಿಸೂಕ್ಷ್ಮ ಸಮುದಾಯಗಳಾಗಿರುವ ಅಲೆಮಾರಿಗಳಿಗೆ 2026–27ನೇ ಸಾಲಿನ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು. ಅಲೆಮಾರಿಗಳಿಗೆ ಪ್ರತ್ಯೇಕ ಆಯೋಗ ರಚಿಸಬೇಕು ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಅಲೆಮಾರಿ ಸಂಘಟನೆಗಳ ಪದಾಧಿಕಾರಿಗಳು ಶುಕ್ರವಾರ ಮನವಿ ಮಾಡಿದರು.

ಈ ಸಮುದಾಯಗಳಿಗೆ ಪ್ರತ್ಯೇಕ ನಿಗಮ ಮಾಡಿ ಅನುದಾನ ಮೀಸಲಿರಿಸಬೇಕು. ಉಚಿತವಾಗಿ ನಿವೇಶನ, ವಸತಿ, ವಸತಿಶಾಲೆ ಒದಗಿಸಬೇಕು. ಅಲೆಮಾರಿಗಳಿಗೆ ಪ್ರತ್ಯೇಕ ಆಯೋಗ ಮಾಡಬೇಕು. ಸಂಶೋಧನಾ ಕೇಂದ್ರ, ಅಧ್ಯಯನ ಸಂಸ್ಥೆ, ಅಲೆಮಾರಿ ಆಕಾಡೆಮಿ ಸ್ಥಾಪನೆಗೆ ಒತ್ತು ನೀಡಬೇಕು. ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ಅಲೆಮಾರಿ ಅಭಿವೃದ್ಧಿ ನಿಗಮದ ಹಾಲಿ ಅಧ್ಯಕ್ಷರ ಅವಧಿ ಮಾರ್ಚ್‌ನಲ್ಲಿ ಕೊನೆಗೊಳ್ಳಲಿದೆ. ಆ ಸ್ಥಾನಕ್ಕೆ ಸೂಕ್ಷ್ಮ, ಅತಿ ಸೂಕ್ಷ್ಮ ಸಮುದಾಯಕ್ಕೆ ಸೇರಿರುವವರನ್ನು ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಪದಾಧಿಕಾರಿಗಳಾದ ಮಂಜುನಾಥ್ ದಯಾತ್ಕರ್ ಅಲೆಮಾರಿ, ಬಸವರಾಜ್ ನಾರಾಯಣ್ಕರ್, ಹನುಮಂತ, ಕೃಷ್ಣಪ್ಪ, ಶಾಂತರಾಜ್, ದುರ್ಗೇಶಿ ವಿಭೂತಿ, ಆಂಜನೇಯ, ವೆಂಕಟೇಶ್, ರಂಗನಾಥ್, ರಾಮಯ್ಯ, ಚಿನ್ನ, ಶೇಷಪ್ಪ, ಸಾವಿತ್ರಿ ರತ್ನಾಕರ, ಶಾರದಾ, ಮಂಜುಳಾ, ಅನೇಕರು ಭಾಗವಹಿಸಿದ್ದರು.

ಕೆಂಗೇರಿ: ಶಿವರಾತ್ರಿ– ಕೇದಾರನಾಥ ದರ್ಶನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೆಂಗೇರಿ ಉಪನಗರದ ಗಣೇಶ ಆಟದ ಮೈದಾನದಲ್ಲಿ ಕೇದಾರನಾಥ ಮಾದರಿ ದೇವಾಲಯ ದರ್ಶನದೊಂದಿಗೆ ಮಹಾಶಿವರಾತ್ರಿ ಹಬ್ಬವನ್ನು ಆಚರಿಸಲು ಸಿದ್ಧತೆಗಳು ಭರದಿಂದ ಸಾಗಿವೆ.

ಭಾನುವಾರ ಮುಂಜಾನೆಯಿಂದ ಸೋಮವಾರ ಬೆಳಿಗ್ಗೆ 8ರ ತನಕ ಭಕ್ತರು ಶಿವಲಿಂಗ ದರ್ಶನ ಪಡೆಯಲು ಅವಕಾಶ ಮಾಡಿಕೊಡಲಾಗಿದೆ.

ದೇವರ ದರ್ಶನ ಪಡೆಯಲು ಬರುವವರಿಗೆ 25 ಸಾವಿರ ರುದ್ರಾಕ್ಷಿ, ಗಂಗಾಜಲ, ತಂಬಿಟ್ಟು, ವಿಭೂತಿ ಸೇರಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಶಾಸಕ ಎಸ್‌.ಟಿ. ಸೋಮಶೇಖರ್ ತಿಳಿಸಿದ್ದಾರೆ.

ದಿನವಿಡೀ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಜಾನಪದ ಗಾಯಕಿ ಸವಿತಕ್ಕ, ಗಾಯಕ ವಿಜಯ್ ಪ್ರಕಾಶ್ ತಂಡದವರಿಂದ ಜಾನಪದ ಗೀತೆ, ಭಕ್ತಿಗೀತೆಗಳ ಗಾಯನ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ರಾಹುಲ್ ರತನಂ ಪಾಂಡೆ ಅವರನ್ನು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರವು ಆದೇಶಿಸಿದೆ.

ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಆಡಳಿತ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಸಾಹಿತ್ಯ ಎಂ. ಆಲದಕಟ್ಟಿ ಅವರನ್ನು ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

Special Breaking News

SALE

First Time in Hotel Radisson BLU 14 & 15 February

India's Biggest Summer & Winter Garments Exhibition

Something going to happen like never before at Radisson Blu Hotel Bangaluru
Direct sale to all retail customers at a discount of up to 90%.

VAN HEUSEN · LACOSTE · BALMAIN PARIS · spykar · Reebok · Calvin Klein · RARE RABBIT · NAUTICA · MONTE CARLO · HUGO BOSS · Raymond · PUMA · adidas · NIKE

All these garments will be sold 100% at the rates given below.

Men's Wear: Sweaters, Winter T-Shirts, Jackets, Hoodies, Jeans, Shirts, T-Shirts, Trousers, Lowers, Shorts, Kurta, Pyjama, Sherwani, Coat, Blazers priced from ₹2,000 to ₹20,000 available in the range of ₹250 to ₹750 and ₹2000

Ladies and Girls Wear: Sweaters, Winter T-Shirts, Winter Jackets, Jackets, Hoodies, Coat Sets, Tops, Kurtis, Palazzos, Jeans, Shirts, T-Shirts, Trousers, Lowers, Shorts, and Leggings, One Piece, Party Wear Suits priced from ₹1,000 to ₹7,000 available in ₹100 to ₹2299 and ₹400 to ₹850

Kids Wear: Jeans, Shirts, T-Shirts, Trousers, Lowers, Frocks, Shorts, and more... priced from ₹1,000 to ₹5,000 available at ₹299 to ₹499

Branded Footwear: Gents, Ladies, Kids - Sports shoes, Leather shoes, Trekking shoes, Sandals, Slippers, Bellies priced from ₹1,000 to ₹5,000 available in this mega sale for ₹350 to ₹1500. Branded shoes priced from ₹8,000 to ₹40,000 available at affordable prices.

Home Decor & Special Counters: Goggles, imported branded watches, perfumes, ladies bags, bed sheets, towels, men's jewellery, ladies jewellery and much more... starting at ₹199 in this mega sale with prices ranging from ₹1,000 to ₹7,500

Get your pick of premium winter garments, which are sold for Rs 2000 to Rs 12000, at just Rs 200 to Rs 1200.

Why is it selling so cheap?

Flipkart · Myntra · amazon

Due to overstock in online companies, now all the stock will be sold and finished in offline Radisson Blu Hotel Bangaluru Hitec City in 2 days.

Beware of other fake sales in Bangaluru, Our company's original sale is held at Radisson Blu Hotel Bangaluru Hitec City

This Sale is only for 2 Days, Saturday & Sunday, 14 & 15 February 2026

VENUE : Radisson BLU 90/4 Outer Ring road Maratha halli Village, Maratha halli, Bangaluru 37

NO ENTRY FEES, NO PARKING CHARGE | TIMING : MORNING 10 AM TO EVENING 10 PM

Note: 1. Due to pressure from companies, we cannot publish the brand names of all products in the newspaper. 2. Bangaluru people are requested not to miss this sale under any circumstances. 3. We claim that after this sale, such big brands will never be available to buy at such cheap prices. 4. The counter whose stock will be exhausted will be closed immediately. 5. Please maintain silence in the hall.

ಬಾರದ ಲೋಕಕ್ಕೆ ಹೋದ ಮಕ್ಕಳು

ಪೋಷಕರಿಗೆ ಹೇಳದೆ ತೆರಳಿದ್ದರು

• ಹೊಸಕೋಟೆ ಬಳಿ ಸರಣಿ ಅಪಘಾತ

• ರವೀಶ್ ಜಿ.ಎನ್

ಹೊಸಕೋಟೆ: ತಮ್ಮ ಮಕ್ಕಳು ಬೆಳಗಿನ ಸುಖ ನಿದ್ರೆಯಲ್ಲಿದ್ದಾರೆ ಎಂದು ಭಾವಿಸಿದ ಪೋಷಕರಿಗೆ ಪೊಲೀಸರ ಫೋನ್ ಕರೆ ಕೇಳಿ ಬರಸಿಡಿಲು ಬಡಿದಂತಾಯಿತು. ರಾತ್ರಿ ಊಟ ಮಾಡಿ ಮಲಗಿದ್ದ ಮಕ್ಕಳು, ಅಪಘಾತದಲ್ಲಿ ಅಸುನೀಗಿದ ಸುದ್ದಿ ಕೇಳಿ ಪೋಷಕರ ಜಂಘಾಬಲವೇ ಕುಸಿದು ಹೋಯಿತು.

ಪೊಲೀಸರು ಕರೆ ಮಾಡಿದಾಗ; ಅಪಘಾತ ಸಂಭವಿಸಿದ ಮಾತನ್ನು ಪೋಷಕರು, ಆ ಕ್ಷಣ ನಂಬಲೇ ಇಲ್ಲ. 'ನಮ್ಮ ಮಗ ಮಲಗಿದ್ದಾನೆ' ಎಂದು ಎಲ್ಲ ಪೋಷಕರು ಮರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಘಟನೆ ವಿವರಗಳನ್ನು ಪ್ರತಿ ಪೋಷಕರಿಗೂ ಪೊಲೀಸರು ಮನವರಿಕೆ ಮಾಡಿ ಕೊಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ವಿವಿಧ ಶಾಲಾ–ಕಾಲೇಜುಗಳಲ್ಲಿ ಓದುತ್ತಿದ್ದ ಈ ಹರೆಯದ ವಿದ್ಯಾರ್ಥಿಗಳು ಒಟ್ಟಾಗಿ ಜಾಲಿ ರೈಡ್ ಹೊರಟ್ಟಿದ್ದರು. ಇವರು ಎಲ್ಲಿಗೆ ಹೋಗುತ್ತಿದ್ದರು ಎಂಬುದು ಯಾರಿಗೂ ತಿಳಿದಿರಲಿಲ್ಲ. ಆದರೆ, ಹೊಸಕೋಟೆಯಲ್ಲಿ ಬಿರಿಯಾನಿ ಸೇವಿಸಲು ಈ ಸ್ನೇಹಿತರು ತೆರಳುತ್ತಿದ್ದರು ಎನ್ನುವ ಮಾಹಿತಿ ಇದೆ.

ಕತ್ತಲಲ್ಲಿ ತಾಯಿ ಬದುಕು: ಈ ಸರಣಿ ಅಪಘಾತದಲ್ಲಿ ಜೀವ ಕಳೆದುಕೊಂಡ ಬೈಕ್ ಸವಾರ 26 ವರ್ಷದ ಗಗನ್, ದೃಷ್ಟಿಹೀನ ತಾಯಿಗೆ ಒಬ್ಬನೇ ಮಗ. ಅಪ್ಪ ತೀರಿ ಹೋಗಿ ಹಲವು ವರ್ಷಗಳೇ ಕಳೆದಿದೆ. ಸಂಸಾರದ ನೊಗ ಹೊತ್ತ ಅವರು, ಪಿಲಗುಂಪೆ ಕೈಗಾರಿಕಾ ಪ್ರದೇಶದಲ್ಲಿ ಹಣ್ಣು–ತರಕಾರಿ ರಫ್ತು ಮಾಡುವ ಕಂಪನಿಯೊಂದರಲ್ಲಿ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದರು.

ಅವರು ರಾತ್ರಿ ಪಾಳಿ ಕೆಲಸ ಮುಗಿಸಿ ತನ್ನ ಊರಾದ ದೇವನಹಳ್ಳಿ ತಾಲ್ಲೂಕಿನ ದೇವನಾಯಕನಹಳ್ಳಿಯತ್ತ ಹೊರಟಿದ್ದರು.

'ಅಂಧ ತಾಯಿ ಬದುಕನ್ನು ಶಾಶ್ವತ ಕತ್ತಲಿಗೆ ನೂಕಿದಂತಾಗಿದೆ. ಆ ತಾಯಿಗೆ ಈಗ ಯಾರು ದಿಕ್ಕು?' ಎಂದು ಗಗನ್ ಸಂಬಂಧಿಕರು ಭಾವುಕರಾಗಿ ಹೇಳುತ್ತಾ ಕಣ್ಣೀರಾಗಿದ್ದು, ಅಲ್ಲಿ ನೆರೆದಿದ್ದ ಜನರ ಕಣ್ಣಾಲಿಗಳನ್ನೂ ತೇವಗೊಳಿಸಿತ್ತು.

ಹೊಸಕೋಟೆಯ ಎಂ.ಸತ್ಯವಾರ ಬಳಿ ಕಾರು ಡಿಕ್ಕಿಯ ಪರಿಣಾಮ ಹೆದ್ದಾರಿಯಿಂದ ಸರ್ವಿಸ್ ರಸ್ತೆಗೆ ಹಾರಿ ಬಿದ್ದಿರುವ ಕ್ಯಾಂಟರ್

ಗುರುತಿಸಲಾಗದಷ್ಟು ಛಿದ್ರಗೊಂಡ ದೇಹಗಳು...

ಅಪಘಾತ ಸಂಭವಿಸಿದ ಕಾರು, 250 ಮೀಟರ್ ದೂರ ಹೋಗಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಬಳಿಕ ನಿಂತಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಕಾರಿನಲ್ಲಿ ವಿದ್ಯಾರ್ಥಿಗಳು ಕುಳಿತ ಸ್ಥಿತಿಯಲ್ಲೇ ಮೃತಪಟ್ಟಿದ್ದಾರೆ. ದೇಹಗಳು ಗುರುತಿಸಲಾಗದಷ್ಟು ಛಿದ್ರಗೊಂಡಿದ್ದವು ಎಂದು ಸ್ಥಳೀಯರು ತಿಳಿಸಿದ್ದಾರೆ.

ಮೃತದೇಹಗಳನ್ನು ಹೊಸಕೋಟೆ ಎಂವಿಜೆ ಆಸ್ಪತ್ರೆಗೆ ಸಾಗಿಸಿ ಶವ ಪರೀಕ್ಷೆ ನಡೆಸಿ ಸದ್ಯ ಮೂರು ದೇಹಗಳನ್ನು ಮಾತ್ರ ಪೋಷಕರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಶ್ವಿನ್ ನಾಯರ್ ಪೋಷಕರು ಅಮೆರಿಕದಲ್ಲಿ ಇರುವ ಕಾರಣ ಶನಿವಾರ ಇಲ್ಲವೇ ಭಾನುವಾರ ಬಂದು ಮೃತದೇಹವನ್ನು ತೆಗೆದುಕೊಳ್ಳಲಿದ್ದಾರೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಐಜಿ ಲಾಬೂರಾಮ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ.ಚಂದ್ರಕಾಂತ್, ಎಎಸ್‌ಪಿ ವೆಂಕಟೇಶ್ ಪ್ರಸನ್ನ, ಡಿವೈಎಸ್‌ಪಿ ಮಲ್ಲೇಶ್, ಸೂಲಿಬೆಲೆ ಠಾಣೆ ಸಬ್ ಇನ್‌ಸ್ಪೆಕ್ಟರ್ ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

₹1.76 ಕೋಟಿ ಮೌಲ್ಯದ ಸ್ವತ್ತು ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನ ಪ್ರಕರಣಗಳಲ್ಲಿ ಆರೋಪಿಗಳಿಂದ ವಶಕ್ಕೆ ಪಡೆದ ₹1.76 ಕೋಟಿ ಮೌಲ್ಯದ ಸ್ವತ್ತುಗಳನ್ನು ಉತ್ತರ ವಿಭಾಗದ ಪೊಲೀಸರು ಶುಕ್ರವಾರ ಮಾಲೀಕರಿಗೆ ಹಸ್ತಾಂತರಿಸಿದರು.

ಮಲ್ಲೇಶ್ವರ ಮೈದಾನದಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಚಿನ್ನಾಭರಣ, ವಿವಿಧ ಮಾದರಿಯ ವಾಹನಗಳು ಹಾಗೂ ಮೊಬೈಲ್ ಫೋನ್‌ಗಳನ್ನು ಮಾಲೀಕರಿಗೆ ಹಸ್ತಾಂತರಿಸಿದರು.

ಹಗಲು–ರಾತ್ರಿ ವೇಳೆ ಮನೆಗಳಿಗೆ ನುಗ್ಗಿ ಕಳ್ಳತನ, ವಾಹನಗಳ ಕಳ್ಳತನ ಸೇರಿದಂತೆ 75 ಪ್ರಕರಣಗಳನ್ನು ಭೇದಿಸಿ ಒಟ್ಟು 83 ಆರೋಪಿಗಳನ್ನು ಬಂಧಿಸಲಾಗಿದೆ. 1 ಕೆ.ಜಿ 879 ಗ್ರಾಂ ಚಿನ್ನಾಭರಣ, 4 ಗ್ರಾಂ ವಜ್ರದ ಆಭರಣ, 1 ಕೆ.ಜಿ 783 ಗ್ರಾಂ ಬೆಳ್ಳಿಯ ಸಾಮಗ್ರಿ, 54 ದ್ವಿಚಕ್ರ ವಾಹನಗಳು, ಎರಡು ತ್ರಿಚಕ್ರ ವಾಹನಗಳು, ಒಂದು ನಾಲ್ಕು ಚಕ್ರದ ವಾಹನ, ವಿವಿಧ ಕಂಪನಿಯ 67 ಮೊಬೈಲ್ ಫೋನ್‌ಗಳು, ಒಂದು ಲ್ಯಾಪ್‌ಟಾಪ್, ಒಂದು ಟಿ.ವಿ, ₹3 ಲಕ್ಷ ನಗದು ಜಪ್ತಿ ಮಾಡಲಾಗಿತ್ತು ಎಂದು ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ತಿಳಿಸಿದರು.ಪಶ್ಚಿಮ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಸಿ.ವಂಶಿ ಕೃಷ್ಣ ಹಾಜರಿದ್ದರು.

ಕೋಲ್ಕತ್ತ ರೇಸ್

ಸೈಕೋ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಮಿಲಿಯನ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೈಕೋ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವೆರ್ರಾಜಾನೊ 2, ಡ್ಯಾನ್ಸಿಂಗ್ ಕ್ವೀನ್ 4, ಬಾರ್ನ್ ಟು ಸ್ವಾಲ್ಲಿ 3
2ನೇ ರೇಸ್: ಸರ್ ವಿನ್ಸಂಟ್ 2, ಕ್ಯಾಷಬಲ್ 4, ಮಾರ್ಕೋಲಿನಿ 7
3ನೇ ರೇಸ್: ವಿನ್ಸಂಜೆಲ್ 6, ಇಮ್ಮೋರ್ಟಲ್ ಬ್ಯೂಟಿ 2, ಕ್ಯಾಶ್ಮೀರಿ ಸಿಲ್ಕ್ 1
4ನೇ ರೇಸ್: ಸೈಕೋ 2, ಅಡ್ಮಿರಿಂಗ್ಲಿ 1
5ನೇ ರೇಸ್: ಡ್ಯೂಸೆನ್‌ಬರ್ಗ್ 5, ಸಿಗಾರ್ ಗೆಲಾಕ್ಸಿ 8, ಅನಿಗ್ರಹ 7
6ನೇ ರೇಸ್: ಪಂಟಜಿ 7, ಬ್ಲ್ಯಾಕ್ ಈಗಲ್ 1, ಗ್ಲೋರಿಯಸ್ ಕಿಂಗ್ 2
7ನೇ ರೇಸ್: ಸ್ಟಾರ್ ಸ್ಟಡೆಡ್ 4, ಹಾರ್ಟ್ 2, ಮಲ್ಟಿವರ್ಸ್ 3

ಉತ್ತಮ ಬೆಟ್: ಸ್ಟಾರ್ ಸ್ಟಡೆಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಹುಬ್ಬಳ್ಳಿ, ಫೆಬ್ರವರಿ 4, 2026

ಎಸ್.ಒ. 558(ಇ)–ರೈಲ್ವೆ ಕಾಯ್ದೆ, 1989 (1989 ರ ಕಾಯ್ದೆ ಸಂಖ್ಯೆ 24) ರ ಸೆಕ್ಷನ್ 2 ರ ಷರತ್ತು 37(ಎ) ನಿಂದ ನೀಡಲಾದ ಅಧಿಕಾರವನ್ನು ಚಲಾಯಿಸಿ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ಹುಬ್ಬಳ್ಳಿ) ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ, ಸಾರ್ವಜನಿಕ ಉದ್ದೇಶಕ್ಕಾಗಿ ರಾಷ್ಟ್ರೀಯ ಮೂಲಸೌಕರ್ಯವನ್ನು ಒದಗಿಸಲು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ "ವಿಶೇಷ ರೈಲ್ವೆ ಯೋಜನೆ" ಎಂದು ಈ ಮೂಲಕ ಅಧಿಸೂಚನೆ ಹೊರಡಿಸಿದೆ.

ಕ್ರ ಸಂ	ಯೋಜನೆಯ ಹೆಸರು	ಗ್ರಾಮದ ಹೆಸರು	ತಾಲ್ಲೂಕು	ಜಿಲ್ಲೆ
1	ಬೆಂಗಳೂರು ನಗರ–ಜೋಲಾರಪೇಟೆ–ಕಾಮಸಮುದ್ರಂ – ಬಿಸಾನಟ್ಟಂ ನಿಲ್ದಾಣದ ನಡುವಿನ ಕಿ.ಮೀ. 273/100–200 ರಲ್ಲಿ ಎಲ್‌ಸಿ ಸಂಖ್ಯೆ 112 ರ ಬದಲಿಗೆ ರಸ್ತೆ ಮೇಲ್ಸೇತುವೆಯ ನಿರ್ಮಾಣ."	ಕಾಮಸಮುದ್ರಂ	ಬಂಗಾರಪೇಟೆ	ಕೋಲಾರ

[ಎಫ್.ಸಂ.ಎಸ್‌ಡಬ್ಲ್ಯೂಆರ್/ಡಬ್ಲ್ಯೂ.352/ಆರ್‌ಒಬಿಗಳು–ಆರ್‌ಎಸ್‌ಪಿ/ಲ್ಯಾಂಡ್/2025–26]

ಹೆಚ್ಚಿನ ಮಾಹಿತಿಗಾಗಿ ಲಾಗಿನ್ ಆಗಿ https://egazette.gov.in

ನಿಂಗಪ್ಪ ಚಂದಪ್ಪ ಚಲುವಾದಿ
ಉಪ ಮುಖ್ಯ ಅಭಿಯಂತರರು/ರಸ್ತೆ ಮೇಲ್ಸೇತುವೆಗಳು, ರಸ್ತೆ ಸುರಕ್ಷತಾ ಯೋಜನೆಗಳು/ಹುಬ್ಬಳ್ಳಿ

ಪಿಯುಬಿ/895/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway - SWR | SWRRLY | @SWRAILWAYHQ | @sw_railways

ಅಪಘಾತ: ಸೈಬರ್ ಕೆಫೆ ಮಾಲೀಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆಯಲ್ಲಿ ಬೈಕ್ ನಿಯಂತ್ರಣ ತಪ್ಪಿದ್ದರಿಂದ ಕೆಳಕ್ಕೆ ಬಿದ್ದು ಸೈಬರ್ ಕೆಫೆ ಮಾಲೀಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಂಪೇಗೌಡ ಲೇಔಟ್‌ನ ನಿವಾಸಿ ಧನಂಜಯ್ (35) ಮೃತಪಟ್ಟವರು.

ಧನಂಜಯ್ ಅವರು ಕೆಂಗೇರಿ ಬಳಿ ಸೈಬರ್ ಕೆಫೆ ನಡೆಸುತ್ತಿದ್ದರು. ಗುರುವಾರ ರಾತ್ರಿ 10.30ರ ಸುಮಾರಿಗೆ ಮಳಿಗೆಗೆ ಬಾಗಿಲು ಹಾಕಿಕೊಂಡು ಮನೆಯತ್ತ ಬುಲೆಟ್ ಬೈಕ್‌ನಲ್ಲಿ ತೆರಳುತ್ತಿದ್ದರು. ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆಯಲ್ಲಿ (ಬಸವ ಆಶ್ರಮದ ಬಳಿ) ಬೈಕ್ ನಿಯಂತ್ರಣ ತಪ್ಪಿದ್ದರಿಂದ ಕೆಳಕ್ಕೆ ಬಿದ್ದು ಅವರು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಾಗಿಲಿಗೆ ಸಿಲುಕಿ ವಿದ್ಯಾರ್ಥಿನಿ ಬೆರಳು ತುಂಡು

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಗೂಳೂರು ಸರ್ಕಾರಿ ಶಾಲೆಯಲ್ಲಿ ಈಚೆಗೆ ಕೊಠಡಿ ಬಾಗಿಲಿಗೆ ಸಿಲುಕಿ ವಿದ್ಯಾರ್ಥಿನಿ ಬಲಗೈನ ಎರಡು ಬೆರಳುಗಳು ತುಂಡಾಗಿವೆ. ಸೂಕ್ತ ಸಮಯಕ್ಕೆ ಚಿಕಿತ್ಸೆ ಕೊಡಿಸದೆ ನಿರ್ಲಕ್ಷ್ಯ ವಹಿಸಿದ ಆರೋಪದ ಮೇಲೆ ಕ್ಷೇತ್ರ ಶಿಕ್ಷಣಾಧಿಕಾರಿ ಸೇರಿ ನಾಲ್ವರ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೂಳೂರು ಗ್ರಾಮದ ಅಂಬಿಕಾ, ಬಸವರಾಜು ದಂಪತಿ ಪುತ್ರಿ ಚಿನ್ಮಯಿ 1ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಫೆ.9ರಂದು ಶಾಲೆಯಲ್ಲಿ ಮಧ್ಯಾಹ್ನ ಊಟಕ್ಕೆ ತೆರಳುವಾಗ ಸರತಿ ಸಾಲಿನಲ್ಲಿ ನಿಂತಿದ್ದಳು. ಈ ವೇಳೆ ಕಬ್ಬಿಣದ ಬಾಗಿಲಿನ ಸಂದಿಯಲ್ಲಿ ಕೈ ಇಟ್ಟಿದ್ದಳು. ಹಿಂದೆ ನಿಂತಿದ್ದ ಮಕ್ಕಳು ಬಾಗಿಲನ್ನು ಜೋರಾಗಿ ತಳ್ಳಿದ್ದಾರೆ. ಇದರಿಂದ ಚಿನ್ಮಯಿ ಎರಡು ಬೆರಳು ತುಂಡಾಗಿದೆ.

'ಮುಖ್ಯ ಶಿಕ್ಷಕ ನಾಗೇಶ್, ಸಮೂಹ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ) ವೆಂಕಟೇಶ್ ಇಬ್ಬರೂ ಶಾಲೆಯಲ್ಲಿಯೇ ಇದ್ದರೂ ಘಟನೆ ನಡೆದ ಕೂಡಲೇ ಚಿಕಿತ್ಸೆ ಕೊಡಿಸಿಲ್ಲ. ಮಗು ಒದ್ದಾಡಿದೆ. ತುಂಡಾದ ಬೆರಳನ್ನು ಶಿಕ್ಷಕರು ಹೊರಗಡೆ ಎಸೆದಿದ್ದು, ಅದು ಈವರೆಗೂ ಸಿಕ್ಕಿಲ್ಲ. ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವಿದ್ಯಾರ್ಥಿನಿ ತಾಯಿ ಅಂಬಿಕಾ ನೀಡಿದ ದೂರಿನ ಮೇರೆಗೆ ಬಿಇಒ ಹನುಮಂತಪ್ಪ, ಸಿಆರ್‌ಪಿ ವೆಂಕಟೇಶ್, ಶಿಕ್ಷಕರಾದ ನಾಗೇಶ್, ರೇಣುಕಮ್ಮ ವಿರುದ್ಧ ಪ್ರಕರಣ ದಾಖಲಾಗಿದೆ.

14 ಬೇಡಿಕೆ: ಸರ್ಕಾರಕ್ಕೆ ವೈದ್ಯಾಧಿಕಾರಿಗಳ ಗಡುವು

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, ಮುಂಬಡ್ತಿ, ಕರ್ತವ್ಯದ ಬಳಿಕ ಖಾಸಗಿ ವ್ಯವಸ್ಥೆಯಡಿ ಚಿಕಿತ್ಸೆಗೆ ಅವಕಾಶ ಸೇರಿ 14 ಬೇಡಿಕೆಗಳನ್ನು ಮಾರ್ಚ್ 10ರೊಳಗೆ ಈಡೇರಿಸುವಂತೆ ಸರ್ಕಾರಿ ವೈದ್ಯಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಗಡುವು ನೀಡಿದ್ದಾರೆ.

'ಮಾರ್ಚ್ 11ರಿಂದ 15ರವರೆಗೆ ಹೊರರೋಗಿ ಸೇವೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಯನ್ನು ಮಾತ್ರ ನೀಡಲಾಗುತ್ತದೆ. ಎರಡನೇ ಹಂತದಲ್ಲಿ ಮಾರ್ಚ್ 16ರಿಂದ ಬೇಡಿಕೆಗಳು ಈಡೇರುವವರೆಗೆ ಎಲ್ಲ ವೈದ್ಯರು, ಅಧಿಕಾರಿಗಳು ಹಾಗೂ ನೌಕರರು ಕರ್ತವ್ಯಕ್ಕೆ ಗೈರಾಗಲಿದ್ದಾರೆ' ಎಂದು ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ. ರವೀಂದ್ರನಾಥ ಎಂ. ಮೇಟಿ ಹಾಗೂ ಆರೋಗ್ಯ ಇಲಾಖೆ ಕೇಂದ್ರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಬಿ. ಬಳ್ಳಾರಿ ತಿಳಿಸಿದ್ದಾರೆ.

ಆನ್‌ಲೈನ್ ಆರ್ಡರ್‌ನಲ್ಲಿ ಬಂತು ಹಳೆ ಬಟ್ಟೆ!

ಸೈಬರ್ ಅಪರಾಧ ಠಾಣೆಗೆ ಉಪ ಲೋಕಾಯುಕ್ತ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದು ರೇಜರ್ ಬ್ಲೇಡ್. ಆದರೆ, ಮನೆಗೆ ಬಂದಿದ್ದು ಹಳೆ ತುಂಡು ಬಟ್ಟೆ...

ನಿವೃತ್ತ ನ್ಯಾಯಮೂರ್ತಿ, ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಆನ್‌ಲೈನ್ ಶಾಪಿಂಗ್ ಮಾಡಿ ವಂಚನೆಗೆ ಒಳಗಾಗಿದ್ದಾರೆ.

ಈ ಸಂಬಂಧ ಫಣೀಂದ್ರ ಅವರು ನೀಡಿದ ದೂರಿನ ಮೇರೆಗೆ ಕೇಂದ್ರ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ವಿಜಯ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಆರೋಪಿಯ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66 'ಡಿ' ಹಾಗೂ ಭಾರತೀಯ ನ್ಯಾಯ ಸಂಹಿತೆ 318(4) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಫಣೀಂದ್ರ ಅವರು ಗುಡ್ ಮ್ಯಾಕ್ಸ್ ಕಂಪನಿಯ ವೆಬ್‌ಸೈಟ್ ಮೂಲಕ ಫೆ.4 ರಂದು ರೇಜರ್ ಬ್ಲೇಡ್ ಆರ್ಡರ್ ಮಾಡಿದ್ದರು. ಶ್ಯಾಡೊಫ್ಯಾಕ್ಸ್ ಸರ್ಫೇಸ್ ಲಾಜಿಸ್ಟಿಕ್ ಸಂಸ್ಥೆಯ ವಿಜಯ್ ಅವರು ಫೆ.9ರಂದು ಕರೆ ಮಾಡಿ, 'ಆರ್ಡರ್ ಮಾಡಿರುವ ವಸ್ತು ಬಂದಿದೆ' ಎಂದು ಹೇಳಿ ವಿತರಣೆಗೆ ದೃಢೀಕರಣ ಕೇಳಿದ್ದರು. ಆ ಸಮಯದಲ್ಲಿ ದೂರುದಾರರು ಕಚೇರಿಯಲ್ಲಿದ್ದ ಕಾರಣ, ಮನೆಗೆ ಪಾರ್ಸೆಲ್ ತಲುಪಿಸುವಂತೆ ಹೇಳಿದ್ದರು. ವಿಜಯ್ ಅವರು ಫಣೀಂದ್ರ ಅವರ ಮನೆಯ ವಿಳಾಸಕ್ಕೆ ಪಾರ್ಸೆಲ್ ತಲುಪಿಸಿ, ₹699 ನಗದು ಪಡೆದು ತೆರಳಿದ್ದರು. ದೂರುದಾರರು ಮನೆಗೆ ಬಂದು ಪಾರ್ಸೆಲ್ ಕವರ್ ತೆರೆದು ಪರಿಶೀಲಿಸಿದಾಗ ರೇಜರ್ ಬ್ಲೇಡ್ ಬದಲು ಹಳೆ ಬಟ್ಟೆ ಬಂದಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ಮನೆಗೆ ಪಾರ್ಸೆಲ್ ತಲುಪಿಸಿದ ವಿಜಯ್ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದಾಗ, ಅವರು ತೃಪ್ತಿಕರ ಉತ್ತರ ನೀಡಿಲ್ಲ. ಪಾರ್ಸೆಲ್ ಒಳಗಿರುವ ವಸ್ತುವಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳಿದ್ದರು. ಕಂಪನಿಯನ್ನೇ ಸಂಪರ್ಕಿಸಿ ಎಂದೂ ಸೂಚಿಸಿದ್ದರು. ಆರ್ಡರ್ ಮಾಡಿದ ವಸ್ತುವಿನ ಬದಲಿಗೆ ಬೇರೊಂದು ವಸ್ತು ನೀಡಿ ಮೋಸ ಮಾಡಿರುವ ಗುಡ್ ಮ್ಯಾಕ್ಸ್ ಕಂಪನಿ ಹಾಗೂ ಆ ವಸ್ತು ವಿತರಣೆ ಮಾಡಿರುವ ಶ್ಯಾಡೊಫ್ಯಾಕ್ಸ್ ಸರ್ಫೇಸ್ ಲಾಜಿಸ್ಟಿಕ್ ಸಂಸ್ಥೆಯ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ಫಣೀಂದ್ರ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ – 560100.
ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸಕೋ/ತಾಶಾ/09/2025–26 ದಿನಾಂಕ: 13–02–2026

ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ ಸಾಮಾನ್ಯ ಅನುದಾನದಲ್ಲಿ ದೊಡ್ಡನಾಗಮಂಗಲ ಪ್ರದೇಶದ ಕಲ್ಯಾಣಿ ಬಳಿ 2.00 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ತೊಟ್ಟಿ ನಿರ್ಮಾಣ ಮತ್ತು ಪಂಪ್ ಮೋಟಾರ್ ಅಳವಡಿಕೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ, ಅದರಂತೆ ಆಸಕ್ತಿಯುಳ್ಳ ಅಧಿಕೃತ ಗುತ್ತಿಗೆದಾರರು ಸದರಿ ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮುಖಾಂತರ ಭಾಗವಹಿಸಬಹುದಾಗಿದೆ. ಸದರಿ ಟೆಂಡರ್‌ಗೆ ಭಾಗವಹಿಸುವ ದಿನಾಂಕಗಳು ಈ ಕೆಳಕಂಡಂತಿದ್ದು, ಇನ್ನೂ ಹೆಚ್ಚಿನ ವಿವರಗಳಿಗೆ ಕೋನಪ್ಪನ ಅಗ್ರಹಾರ ಪುರಸಭೆಯಲ್ಲಿ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2025-26/WS/WORK_INDENT55268	23.00

1) ಟೆಂಡರ್‌ಗೆ ಇರಿಸಲಾದ ಮೊತ್ತ (ರೂ. ಗಳಲ್ಲಿ): 1947831.00, 2) ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 48695.00, 3) ಮೀಸಲಾತಿ: ಸಾಮಾನ್ಯ.
ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 24–02–2026 ಸಮಯ: 17.00 ಗಂಟೆವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25–02–2026 ಸಮಯ: 17.30 ಗಂಟೆಗೆ. ಮೇಲ್ಕಂಡ ದಿನಾಂಕಗಳನ್ನು ರಜಾ ದಿನಗಳನ್ನಾಗಿ ಘೋಷಿಸಿದ್ದಲ್ಲಿ ಮುಂದಿನ ಕೆಲಸ ದಿನವನ್ನು ಪರಿಗಣಿಸಲಾಗುವುದು.

ಸಹಿ/– ಆಡಳಿತಾಧಿಕಾರಿಗಳು, ಕೋನಪ್ಪನ ಅಗ್ರಹಾರ ಪುರಸಭೆ, ಬೆಂಗಳೂರು ನಗರ ಜಿಲ್ಲೆ.
ಸಹಿ/– ಮುಖ್ಯಾಧಿಕಾರಿಗಳು, ಕೋನಪ್ಪನ ಅಗ್ರಹಾರ ಪುರಸಭೆ, ಬೆಂಗಳೂರು ನಗರ ಜಿಲ್ಲೆ.
ವಾಸಾಸಂಇ/ವಾ.ಪ್ರ/5645/ಅಡ್ವರ್ಟೋರ್/2025–26

nandhana PARTY HALL
ನಂದನ® ಪಾರ್ಟಿ ಹಾಲ್
ನಿಮ್ಮ ಸಮಾರಂಭವನ್ನು ವಿಶೇಷಗೊಳಿಸಿ

• ಹುಟ್ಟುಹಬ್ಬ • ನಿಶ್ಚಿತಾರ್ಥಗಳು • ನಾಮಕರಣ
• ಸಂತೋಷಕೂಟ • ಬೀಗರ ಔತಣ • ಆರತಕ್ಷತೆ
ಮೀಸಲಾತಿಗಾಗಿ ಕೂಡಲೇ ಕರೆ ಮಾಡಿ:
+91 99019 85642, 080 4613 1111
ನಮ್ಮ ಶಾಖೆಗಳು: ರಾಜಾಜಿನಗರ | ಕೋರಮಂಗಲ | ಕಮ್ಮನಹಳ್ಳಿ | ನ್ಯೂ ಬೆಲ್ ರೋಡ್ಸ್
ರಾಜರಾಜೇಶ್ವರಿ ನಗರ | ಸಹಕಾರ ನಗರ | ಕನಕಪುರ ರಸ್ತೆ | ಬೊಮ್ಮಸಂದ್ರ | ನಾಗರಭಾವಿ
www.nandhanarestaurants.com | banquets@nandhanahotels.com

ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್
(ಹಿಂದೆ ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್)
ಪ್ಲಾಟ್ ಸಂಖ್ಯೆ 167, ಸರ್ವೆ ಸಂಖ್ಯೆ 74/1 ಮತ್ತು 74/2, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, ಕೈಗಾರಿಕಾ ಪ್ರದೇಶ, ಅರೆಬಿನ್ನಮಂಗಲ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಗಲೂರು, ಬೆಂಗಳೂರು, ಕರ್ನಾಟಕ, ಭಾರತ–562149
ISO 9001-2015 & AS 9100 Rev D ಪ್ರಮಾಣೀಕರಿಸಲಾಗಿದೆ
GSTIN: 29AABCU9719Q1ZC CIN: L30305KA2016PLC095712
investorrelations@unimechaerospace.com ದೂರವಾಣಿ: 080-42046782
www.unimechaerospace.com

ಡಿಸೆಂಬರ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಲೆಕ್ಕಪರಿಶೋಧಿಸದ (ಪ್ರತ್ಯೇಕ ಮತ್ತು ಕ್ರೋಢೀಕೃತ) ಹಣಕಾಸು ಫಲಿತಾಂಶಗಳ ಹೇಳಿಕೆಯ ಜಾಹೀರಾತು

[ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 47(1) ರೊಂದಿಗೆ ಓದಲಾದ ನಿಯಮ 33 ರ ಪ್ರಕಾರ]

ಕಂಪನಿಯ ನಿರ್ದೇಶಕರ ಮಂಡಳಿಯು ಫೆಬ್ರವರಿ 12, 2026ರಂದು ನಡೆದ ತನ್ನ ಸಭೆಯಲ್ಲಿ, ಇತರ ವಿಷಯಗಳ ಜೊತೆಗೆ, ಡಿಸೆಂಬರ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಲೆಕ್ಕಪರಿಶೋಧಿಸದ ಹಣಕಾಸು ಫಲಿತಾಂಶಗಳನ್ನು ಪರಿಗಣಿಸಿ ಅನುಮೋದಿಸಿದೆ.

ಸೀಮಿತ ವಿಮರ್ಶೆ ವರದಿಯೊಂದಿಗೆ ಹಣಕಾಸಿನ ಫಲಿತಾಂಶಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ಲಭ್ಯವಿದೆ www.unimechaerospace.com ಗೆ ಭೇಟಿ ನೀಡಿ ಮತ್ತು ಕೆಳಗೆ ನೀಡಲಾದ QR ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು. ಹಣಕಾಸಿನ ಫಲಿತಾಂಶಗಳು ಸ್ಟಾಕ್ ಎಕ್ಸ್ಚೇಂಜ್‌ನ ವೆಬ್‌ಸೈಟ್‌ಗಳಲ್ಲಿಯೂ ಲಭ್ಯವಿದೆ, ಅಂದರೆ, BSE ಲಿಮಿಟೆಡ್ (BSE) www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.comನಲ್ಲಿ ಲಭ್ಯವಿದೆ.

ನಿರ್ದೇಶಕರ ಮಂಡಳಿಯ ಪರ ಮತ್ತು ಪರವಾಗಿ
ಯೂನಿಮೆಕ್ ಏರೋಸ್ಪೇಸ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್
ಅನಿಲ್ ಕುಮಾರ್ ಪಿ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : 12ನೇ ಫೆಬ್ರವರಿ 2026

COFFEE DAY ENTERPRISES LTD.
Coffee Day® Brewing new possibilities.
Registered Office: 165, R.V. Road, (Near Minerva Circle), Bengaluru - 560 004, Karnataka, India.
Tel: + 91 80 4001 2345; Fax: + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter and Nine Months ended 31st December, 2025

Un-audited financial results of Coffee Day Enterprises Limited (Consolidated Information)

(₹ in Crores except per share data)

Particulars	Quarter ended 31st December, 2025 (Unaudited)	Nine months ended 31st December, 2025 (Unaudited)	Quarter ended 31st December, 2024 (Unaudited)
Total income from operations (net)	303.06	860.93	285.53
Net Profit/(loss) from ordinary activities after tax	70.49	78.08	(11.46)
Net Profit/(loss) for the period after tax (after Extraordinary items)	70.49	78.08	(11.46)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	2.62	3.36	(0.49)
Diluted :	2.62	3.36	(0.49)
Earnings Per Share (after extraordinary items) (of ₹ 10/- each)			
Basic :	2.62	3.36	(0.49)
Diluted :	2.62	3.36	(0.49)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 12th February, 2026 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st December, 2025 (Unaudited)	Nine months ended 31st December, 2025 (Unaudited)	Quarter ended 31st December, 2024 (Unaudited)
Total income from operations (net)	5.14	15.69	5.54
Profit/(loss) before tax and exceptional items	36.31	43.43	0.74
Profit/(loss) profit after tax and exceptional items	36.31	43.43	0.74

For and Behalf of Board of Directors
Malavika Hegde
CEO & Whole Time Director

Place : Bengaluru
Date : 12 February, 2026

ಕ್ಯಾನ್ಸರ್ ಪೀಡಿತರಿಗೆ ನೆರವಾದ ತಂತ್ರಜ್ಞಾನ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ರೊಬೊಟಿಕ್ ಶಸ್ತ್ರಚಿಕಿತ್ಸೆ ಹೆಚ್ಚಳ • ಶೀಘ್ರ ಚೇತರಿಕೆ, ಆಸ್ಪತ್ರೆ ಅವಧಿ ಕಡಿತ

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ಪೀಡಿತರಿಗೆ ರೊಬೊಟಿಕ್ ತಂತ್ರಜ್ಞಾನ ವರದಾನವಾಗಿದ್ದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಸಾವಿರಕ್ಕೂ ಅಧಿಕ ಮಂದಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಖಾಸಗಿ ವ್ಯವಸ್ಥೆಯಡಿ ರೊಬೊಟಿಕ್ ಶಸ್ತ್ರಚಿಕಿತ್ಸೆ ದುಬಾರಿ ಆಗಿರುವ ಕಾರಣ, ಸಂಸ್ಥೆಯಲ್ಲಿ 2017ರಲ್ಲಿ ಈ ಆಧುನಿಕ ಶಸ್ತ್ರಚಿಕಿತ್ಸೆಯನ್ನು ಪರಿಚಯಿಸಲಾಯಿತು. ಡಾ.ವಿನ್ಸಿ ರೊಬೊಟಿಕ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಅಮೆರಿಕದ ಇನ್‌ಸ್ಟಿಟ್ಯೂಟ್ ಆಫ್ ಸರ್ಜಿಕಲ್ ರಿಸರ್ಚ್ ಸಂಸ್ಥೆಯು ಡಾ.ವಿನ್ಸಿ ರೊಬೊಟಿಕ್ ಯಂತ್ರವನ್ನು ಅಭಿವೃದ್ಧಿಪಡಿಸಿದೆ.

ರಾಜ್ಯದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಕಿದ್ವಾಯಿ ಸಂಸ್ಥೆಯಲ್ಲಿ ಮಾತ್ರ ಈ ರೋಬೊ ಯಂತ್ರ ಕಾರ್ಯಾಚರಣೆ ಮಾಡುತ್ತಿದೆ. ಈ ಯಂತ್ರದ ನೆರವಿನಿಂದ ವರ್ಷದಿಂದ ವರ್ಷಕ್ಕೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಸಂಖ್ಯೆ ಹೆಚ್ಚಾಗುತ್ತಿದ್ದು, ಈ ವರ್ಷ ಜನವರಿಯಲ್ಲಿಯೇ 23 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಈ ರೊಬೊಟಿಕ್ ತಂತ್ರಜ್ಞಾನ ವ್ಯವಸ್ಥೆಯನ್ನು ಸಂಸ್ಥೆಯು ₹16.5 ಕೋಟಿ ವೆಚ್ಚದಲ್ಲಿ ಹಿಂದೆ ಅಳವಡಿಸಿಕೊಂಡಿತ್ತು. 2021ರಲ್ಲಿ ಪ್ರತಿ ತಿಂಗಳು ಸರಾಸರಿ ಆರು ರೊಬೊಟಿಕ್ ಶಸ್ತ್ರಚಿಕಿತ್ಸೆ ನಡೆಸಿದರೆ, ಕಳೆದ ವರ್ಷ ಈ ಸಂಖ್ಯೆ 23ಕ್ಕೆ ಏರಿದೆ. ಈವರೆಗೆ ಒಟ್ಟು 1,069 ರೊಬೊಟಿಕ್ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್, ಎದೆಗೂಡಿನ ಕ್ಯಾನ್ಸರ್‌ಗಳು ಸೇರಿ ಆಯ್ದ ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗಿಗಳಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

ನಿಖರ ಶಸ್ತ್ರಚಿಕಿತ್ಸೆ: ಈ ಅತ್ಯಾಧುನಿಕ ತಂತ್ರಜ್ಞಾನವು ರೋಗಿ ಹಾಗೂ ವೈದ್ಯರಿಗೆ ಸಹಕಾರಿಯಾಗಿದೆ. ಸಣ್ಣದಾಗಿ ರಂಧ್ರ ಮಾಡಿ, ರೋಗಕಾರಕ ಭಾಗವನ್ನು ಮಾತ್ರ ಹೊರತೆಗೆಯಲಾಗುತ್ತದೆ. ಇದರಿಂದ ನಿಖರ ಶಸ್ತ್ರಚಿಕಿತ್ಸೆಯ ಜತೆಗೆ, ರೋಗಿಯು ಅಲ್ಪಾವಧಿಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗುವ ಜತೆಗೆ, ಶಸ್ತ್ರಚಿಕಿತ್ಸೆ ಹಾಗೂ ರೋಗಿ ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಬೇಕಾಗುತ್ತದೆ.

‘ಬದಲಾದ ಜೀವನಶೈಲಿ ಹಾಗೂ ಧೂಮಪಾನದಂತಹ ವ್ಯಸನ, ತಂಬಾಕು ಉತ್ಪನ್ನ ಸೇವನೆ, ಒತ್ತಡದ ಜೀವನ, ಕಲುಷಿತ ವಾತಾವರಣ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ರೊಬೊಟಿಕ್ ತಂತ್ರಜ್ಞಾನವನ್ನು ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುತ್ತಿರುವುದರಿಂದ ಹೆಚ್ಚು ನಿಖರತೆ ಸೇರಿ ಹಲವು ಪ್ರಯೋಜನಗಳಾಗುತ್ತಿವೆ. ರೋಗಿಯ ಆಸ್ಪತ್ರೆ ಅವಧಿಯೂ ಕಡಿತವಾಗುತ್ತಿದೆ’ ಎಂದು ಸಂಸ್ಥೆ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದರು.

ಅಂಕಿ ಅಂಶಗಳು

874
ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

800-1,000
ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು



ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ರೊಬೊಟಿಕ್ ತಂತ್ರಜ್ಞಾನದಿಂದ ಸಂಕೀರ್ಣ ಶಸ್ತ್ರಚಿಕಿತ್ಸೆ ಸುಲಭಸಾಧ್ಯವಾಗುತ್ತಿದೆ
ಡಾ.ಟಿ.ನವೀನ್
ನಿರ್ದೇಶಕ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ



ಸಂಸ್ಥೆಯಲ್ಲಿರುವ ಡಾ.ವಿನ್ಸಿ ರೊಬೊಟಿಕ್ ಯಂತ್ರ

ಶಸ್ತ್ರಚಿಕಿತ್ಸೆಗೆ ನೆರವು

ಹೊಂಬೇಗೌಡ ನಗರದಲ್ಲಿರುವ ಈ ಸಂಸ್ಥೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ, ಹೊರ ರಾಜ್ಯಗಳಿಂದಲೂ ರೋಗಿಗಳು ಭೇಟಿ ನೀಡುತ್ತಿದ್ದಾರೆ. ಇದರಿಂದಾಗಿ ಚಿಕಿತ್ಸೆಗಾಗಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಏರುಗತಿ ಪಡೆದಿದೆ. ಆದ್ದರಿಂದ ಇನ್ನೊಂದು ರೋಬೊ ಯಂತ್ರ ಅಳವಡಿಕೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತಿದೆ ಎಂದು ಸಂಸ್ಥೆಯ ಮೂಲಗಳಿಂದ ತಿಳಿದುಬಂದಿದೆ.

ರೊಬೊಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ವಸ್ತುಗಳು ದುಬಾರಿಯಾಗಿರುವುದರಿಂದ ವೆಚ್ಚ ಅಧಿಕವಾಗಲಿದೆ. ಕೆಲ ಶಸ್ತ್ರಚಿಕಿತ್ಸಾ ಪ್ರಕ್ರಿಯೆಯನ್ನು ಬಿಪಿಎಲ್ ಕುಟುಂಬದವರಿಗೆ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ನಡೆಸಿದರೆ, ಯೋಜನೆಯಡಿ ಬಾರದ ಕೆಲ ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳನ್ನು ದಾನಿಗಳ ನೆರವಿನಿಂದ ಮಾಡಲಾಗುತ್ತಿದೆ.

ಸುದ್ದಿ 2 ನಿಮಿಷ

₹13.20 ಕೋಟಿ ಮೌಲ್ಯದ ಭೂಮಿ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಸುಮಾರು ₹13.20 ಕೋಟಿ ಮೌಲ್ಯದ ಒಟ್ಟು 2.36 ಎಕರೆ ಸರ್ಕಾರಿ ಜಮೀನನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಯಿತು.

ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗುಂಡುತೋಪು, ಗೋಮಾಳ, ಬಂಡಿದಾರಿ, ಹುಲ್ಲುಗಾವಲು, ಖರಾಬು, ಸ್ಮಶಾನ ಮತ್ತು ಗೋಕಟ್ಟೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

ಯಲಹಂಕ ಹೋಬಳಿಯ ಚೊಕ್ಕನಹಳ್ಳಿ ಗ್ರಾಮದ ₹7 ಕೋಟಿ ಮೌಲ್ಯದ 7 ಗುಂಟೆ ಹದ್ದುಗಿಡದಹಳ್ಳ, ದಾಸನಪುರ ಹೋಬಳಿಯ ತಮ್ಮೇನಹಳ್ಳಿ ಗ್ರಾಮದ ₹2.25 ಕೋಟಿ ಮೌಲ್ಯದ 15 ಗುಂಟೆ ಗೋಕಟ್ಟೆ, ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ನಾಡಗೌಡಗೊಲ್ಲಹಳ್ಳಿ ಗ್ರಾಮದ ₹1 ಕೋಟಿ ಮೌಲ್ಯದ 5 ಗುಂಟೆ ಗುಂಡುತೋಪು, ಆನೇಕಲ್ ತಾಲ್ಲೂಕು ಕಸಬಾ ಹೋಬಳಿಯ ಬೆಸ್ತಮಾನಹಳ್ಳಿ ಗ್ರಾಮದಲ್ಲಿನ ₹1.20 ಕೋಟಿ ಮೌಲ್ಯದ 1.16 ಎಕರೆ ಗುಂಡುತೋಪು ಮತ್ತು ಗೋಮಾಳ ವಶಪಡಿಸಿಕೊಳ್ಳಲಾಗಿದೆ.

ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬೈಚಗುಪ್ಪ ಗ್ರಾಮದ ₹10 ಲಕ್ಷ ಅಂದಾಜು ಮೌಲ್ಯದ 2 ಗುಂಟೆ ಬಂಡಿದಾರಿ, ಉತ್ತರಹಳ್ಳಿ ಹೋಬಳಿಯ ಉತ್ತರಿ ಗ್ರಾಮದ ₹80 ಲಕ್ಷ ಮೌಲ್ಯದ 14 ಗುಂಟೆ ಹುಲ್ಲುಗಾವಲು, ಖರಾಬು, ಕೆಂಗೇರಿ ಹೋಬಳಿಯ ಸೂಲಿಕೆರೆ ಗ್ರಾಮದ ₹75 ಲಕ್ಷ ಮೌಲ್ಯದ 12 ಗುಂಟೆ ಖರಾಬು, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ರಾವತ್ತನಹಳ್ಳಿ ಗ್ರಾಮದ ₹10 ಲಕ್ಷ ಅಂದಾಜು ಮೌಲ್ಯದ 5 ಗುಂಟೆ ಸ್ಮಶಾನದ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೆಲ್ಮೆಟ್ ವಿತರಣೆ, ರಸ್ತೆ ಸುರಕ್ಷತೆಯ ಜಾಗೃತಿ

ಬೆಂಗಳೂರು: ಕಬ್ಬನ್‌ಪಾರ್ಕ್ ಸಂಚಾರ ಠಾಣೆ ಹಾಗೂ ‘ತ್ವರ’ ಸಂಸ್ಥೆಯ ಸಹಯೋಗದಲ್ಲಿ ದ್ವಿಚಕ್ರ ವಾಹನ ಸವಾರರಿಗೆ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲಾಯಿತು.

ಇದೇ ವೇಳೆ ದ್ವಿಚಕ್ರ ವಾಹನಗಳ ಮಹಿಳಾ ಸವಾರರಿಗೆ ಹಾಗೂ ಮಹಿಳಾ ಪೊಲೀಸ್ ಸಿಬ್ಬಂದಿಗೆ ಉಚಿತವಾಗಿ ಹೆಲ್ಮೆಟ್ ವಿತರಿಸಲಾಯಿತು.

‘ತ್ವರ’ ಸಂಸ್ಥೆಯ ಸಿಇಒ ಅಲ್ಪಾನ ಪರಿದಾ ಅವರು ಮಾತನಾಡಿ, ‘ರಸ್ತೆಗಳಲ್ಲಿ ಮಹಿಳಾ ಸವಾರರು ಮತ್ತು ಹಿಂಬದಿ ಸವಾರರ ಸಂಖ್ಯೆ ಗಮನಾರ್ಹವಾಗಿ ಹೆಚ್ಚುತ್ತಿದೆ. ಆದರೆ, ಅವರಿಗೆಂದೇ ಪ್ರತ್ಯೇಕವಾದ ಸುರಕ್ಷತಾ ಉಪಕರಣಗಳು ದೊರೆಯುತ್ತಿಲ್ಲ. ಬಹುತೇಕ ಸಂದರ್ಭದಲ್ಲಿ ಹಿಂಬದಿ ಮಹಿಳಾ ಸವಾರರು ಹೆಲ್ಮೆಟ್ ಧರಿಸುವುದೇ ಇಲ್ಲ. ಈ ಎಲ್ಲ ಅಂಶಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ನಮ್ಮ ಉದ್ದೇಶ’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಅಂಚೆ ವಿಮೆ: ಪ್ರತಿನಿಧಿಗಳ ನಿಯುಕ್ತಿಗೆ ಸಂದರ್ಶನ

ಬೆಂಗಳೂರು: ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಜೀವ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಇದೇ 17ರಂದು ಬೆಳಿಗ್ಗೆ 11ಕ್ಕೆ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಏರ್ಪಡಿಸಿದೆ.

ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣಪತ್ರದ ಛಾಯಾಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿ ಇರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿಗಳ ಮಾಜಿ ಸದಸ್ಯರು, ಮಹಿಳಾ ಮಂಡಲದ ಕಾರ್ಯಕರ್ತೆಯರು ಭಾಗವಹಿಸಬಹುದು. ಅಭ್ಯರ್ಥಿಗಳು 10ನೇ ತರಗತಿ ಉತ್ತೀರ್ಣ ಹೊಂದಿರಬೇಕು, 18ರಿಂದ 50 ವರ್ಷದ ಒಳಗಿನವರಾಗಿರಬೇಕು. ಆಯ್ಕೆಯಾದವರು ₹5,000 ಭದ್ರತಾ ಠೇವಣಿ ಇಡಬೇಕು. ಅಭ್ಯರ್ಥಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಕಮಿಷನ್ ನೀಡಲಾಗುವುದು. ವಿವರಗಳಿಗೆ 7975127704/080-23493283 ಸಂಪರ್ಕಿಸುವುದು.

ಎ.ಎಲ್ಲಪ್ಪ ನೇಮಕ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಅಲೆಮಾರಿ, ಅರೆ ಅಲೆಮಾರಿ ವಿಮುಕ್ತ ಬುಡಕಟ್ಟುಗಳ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಚಿತ್ರ ನಿರ್ಮಾಪಕ ಎ.ಎಲ್ಲಪ್ಪ ಅವರನ್ನು ನೇಮಕ ಮಾಡಲಾಗಿದೆ.

ಗ್ರಾಹಕರಿಗೆ ಕೊಡುಗೆ

ಬೆಂಗಳೂರು: ಫ್ಯಾಷನ್, ಲೈಫ್‌ಸ್ಟೈಲ್ ಮತ್ತು ಕೊಡುಗೆಗಳ ತಾಣವಾದ ಶಾಪರ್ಸ್ ಸ್ಟಾಪ್, ‘ಸ್ಟೈಲ್ ಇನಿಂಗ್ಸ್’ ಎಂಬ ಹೊಸ ಅಭಿಯಾನ ಆರಂಭಿಸಿದೆ. ದೇಶದಾದ್ಯಂತ ಇರುವ ಮಳಿಗೆಗಳಲ್ಲಿ ಮಾರ್ಚ್ 8ರವರೆಗೆ ನಡೆಯುವ ಈ ಅಭಿಯಾನದಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆಯಲು ಅವಕಾಶ ಇದೆ.

ಕ್ರಿಕೆಟ್‌ನ ಉತ್ಸಾಹ ಮತ್ತು ಶಾಪಿಂಗ್‌ನ ಸಡಗರವನ್ನು ಹೆಚ್ಚಿಸಲು ‘ಶಾಪ್ ಅಂಡ್ ವಿನ್’ನಂತಹ ಆಕರ್ಷಕ ಆಯ್ಕೆಗಳನ್ನು ಪರಿಚಯಿಸಿದೆ. ಗ್ರಾಹಕರು ₹7,500 ಮೊತ್ತದ ಶಾಪಿಂಗ್ ಮೇಲೆ ₹750ರ ವೋಚರ್ ಅಥವಾ ₹15,000 ಮೊತ್ತದ ಶಾಪಿಂಗ್ ಮೇಲೆ ₹1,500 ಮೊತ್ತದ ವೋಚರ್‌ಗಳನ್ನು ಪಡೆಯಬಹುದು.

ಗ್ರಾಹಕರು ₹7,500 ಮೊತ್ತದ ಶಾಪಿಂಗ್ ಮಾಡುವ ಮೂಲಕ ಬಿಎಂಡಬ್ಲ್ಯು ಬೈಕ್, ಲೈಫ್ ಬ್ರ್ಯಾಂಡ್‌ಗಳ ಫ್ಯಾಷನ್ ಟೀ ಶರ್ಟ್‌ಗಳು ಸೇರಿದಂತೆ ಹಲವು ಬಹುಮಾನಗಳನ್ನು ಗೆಲ್ಲುವ ಅವಕಾಶ ಇದೆ. ಅಲ್ಲದೆ ಪಿವಿಆರ್ ಐನಾಕ್ಸ್‌ನಲ್ಲಿ ಕ್ರಿಕೆಟ್ ವೀಕ್ಷಿಸಲು ದಂಪತಿಗೆ ಟಿಕೆಟ್ ಸೇರಿದಂತೆ ಹಲವು ಆಫರ್‌ಗಳಿವೆ. ಈ ಕೊಡುಗೆಗಾಗಿ ಶಾಪರ್ಸ್ ಸ್ಟಾಪ್ ಮಳಿಗೆಗಳಿಗೆ ಭೇಟಿ ನೀಡಬಹುದು ಅಥವಾ www.shoppersstop.com ಮೂಲಕ ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಶೈಲಜಾ ನೇಮಕ

ಬೆಂಗಳೂರು: ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿಯ ಕಸಘಟ್ಟಪುರ ಗ್ರಾಮ ಪಂಚಾಯಿತಿಯ ಆಡಳಿತಾಧಿಕಾರಿಯನ್ನಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಶೈಲಜಾ ಅವರನ್ನು ನೇಮಕ ಮಾಡಲಾಗಿದೆ.

ಶ್ರೀಮಾತಾ ಚಾರಿಟಬಲ್ ಟ್ರಸ್ಟ್, ಸೆಂಟರ್ ಸ್ಟೇಜ್ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಕೀಲ್ ಅಹಮದ್ ಮತ್ತು ಎಂ. ಗಣೇಶ್ ಅವರಿಗೆ ‘ಸೆಂಟರ್ ಸ್ಟೇಜ್ ಕಪ್ಪಣ್ಣ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಶ್ರೀಮಾತಾ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಗಂಗಾಧರ್, ನಿರೂಪಕಿ ವತ್ಸಲಾ ಮೋಹನ್, ಮಾಜಿ ಸಚಿವೆ ರಾಣಿ ಸತೀಶ್, ರಂಗಕರ್ಮಿ ಟಿ.ಎಸ್. ನಾಗಾಭರಣ, ನಿವೃತ್ತ ಅಧಿಕಾರಿ ಕೆ.ಸಿ. ರಾಮಮೂರ್ತಿ, ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಮತ್ತು ರಂಗಕರ್ಮಿ ಶಶಿಧರ ಭಾರಿಘಾಟ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಈಶಾ ಶಿವರಾತ್ರಿ: 3 ಲಕ್ಷ ಭಕ್ತರ ನಿರೀಕ್ಷೆ

ಚಿಕ್ಕಬಳ್ಳಾಪುರ: ತಮಿಳುನಾಡಿನ ಕೊಯಮತ್ತೂರು ಈಶಾ ಯೋಗ ಕೇಂದ್ರದಲ್ಲಿ ನಡೆಯುವ ಶಿವರಾತ್ರಿ ಕಾರ್ಯಕ್ರಮದ ನೇರ ಪ್ರಸಾರವನ್ನು ಚಿಕ್ಕಬಳ್ಳಾಪುರ ಈಶಾ ಯೋಗ ಕೇಂದ್ರದಲ್ಲಿ ನೋಡುವ ವ್ಯವಸ್ಥೆ ಮಾಡಲಾಗಿದೆ ಎಂದು ಚಿಕ್ಕಬಳ್ಳಾಪುರ ಈಶಾ ಯೋಗ ಕೇಂದ್ರದ ಸ್ವಾಮಿ ವಿಮೋಹ ತಿಳಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರದ ಸನ್ನಿಧಿಯಲ್ಲಿ 4ನೇ ವರ್ಷದ ಮಹಾಶಿವರಾತ್ರಿ ಆಚರಣೆ ನಡೆಯುತ್ತದೆ ಎಂದರು.

ಕೊಯಮತ್ತೂರು ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಸಚಿವ ಎಲ್.ಮುರುಗನ್ ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

23 ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ 100 ವಾಹಿನಿಗಳಲ್ಲಿ ಈ ಕಾರ್ಯಕ್ರಮದ ನೇರ ಪ್ರಸಾರವಿದೆ. ಕಳೆದ ವರ್ಷದ ಶಿವರಾತ್ರಿ ದಿನ ಚಿಕ್ಕಬಳ್ಳಾಪುರದ ಕೇಂದ್ರದಲ್ಲಿ 2 ಲಕ್ಷ ಜನರು ಭಾಗವಹಿಸಿದ್ದರು. ಈ ವರ್ಷ 3 ಲಕ್ಷ ಭಕ್ತರನ್ನು ನಿರೀಕ್ಷಿಸಲಾಗಿದೆ ಎಂದರು.

ಭಕ್ತರಿಗೆ ಅನ್ನಪ್ರಸಾದ ವ್ಯವಸ್ಥೆ ಇದೆ. 1 ಲಕ್ಷ ರುದ್ರಾಕ್ಷಿ ವಿತರಿಸಲಾಗುತ್ತದೆ. ಭಕ್ತರಿಗೆ ಅನುಕೂಲ ಆಗುವಂತೆ ಯೋಗ ದ್ವಾರದಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಂದ ಯೋಗ ಕೇಂದ್ರಕ್ಕೆ ಬರಲು ಉಚಿತವಾಗಿ ಸಾರಿಗೆ ವ್ಯವಸ್ಥೆ ಇರಲಿದೆ ಎಂದರು.

ಒಂದು ಲ್ಯಾಂಬೋರ್ಗಿನಿ ಕಾರಿನ ಪ್ರಹಸನ • ದಾಖಲೆ ಮೋಸ–ವಂಚನೆ ಆರೋಪ

ಸಾರಿಗೆ ಅಧಿಕಾರಿಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಲಾಸಿ ಲ್ಯಾಂಬೋರ್ಗಿನಿ ಕಾರನ್ನು ಸುಳ್ಳು ದಾಖಲೆ ಸೃಷ್ಟಿಸಿ ನೋಂದಣಿ ಮಾಡಿಸಿಕೊಳ್ಳಲಾಗಿದೆ’ ಎಂದು ಆರೋಪಿಸಿ ಮಧ್ಯರಾತ್ರಿ ಮಾಲೀಕರ ಗ್ಯಾರೇಜ್‌ಗೆ ನುಗ್ಗಿ ಕಾರನ್ನು ಏಕಾಏಕಿ ಟೋಯಿಂಗ್ ಮೂಲಕ ತೆಗೆದುಕೊಂಡು ಹೋಗಿರುವ ಹಿರಿಯ ಮೋಟಾರು ವಾಹನಗಳ ನಿರೀಕ್ಷಕರೊಬ್ಬರನ್ನು (ಎಂವಿಐ) ಹೈಕೋರ್ಟ್ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದೆ.

ಈ ಸಂಬಂಧ ಕಾರಿನ ಮಾಲೀಕ ಮತ್ತು ‘ಹಾಯ್ ಕಾರ್ ಕೇರ್’ ಮುಖ್ಯಸ್ಥರೂ ಆದ ಜೆ.ರಾಮಕೃಷ್ಣಯ್ಯ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ ಅರಬಟ್ಟಿ, ‘ಇದೇ 7ರಂದು, ಹಿರಿಯ ಮೋಟಾರು ವಾಹನ ನಿರೀಕ್ಷಕ ಎನ್.ರಂಜಿತ್, ಅರ್ಜಿದಾರರ ಮನೆಗೆ ರಾತ್ರಿ 11.30ರ ಸಮಯದಲ್ಲಿ ನುಗ್ಗಿ ಕಾರನ್ನು ಮನೆಯ ಗ್ಯಾರೇಜ್‌ನಿಂದ ಟೋಯಿಂಗ್ ಮಾಡಿಸಿಕೊಂಡು ಹೋಗಿದ್ದಾರೆ. ನಂತರ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ, ಮೋಸ ಮಾಡಿ ವಂಚಿಸಿದ ಅಪರಾಧಗಳಡಿ ಪ್ರಕರಣ ದಾಖಲಿಸಲಾಗಿದೆ’ ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎಸ್.ಬೆಳ್ಳಿಯಪ್ಪ, ‘ಕಾರು 2022ರಲ್ಲಿಯೇ ಆರ್‌ಟಿಒ ಕಚೇರಿಯಲ್ಲಿ ನೋಂದಣಿಯಾಗಿತ್ತು. ಆ ಹಳೆಯ ಮಾಹಿತಿಯನ್ನು ಆರ್‌ಟಿಒ ಅಧಿಕಾರಿಗಳೇ ತೆಗೆದುಹಾಕಿ, ಹೊಸ ಮಾಹಿತಿಯನ್ನು ಭರ್ತಿ ಮಾಡಿದ್ದಾರೆ. ಅರ್ಜಿದಾರರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿದೆ’ ಎಂದು ಆಕ್ಷೇಪಿಸಿದರು.

‘ಜಂಟಿ ಸಾರಿಗೆ ಆಯುಕ್ತರು ನಡೆಸಿದ ವಿಚಾರಣೆಯ ಆಧಾರದಡಿ ಅಪರಾಧವನ್ನು ದಾಖಲಿಸಲಾಗಿದೆ. ತೆರಿಗೆ ವಂಚನೆಗಾಗಿ ಅಪರಾಧವನ್ನು ನೋಂದಾಯಿಸಿದ ನಂತರ ಕಾರನ್ನು ವಶಪಡಿಸಿಕೊಳ್ಳಲು ಇನ್‌ಸ್ಪೆಕ್ಟರ್‌ಗೆ ಅಧಿಕಾರವಿದೆ’ ಎಂದು ಪ್ರತಿಪಾದಿಸಿದರು.

ಅರ್ಜಿದಾರರು ಆರ್‌ಟಿಒ ಅಧಿಕಾರಿಗಳನ್ನು ನೋಡಿಕೊಂಡಿಲ್ಲ ಎಂದು ಲ್ಯಾಂಬೋರ್ಗಿನಿಯಂತಹ ಕಾರನ್ನು ಎಳೆದೊಯ್ಯಲಾಗಿದೆಯೇ? ಈ ಅಧಿಕಾರಿಗಳಿಗೆ ಆತ್ಮಸಾಕ್ಷಿ ಇದೆಯೇ?
ಎಂ.ನಾಗಪ್ರಸನ್ನ
ನ್ಯಾಯಮೂರ್ತಿ

ಇದಕ್ಕೆ ನ್ಯಾಯಪೀಠ, ‘ನಿಮ್ಮ ಪ್ರತಿಪಾದಿತ ಅಂಶಕ್ಕೆ ಪೂರಕವಾದ ಕಾನೂನು ವ್ಯಾಖ್ಯೆಯನ್ನು ತೋರಿಸಿ’ ಎಂದು ಪ್ರಶ್ನಿಸಿತು. ‘ಇದಕ್ಕೆ ವಿವರಣೆ ನೀಡಲು ಸ್ವಲ್ಪ ಸಮಯಾವಕಾಶಬೇಕು’ ಎಂದು ಬೆಳ್ಳಿಯಪ್ಪ ಕೋರಿದರು.

ಈ ಕೋರಿಕೆಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಒಬ್ಬ ಹಿರಿಯ ಅಧಿಕಾರಿ ಈ ರೀತಿ ಮತ್ತೊಬ್ಬರ ಮನೆಗೆ ನುಗ್ಗಿ ರಾತ್ರೋರಾತ್ರಿ ಬೆಲೆಬಾಳುವ ಕಾರನ್ನು ಜಪ್ತಿ ಮಾಡುವುದು ಎಂದರೆ ಏನರ್ಥ? ಈ ರೀತಿ ಮಾಡಲು ಅವರಿಗೆ ಅಧಿಕಾರ ಎಲ್ಲಿದೆ? ನಿಮ್ಮ ಮನೆಗೆ ಯಾರಾದರೂ ಈ ರೀತಿ ನುಗ್ಗಿದರೆ ಸುಮ್ಮನೆ ಬಿಡುತ್ತೀರಾ’ ಎಂದು ಖಾರವಾಗಿ ಪ್ರಶ್ನಿಸಿತು.

‘ಇಂತಹ ಸಂದರ್ಭಗಳಲ್ಲಿ ಪೂರ್ವಭಾವಿಯಾಗಿ ಯಾಕೆ ನೋಟಿಸ್ ನೀಡಿಲ್ಲ? ಇಲ್ಲಿ ಎಂವಿಐ ಸ್ವತಃ ದೂರುದಾರ. ಅವರೇ ಆರೋಪಿ ಮನೆಗೆ ನುಗ್ಗಿ ಕಾರನ್ನು ಎಳೆಸಿಕೊಂಡು ಹೋಗಿದ್ದಾರೆ. ಬೆಲೆಬಾಳುವ ಕಾರಿಗೆ ಏನಾದರೂ ಕಿಂಚಿತ್ ಗೆರೆಯಾಗಿದ್ದರೂ, ಅದನ್ನು ಸರಿಪಡಿಸಲು ಅವರ ಜೇಬಿನಿಂದಲೇ ಹಣ ಖರ್ಚು ಮಾಡಿಸುತ್ತೇನೆ. ಈ ಅಧಿಕಾರಿಯನ್ನು ಅಮಾನತುಗೊಳಿಸಲು ಆದೇಶಿಸುತ್ತೇನೆ ಮತ್ತು ಇಲಾಖಾ ತನಿಖೆಗೆ ಆದೇಶಿಸುತ್ತೇನೆ’ ಎಂದು ಕಠಿಣ ಧ್ವನಿಯಲ್ಲಿ ಎಚ್ಚರಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ತಡೆ ನೀಡಿದ ನ್ಯಾಯಪೀಠ, ‘ಅರ್ಜಿದಾರರು ತಕ್ಷಣವೇ ಕಾರನ್ನು ತಮ್ಮ ವಶಕ್ಕೆ ಪಡೆಯಲು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಕೋರ್ಟ್ ಈ ಅರ್ಜಿಯನ್ನು ಕೂಡಲೇ ವಿಲೇವಾರಿ ಮಾಡಬೇಕು’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 18ಕ್ಕೆ ನಿಗದಿಪಡಿಸಿತು.

ಪ್ರಾಸಿಕ್ಯೂಷನ್ ಆರೋಪ ಏನು?

‘ಹರ್ಷ ಇನ್ಫ್ರಾ ಕಾನ್ಸ್ ಪ್ರೈವೇಟ್ ಲಿಮಿಟೆಡ್’ 2022ರಲ್ಲಿ ಲ್ಯಾಂಬೋರ್ಗಿನಿ ಪ್ರಕರಣದಲ್ಲಿ ಸಿಲುಕಿರುವ ಕಾರನ್ನು ಖರೀದಿಸಿತ್ತು. ಇದರ ನೋಂದಣಿಗಾಗಿ ತೆಲಂಗಾಣಕ್ಕೆ ತೆಗೆದುಕೊಂಡು ಹೋಗಲಾಗಿತ್ತು. ಮೂರು ವರ್ಷ ಬಳಕೆ ಮಾಡಿದ ನಂತರ ಅರ್ಜಿದಾರರಿಗೆ ಮಾರಾಟ ಮಾಡಿತ್ತು.

‘ವಾಹನ ನೋಂದಣಿ ಸಮಯದಲ್ಲಿ ದಾಖಲೆಗಳನ್ನು ನಕಲಿ ಮಾಡಿ ಪ್ರಾದೇಶಿಕ ಸಾರಿಗೆ ಕಚೇರಿಗೆ (ಆರ್‌ಟಿಒ) ವಂಚಿಸಲಾಗಿದೆ’ ಎಂಬುದು ಪ್ರಾಸಿಕ್ಯೂಷನ್ ಆರೋಪ. ಈ ಸಂಬಂಧ ಕಾರಿನ ಮಾಲೀಕರ ವಿರುದ್ಧ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ–2023ರ ಕಲಂ 528ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಇದನ್ನು ಅಲ್ಲಗಳೆದಿರುವ ಅರ್ಜಿದಾರರು, ‘ಡೀಲರ್ ಮುಖಾಂತರ ಕಾರನ್ನು ಖರೀದಿಸಲಾಗಿದೆ. ₹1 ಕೋಟಿ ಜಿಎಸ್‌ಟಿ ಮತ್ತು ₹60 ಲಕ್ಷ ರಸ್ತೆ ತೆರಿಗೆ ಪಾವತಿ ಮಾಡಲಾಗಿದೆ. ಬೆಂಗಳೂರು ಪೂರ್ವ ವಲಯದ ಆರ್‌ಟಿಒ ವಾಹನವನ್ನು ನೋಂದಾಯಿಸಿ ಅದಕ್ಕೆ ಸಂಖ್ಯೆಯನ್ನೂ ನೀಡಿದ್ದಾರೆ’ ಎಂದು ವಿವರಿಸಿದೆ.

ಚಲನಚಿತ್ರ ಅಕಾಡೆಮಿ ವಿರುದ್ಧದ ದೂರು: ಪರಿಗಣಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಣ ದುರುಪಯೋಗ ಮತ್ತು ಬೈ–ಲಾ ನಿಯಮಗಳ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಕನ್ನಡ ಚಲನಚಿತ್ರ ಅಕಾಡೆಮಿ ವಿರುದ್ಧ ನೀಡಲಾಗಿರುವ ಅರ್ಜಿದಾರರ ದೂರನ್ನು ಪರಿಗಣಿಸಿ’ ಎಂದು ಹೈಕೋರ್ಟ್, ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಆದೇಶಿಸಿದೆ.

ತುಮಕೂರಿನ, ‘ಮೆಸರ್ಸ್ ಸಂವಿಧಾನ ಸಿನಿ ಕಂಬೈನ್ಸ್’ ನಿರ್ಮಾಪಕ ಎ.ವಿ.ನಾಗರಾಜು (ಟೈಗರ್ ನಾಗ) ಮತ್ತು ಆನೇಕಲ್‌ನ ಎ.ಆರ್.ಪ್ರೊಡಕ್ಷನ್ಸ್‌ನ ನಿರ್ಮಾಪಕ ಅರುಣ್ ರೈ ತೋಡರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅಕಾಡೆಮಿಯ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸಲ್ಲಿಸಲು ಮತ್ತು ಕನ್ನಡ ಚಲನಚಿತ್ರ ಅಕಾಡೆಮಿಯ ಪದಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು ಎಂದು ಅರ್ಜಿದಾರರು 2025ರ ಆಗಸ್ಟ್ 18ರಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ನೋಂದಣಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರು ಎತ್ತಿರುವ ದೂರುಗಳನ್ನು ಪರಿಶೀಲಿಸಿ’ ಎಂದು ನ್ಯಾಯಪೀಠ ಪ್ರತಿವಾದಿ ಸಹಕಾರ ಸಂಘಗಳ ಉಪನಿಬಂಧಕರಿಗೆ ನಿರ್ದೇಶಿಸಿದೆ.

‘ಅರ್ಜಿದಾರರು, 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು 2026ರ ಜ. 29ರಿಂದ 2026ರ ಫೆ. 6ರವರೆಗೆ ನಡೆಸುವುದಕ್ಕೂ ಮುನ್ನ ರಾಜ್ಯ ಸರ್ಕಾರ ಹೊಸ ಆಯ್ಕೆ ಸಮಿತಿ ರಚಿಸಬೇಕು ಎಂದು ಕೋರಿದ ಅಂಶವೂ ಅರ್ಜಿಯಲ್ಲಿ ಅಡಕವಾಗಿದೆ. ಆದರೆ, ಚಲನಚಿತ್ರೋತ್ಸವ ಈಗಾಗಲೇ ಮುಕ್ತಾಯಗೊಂಡಿದ್ದು, ಈ ಅಂಶದ ಬಗ್ಗೆ ಗಮನಹರಿಸುವುದು ಈಗ ವ್ಯರ್ಥ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿಯಲ್ಲಿ, ಕನ್ನಡ ಸಂಸ್ಕೃತಿ ಮತ್ತು ಮಾಹಿತಿ ಇಲಾಖೆ ಕಾರ್ಯದರ್ಶಿ, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹಾಗೂ ಕನ್ನಡ ಚಲನಚಿತ್ರ ಅಕಾಡೆಮಿ ಅಧ್ಯಕ್ಷರನ್ನೂ ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್.ಮೋಹನ್ ವಾದ ಮಂಡಿಸಿದ್ದರು.

‘ಕದ್ದ ಮಾಲು: ಬೇಗ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕದ್ದ ಮಾಲನ್ನು ಇಟ್ಟುಕೊಂಡಿರುವ ಯಾವುದೇ ವ್ಯಕ್ತಿ ಇಲ್ಲವೇ ಸಂಸ್ಥೆಗೆ ಅಂತಹ ಮಾಲನ್ನು ಒಪ್ಪಿಸುವಂತೆ ಪೊಲೀಸರು ಕೇಳಿದಾಗ ಹಸ್ತಾಂತರಿಸಲು ವಿಳಂಬಿಸುವ ಅಥವಾ ನಿರಾಕರಿಸುವ ಹಕ್ಕು ಹೊಂದಿರುವುದಿಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

‘ಚಿನ್ನದ ಒಡವೆಗಳನ್ನು ಒಪ್ಪಿಸಬೇಕು’ ಎಂದು ಪೊಲೀಸರು ನೀಡಿದ್ದ ನೋಟಿಸ್ ಪ್ರಶ್ನಿಸಿ ಬೆಂಗಳೂರು ಶಾಖೆಯ ‘ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ಕಂಪನಿ’ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆಯಲ್ಲಿ ಕಂಪನಿ, ‘ಚಿನ್ನವನ್ನು ನಂಬಿಕೆಯ ಮೂಲಕ ಸ್ವೀಕರಿಸಲಾಗಿದೆ ಮತ್ತು ಸೂಕ್ತ ಕಾರ್ಯವಿಧಾನ ಅನುಸರಿಸಿದ ನಂತರವೇ ಸಾಲ ವಿತರಿಸಲಾಗಿದೆ. ಅಡವಿಟ್ಟ ಚಿನ್ನ ಬಿಟ್ಟುಕೊಡುವುದಕ್ಕೆ ಒಪ್ಪಂದದ ಬಾಧ್ಯತೆಗಳು ಅಡ್ಡಿಯಾಗುತ್ತವೆ’ ಎಂದು ಪ್ರತಿಪಾದಿಸಿತ್ತು.

ಆದರೆ, ಐಐಎಫ್‌ಎಲ್‌ನ ಎಲ್ಲಾ ವಾದಾಂಶಗಳನ್ನು ತಿರಸ್ಕರಿಸಿ ಅರ್ಜಿ ವಜಾಗೊಳಿಸಿರುವ ನ್ಯಾಯಪೀಠ, ‘ಹಣಕಾಸುದಾರರ ಯಾವುದೇ ಭದ್ರತಾ ಹಿತಾಸಕ್ತಿಯ ಒಪ್ಪಂದ ಇದ್ದರೂ ಕದ್ದ ಮಾಲಿಗೆ ಸಂಬಂಧಿಸಿದಂತೆ ನಿಜವಾದ ಮಾಲೀಕರ ಹಕ್ಕುಗಳನ್ನು ಅತಿಕ್ರಮಿಸಲು ಅಥವಾ ತನಿಖೆಗೆ ಅಡ್ಡಿಪಡಿಸಲು ಸಾಧ್ಯವಿಲ್ಲ’ ಎಂದು ಹೇಳಿದೆ.

ಪ್ರಕರಣ: ‘ಚಿನ್ನದ ಸಾಲ ವಿಭಾಗದ ಉದ್ಯೋಗಿಯೊಬ್ಬರು ಗ್ರಾಹಕರ ಚಿನ್ನಾಭರಣಗಳನ್ನು ನಕಲಿ ಚಿನ್ನದ ಮೂಲಕ ವಿನಿಮಯ ಮಾಡಿಕೊಂಡಿದ್ದಾರೆ. ನಂತರ 5 ಕೆ.ಜಿ ತೂಕದ ಕದ್ದ ಚಿನ್ನವನ್ನು ಸಾಲ ಪಡೆಯಲು ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಒತ್ತೆ ಇಟ್ಟಿದ್ದಾರೆ’ ಎಂದು ಆರೋಪಿಸಲಾಗಿತ್ತು.

ಮಾರ್ಚ್ 2ರಿಂದ ನಿತ್ಯ ವಿಚಾರಣೆ

‘ರಾಜ್ಯ ವಿಧಾನಸಭೆಗೆ 2023ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಬೆಂಗಳೂರಿನ ಜಯನಗರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಕೆ.ಸಿ.ರಾಮಮೂರ್ತಿ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು’ ಎಂದು ಕೋರಿ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ಮಾರ್ಚ್ 2ರಿಂದ ಕಲಾಪದ ಎಲ್ಲ ದಿನಗಳಲ್ಲಿ ನಿತ್ಯ ವಿಚಾರಣೆ ನಡೆಸಲಿದೆ.

‘ಸಿ.ಕೆ.ರಾಮಮೂರ್ತಿ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಿಸಿ ಚುನಾವಣಾ ಆಯೋಗ ಪ್ರಕಟಿಸಿರುವ ಫಲಿತಾಂಶವನ್ನು ರದ್ದುಪಡಿಸಬೇಕು ಮತ್ತು 827 ಅಂಚೆ ಮತಗಳನ್ನು ಮರು ಎಣಿಕೆ ಮಾಡಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು, ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಮುಂದುವರಿಸಿತು.

ವಿಚಾರಣೆ ವೇಳೆ ಸಿ.ಕೆ.ರಾಮಮೂರ್ತಿ ಪರ ವಕೀಲರು ಕೆಲವು ಕಡತಗಳನ್ನು ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಕೋರಿದರು. ಇದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಚುನಾವಣಾ ತಕರಾರು ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸುಪ್ರೀಂ ಕೋರ್ಟ್ ನಿರ್ದೇಶನವಿದೆ. ಹೀಗಾಗಿ, ಈ ಅರ್ಜಿಯನ್ನು ಮಾರ್ಚ್ 2 ರಿಂದ ಪ್ರತಿದಿನ ವಿಚಾರಣೆ ನಡೆಸಿ, ಒಂದು ತಿಂಗಳಲ್ಲಿ ವಿಲೇವಾರಿ ಮಾಡಲಾಗುವುದು’ ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಸಮಾವೇಶಕ್ಕಾಗಿ 2.76 ಲಕ್ಷ ಚದರ ಅಡಿ ವಿಸ್ತೀರ್ಣದ ವೇದಿಕೆ ನಿರ್ಮಾಣ

ಭೂ ಹಕ್ಕುಪತ್ರ ವಿತರಣೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಹಾವೇರಿ: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಒಂದು ಸಾವಿರ ದಿನಗಳ ಆಡಳಿತವನ್ನು ಯಶಸ್ವಿಯಾಗಿ ಪೂರೈಸಿದ ಸಂದರ್ಭದಲ್ಲಿ ಇಲ್ಲಿ ಫೆ. 14ರಂದು ಸಾಧನಾ ಸಮಾವೇಶ ಹಮ್ಮಿಕೊಂಡಿದೆ. ಇದೇ ಸಂದರ್ಭದಲ್ಲಿ ರಾಜ್ಯದ ಲಕ್ಷ ಮಂದಿಗೆ ಭೂ ಗ್ಯಾರಂಟಿಯ ಹಕ್ಕುಪತ್ರ ವಿತರಿಸಲೂ ಕಂದಾಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಸಮಾವೇಶಕ್ಕಾಗಿ ಇಲ್ಲಿ 2.76 ಲಕ್ಷ ಚದರ ಅಡಿ ವಿಸ್ತೀರ್ಣದ ವೇದಿಕೆ ನಿರ್ಮಿಸಲಾಗಿದೆ. ‘ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ’ ಹೆಸರಿನಲ್ಲಿ ಬಾಗಿಲು ನಿರ್ಮಿಸಲಾಗಿದೆ. 70 ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಿದ್ದು, 1.50 ಲಕ್ಷ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ.

ಹಾವೇರಿ ಜಿಲ್ಲೆಗೆ, ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳ ಜನರು ಬಂದು ಹೋಗಲು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಜಾಗದಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ ಸಚಿವರು, ಶಾಸಕರು ಪಾಲ್ಗೊಳ್ಳಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಸಮಾವೇಶದ ಭದ್ರತೆಗಾಗಿ ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಮಂಗಳೂರು, ಬೆಂಗಳೂರು, ಬೆಳಗಾವಿ ಜಿಲ್ಲೆ ಪೊಲೀಸರನ್ನು ನಿಯೋಜಿಸಲಾಗಿದೆ.

ಮುಖ್ಯಾಂಶಗಳು

- ರಾಜ್ಯದ ಲಕ್ಷ ಮಂದಿಗೆ ಹಕ್ಕುಪತ್ರ ವಿತರಿಸಲೂ ಸಿದ್ಧತೆ
- 70 ಸಾವಿರ ಜನರಿಗೆ ಆಸನ ವ್ಯವಸ್ಥೆ
- ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ ಭಾಗಿ

ಹಾವೇರಿಯಲ್ಲಿ ನಡೆಯುವ ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ಬೃಹತ್ ಬಾಗಿಲು ಸಿದ್ಧಪಡಿಸಲಾಗಿದೆ

ಪೆಂಡಾಲ್ ಬಿದ್ದು ಗಾಯ

ಸಮಾವೇಶಕ್ಕಾಗಿ ಹಾಕಿದ್ದ ಪೆಂಡಾಲ್, ಗುರುವಾರ ಹಾಗೂ ಶುಕ್ರವಾರ ಎರಡು ಬಾರಿ ಬಿದ್ದು ಅವಘಡ ಸಂಭವಿಸಿದೆ. ಸುದ್ದಿವಾಹಿನಿಯ ಕ್ಯಾಮೆರಾಮನ್ ಮಲ್ಲೇಶ್ ಕಬ್ಬೂರು ತಲೆಗೆ ತೀವ್ರ ಪೆಟ್ಟಾಗಿದೆ.

ಭದ್ರತೆಗಾಗಿ ಪೊಲೀಸರ ಹಾಜರಾತಿ ಪಡೆಯುತ್ತಿದ್ದ ಸ್ಥಳದಲ್ಲಿಯೂ ಪೆಂಡಾಲ್ ಕಬ್ಬಿಣದ ಕಂಬಗಳ ಸಮೇತ ಕಳಚಿಬಿದ್ದಿದ್ದು, ಕಾನ್‌ಸ್ಟೆಬಲ್‌ವೊಬ್ಬರ ಕಾಲಿಗೆ ಸಣ್ಣ ಪೆಟ್ಟಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಪರಿಶೀಲನೆ ವೇಳೆಯೇ ಪೆಂಡಾಲ್ ಬಿದ್ದಿದೆ. ಅವೈಜ್ಞಾನಿಕವಾಗಿ ಪೆಂಡಾಲ್ ಅಳವಡಿಸಿರುವುದು ಇದಕ್ಕೆ ಕಾರಣವೆಂದು ದೂರಲಾಗಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in ದೂರವಾಣಿ: +91–80–29601928

No. RGUHSB/LIB/GEN/7/2026 (135304) Date: 13/02/2026

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

The Registrar, Rajiv Gandhi University of Health Sciences invites tender for Remote Access Technology And Research Solution for Accessing E-Resources for Helinet to RGUHS. More Details on the Service are provided in the attached Terms of Reference.

Tender No. RGUHSK/2025-26/IND0030

1	ಡೌನ್‌ಲೋಡ್‌ಗಾಗಿ ಟೆಂಡರ್ ದಾಖಲೆಗಳು ಲಭ್ಯತೆ	13/02/2026, 13:03 ಗಂಟೆ
2	ಬಿಡ್ ಪೂರ್ವ–ಭಾವಿ ಸಭೆ	27/02/2026, 11:30 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	16/03/2026, 17:30 ಗಂಟೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	18/03/2026, 11:00 ಗಂಟೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ	19/03/2026, 11:00 ಗಂಟೆ
6	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು

ವಾ.ಸಾ.ಸಂ.ಇ/ವಾಪ್ರ/5392/ಅಣುಕ/2025-26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಏಟವಾದ ಟೆಂಡರ್ ಅಧಿಸೂಚನೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್.ಟಿ ಸಂಖ್ಯೆ 20/2025–26 ದಿನಾಂಕ: 12.02.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಸೇತುವೆ ನಿರ್ಮಾಣ (ಕಾಲುಸಂಕ) ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೋಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ 04–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 13.02.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 28.00 ಲಕ್ಷಗಳು ಮತ್ತು ಕನಿಷ್ಠ 12.65 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ. 56,000/– ಮತ್ತು ಕನಿಷ್ಠ ರೂ.31,625/– ಗುತ್ತಿಗೆ ಕಾಲಾವಧಿ 3–ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ದಿ: 27.02.2026 ಎಂದು ನಿಗದಿಪಡಿಸಲಾಗಿದೆ. ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆ ಮುಂದುವರಿಸುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

DIPR/DDMYS/1650/KSMCA/934/2025-26

ಕರ್ನಾಟಕ ಸರ್ಕಾರ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

(ಸಂಗ್ರಹಣೆ ಮತ್ತು ವಿತರಣೆ ವಿಭಾಗ)

ನಂ.8, ಕನ್ನಿಂಗ್ ಹ್ಯಾಂ ರಸ್ತೆ, 4ನೇ ಮಹಡಿ, ಸಹಕಾರಿ ಭವನ, ಬೆಂಗಳೂರು–560052
ವೆಬ್‌ಸೈಟ್: www.ahara.kar.nic.in & www.neml.in
ಇ–ಮೇಲ್: indirafoodkit@gmail.com

ಸಂಖ್ಯೆ: 1/2025-26/ComFCS/IFK ದಿನಾಂಕ: 12.02.2026

ತಿದ್ದುಪಡಿ–1

ಕರ್ನಾಟಕ ಸರ್ಕಾರದ ಅನ್ನಭಾಗ್ಯ ಯೋಜನೆಯಡಿಯಲ್ಲಿ ಆಹಾರ ಸಾಮಗ್ರಿಗಳಾದ ತೊಗರಿಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ ಮತ್ತು ಅಯೋಡಿನ್‌ಯುಕ್ತ ಉಪ್ಪನ್ನು ಇ–ಹರಾಜಿನ ಮೂಲಕ ಖರೀದಿಗೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವುದಕ್ಕೆ ತಿದ್ದುಪಡಿ ಮಾಡಿರುವ ಬಗ್ಗೆ.

ಕರ್ನಾಟಕ ಸರ್ಕಾರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರು ಇಂದಿರಾ ಆಹಾರ ಕಿಟ್‌ಗಾಗಿ ದಸ್ತಾವೇಜುಗಳನ್ನು ಸಲ್ಲಿಸುವ ಕುರಿತು **23.01.2026 ರಂದು** ಪ್ರಕಟವಾದ ಹಿಂದಿನ ಅಧಿಸೂಚನೆಯನ್ನು ಉಲ್ಲೇಖಿಸಿ, ಅದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ ಎಂದು ಸಂಬಂಧಪಟ್ಟ ಎಲ್ಲರಿಗೂ ತಿಳಿಸಲಿಚ್ಛಿಸುತ್ತದೆ. ಬಿಡ್‌ಗಳನ್ನು ಸಲ್ಲಿಸುವ ದಿನಾಂಕವನ್ನು **ಈ ಹಿಂದೆ 13.02.2026, 5.30 ಗಂಟೆಯವರೆಗೆ** ನಿಗದಿಪಡಿಸಲಾಗಿತ್ತು, ಆದರೆ ಅದನ್ನು **23.02.2026, 5.30 ಗಂಟೆಯವರೆಗೆ ವಿಸ್ತರಿಸಲಾಗಿದೆ.** ಇದರ ವಿವರಗಳನ್ನು ವೆಬ್‌ಸೈಟ್: **www.neml.in** ನಲ್ಲಿ ಅಪ್‌ಲೋಡ್ ಮಾಡಲಾಗುವುದು.

ಯಾವುದೇ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು NCDEX e-Markets Ltd ಟೋಲ್–ಫ್ರೀ ಸಂಖ್ಯೆ: 1800–210–1222 ಅಥವಾ ಇ–ಮೇಲ್: **askus@neml.in** ಮೂಲಕ ಸಂಪರ್ಕಿಸಲು ಕೋರಿದೆ.

ಸಹಿ/– ಆಯುಕ್ತರು,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ವಿಚಾರಣೆ ಸಂಖ್ಯೆ: BESCOM/2025-26/SE0444ರ ಅನ್ವಯ "ಬೆವಿಕಂನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಆಡಿಯಲ್ಲಿ ಅನುಸಾರಣೆಗಾಗಿ ಕಸ್ಟಮ್ ಬಿಲ್ಟ್ ಕ್ಲೌಡ್ ಆಧಾರಿತ ಜಿಎಸ್‌ಟಿ ಸಾಫ್ಟ್‌ವೇರ್ ಅನುಷ್ಠಾನ"ಕ್ಕಾಗಿ ಅರ್ಹ ಬಿಡ್ದಾರರಿಂದ ಕೆಪಿಪಿ ಪೋರ್ಟಲ್ ಪ್ಲಾಟ್‌ಫಾರ್ಮ್ ಮೂಲಕ ಬೆವಿಕಂ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ ದಾಖಲೆಗಳು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ **16.02.2026**ರಿಂದ ಲಭ್ಯವಿರುತ್ತವೆ. ಆಸಕ್ತ ಬಿಡ್ದಾರರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಪೋರ್ಟಲ್ ಕುರಿತು ಯಾವುದೇ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080–46010000, 080–68948777 ಅಥವಾ ಇಮೇಲ್: **support@eprochelpdesk.com** ಗೆ ಸಂಪರ್ಕಿಸಿ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಐಟಿಐಎಸ್‌ಎಂ),
ಬೆವಿಕಂ, 6ನೇ ಮಹಡಿ, ಬೆಳಕು ಭವನ,
ಕೆ.ಆರ್. ವೃತ್ತ, ಬೆಂಗಳೂರು–560001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 08/2025–26 ದಿನಾಂಕ:12.02.2026

ಟೆಂಡರ್ ಆಹ್ವಾನ ಪ್ರಕಟಣೆ

ಉಲ್ಲೇಖ:–ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 30&31/2025–26 ದಿನಾಂಕ:31.01.2026 & 07.02.2026

ಮೇಲ್ಕಂಡ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ವಿಭಾಗಕ್ಕೆ ಚಿಕ್ಕಮಗಳೂರು ಉಪವಿಭಾಗಕ್ಕೆ ಒಳಪಡುವ 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಲೆಕ್ಕಶೀರ್ಷಿಕೆ ಅಡಿ ಕರೆಯಲಾಗಿರುವ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:30ರಲ್ಲಿ ಕ್ರಮ ಸಂಖ್ಯೆ : 4 & 9ರ ಕಾಮಗಾರಿ (ಸಾಮಾನ್ಯ ವರ್ಗ) ಹಾಗೂ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:31ರಲ್ಲಿ ಕರೆಯಲಾಗಿರುವ ಕಾಮಗಾರಿಯ ಕ್ರಮ ಸಂಖ್ಯೆ : 4ರ (ಸಾಮಾನ್ಯ ವರ್ಗ) ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕವಾಗಿ 16.02.2026** ಎಂದು ನಿಗಧಿಪಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಸಲ್ಲಿಸುವ ದಿನಾಂಕವನ್ನು ಮುಂದೂಡಲಾಗಿದ್ದು, **ದಿನಾಂಕ:25.02.2026 ಎಂದು ಮರು ನಿಗಧಿಪಡಿಸಲಾಗಿದೆ**. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಪೊಲೀಸ್ ಇಲಾಖೆ

ಪೊಲೀಸ್ ಮಹಾನಿರೀಕ್ಷಕರವರ ಕಛೇರಿ, ಬಳ್ಳಾರಿ ವಲಯ, ಬಳ್ಳಾರಿ.

ದೂರವಾಣಿ ಸಂಖ್ಯೆ: 08392–255900, ಇ–ಮೇಲ್: igpblr@ksp.gov.in

ಸಂಖ್ಯೆ:30/ಸಂಗ್ರಹ/ಸಿಸಿಟ್ವಿವಿ/ಎಎನ್‌ಪಿಆರ್/ಐಜಿಪಿ/ಬವ/2025–26
ದಿನಾಂಕ: 11/02/2026

ಪತ್ರಿಕಾ ಪ್ರಕಟಣೆ

ಪೊಲೀಸ್ ಮಹಾನಿರೀಕ್ಷಕರು, ಬಳ್ಳಾರಿ ವಲಯ, ಬಳ್ಳಾರಿಗಾಗಿ Supply, Installation And Maintenance Of CCTV & ANPR Camera System Along With Necessary Hardware, Software And Monitoring At Ballari District ಗಳನ್ನು ಖರೀದಿಸುವ ಕುರಿತು ಕೆ.ಟಿ.ಪಿ.ಪಿ ನಿಯಮಗಳಡಿ ನೊಂದಾಯಿತ ಅರ್ಹ ಸರಬರಾಜುದಾರರಿಂದ ದ್ವಿ–ಲಕೋಟೆಯಲ್ಲಿ ದಿನಾಂಕ:11/02/2026 ರಂದು ಟೆಂಡರ್ ಸಂಖ್ಯೆ: **KSP/2025-26/IND0559** ನ್ನು ಅಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 12/03/2026 ರಂದು ಇರುತ್ತದೆ. ಹೆಚ್ಚಿನ ವಿವರಗಳನ್ನು **www.kppp.karnataka.gov.in** ಜಾಲತಾಣದಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– (ಡಾ॥ ಪಿ.ಎಸ್.ಹರ್ಷ, ಐ.ಪಿಎಸ್.)
ಪೊಲೀಸ್ ಮಹಾ ನಿರೀಕ್ಷಕರು ಮತ್ತು ಅಧ್ಯಕ್ಷರು,
ಟೆಂಡರ್ ಅಹ್ವಾನ ಸಮಿತಿ, ಬಳ್ಳಾರಿ ವಲಯ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1001/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–62:2025–26 ದಿನಾಂಕ: 12.02.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಲೆಕ್ಕ ಶೀರ್ಷಿಕೆ 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ–ಬಂಡವಾಳ ವೆಚ್ಚ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:–ಹೊಸದುರ್ಗ ತಾಲ್ಲೂಕು ತರೀಕೆರೆ – ಹೊಸದುರ್ಗ – ವಿ.ವಿ.ಪುರ – ಹಿರಿಯೂರು ಧರ್ಮಪುರ ರಾಜ್ಯ ಹೆದ್ದಾರಿ–24 ರ ಸರಪಳಿ 79.40 ಕಿ.ಮೀ.ನಲ್ಲಿ ಸೇತುವೆ ನಿರ್ಮಾಣ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ. **ಇ.ಎಂ.ಡಿ.:**– ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು

ಟೆಂಡರ್ ವಿವರಗಳು:– 1) ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 12.02.2026 ರಿಂದ 20.02.2026 ರ 16.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: 17.02.2026 ರ ಪೂರ್ವಾಹ್ನ 11.30 ಗಂಟೆಗೆ ಲೋಕೋಪಯೋಗಿ ಇಲಾಖೆ, ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.02.2026 ರ ಅಪರಾಹ್ನ 16.30 ಗಂಟೆಯವರೆಗೆ 4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.02.2026 ರ ಅಪರಾಹ್ನ 16.45 ಗಂಟೆಗೆ 5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. 6) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ 91 9240214000 & 91 9240214001. ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/671/2025-26

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.

ದೂ:08539–220054.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/5131
ದಿ:10/02/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ 08 ಟೆಂಡರ ಕಾಮಗಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. **200.00** ಹಾಗೂ ಗರಿಷ್ಠ ಅಂದಾಜು ಮೊತ್ತ ರೂ **970.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **16–02–2026** ರಿಂದ ದಿನಾಂಕ: **03–03–2026** ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ **23–02–2026** ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **05–03–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **07–03–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆಪಿಪಿಪಿ" ವೆಬ್‌ಸೈಟ್ https://kppp.karnataka.gov.in/ ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ದಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/678/ಕೆಎಸ್‌ಎಂಸಿಎ/2025–26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:50:2025–26 ದಿನಾಂಕ:11–02–2026

ಅಲ್ಪಾವಧಿ ಟೆಂಡರ್ ಹಾಗೂ ಇ ಹರಾಜು ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ–05 ಕಾಮಗಾರಿ, ಅಮೃತ್ 2.0 (4ನೇ ಕರೆ–01 ಕಾಮಗಾರಿ 2025–26ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ)–01 ಕಾಮಗಾರಿ, ಅನುಪಯುಕ್ತ ಸ್ಕ್ರಾಪ್ ವಾಹನ ಇ–ಹರಜು–01 ಕಾಮಗಾರಿ, ಒಟ್ಟು 08 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಂಯ ಕಛೇರಿಂಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–9045010000 +91–9068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಇ–ಹರಾಜಿನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಹರಾಜು ದಾಖಲೆಯಲ್ಲಿ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 13–02–2026 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 21–02–2026 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 21–02–2026 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 23–02–2026 ಸಮಯ : 11.00

ವಾಸಾಇ/ದಾವಣಗೆರೆ/737/ಕೆಎಸ್‌ಎಂಸಿಎ/2025–26

ಸಹಿ/–ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ಸರ್ಕಾರ

ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂ : 080–2286 4681/4604, ಫ್ಯಾಕ್ಸ್: 080–2286 4619,
ಇ–ಮೇಲ್: dfkarnataka@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: DOF-TECH0MVH/2/20206, E-2060855 ದಿನಾಂಕ: 12.02.2026

ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯ ಕಛೇರಿಯ ಉಪಯೋಗಕ್ಕಾಗಿ 2017 ರ ಅಥವಾ ನಂತರದ ಮಾಡಲ್‌ನ ಹವಾನಿಯಂತ್ರಿತ 05 ವಾಹನಗಳ ಅಗತ್ಯವಿರುತ್ತದೆ. ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್ ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್ ಹಾಗೂ ಇತರೆ ಸಮಾನಾಂತರ ಮಾದರಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಗಳಿಂದ ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್ (e-Procurement Portal ಮುಖಾಂತರ) ಕರೆಯಲಾಗಿದೆ. **ಟೆಂಡರ್ ವಿವರಗಳು: (1) ಕಛೇರಿ: ಮೀನುಗಾರಿಕೆ ನಿರ್ದೇಶನಾಲಯ ಬೆಂಗಳೂರು, (2) ಮಾಸಿಕ ದರ ಹಾಗೂ ಇ.ಎಂ.ಡಿ. ಮೊತ್ತದ ವಿವರಗಳು ಗರಿಷ್ಠ ರೂ.40000/– AC + ತೆರಿಗೆ ಇ.ಎಂ.ಡಿ. ಮೊತ್ತ : 48000/– ಸೂಚನೆ: ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. (1) ಇ–ಟೆಂಡರ್(E–Procurement)ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು): ಅಂತಿಮ ದಿನಾಂಕ ಮತ್ತು ವೇಳೆ : 25.02.2026 ಸಂಜೆ, 05:00 ಗಂಟೆಗೆ. (2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ : (ಇ–ಪೋರ್ಟಲ್‌ನಲ್ಲಿ) 27.02.2026 ಬೆಳಿಗ್ಗೆ, 11:00 ಗಂಟೆಗೆ. (3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ: 01.03.2026 ಬೆಳಿಗ್ಗೆ, 11:00 ಗಂಟೆಗೆ.**

ಸಹಿ/–
ಮೀನುಗಾರಿಕೆ ನಿರ್ದೇಶಕರ ಪರವಾಗಿ

ಸಹಿ/–
ಮೀನುಗಾರಿಕೆ ನಿರ್ದೇಶಕರು

ವಾಸಾಸಂಇ/ವಾ.ಪ್ರ/5651/ಶಿರಡಿಸಾಯಿ/2025–26

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ,
ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು – 560 073.

ಸಂಖ್ಯೆ:ಬೆಉನಪಾ/ಕಾಪಾಅ/ದಾ.ವಿ/ಟೆಂಡರ್/06/2025–26 ದಿನಾಂಕ: 13–02–2026

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂ.ಉ.ನ.ಪಾಲಿಕೆ, ಬೆಂಗಳೂರು ಇವರು ಆಯುಕ್ತರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–3,4)

Sl No.	ಕಾಮಗಾರಿಗಳ ಹೆಸರು
	ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಕಾಮಗಾರಿ
1.	ಹೆಸರುಘಟ್ಟ ಮುಖ್ಯರಸ್ತೆಯಿಂದ ಚಿಕ್ಕಸಂದ್ರ ಸರ್ಕಾರಿ ಶಾಲೆಯವರೆಗೆ ಚಿಕ್ಕಸಂದ್ರ ರಸ್ತೆಗೆ ಡಾಂಬರೀಕರಣ ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು (2ನೇ ಕರೆ) **ಅಂದಾಜು ಮೊತ್ತ: ₹.100.00 ಲಕ್ಷಗಳು, ಇಎಂಡಿ ಮೊತ್ತ: ₹.1,00,000/– ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ.**
	ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ಕಾಮಗಾರಿ
2.	ದಾಸರಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ–14ರ ಸಿದ್ದೇಶ್ವರ ಬಡಾವಣೆ ಮುಖ್ಯರಸ್ತೆ ಮತ್ತು 20ನೇ ಅಡ್ಡರಸ್ತೆ ಬಾಗಲಗುಂಟೆ ಮುಖ್ಯರಸ್ತೆಯಿಂದ 10ನೇ ಅಡ್ಡರಸ್ತೆ ಡಿಫೆನ್ಸ್ ಕಾಲೋನಿ ಮುಖ್ಯರಸ್ತೆಯವರೆಗೆ ರೀಸರ್ಫೇಸಿಂಗ್ ಮಾಡುವುದು (2ನೇ ಕರೆ) **ಅಂದಾಜು ಮೊತ್ತ: ₹.85.00 ಲಕ್ಷಗಳು, ಇಎಂಡಿ ಮೊತ್ತ: ₹.85,000/– ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ.**
	ವರ್ಗ–II ಎ ಗೆ ಮೀಸಲಿರಿಸಿದ ಕಾಮಗಾರಿ
3.	ಶೆಟ್ಟಿಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ–12ರ ಆರ್. ಆರ್. ಬಡಾವಣೆ, ನಿಸರ್ಗ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಆಯ್ದ ರಸ್ತೆಗಳಿಗೆ ರೀಸರ್ಫೇಸಿಂಗ್ ಮಾಡುವುದು (2ನೇ ಕರೆ) **ಅಂದಾಜು ಮೊತ್ತ: ₹.150.00 ಲಕ್ಷಗಳು, ಇಎಂಡಿ ಮೊತ್ತ: ₹.1,50,000/– (₹.1.00 ಲಕ್ಷ ಇ–ಪಾವತಿ (ಎನ್‌ಇಎಫ್‌ಟಿ) ಮೂಲಕ ಬಾಕಿ ಮೊತ್ತ ₹.0.50 ಲಕ್ಷಗಳನ್ನು ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸುವುದು.**

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **24–02–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02–03–2026**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್ಡನ್ನು ದಿನಾಂಕ: **03–03–2026**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ, ಬೆಂ.ಉ.ನ.ಪಾ

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1,
2ನೇ ಮಹಡಿ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು–560009.
ದೂ. ಸಂಖ್ಯೆ: 080–22205239.

ಸಂ: ವಿಟಿಕೆ/ಸಿಆರ್–13/2025–26 ದಿನಾಂಕ: 13.02.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–3, ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು ಕಛೇರಿಯ ಒಳಾವರಣದಲ್ಲಿ ಶುದ್ಧ ಗಾಳಿಯನ್ನು (Providing of Centralized Air Conditioning System (Service Installation & Commissioning) ಪಡೆಯುವ ಸಲುವಾಗಿ ದಿನಾಂಕ: 13.02.2026 ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: ವಿಟಿಕೆ/ಸಿಆರ್–13/2025–26(CTD/2025-26/IND0006/CALL-2) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 20.02.2026 ರ ಸಂಜೆ 5.00 ರವರೆಗೆ**. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ವೀಕ್ಷಿಸಬಹುದಾಗಿದೆ.

ಸಹಿ/– ವಾಣಿಜ್ಯ ತೆರಿಗೆಗಳ ಆಯುಕ್ತರು(ಕರ್ನಾಟಕ), ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ/5649/ಕೆಎಸ್‌ಎಂಸಿಎ/2025–26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಹೇಮಾವತಿ ನಾಲಾ ವಿಭಾಗ,
ಕಾ.ನೀ.ನಿ.ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 14/2025–26 ದಿನಾಂಕ: 09.02.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ.179.60ಲಕ್ಷದ 1 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 12.02.2026 ಸಂಜೆ 4.00 ಗಂಟೆವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 10.02.2026 ರಿಂದ 18.02.2026 ಸಂಜೆ 4.00 ಗಂಟೆವರೆಗೆ. ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– 19.02.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್ ನಲ್ಲಿ ತೆರೆಯುವ ದಿನಾಂಕ: 21.02.2026 ಸಂಜೆ 4.00ಗಂಟೆ ನಂತರ. (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ). ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/437/KSMCA/2025-26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 38:ಕಾಇಂ:ಲೋಇ:ಹಾವಿಹಾ:ಸ.ಇಂ–3:2025–26
ದಿನಾಂಕ: 10.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2 ಮತ್ತು ಕೆ.ಡಬ್ಲ್ಯೂ–3 ನಿಯಮದನ್ವಯ ಹಾಸನ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಗೂ ಕರ್ನಾಟಕ ರಾಜ್ಯದಲ್ಲಿ ಹತ್ತು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ವಾಸವಿರುವ ಪ್ರವರ್ಗ–2(ಎ)ನ ಅರ್ಹ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹಾಸನ ವಿಭಾಗ ವ್ಯಾಪ್ತಿಯ ಒಟ್ಟು 04 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್‌ನ್ನು ಕರೆಯಲಾಗಿದೆ. ಅವುಗಳಲ್ಲಿ 01 ಸಂಖ್ಯೆ ಕಾಮಗಾರಿಯನ್ನು ಪ್ರವರ್ಗ–2ಎ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಕನಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ. 60.00 ಲಕ್ಷ ಹಾಗೂ ಗರಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ.100.00 ಲಕ್ಷ, ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದ ಮೊತ್ತವು ಮಂಜೂರಾದ ಅಂದಾಜು ಮೊತ್ತವಾಗಿದ್ದು, ಜಿ.ಎಸ್.ಟಿ ಹಾಗೂ ಇತರೆಗಳನ್ನು ಹೊರತುಪಡಿಸಿ ಇ–ಪ್ರೊಕ್ಯೂರ್‌ಮೆಂಟ್‌ನಡಿಯಲ್ಲಿ ಬರುವ ಟೆಂಡರ್‌ಗಿಟ್ಟ ಮೊತ್ತವನ್ನು ಪರಿಗಣಿಸಿ ಅದಕ್ಕನುಗುಣವಾಗಿ ಇ.ಎಂ.ಡಿ ಮತ್ತು ಗುತ್ತಿಗೆದಾರರ ದರ್ಜೆಯನ್ನು ಪರಿಗಣಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ: 23.02.2026, ಸಂಜೆ 4.00 ಗಂಟೆ ವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka. gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1066/ಕೆಎಸ್‌ಎಂಸಿಎ/2025–26

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
Ph: 080-2311584, e-mail: pdrch-hfws@karnataka.gov.in

ಸಂ: HFWS-NCFOOOTHR(OTHR)/15/2026 (E-2050338) ದಿನಾಂಕ: 13.02.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್, ಪ್ರಕಟಣೆ ಹಾಗೂ ದರಪಟ್ಟಿಯ ಮೂಲಕ ಪ್ರಸ್ತಾವನೆಯ ಅಧಿಸೂಚನೆ

"For Appointment of Statutory Auditor and Concurrent auditor for State Health Society (SHS), Concurrent auditor for District Health Society (DHS) and Statutory Auditor for KSHSRC, for the Audit of all programmes under Flexible Pool for RCH & Health System Strengthening, KSHSRC, National Health Programme and Urban Health Mission."

ರಾಷ್ಟ್ರೀಯ ಆರೋಗ್ಯ ಅಭಿಯಾನವು NHM ಕಾರ್ಯಕ್ರಮಕ್ಕೆ ಅವಶ್ಯವಿರುವ "For Appointment of Statutory Auditor and Concurrent auditor for State Health Society (SHS), Concurrent auditor for District Health Society (DHS) and Statutory Auditor for KSHSRC, for the Audit of all programmes under Flexible Pool for RCH & Health System Strengthening, KSHSRC, National Health Programme and Urban Health Mission." ಗೆ ಸೇವೆ ಒದಗಿಸಲು ಅರ್ಹ ಸೇವಾದಾರರು ಅಗತ್ಯ ದಾಖಲೆಗಳೊಂದಿಗೆ ಟೆಂಡರ್ ಹಾಗೂ ದರಪಟ್ಟಿ ಮೂಖೇನ ಭಾಗವಹಿಸಲು ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

Ref No./ Not. No.:	1. **NHM/2025-26/SE0037-Statutory Auditor for KSHFWS.** 2. **NHM/2025-26/SE0038-Concurrent Auditor for KSHFWS FY 25-26.** 3. Invitation of quotation for Statutory Auditor, KSHSRC as prescribed in NHM website Notification No: **HFWS-KSHSOFILE/2/2026-KSHSRC, Date:13.02.2026** 4. Letter of Invitation for Concurrent Auditor, DHS as prescribed in NHM website Notification No: **HFWS-NCFOOOTHR(OTHR)/1/2021, Date:16.02.2026**

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ **13.02.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ: **25/02/2026 ಅಪರಾಹ್ನ 5.30**ರ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ದರಪಟ್ಟಿಯ ಅಧಿಸೂಚನೆಯನುಸಾರ ವೆಬ್‌ಸೈಟ್: **https://nhm.karnataka.gov.in**ನಲ್ಲಿ ಸೂಚಿಸಿರುವಂತೆ ಭಾಗವಹಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್‌ಸಿಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 4.30ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/SA/5653/2025-26

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ,ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ – 563101.

e-mail : eepwdkolar07@gmail.com website: www.kpwd.gov.in, ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 1,3&4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–31/2025–26 ದಿನಾಂಕ: 12.02.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಮಾಲೂರು, ಮುಳಬಾಗಿಲು ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 4059 ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ, 5054 ಜಿಲ್ಲಾ ಮತ್ತು ಇತರೆ ರಸ್ತೆಗಳು–ಸುಧಾರಣೆ , 2216 ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ಥಿ/ನಿರ್ವಹಣೆ , 3054 ರಾಜ್ಯ ಹೆದ್ದಾರಿ ಸೇತುವೆಗಳ ಮತ್ತು 3054–03–337–0–05–200–ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆಗಳ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಠ ರೂ.1.00 ಲಕ್ಷ ಮತ್ತು ಗರಿಷ್ಟ: 970.00 ಲಕ್ಷ ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ, ಕೆಡಬ್ಲ್ಯು–1,3&4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಗೆ** ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು–1,3&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ನಿಗದಿತ ದಿನಾಂಕಗಳ ವಿವರ	(ಕ್ರಮ ಸಂಖ್ಯೆ 1 ರಿಂದ 2 ರ ಕಾಮಗಾರಿಗಳಿಗೆ)ದ್ವಿ ಲಕೋಟೆ ಪದ್ಧತಿ	(ಕ್ರಮ ಸಂಖ್ಯೆ 3 ರಿಂದ 5 ರ ಕಾಮಗಾರಿಗಳಿಗೆ) ದ್ವಿ ಲಕೋಟೆ ಪದ್ಧತಿ	(ಕ್ರಮ ಸಂಖ್ಯೆ 6 ರಿಂದ 15 ರ ಕಾಮಗಾರಿಗಳಿಗೆ) ಏಕ ಲಕೋಟೆ ಪದ್ಧತಿ
1. ವಿಚಾರಣೆಗೆ ಕೊನೆಯ ದಿನಾಂಕ:	ದಿನಾಂಕ: 26.02.2026 ರಂದು 17.30 ಗಂಟೆ ವರೆಗೆ	ದಿನಾಂಕ: 20.02.2026 ರಂದು 17.30 ಗಂಟೆ ವರೆಗೆ	ದಿನಾಂಕ: 20.02.2026 ರಂದು 17.30 ಗಂಟೆ ವರೆಗೆ
2. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ (ಆನ್‌ಲೈನ್ ಮೂಲಕ)	ದಿನಾಂಕ: 27.02.2026 ರಂದು 16.00 ಗಂಟೆ ವರೆಗೆ	ದಿನಾಂಕ: 21.02.2026 ರಂದು 16.00 ಗಂಟೆ ವರೆಗೆ	ದಿನಾಂಕ: 21.02.2026 ರಂದು 16.00 ಗಂಟೆ ವರೆಗೆ
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	ದಿನಾಂಕ: 02.03.2026 ರಂದು 11.00 ಗಂಟೆಯ ನಂತರ	ದಿನಾಂಕ: 23.02.2026 ರಂದು 11.00 ಗಂಟೆಯ ನಂತರ	–
4.ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	ದಿನಾಂಕ: 09.03.2026 ರಂದು 11.00 ಗಂಟೆಯ ನಂತರ	ದಿನಾಂಕ: 02.03.2026 ರಂದು 11.00 ಗಂಟೆಯ ನಂತರ	ದಿನಾಂಕ: 23.02.2026 ರಂದು 11.00 ಗಂಟೆಯ ನಂತರ

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(http://kppp.karnataka.gov.in)** ನಲ್ಲಿ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:495/ಕೆಎಸ್‌ಎಂಸಿಎ/2025–26

‘ಅಣೆಕಟ್ಟೆ ಸುರಕ್ಷತೆಗೆ ಆದ್ಯತೆ ಅಗತ್ಯ’

ಅಂತರರಾಷ್ಟ್ರೀಯ ಅಣೆಕಟ್ಟೆ ಸುರಕ್ಷತೆ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೊಡ್ಡ ಅಣೆಕಟ್ಟೆಗಳನ್ನು ನಿರ್ಮಿಸುವುದು ಎಷ್ಟು ಮುಖ್ಯವೋ, ದೀರ್ಘಾವಧಿಯಲ್ಲಿ ಅವುಗಳ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದೂ ಅಷ್ಟೇ ಮುಖ್ಯ. ಅದು ಇಂದಿನ ತುರ್ತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೇಂದ್ರ ಜಲ ಆಯೋಗ ಮತ್ತು ವಿಶ್ವಬ್ಯಾಂಕ್ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ ‘ಅಂತರರಾಷ್ಟ್ರೀಯ ಅಣೆಕಟ್ಟೆ ಸುರಕ್ಷತೆ ಸಮ್ಮೇಳನ–2026’ ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ದೇಶದ ಮೊದಲ ಪ್ರಧಾನಿ ನೆಹರೂ ಅವರು ಅಣೆಕಟ್ಟೆಗಳನ್ನು ‘ಆಧುನಿಕ ಭಾರತದ ದೇವಾಲಯಗಳು’ ಎಂದು ಕರೆದಿದ್ದರು. ಅವರ ಮಾತು ನಿಜ. ಅಣೆಕಟ್ಟೆಗಳ ಕಾರಣಕ್ಕೆ ದೇಶದಲ್ಲಿ ಕೃಷಿ ಕ್ಷೇತ್ರ ಪ್ರಗತಿ ಸಾಧಿಸಿದೆ, ಜಲವಿದ್ಯುತ್‌ನ ಕಾರಣದಿಂದ ಕೈಗಾರಿಕೆಗಳು ಬೆಳವಣಿಗೆಯಾಗಿವೆ ಮತ್ತು ಜನರ ಜೀವನಮಟ್ಟ ಸುಧಾರಿಸಿದೆ. ನಮ್ಮಲ್ಲಿ ಬೃಹತ್ ಅಣೆಕಟ್ಟೆಗಳನ್ನು ನಿರ್ಮಿಸಿಬಿಟ್ಟಿದ್ದೇವೆ. ಆದರೆ ಅವುಗಳ ಸುರಕ್ಷತೆಗೆ ಇನ್ನಷ್ಟು ಗಮನ ಕೊಡಬೇಕಿದೆ’ ಎಂದು ವಿವರಿಸಿದರು.

‘ಅಣೆಕಟ್ಟೆಗಳಲ್ಲಿ ಹೂಳು ತುಂಬಿಕೊಳ್ಳುತ್ತದೆ, ಭೂಕಂಪ ಮತ್ತು ಅತೀವ ಪ್ರವಾಹದಿಂದ ಅದರ ರಚನೆಗೆ ಧಕ್ಕೆಯಾಗುತ್ತದೆ, ಶತ್ರು ದೇಶದವರು ಅವುಗಳ ನಾಶಕ್ಕೆ ಯತ್ನಿಸಲೂಬಹುದು. ಇವೆಲ್ಲಾ, ಅಣೆಕಟ್ಟೆಗಳು ಎದುರಿಸುತ್ತಿರುವ ಬಹು ಆಯಾಮದ ಅಪಾಯಗಳು. ಅಣೆಕಟ್ಟೆ ಅಥವಾ ನೀರಿಗೆ ರಾಜಕೀಯ ಗಡಿ ಇರುವುದಿಲ್ಲ, ಈ ಅಪಾಯಗಳೂ ರಾಜಕೀಯ ಗಡಿಯನ್ನು ಪರಿಗಣಿಸುವುದಿಲ್ಲ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಕ್ಷಭೇದ ಮರೆತು ಅಣೆಕಟ್ಟೆಗಳ ಸುರಕ್ಷತೆಗೆ ಆದ್ಯತೆ ನೀಡಬೇಕು’ ಎಂದರು.

ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ನಮ್ಮ ದೇಶದಲ್ಲಿರುವ ಮೂರನೇ ಎರಡರಷ್ಟು ಅಣೆಕಟ್ಟೆಗಳು ಕನಿಷ್ಠ 25 ವರ್ಷಗಳಷ್ಟು ಹಳೆಯವು. ಹೀಗಾಗಿ ಅವುಗಳ ಸ್ಥಿತಿಗತಿಯ ಬಗ್ಗೆ ತುರ್ತಾಗಿ ಪರಿಶೋಧನೆ ನಡೆಸುವ ಅಗತ್ಯವಿದೆ. ಅವುಗಳಲ್ಲಿ ಹೂಳು ತುಂಬಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕ್ರೆಸ್ಟ್‌ಗೇಟ್‌ಗಳು ಸುಸ್ಥಿತಿಯಲ್ಲಿವೇ ಎಂಬುದನ್ನು ಪರಿಶೀಲಿಸಿ, ಅಗತ್ಯವಿದ್ದರೆ ಬದಲಿಸಬೇಕು’ ಎಂದರು.

‘ಈಗ ರಾಜ್ಯ ಸರ್ಕಾರಗಳು ಮತ್ತು ಸಂಬಂಧಿತ ಜಲ ನಿಗಮಗಳು ಕ್ರೆಸ್ಟ್‌ಗೇಟ್‌ಗಳ ಪರಿಶೀಲನೆ ಮತ್ತು ದುರಸ್ತಿ ಕೆಲಸ ಮಾಡುತ್ತಿವೆ. ಕೇಂದ್ರ ಸರ್ಕಾರವು ಅಣೆಕಟ್ಟೆ ಪುನರುಜ್ಜೀವನ ಮತ್ತು ಸುಧಾರಣಾ ಕಾರ್ಯಕ್ರಮದ ಮೂಲಕ ಹಣ ಒದಗಿಸುತ್ತಿದೆ. ಆದರೆ, ಈ ಕಾರ್ಯಕ್ಕೆ ಇನ್ನಷ್ಟು ಪ್ರಬಲವಾದ ವ್ಯವಸ್ಥೆ ರೂಪಿಸಬೇಕು’ ಎಂದು ಒತ್ತಾಯಿಸಿದರು.

‘ಅಣೆಕಟ್ಟೆಯ 500 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಸುವುದಕ್ಕೆ ನಿರ್ಬಂಧವಿದೆ. ಈ ನಿರ್ಬಂಧವನ್ನು ರಾಷ್ಟ್ರೀಯ ಅಣೆಕಟ್ಟೆ ಸುರಕ್ಷತಾ ಪ್ರಾಧಿಕಾರವು ಸಡಿಲಿಸಬೇಕು. ಅಣೆಕಟ್ಟೆಯ 500 ಮೀಟರ್ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ನಡೆಸಲು ಅವಕಾಶ ಮಾಡಿಕೊಡಬೇಕು.

ವಿಶ್ವ ಬ್ಯಾಂಕ್‌ನ ಉಪಾಧ್ಯಕ್ಷ ಜೊಹನ್ಸ್ ಕಾರ್ನೆಲ್ಸ್ ಮಾರಿಯಾ ಝುಟ್, ‘ಭಾರತದಲ್ಲಿ ಅಣೆಕಟ್ಟೆ ಸುರಕ್ಷತೆಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಾಗತಿಕ ಮಟ್ಟದ ಸುರಕ್ಷತಾ ಆಡಿಟ್ ಮತ್ತು ದುರಸ್ತಿ ಕಾರ್ಯಗಳನ್ನು ನಡೆಸಲು ಅವಕಾಶಗಳಿವೆ. ವಿಶ್ವಬ್ಯಾಂಕ್ ಈ ಕಾರ್ಯದಲ್ಲಿ ಬೆಂಬಲ ನೀಡಲಿದೆ’ ಎಂದರು.

ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ, ಕೇಂದ್ರ ಜಲ ಆಯೋಗದ ಮುಖ್ಯಸ್ಥ ಅನುಪಮ್ ಪ್ರಸಾದ್, ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಅಣಕಟ್ಟೆ ಸುರಕ್ಷತೆ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಟಿ.ಬಿ.ಜಯಚಂದ್ರ, ರಾಜ್‌ಭೂಷಣ್ ಚೌಧರಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಜೊಹನ್ಸ್ ಕಾರ್ನೆಲ್ಸ್ ಮಾರಿಯಾ ಝುಟ್ ಉಪಸ್ಥಿತರಿದ್ದರು
–ಪ್ರಜಾವಾಣಿ ಚಿತ್ರ

‘ಮೇಕೆದಾಟು ಯೋಜನೆಗೆ ಒಪ್ಪಿಗೆ ದೊರೆಯಲಿ’



‘ರಾಜ್ಯದಲ್ಲಿ ಹಲವು ಬಹುಮುಖ್ಯ ನೀರಾವರಿ ಯೋಜನೆಗಳು ಬಾಕಿಯಾಗಿವೆ. ಅವುಗಳಲ್ಲಿ ಮೇಕೆದಾಟು ಸಮಾನಾಂತರ ಜಲಾಶಯ ಮತ್ತು ಕೃಷ್ಣಾಮೇಲ್ದಂಡೆ 3ನೇ ಹಂತದ ಯೋಜನೆಗಳು ಮುಖ್ಯವಾದವು. ಈ ಎರಡೂ ಯೋಜನೆಗಳಿಗೆ ಕೇಂದ್ರ ಸರ್ಕಾರವು ಶೀಘ್ರವೇ ಅನುಮತಿ ನೀಡುತ್ತದೆ ಎಂಬ ಭರವಸೆ ಇದೆ’ ಎಂದು ಡಿ.ಕೆ.ಶಿವಕುಮಾರ್ ಅವರು ಹೇಳಿದರು.

‘ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಯೋಜನೆಯಿಂದ ಲಕ್ಷಾಂತರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಲಿದೆ. ಮೇಕೆದಾಟು ಯೋಜನೆಯಿಂದ ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಹೀಗಾಗಿ ಈ ಎರಡೂ ಯೋಜನೆಗಳಿಗೆ ಅಗತ್ಯ ಅನುಮತಿ ಮತ್ತು ಅಧಿಸೂಚನೆ ನೀಡಬೇಕು’ ಎಂದು ಒತ್ತಾಯಿಸಿದರು.

ಚಿಟಿಕೆ ಸುದ್ದಿ

ಅಂತರರಾಜ್ಯ ಡ್ರಗ್ ಪೆಡ್ಲರ್ ಜೈಲಿಗೆ

ಬಳ್ಳಾರಿ: ‘ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಅಕ್ರಮ ಸಾಗಣೆ ತಡೆಗಟ್ಟುವಿಕೆ ಕಾಯ್ದೆ, 1988 (ಪಿಟ್ ಎನ್‌ಡಿಪಿಎಸ್) ಕಾಯ್ದೆ ಪ್ರಯೋಗಿಸಿ ಅಂತರರಾಜ್ಯ ಡ್ರಗ್ ಪೆಡ್ಲರ್ ಮೆಹಬೂಬ್ ದೌಲ ಎಂಬಾತನನ್ನು ಬಳ್ಳಾರಿ ಪೊಲೀಸರು ಜೈಲಿಗೆ ಕಳುಹಿಸಿದ್ದಾರೆ.

ಮೆಹಬೂಬ್ ದೌಲ

ಬಳ್ಳಾರಿಯ ರಾಣಿ ತೋಟ ನಿವಾಸಿಯಾಗಿದ್ದ ದೌಲ 15 ವರ್ಷಗಳಿಂದ ಡ್ರಗ್ಸ್ ದಂಧೆ ನಡೆಸುತ್ತಿದ್ದು, ಬಳ್ಳಾರಿ, ಮೈಸೂರು, ಚಿತ್ರದುರ್ಗ ಸೇರಿ ರಾಜ್ಯದ ಹಲವು ಠಾಣೆಗಳಲ್ಲಿ 21 ಪ್ರಕರಣಗಳಿತ್ತು. ತಲೆಮರೆಸಿಕೊಂಡಿದ್ದ ದೌಲ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯು ಐಜಿಪಿಗೆ ದಾಖಲೆ ಸಲ್ಲಿಸಿದ್ದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಡ್ರಗ್ಸ್ ದಂಧೆಯಲ್ಲಿ ದೌಲನ ಪಾತ್ರ ಗಮನಿಸಿದ ವಲಯ ಐಜಿಪಿ ಡಾ. ಪಿಎಸ್ ಹರ್ಷ ‘ಪಿಟ್ ಎನ್‌ಡಿಪಿಎಸ್’ನ ಸೆಕ್ಷ್ 3 ಅಡಿಯಲ್ಲಿ ತಮಗಿರುವ ಅಧಿಕಾರ ಬಳಸಿ ದೌಲ ಬಂಧನಕ್ಕೆ ಆದೇಶ ಹೊರಡಿಸಿದ್ದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಇದೇ ಮೊದಲ ಬಾರಿಗೆ ‘ಪಿಟ್ ಎನ್‌ಡಿಪಿಎಸ್’ ಕಾಯ್ದೆ ಪ್ರಯೋಗವಾಗಿದೆ ಎಂದು ವಿಭಾಗೀಯ ಹಿರಿಯ ಕಾನೂನು ಅಧಿಕಾರಿ ಬಿ.ಎಸ್ ಪಾಟೀಲ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸಿಇಟಿ: ಫೆ.22ರವರೆಗೆ ಅವಕಾಶ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸುವ ದಿನಾಂಕವನ್ನು ಫೆ.22ರವರೆಗೆ ವಿಸ್ತರಿಸಲಾಗಿದೆ.

ಇದುವರೆಗೂ 2.9 ಲಕ್ಷ ವಿದ್ಯಾರ್ಥಿಗಳು ಆಧಾರ್ ಸಂಖ್ಯೆ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. 2.5 ಲಕ್ಷ ಅಭ್ಯರ್ಥಿಗಳು ಶುಲ್ಕ ಪಾವತಿಸಿದ್ದಾರೆ. ಅರ್ಜಿ ಸಲ್ಲಿಕೆಗೆ ಫೆ.17 ಕೊನೆಯ ದಿನಾಂಕವಾಗಿತ್ತು. ಮತ್ತೆ ಐದು ದಿನಗಳು ವಿಸ್ತರಿಸಲಾಗಿದೆ. ಶುಲ್ಕ ಪಾವತಿಗೆ ಫೆ.24 ಕೊನೆಯ ದಿನ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿದ್ದಾರೆ.

ಎಸ್‌ಎಟಿಎಸ್ ಮೂಲಕ 1.8 ಲಕ್ಷ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಆನ್‌ಲೈನ್ ಮೂಲಕ, ಕಾಲೇಜು ಹಂತದಲ್ಲಿ 35 ಸಾವಿರ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ. ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ಇರುವ ಲೋಪ, ತಪ್ಪುಗಳನ್ನು ಸರಿಪಡಿಸಿಕೊಳ್ಳಬಹುದು ಎಂದು ಸಲಹೆ ನೀಡಿದ್ದಾರೆ.



‘ಕಾವೇರಿ’ ಯೋಜನೆಗಳ ಸುಲಲಿತ ಅನುಮತಿಗೆ ಮಾರ್ಗಸೂಚಿ’

ನವದೆಹಲಿ: ಮೇಕೆದಾಟು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯ ನೀರಾವರಿ ಯೋಜನೆಗಳ ಅನುಮೋದನೆ ಪ್ರಕ್ರಿಯೆ ಸುಗಮಗೊಳಿಸಲು ಕೇಂದ್ರ ಜಲ ಆಯೋಗ ಮಾರ್ಗಸೂಚಿ ಹೊರಡಿಸಿದೆ.

ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ ಎಂದು ತಮಿಳುನಾಡಿನ ಸಂಸದೆ ಸುಧಾ ಆರ್. ಕೇಳಿರುವ ಪ್ರಶ್ನೆಗೆ ಲೋಕಸಭೆಯಲ್ಲಿ ಉತ್ತರ ನೀಡಿರುವ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ, ‘ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೆರಿ ರಾಜ್ಯಗಳ ವ್ಯಾಪ್ತಿಯ ಯೋಜನೆಗಳ ಮೌಲ್ಯಮಾಪನಕ್ಕಾಗಿ ಈ ಮಾರ್ಗಸೂಚಿ ಪ್ರಕಟಿಸಲಾಗಿದೆ’ ಎಂದರು.

‘ಮೌಲ್ಯಮಾಪನಕ್ಕಾಗಿ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಜಲ ಆಯೋಗ ಸ್ವೀಕರಿಸಿದೆ. ಯೋಜನೆ ಅನುಷ್ಠಾನಗೊಳಿಸುವ ಮೊದಲು ಕರ್ನಾಟಕ ಸರ್ಕಾರವು ಸಂಬಂಧಪಟ್ಟ ಇಲಾಖೆಗಳಿಂದ ಪರಿಸರ ಅನುಮತಿ ಸೇರಿದಂತೆ ಎಲ್ಲ ಶಾಸನಬದ್ಧ ಅನುಮೋದನೆಗಳನ್ನು ಪಡೆಯಬೇಕು’ ಎಂದರು.

ಯುಜಿಸಿ ಅರ್ಹತೆ:1,300 ‘ಅತಿಥಿ’ಗಳ ಕೊರತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್ ಸೇರಿದಂತೆ 10ರಿಂದ 12 ವಿಷಯಗಳಿಗೆ ಅತಿಥಿ ಉಪನ್ಯಾಸಕರ ಕೊರತೆ ಎದುರಾಗಿದ್ದು, 1,300 ಹುದ್ದೆಗಳು ಖಾಲಿ ಉಳಿದಿವೆ.

ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿದ ಅರ್ಹತೆ ಹೊಂದಿದ-ವರನ್ನಷ್ಟೇ ಪರಿಗಣಿಸಬೇಕು ಎಂಬ ಹೈಕೋರ್ಟ್ ನಿರ್ದೇಶನದ ಬಳಿಕ, ಯುಜಿಸಿ ಅರ್ಹತೆ ಇಲ್ಲದವರನ್ನು ಕೈಬಿಡಲಾಗಿತ್ತು. ಇದರಿಂದ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಸುಮಾರು 6,000 ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡಿದ್ದರು. ಕೆಲ ವಿಷಯಗಳಲ್ಲಿ ಯುಜಿಸಿ ಅರ್ಹತೆ ಪಡೆದ ಅಭ್ಯರ್ಥಿಗಳು ಲಭ್ಯವಿಲ್ಲದೆ ಬೋಧನೆಗೆ ತೊಡಕಾಗಿದೆ.

‘ಅರ್ಹ ಅಭ್ಯರ್ಥಿಗಳ ಲಭ್ಯತೆ ಇಲ್ಲದ ವಿಷಯಗಳಲ್ಲಿ ಯುಜಿಸಿ ಅರ್ಹತೆ ಇಲ್ಲದವರನ್ನು ನೇಮಿಸಲು ಸರ್ಕಾರ ಕೋರ್ಟ್ ಅನುಮತಿಯನ್ನು ಕೋರಿದ್ದು, ಕೋರ್ಟ್ ನಿರ್ದೇಶನದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಪಿಎಚ್‌ಡಿ ನೈಜತೆ : ಎಸ್‌ಒಪಿ

ಒಂದನೇ ಪುಟದಿಂದ...

ರಾಜ್ಯದ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು ಪರಿಶೀಲಿಸಬೇಕು. ಸ್ನಾತಕೋತ್ತರ ಪದವಿಗಳ ಅಂಕಪಟ್ಟಿ, ಘಟಿಕೋತ್ಸವ ಪ್ರಮಾಣಪತ್ರ, ಪಿಎಚ್‌ಡಿ, ಎಂ.ಫಿಲ್, ಕೆ–ಸೆಟ್, ಎನ್‌ಇಟಿಗಳ ನೈಜತೆಯನ್ನು ಅತಿಥಿ ಉಪನ್ಯಾಸಕರೇ ಸಾಬೀತು ಮಾಡಬೇಕು ಎಂದು ಸುತ್ತೋಲೆ ಹೊರಡಿಸಿದ್ದ ಕಾಲೇಜು ಶಿಕ್ಷಣ ಇಲಾಖೆ, ಎಲ್ಲ ಶೈಕ್ಷಣಿಕ ದಾಖಲೆಗಳ ನೈಜತಾ ಪ್ರಮಾಣಪತ್ರವನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳಿಂದ ಒಂದು ಬಾರಿ ಪಡೆಯುವುದನ್ನು ಕಡ್ಡಾಯಗೊಳಿಸಿತ್ತು.

ನೈಜತೆ ಪರಿಶೀಲನೆಯ ವೇಳೆ ಕೆಲ ಅಭ್ಯರ್ಥಿಗಳು ಪಡೆದ ಪಿಎಚ್‌ಡಿ ಪ್ರಮಾಣಪತ್ರಗಳು ನಕಲಿ ಎನ್ನುವುದು ದೃಢಪಟ್ಟಿತ್ತು. ಆದರೆ, ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳು ನೀಡಿದ ಹಲವು ನೈಜತೆ ಪ್ರಮಾಣಪತ್ರಗಳೂ ನಕಲಿ ಎನ್ನುವ ಆರೋಪ ಕೇಳಿಬಂದಿತ್ತು. ಈ ಆರೋಪವನ್ನು ಗಂಭೀರವಾಗಿ ಪರಿಗಣಿಸಿರುವ ಇಲಾಖೆ, ಸಲ್ಲಿಕೆಯಾದ ಎಲ್ಲ ಪ್ರಮಾಣಪತ್ರಗಳ ಪರಿಶೀಲನೆಗೆ ಪ್ರಮಾಣಿತ ಕಾರ್ಯಾಚರಣೆಯ ವಿಧಾನ ಅಳವಡಿಸಿಕೊಳ್ಳುತ್ತಿದೆ. ಅದಕ್ಕಾಗಿ ರಚಿಸಲಾಗುತ್ತಿರುವ ಸಮಿತಿಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನುರಿತ ಬೋಧಕ, ಬೋಧಕೇತರ ಸಿಬ್ಬಂದಿ ಇರಲಿದ್ದಾರೆ. ಆಯಾ ವಿಶ್ವವಿದ್ಯಾಲಯಗಳಿಗೇ ತೆರಳಿ ಅನುಮಾನ ಬಂದ ಪ್ರಮಾಣಪತ್ರಗಳ ನೈಜತೆಯನ್ನು ಖಚಿತಪಡಿಸಿಕೊಳ್ಳಲಿದ್ದಾರೆ.

ಕಾಯಂ ಅಧ್ಯಾಪಕರ ಪಿಎಚ್‌ಡಿಗಳೂ ನಕಲಿ

ಕಾಲೇಜು ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 600ಕ್ಕೂ ಹೆಚ್ಚು ಅಧ್ಯಾಪಕರು ಸಲ್ಲಿಸಿರುವ ಪಿಎಚ್‌ಡಿ ಪ್ರಮಾಣಪತ್ರಗಳು ನಕಲಿಯಾಗಿವೆ. ಈ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೆಲ ಅಧ್ಯಾಪಕರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ 2008–09ರಲ್ಲಿ ನೇಮಕಾತಿ ನಡೆದಾಗ ಎಂ.ಫಿಲ್ ಅರ್ಹತೆ ಇರುವವರಿಗೂ ಅವಕಾಶ ನೀಡಲಾಗಿತ್ತು. ಹಲವು ಅಭ್ಯರ್ಥಿಗಳು ರಾತ್ರೋರಾತ್ರಿ ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ನಕಲಿ ಪ್ರಮಾಣಪತ್ರಗಳನ್ನು ತಂದು ನೇಮಕವಾಗಿದ್ದರು. ಅಂತಹ ಅಭ್ಯರ್ಥಿಗಳ ವಿರುದ್ಧ ಇಂದಿಗೂ ಕ್ರಮ ಕೈಗೊಂಡಿಲ್ಲ. ವಿಶ್ವವಿದ್ಯಾಲಯ ಅನುದಾನ ಆಯೋಗವು ಪಿಎಚ್‌ಡಿ ಪಡೆದವರಿಗೆ ಮೂರು ವೇತನ ಬಡ್ತಿ ನೀಡಬೇಕು. ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡುವಾಗ ಕಡ್ಡಾಯವಾಗಿ ಪಿಎಚ್‌ಡಿ ಪರಿಗಣಿಸಬೇಕು ಎಂದು ನಿಯಮ ರೂಪಿಸಿದ ನಂತರ ನಕಲಿ ಪಿಎಚ್‌ಡಿ ಹಾವಳಿ ಮಿತಿಮೀರಿದೆ. ಬಹಳಷ್ಟು ಅಧ್ಯಾಪಕರು ಹೊರ ರಾಜ್ಯಗಳಿಂದ ಪಡೆದ ನಕಲಿ ಪಿಎಚ್‌ಡಿ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಈ ಕುರಿತು ಸೂಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಮೇಘಾಲಯದ ಸಿಎಂಜೆ ವಿಶ್ವವಿದ್ಯಾಲಯ ನೀಡಿದ ಪಿಎಚ್‌ಡಿಗಳು ನಕಲಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕರ್ನಾಟಕದಲ್ಲಿ ತನ್ನ ಯಾವ ದೂರಶಿಕ್ಷಣ ಕೇಂದ್ರವೂ ಇಲ್ಲ ಎಂದು ಬಿಹಾರದ ಮಗಧ ವಿಶ್ವವಿದ್ಯಾಲಯ ಸ್ಪಷ್ಟನೆ ನೀಡಿದೆ. ಈ ಎರಡೂ ವಿಶ್ವವಿದ್ಯಾಲಯಗಳ ಪಿಎಚ್‌ಡಿ ಪ್ರಮಾಣಪತ್ರವನ್ನು ಸಲ್ಲಿಸಿದ 300ಕ್ಕೂ ಹೆಚ್ಚು ಅಧ್ಯಾಪಕರು ಇದ್ದಾರೆ. ಅವರ ವಿರುದ್ಧ ಇದುವರೆಗೆ ಕ್ರಮ ಆಗಿಲ್ಲ. ನಕಲಿ ಪ್ರಮಾಣಪತ್ರಗಳ ನೈಜತೆ ಪರಿಶೀಲಿಸದೆ ಶೇ 10ರಷ್ಟು ಅಧ್ಯಾಪಕರಿಗೆ ಪದೋನ್ನತಿ ನೀಡಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟ ಮಾಡಲಾಗಿದೆ.ಲೋಕಾಯುಕ್ತದಲ್ಲಿ ದೂರು ದಾಖಲಾದ ಇಬ್ಬರ ವಿರುದ್ಧ ಅಷ್ಟೇ ಕಾಲೇಜು ಶಿಕ್ಷಣ ಇಲಾಖೆ ಕ್ರಮಕೈಗೊಂಡಿದೆ ಎಂದು ದೂರಿದ್ದಾರೆ.

ಪ್ರಜಾವಾಣಿ
CAMBRIDGE INSTITUTE OF TECHNOLOGY NORTH CAMPUS
ವ್ಯಾಲೆಂಟೈನ್ಸ್ ಡೇ ರೀಲ್ಸ್ ಸ್ಪರ್ಧೆ
ವ್ಯಾಲೆಂಟೈನ್ಸ್ ಡೇ ಅಂಗವಾಗಿ ವಿಶೇಷ ರೀಲ್ಸ್ ಸ್ಪರ್ಧೆಯನ್ನು ‘ಪ್ರಜಾವಾಣಿ ಡಿಜಿಟಲ್’ ಆಯೋಜಿಸಿದೆ. ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳ ಮೌಲ್ಯ ಹಾಗೂ ಜೀವನದ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್ಸ್‌ಗಳನ್ನು ಆಹ್ವಾನಿಸಲಾಗುತ್ತಿದೆ.
Happy Valentine's Day
- ಪ್ರಥಮ ಬಹುಮಾನ: ₹25 ಸಾವಿರ
- ದ್ವಿತೀಯ ಬಹುಮಾನ: ₹20 ಸಾವಿರ
- ತೃತೀಯ ಬಹುಮಾನ: ₹15 ಸಾವಿರ
- 10 ಸಮಾಧಾನಕರ ಬಹುಮಾನಗಳು
ರೀಲ್ ಕಳುಹಿಸಲು ಇಂದೇ ಕೊನೆಯ ದಿನ
ರೀಲ್ ಜತೆಗೆ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಇರಲಿ
ಇಲ್ಲಿ ಕಳುಹಿಸಿ: 9742292938
events.pvdigital@prajavani.co.in

ಗಾಯಕ ಫೈಯಾಜ್ ಕೊಡುಗೆ ಒಪ್ಪಿಕೊಳ್ಳಿ ಎ.ಆರ್.ರೆಹಮಾನ್‌ಗೆ ‘ಸುಪ್ರೀಂ’ ಸಲಹೆ

ನವದೆಹಲಿ:ತಮಿಳು ಚಿತ್ರ ‘ಪೊನ್ನಿಯಿನ್ ಸೆಲ್ವನ್–2’ರ ‘ವೀರ ರಾಜಾ ವೀರ’ ಗೀತೆಯ ರಾಗ ಹಾಗೂ ಅದರ ಪ್ರಸ್ತುತಿಗೆ ಸಂಬಂಧಿಸಿ ಧ್ರುಪದ ಗಾಯಕ ಫೈಯಾಜ್ ವಾಸಿಫುದ್ದೀನ್ ಡಾಗರ್ ನೀಡಿರುವ ಕೊಡುಗೆಯನ್ನು ಒಪ್ಪಿಕೊಳ್ಳಿ’ ಎಂದು ಸಂಗೀತ ಸಂಯೋಜಕ ಎ.ಆರ್.ರೆಹಮಾನ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಫೈಯಾಜ್ ಡಾಗರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಪೀಠ ನಡೆಸಿತು.

ಚಿತ್ರದ ಈ ಗೀತೆಯ ಹಕ್ಕುಸ್ವಾಮ್ಯದ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಡಾಗರ್ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಡಾಗರ್ ಅವರ ವಾದ ಎತ್ತಿ ಹಿಡಿದು ಹೈಕೋರ್ಟ್‌ನ ಏಕಸದಸ್ಯ ಪೀಠ ಮಧ್ಯಂತರ ಆದೇಶ ನೀಡಿತ್ತು.

ಈ ಆದೇಶ ರದ್ದುಗೊಳಿಸಿ ಹೈಕೋರ್ಟ್‌ನ ವಿಭಾಗೀಯ ಪೀಠವು ಕಳೆದ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಡಾಗರ್ ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು. ವಾದ–ಪ್ರತಿಪಾದ ಆಲಿಸಿದ ಪೀಠವು ವಿಚಾರಣೆಯನ್ನು ಫೆ. 20ಕ್ಕೆ ಮುಂದೂಡಿತು.

‘ಸಾಹಸ ಸಿಂಹ’ ನಿರ್ದೇಶಕ ಜೋ ಸೈಮನ್ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದ ಜನಪ್ರಿಯ ನಿರ್ದೇಶಕ ಜೋ ಸೈಮನ್ ಹೃದಯಾಘಾತದಿಂದ ನಗರದ ಮಲ್ಲಿಗೆ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಅವರಿಗೆ 80 ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿ ಹಾಗೂ ಮೂವರು ಮಕ್ಕಳು ಇದ್ದಾರೆ. ಮತ್ತೋರ್ವ ಪುತ್ರ ಈಗಾಗಲೇ ತೀರಿಕೊಂಡಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ಫೆ.14ರಂದು ಬೆಳಿಗ್ಗೆ 10 ಗಂಟೆಯಿಂದ ಒಂದು ಗಂಟೆವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಸಂಜೆ ಅಂತ್ಯ ಸಂಸ್ಕಾರ ನಡೆಯಲಿದೆ’ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಅವರು, ಶುಕ್ರವಾರ ಸಮಿತಿಯ ತುರ್ತು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿಯೇ ಕುಸಿದು ಬಿದ್ದ ಅವರನ್ನು ತಕ್ಷಣ ಸಮೀಪದ ಮಲ್ಲಿಗೆ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಕೊನೆಯುಸಿರೆಳೆದರು.

ಅವರು ನಿರ್ದೇಶಕ, ನಟ, ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದರು.

ಜೋಸೈಮನ್

1977ರಲ್ಲಿ ‘ಒಂದು ಪ್ರೇಮದ ಕತೆ’ ಚಿತ್ರದೊಂದಿಗೆ ನಿರ್ದೇಶಕರಾದ ಸೈಮನ್, ವಿಷ್ಣುವರ್ಧನ್, ಅಂಬರೀಶ್ ಅವರ ಕೆಲವು ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದರು. ‘ಸಿಂಹ ಜೋಡಿ’, ‘ಸಾಹಸ ಸಿಂಹ’, ‘ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್’, ‘ಸ್ನೇಹದ ಕಡಲಲ್ಲಿ’, ‘ರವಿವರ್ಮ’, ‘ಟೈಂ ಬಾಂಬ್’ ಮುಂತಾದವು ಇವರ ನಿರ್ದೇಶನದ ಪ್ರಮುಖ ಸಿನಿಮಾಗಳಾಗಿವೆ.

‘ಒಡೆದ ಹಾಲು’, ‘ಆ ಒಂದು ರಾತ್ರಿ’ ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದರು. ಹಲವು ಸಿನಿಮಾ, ಧಾರಾವಾಹಿಗಳಲ್ಲಿ ನಟಿಸಿದ್ದರು. ‘ಊರಿಗೆ ಉಪಕಾರಿ’, ‘ರಕ್ತ ತಿಲಕ’, 'ಸಮರ ಸಿಂಹ' ಸೇರಿದಂತೆ 25ಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿದ್ದರು.

ಇವರು ಪ್ರಸ್ತುತ ನಿರ್ದೇಶಕರ ಸಂಘದ ಉಪಾಧ್ಯಕ್ಷರಾಗಿದ್ದರು. ಮಂಡ್ಯ ಮೂಲದ ಇವರು ರಾಜೇಂದ್ರ ಸಿಂಗ್ ಬಾಬು ಅವರ ಬಳಿ ಸಹಾಯಕಾಗಿ ವೃತ್ತಿ ಪ್ರಾರಂಭಿಸಿದ್ದರು.

‘ಏದುಸಿರು ಬಿಡುತ್ತ ಕುಳಿತರು’

‘ವಾಣಿಜ್ಯ ಮಂಡಳಿ ಕಾರ್ಯಕಾರಿ ಸಮಿತಿ ಸಭೆಯ ಬಳಿಕ ಲಘು ಉಪಾಹಾರ ನೀಡಲಾಯಿತು. ನಂತರ ಜೋ ಸೈಮನ್ ಅವರು ಏದುಸಿರು ಬಿಡುತ್ತ ಕುರ್ಚಿ ಮೇಲೆ ಕುಳಿತರು. ನಾವು ತಕ್ಷಣ ಅವರನ್ನು ಮಲ್ಲಿಗೆ ಆಸ್ಪತ್ರೆಗೆ ಕರೆದೊಯ್ದೆವು. ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಅವರನ್ನು ಕಣ್ಣಮುಂದೆಯೇ ಹೀಗೆ ಕಳೆದುಕೊಂಡಿದ್ದು ತೀವ್ರ ಬೇಸರ ಉಂಟು ಮಾಡಿದೆ’

–ಕೆ. ಮಂಜು, ಚಲನಚಿತ್ರ ನಿರ್ಮಾಪಕ

ಜಾಲಿರೈಡ್: ಏಳು ಮಂದಿ ಸಾವು

ಒಂದನೇ ಪುಟದಿಂದ...

ಮೃತ ವಿದ್ಯಾರ್ಥಿಗಳು ಬೆಂಗಳೂರಿನ ವಿವಿಧ ಶಾಲೆ ಹಾಗೂ ಕಾಲೇಜುಗಳಲ್ಲಿ ಪ್ರಥಮ ಪಿಯು, ಎಸ್‌ಎಸ್‌ಎಲ್‌ಸಿ ಓದುತ್ತಿದ್ದರು. ಅಶ್ವಿನ್ ನಾಯರ್, ಈಥನ್ ಜಾರ್ಜ್ ಸ್ನೇಹಿತರು. ಇಬ್ಬರು ಯಲಹಂಕ ಆರ್.ವಿ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯು ಓದುತ್ತಿದ್ದರು. ಅಯಾನ್ ಅಲಿ, ಆಶ್ರಮ್ ಷರಿಫ್ ಸಿಎಂಆರ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದರು. ಭರತ್ ಫ್ರೇಜರ್ ಟೌನ್ ಶೋಭನಾ ಮೆಮೋರಿಯಲ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ, ಫರಾನ್ ಶೇಖ್ ಕಮ್ಮನಹಳ್ಳಿಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮಾಡುತ್ತಿದ್ದ.

‘ಮೃತರು ಒಂದೇ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಲ್ಲ. ಪರಸ್ಪರ ಪರಿಚಯ ಹೇಗಾಯಿತು ಎಂಬುದರ ಮಾಹಿತಿ ತಿಳಿದಿಲ್ಲ. ಇವರೆಲ್ಲರೂ ಜಾಲಿ ರೈಡ್‌ಗೆ ಹೋಗಿರುವುದು ಪೋಷಕರಿಗೆ ತಿಳಿದಿರಲಿಲ್ಲ’ ಎಂದು ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ.ಚಂದ್ರಕಾಂತ್ ಮಾಧ್ಯಮ ಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

ಅಪಘಾತದ ತೀವ್ರತೆಗೆ ದೇಹಗಳು ಗುರುತಿಸಲಾಗದಷ್ಟು ಛಿದ್ರಗೊಂಡಿದ್ದವು. ಕಾರಿನಿಂದ ಹೊರತೆಗೆಯುವುದೇ ಸವಾಲಾಗಿತ್ತು. ಮೊಬೈಲ್ ಟವರ್ ಪತ್ತೆ ಹಚ್ಚಿ ಪೋಷಕರಿಗೆ ಮಾಹಿತಿ ನೀಡಲಾಯಿತು. ಕಾರಿನ ಮುಂಭಾಗ ಸಂಪೂರ್ಣ ಜಖಂಗೊಂಡಿತ್ತು. ಟೈರ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕಾರು ಡಿಕ್ಕಿ ಹೊಡೆದಿದ್ದ ರಭಸಕ್ಕೆ ಕ್ಯಾಂಟರ್ ಪಲ್ಟಿ ಹೊಡೆದು ರಸ್ತೆ ಬದಿಗೆ ಉರುಳಿ ಬಿದ್ದಿತ್ತು. ಇದೇ ರಸ್ತೆಯಲ್ಲಿ ಬಂದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ. ಆದರೆ, ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅತಿವೇಗ ಹಾಗೂ ದಟ್ಟ ಮಂಜು ಆವರಿಸಿದ್ದರಿಂದ ಅಪಘಾತ ಸಂಭವಿಸಿದೆ. ಯಾರು ಕಾರು ಚಲಾಯಿಸುತ್ತಿದ್ದರು ಎಂಬುದು ಪತ್ತೆಯಾಗಿಲ್ಲ. ಕಾರು ಓಡಿಸುತ್ತಿದ್ದವರು ಅಪ್ರಾಪ್ತರು ಎಂದು ಪತ್ತೆಯಾದರೆ ಕಾರಿನ ಮಾಲೀಕರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಗುದ್ದಿದ ರಭಸಕ್ಕೆ ಪಲ್ಟಿ ಹೊಡೆದಿರುವ ಕ್ಯಾಂಟರ್

ಶಿಕ್ಷಕರ ಮೀಮ್ ರಚನೆ; ಪರೀಕ್ಷೆಗೆ ಅವಕಾಶ

ನವದೆಹಲಿ (ಪಿಟಿಐ): ಶಿಕ್ಷಕರ ಕುರಿತು ಆಕ್ಷೇಪಾರ್ಹ ಪೋಸ್ಟ್ ರಚಿಸಿ, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಕಾರಣಕ್ಕಾಗಿ ಶಾಲೆಯಿಂದ ಹೊರಗೆ ಹಾಕಲಾಗಿದ್ದ 10ನೇ ತರಗತಿ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಸುಪ್ರೀಂಕೋರ್ಟ್ ಅವಕಾಶ ನೀಡಿದೆ.

ಎರಡು ಬಸ್ ಜಪ್ತಿ

ಚನ್ನರಾಯಪಟ್ಟಣ (ಹಾಸನ): ಅಪಘಾತದಲ್ಲಿ ಮೃತಪಟ್ಟಿದ್ದ ಇಬ್ಬರ ಕುಟುಂಬಕ್ಕೆ ಪರಿಹಾರ ನೀಡದ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಚಿಕ್ಕಮಗಳೂರು ವಿಭಾಗದ ಎರಡು ಬಸ್‌ಗಳನ್ನು ಪಟ್ಟಣದಲ್ಲಿ ಜಪ್ತಿ ಮಾಡಲಾಯಿತು.

ಶುಕ್ರವಾರ ಶೃಂಗೇರಿಯಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ತೆರಳುತ್ತಿದ್ದ ಬಸ್‌ಗಳನ್ನು ತಡೆದ ಕೋರ್ಟ್ ಸಿಬ್ಬಂದಿ, ಪ್ರಯಾಣಿಕರನ್ನು ಇಳಿಸಿ, ಜಪ್ತಿ ಮಾಡಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ಬೇಡಿಗನಹಳ್ಳಿ ಬಳಿ ಸಂಸ್ಥೆಯ ಬಸ್ ಮತ್ತು ಬೈಕ್ ನಡುವೆ 2023ರ ಏಪ್ರಿಲ್ 23ರಂದು ನಡೆದಿದ್ದ ಅಪಘಾತದಲ್ಲಿ ರವಿಕಿರಣ್ (19) ಮತ್ತು ರೇಣುಕಪ್ಪ (52) ಸ್ಥಳದಲ್ಲಿ ಮೃತಪಟ್ಟಿದ್ದರು. ಕುಟುಂಬದವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ರವಿಕಿರಣ್ ಕುಟುಂಬಕ್ಕೆ ₹19.93 ಲಕ್ಷ ಮತ್ತು ರೇಣುಕಪ್ಪ ಕುಟುಂಬಕ್ಕೆ ₹12.41 ಲಕ್ಷ ಪರಿಹಾರ ನೀಡುವಂತೆ ಚಿಕ್ಕಮಗಳೂರು ವಿಭಾಗಕ್ಕೆ ಸೂಚಿಸಿತ್ತು.

‘ಪರಿಹಾರ ನೀಡದ್ದರಿಂದ ಬಸ್‌ಗಳನ್ನು ಜಪ್ತಿ ಮಾಡಿದ್ದರು. ₹16 ಲಕ್ಷ ಪರಿಹಾರದ ಮೊತ್ತದ ಚೆಕ್ ಅನ್ನು ಕೋರ್ಟ್‌ಗೆ ನೀಡಿದ್ದರಿಂದ ಬಸ್‌ಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಮೊತ್ತವನ್ನು ಫೆ.28ರೊಳಗೆ ಪಾವತಿಸಲು ಕೋರ್ಟ್ ಆದೇಶಿಸಿದೆ’ ಎಂದು ವಕೀಲ ದರ್ಶನ್ ಪಟೇಲ್ ತಿಳಿಸಿದರು.

‘ರೇರಾದಿಂದ ಬಿಲ್ಡರ್‌ಗಳಿಗೆ ಮಾತ್ರ ಲಾಭ’

ನವದೆಹಲಿ (ಪಿಟಿಐ): ‘ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ)ವು ಬಿಲ್ಡರ್‌ಗಳಿಗೆ ಅನುಕೂಲ ಮಾಡಿಕೊಡುತ್ತಿದೆಯೇ ಸಂಸ್ಥೆಯಿಂದ ಏನೂ ಉಪಯೋಗವಿಲ್ಲ; ಎಲ್ಲ ರಾಜ್ಯಗಳು ರೇರಾದ ಸಂವಿಧಾನವನ್ನು ಮರುಪರಿಶೀಲಿಸುವ ಅಗತ್ಯವಿದೆ’ ಎಂದು ಸುಪ್ರೀಂಕೋರ್ಟ್ ಹೇಳಿದೆ.

‘ರೇರಾ ಸಂಸ್ಥೆಯ ಕುರಿತು ಸಂಪೂರ್ಣವಾಗಿ ಅಸಹ್ಯಗೊಂಡಿದ್ದು, ನಿರಾಸೆಗೊಳಗಾಗಿದ್ದೇನೆ. ಸಂಸ್ಥೆಯನ್ನು ರದ್ದುಗೊಳಿಸಿದರೂ ಪರವಾಗಿಲ್ಲ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ ನ್ಯಾಯಪೀಠ ಪ್ರತಿಪಾದಿಸಿತು.

ರೇರಾ ಕಚೇರಿಯನ್ನು ಶಿಮ್ಲಾದಿಂದ ಧರ್ಮಶಾಲಾಕ್ಕೆ ಸ್ಥಳಾಂತರಿಸಲು ಅನುವು ಮಾಡಿಕೊಟ್ಟ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಹಿಮಾಚಲಪ್ರದೇಶ ಸರ್ಕಾರ ಹಾಗೂ ಇತರರು ಸಲ್ಲಿಸಿದ ಅರ್ಜಿ ವಿಚಾರಣೆ ವೇಳೆ ಈ ಅಭಿಪ್ರಾಯಪಟ್ಟಿದೆ.

‘ಮದುವೆ, ಮತಾಂತರದಿಂದ ಜಾತಿ ಬದಲಾಗದು’

ಪ್ರಜಾವಾಣಿ ವಾರ್ತೆ

ಅಲಹಾಬಾದ್: ವ್ಯಕ್ತಿಯೊಬ್ಬನ ಜಾತಿಯು ಜನನದಿಂದಲೇ ನಿರ್ಧಾರವಾಗಿರುತ್ತದೆ. ಮದುವೆ ಅಥವಾ ಮತಾಂತರದ ಬಳಿಕವೂ ಅದು ಬದಲಾಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಒಂದು ವೇಳೆ, ಒಬ್ಬ ಮಹಿಳೆ ಬೇರೆ ಜಾತಿ ವ್ಯಕ್ತಿಯನ್ನು ಮದುವೆಯಾದಲ್ಲಿ ಆಕೆಯ ಮೂಲ ಜಾತಿ ರದ್ದುಗೊಂಡಿದೆ ಎಂಬುದಾಗಿ ಪರಿಗಣಿಸುವಂತಿಲ್ಲ ಎಂದು ನ್ಯಾಯಮೂರ್ತಿ ಅನಿಲ ಕುಮಾರ್ ಅವರ ಏಕಸದಸ್ಯ ಪೀಠ ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿ/ಪಂಗಡ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆ ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ತಮ್ಮ ವಿರುದ್ಧ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾ ನ್ಯಾಯಾಲಯ ನೀಡಿರುವ ಸಮನ್ಸ್ ಪ್ರಶ್ನಿಸಿ ದಿನೇಶ್ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ, ಪೀಠ ಈ ಮಾತು ಹೇಳಿದೆ.

‘ಅರ್ಜಿದಾರರು (ದಿನೇಶ್ ಹಾಗೂ ಇತರರು) ನನ್ನ ಮೇಲೆ ಹಲ್ಲೆ ಮಾಡಿದ್ದಲ್ಲದೇ, ಜಾತಿ ಹೆಸರು ತೆಗೆದುಕೊಂಡು ನನ್ನನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ’ ಎಂದು ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆ ನೀಡಿದ ದೂರಿನ ಅನ್ವಯ ಈ ಪ್ರಕರಣ ದಾಖಲಿಸಲಾಗಿದೆ.

ಅರ್ಜಿದಾರರ ವಾದ: ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯು ಪಶ್ಚಿಮ ಬಂಗಾಳದವರು. ಜಾಟ್ ಸಮುದಾಯಕ್ಕೆ ಸೇರಿದ ವ್ಯಕ್ತಿಯನ್ನು ಮದುವೆ ಮಾಡಿಕೊಂಡಿದ್ದಾರೆ. ಹೀಗಾಗಿ, ತನ್ನ ಮೂಲ ಜಾತಿಯಿಂದಾಗಿ ಸಿಗುವ ಪ್ರಯೋಜನ ಪಡೆಯಲು ಆಕೆ ಅರ್ಹಳಲ್ಲ ಎಂಬುದು ಅರ್ಜಿದಾರರ ವಾದ.

‘ಪ್ರಬಲ ಜಾತಿಯ ವ್ಯಕ್ತಿಯನ್ನು ಮದುವೆಯಾಗಿರುವ ಕಾರಣ ಆಕೆಯು ‘ಪರಿಶಿಷ್ಟ ಜಾತಿ’ ಸ್ಥಾನಮಾನ ಕಳೆದುಕೊಂಡಿದ್ದಾಳೆ. ಎಸ್‌ಸಿ/ಎಸ್‌ಟಿ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆಯಡಿ ನಮ್ಮ ವಿರುದ್ಧ ದಾಖಲಿಸಿರುವ ಪ್ರಕರಣಗಳು ಸಮರ್ಥನೀಯವಲ್ಲ ಹಾಗೂ ಅವುಗಳನ್ನು ವಜಾಗೊಳಿಸಬೇಕು’ ಎಂದು ದಿನೇಶ್ ಹಾಗೂ ಇತರರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

‘ಆಕೆ ಬೇರೆ ಜಾತಿಯ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ ಎಂಬ ಅಂಶವು ಅರ್ಜಿದಾರರ ವಿರುದ್ಧ ಆಕೆ ದಾಖಲಿಸಿರುವ ಪ್ರಕರಣ ಕೈಬಿಡುವುದಕ್ಕೆ ಆಧಾರವಾಗದು’ ಎಂದು ಹೇಳಿದ ಹೈಕೋರ್ಟ್, ಮೇಲ್ಮನವಿಯನ್ನು ವಜಾಗೊಳಿಸಿದೆ.

ರಾಜ್ಯ ಸರ್ಕಾರ ಸಾಧನಾ ಸಮಾವೇಶಕ್ಕೆ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡುವುದು ಸರಿಯೇ?
• ಹೌದು • ಇಲ್ಲ • ಗೊತ್ತಿಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕಾನೂನು ಸಚಿವಾಲಯವು ಲೋಕಸಭೆಗೆ ನೀಡಿದ ಮಾಹಿತಿ

ನ್ಯಾಯಮೂರ್ತಿಗಳ ವಿರುದ್ಧ 8,630 ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾಲಿ ನ್ಯಾಯಾಧೀಶರು/ನ್ಯಾಯಮೂರ್ತಿಗಳ ವಿರುದ್ಧ ಭಾರತದ ಮುಖ್ಯ ನ್ಯಾಯಮೂರ್ತಿಗಳ ಕಚೇರಿಗೆ (ಸಿಜೆಐ) 2016ರಿಂದ ಇಲ್ಲಿಯವರೆಗೆ 8,630 ದೂರುಗಳು ಬಂದಿವೆ ಎಂದು ಕೇಂದ್ರ ಕಾನೂನು ಸಚಿವಾಲಯವು ಲೋಕಸಭೆಯಲ್ಲಿ ಶುಕ್ರವಾರ ಬಹಿರಂಗಪಡಿಸಿದೆ.

ಲೋಕಸಭೆಯಲ್ಲಿ ಶುಕ್ರವಾರ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಡಿಎಂಕೆ ಸಂಸದ ಮಾಥೇಶ್ವರನ್ ವಿ.ಎಸ್ ಕೇಳಿದ ಪ್ರಶ್ನೆಗೆ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಈ ಉತ್ತರ ನೀಡಿದರು.

ಹೈಕೋರ್ಟ್‌ಗಳು ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ವಿರುದ್ಧ ಸಲ್ಲಿಕೆಯಾಗಿರುವ ಭ್ರಷ್ಟಾಚಾರ, ಲೈಂಗಿಕ ದುರ್ನಡತೆ ಅಥವಾ ಇತರ ಗಂಭೀರ ಅನುಚಿತ ವರ್ತನೆಗೆ ಸಂಬಂಧಿಸಿದ ದೂರುಗಳ ಬಗ್ಗೆ ವಿವರ ನೀಡುವಂತೆ ಸಂಸದರು ಪ್ರಶ್ನೆ ಕೇಳಿದರು.

ಈ ದೂರುಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಮಾಥೇಶ್ವರನ್ ಕೇಳಿದರು. ಆದಾಗ್ಯೂ, ಇದಕ್ಕೆ ಸಚಿವರು ಉತ್ತರ ನೀಡಿಲ್ಲ. ಈ ದೂರುಗಳ ಆಧಾರದಲ್ಲಿ ಕೈಗೊಂಡಿರುವ ಕ್ರಮಗಳ ದಾಖಲೆಗಳು ಏಕೆ ಇಲ್ಲ ಎಂಬುದನ್ನೂ ಸಚಿವರು ಬಹಿರಂಗಪಡಿಸಿಲ್ಲ.

ಉನ್ನತ ನ್ಯಾಯಾಲಯದ ಆಂತರಿಕ ಕಾರ್ಯವಿಧಾನದ ಪ್ರಕಾರ, ನ್ಯಾಯಾಧೀಶರ ವಿರುದ್ಧ ದೂರುಗಳನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಸ್ವೀಕರಿಸುತ್ತಾರೆ. ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮೇಲ್ವಿಚಾರಣಾ ವ್ಯವಸ್ಥೆ ಮೂಲಕ ಅಥವಾ ಯಾವುದೇ ಇತರ ರೂಪದಲ್ಲಿ ಸ್ವೀಕರಿಸಿದ ದೂರುಗಳನ್ನು ಸಿಜೆಐ ಅಥವಾ ಸಂಬಂಧಪಟ್ಟ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ರವಾನಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.



ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ 2ನೇ ಅವಧಿಯ ಸರ್ಕಾರಕ್ಕೆ 1 ಸಾವಿರ ದಿನಗಳ ಸಂಭ್ರಮ, ಹಾವೇರಿಯಲ್ಲಿ 'ಭೂ ಗ್ಯಾರಂಟಿ' ಸಮರ್ಪಣಾ ಸಮಾವೇಶದ ಹೆಸರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜನೆ, ರಾಜ್ಯಾದ್ಯಂತ ಸಂಭ್ರಮಾಚರಣೆ

ಸಾರ್ಥಕ ಸಾವಿರ ದಿನಗಳ ಗ್ಯಾರಂಟಿ ಆಡಳಿತ

ಬೆಂಗಳೂರು: ದೇಶದಲ್ಲೇ ಮೊದಲ ಬಾರಿಗೆ ಜನಪರ ಗ್ಯಾರಂಟಿಗಳಿಂದಲೇ ಸದ್ದು ಮಾಡಿದ್ದ ಸಿದ್ದರಾಮಯ್ಯ ನೇತೃತ್ವದ ಪ್ರಸಕ್ತ ಸರ್ಕಾರ 1 ಸಾವಿರ ದಿನಗಳ ಆಡಳಿತವನ್ನು ಪೂರೈಸುತ್ತಿದ್ದು, ಹಾವೇರಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಸರ್ಕಾರದ ಸಾರ್ಥಕ ಜನಸೇವೆಯ ಸಾಧನಾ ಸಮಾವೇಶದೊಂದಿಗೆ ಕಂದಾಯ ಇಲಾಖೆಯ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಸಹ ಜಂಟಿಯಾಗಿ ನಡೆಯಲಿದ್ದು, ಬರೋಬ್ಬರಿ 1 ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಲಾಗುತ್ತಿದೆ. ಆ ಮೂಲಕ ದಾಖಲೆಗಳಿಂದಲೇ ಸದ್ದು ಮಾಡುತ್ತಿರುವ ರಾಜ್ಯ ಸರ್ಕಾರ ಮತ್ತೊಂದು ಕೀರ್ತಿಯನ್ನು ತನ್ನ ಮುಡಿಗೇರಿಸಿಕೊಳ್ಳುತ್ತಿದೆ. ವಿಶೇಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಪಂಚಗ್ಯಾರಂಟಿಗಳ ಸಮರ್ಥ ಜಾರಿಯೊಂದಿಗೆ ಸಾಲು ಸಾಲು ದಾಖಲೆಗಳಿಗೆ ಪಾತ್ರರಾಗಿದ್ದಾರೆ. ಇದೀಗ, ಭೂ ಗ್ಯಾರಂಟಿ ಹೆಸರಿನಲ್ಲಿ ಕಂದಾಯ ಇಲಾಖೆಯಡಿ ಬಡ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ವಿಶೇಷ ಕಾರ್ಯಕ್ರಮವನ್ನು ನಡೆಸುತ್ತಿರುವುದು ಸಹ ಐತಿಹಾಸಿಕವೆಂದೇ ಕರೆಸಿಕೊಳ್ಳಲಿದೆ.

ದಶಕಗಳಿಂದ ಭೂ ದಾಖಲೆಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುತ್ತಿದ್ದ ಸಾಮಾನ್ಯ ಜನರ ನೆಮ್ಮದಿಗಾಗಿ ರಾಜ್ಯ ಸರ್ಕಾರ 'ಭೂ ಗ್ಯಾರಂಟಿ' ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಕಂದಾಯ ಇಲಾಖೆಯ ಎಲ್ಲಾ ಸೌಕರ್ಯಗಳು ಜನರ ಮನೆ ಬಾಗಿಲಿನಲ್ಲೇ ಸಿಗುವಂತಹಾ ವಿಭಿನ್ನ ಜನಸ್ನೇಹಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆಧುನಿಕ ತಂತ್ರಜ್ಞಾನಗಳನ್ನು ಸಮರ್ಥವಾಗಿ ಬಳಸಿಕೊಂಡು ಜನರಿಗೆ ಕಂದಾಯ ಸೇವೆಗಳನ್ನು ಮನೆಗಳಲ್ಲೇ ನೀಡುವ ಸೌಕರ್ಯ ಒದಗಿಸಲಾಗಿದ್ದು, ಈ ಮಹತ್ವಾಕಾಂಕ್ಷಿ ಯೋಜನೆಗೆ ಹಾವೇರಿಯಲ್ಲಿ ಚಾಲನೆ ಸಿಗುತ್ತಿದೆ. 'ಭೂ-ಸುರಕ್ಷಾ' ಯೋಜನೆಯಡಿ ಈಗಾಗಲೇ 67 ಕೋಟಿಗಿಂತಲೂ ಹೆಚ್ಚು ಪುಟಗಳ ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಸುರಕ್ಷಿತವಾಗಿರಿಸಲಾಗಿದೆ. ಇದರಿಂದ ನಕಲಿ ದಾಖಲೆಗಳ ಸೃಷ್ಟಿಗೆ ಕಡಿವಾಣ ಬಿದ್ದಿದ್ದು, ರೈತರ ಜಮೀನಿನ ಹಕ್ಕುಗಳು ಡಿಜಿಟಲ್ ಆಗಿ ಸಂರಕ್ಷಿಸಲ್ಪಟ್ಟಿವೆ. ಇದಲ್ಲದೆ, ರಾಜ್ಯದಲ್ಲಿ ಮೊದಲ ಬಾರಿಗೆ ಡ್ರೋನ್ ತಂತ್ರಜ್ಞಾನ ಬಳಸಿ ಭೂಮಿಯ ಮರು-ಸರ್ವೆ ಮಾಡಲಾಗುತ್ತಿದ್ದು, ಪ್ರತಿ ಇಂಚು ಭೂಮಿಯ ಮ್ಯಾಪಿಂಗ್ ಅತ್ಯಂತ ನಿಖರ ಮತ್ತು ಪಾರದರ್ಶಕವಾಗಿದೆ. ಜತೆಗೆ, ಇತಿಹಾಸದಲ್ಲೇ ಮೊದಲ ಬಾರಿಗೆ ದಾಖಲೆಗಳಿಲ್ಲದ ತಾಂಡಾ, ಹಟ್ಟಿ ಹಾಗೂ ಹಾಡಿಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಕುಟುಂಬಗಳಿಗೆ ಸರ್ಕಾರ ಸ್ವಂತ ವಿಳಾಸವನ್ನು ನೀಡಿದೆ. ಸುಮಾರು 6,742 ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಗುರುತಿಸಲಾಗಿದೆ. ಇದರ ಭಾಗವಾಗಿ ಈವರೆಗೆ 2 ಲಕ್ಷ ಡಿಜಿಟಲ್ ಹಕ್ಕುಪತ್ರ ಹಾಗೂ 1 ಲಕ್ಷ ಮ್ಯಾನ್ಯುವಲ್ ಹಕ್ಕುಪತ್ರಗಳನ್ನು ವಿತರಿಸಿ, ಜನರನ್ನು ಸಮಾಜದ ಮುಖ್ಯವಾಹಿನಿಗೆ ತರಲಾಗಿದೆ. ಹಾವೇರಿ ಸಮಾವೇಶದಲ್ಲಿ ಮತ್ತೊಂದು ಒಂದು ಲಕ್ಷ ಕುಟುಂಬಗಳಿಗೆ ಡಿಜಿಟಲ್ ಹಕ್ಕುಪತ್ರಗಳನ್ನು ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಒಂದು ಲಕ್ಷ ಹಕ್ಕುಪತ್ರ ನೀಡುವ ಗುರಿ ಹೊಂದಲಾಗಿದೆ.

ಪಂಚಗ್ಯಾರಂಟಿಗಳ ಮಹಾಕ್ರಾಂತಿ : ದೇಶದಲ್ಲೇ ಮೊದಲ ಬಾರಿಗೆ ಗ್ಯಾರಂಟಿಗಳ ಮೂಲಕ ಸಾಮಾನ್ಯ ಜನರ ಮನಗೆದ್ದ ಸರ್ಕಾರ ಅನೇಕ ಸವಾಲುಗಳ ನಡುವೆ ಯೋಜನೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತಿದೆ. ಈವರೆಗೆ ಪಂಚಗ್ಯಾರಂಟಿ ಯೋಜನೆಗಳಿಗೆ 1,18,412 ಕೋಟಿ ರೂ. ಅನುದಾನವನ್ನು ಬಳಕೆ ಮಾಡುವ ಮೂಲಕ ಬಡವರ ಪರ ತನ್ನ ಕಾಳಜಿಯನ್ನು ದಾಖಲಿಸಿದೆ. ಫೆ.14ಕ್ಕೆ ಹಾವೇರಿ ಜಿಲ್ಲೆಯೊಂದರಲ್ಲೇ ಪಂಚ ಗ್ಯಾರಂಟಿಗಳಿಗೆ 3,253 ಕೋಟಿ ರೂ. ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪಿದೆ. ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯಮಟ್ಟದಲ್ಲಿ 1.24 ಕೋಟಿ ಮಹಿಳೆಯರಿಗೆ ಒಟ್ಟು 59,863 ಕೋಟಿ ರೂ. ವಿತರಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿ 3,85,631 ನೋಂದಾಯಿತ ಮಹಿಳೆಯರಿಗೆ ಇದುವರೆಗೆ 1,864.47 ಕೋಟಿ ರೂ. ತಲುಪಿದೆ. ನವೆಂಬರ್ 2025ರ ಬಾಕಿ ಹಣವು ಫೆಬ್ರವರಿ 16ರೊಳಗೆ ಜಮೆಯಾಗಲಿದೆ ಎಂದು ಸರ್ಕಾರ ತಿಳಿಸಿದೆ. ಗೃಹ ಜ್ಯೋತಿ ಯೋಜನೆ (ಉಚಿತ ವಿದ್ಯುತ್)ಯಡಿ ರಾಜ್ಯಮಟ್ಟದಲ್ಲಿ 1.65 ಕೋಟಿ ಕುಟುಂಬಗಳು ಈ ಯೋಜನೆಯ ಲಾಭ ಪಡೆಯುತ್ತಿದ್ದು, 22,839 ಕೋಟಿ ರೂ. ಸಬ್ಸಿಡಿ ನೀಡಲಾಗಿದೆ. ಹಾವೇರಿ ಜಿಲ್ಲೆಯಲ್ಲಿ 3,94,550 ಕುಟುಂಬಗಳು 2026ರ ಜನವರಿ ಅಂತ್ಯಕ್ಕೆ 402.28 ಕೋಟಿ ರೂ. ಮೌಲ್ಯದ ಉಚಿತ ವಿದ್ಯುತ್ ಪಡೆದಿವೆ. ಆಹಾರ ಭದ್ರತೆ ಭಾಗವಾಗಿರುವ ಅನ್ನಭಾಗ್ಯ ಯೋಜನೆಯಡಿ ರಾಜ್ಯಮಟ್ಟದಲ್ಲಿ ಡಿಬಿಟಿ (ನಗದು ವರ್ಗಾವಣೆ) ಮೂಲಕ ಇದುವರೆಗೆ 11,821.17 ಕೋಟಿ ರೂ. ಮೊತ್ತವನ್ನು 72.02 ಕೋಟಿ ಜನರಿಗೆ ತಲುಪಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿ 2025ರ ಫೆಬ್ರವರಿಯಿಂದ 2026ರ ಜನವರಿ ಅಂತ್ಯಕ್ಕೆ 77,757 ಮೆಟ್ರಿಕ್ ಟನ್ ಆಹಾರ ಧಾನ್ಯ ವಿತರಿಸಲಾಗಿದೆ (ವೆಚ್ಚ 177.32 ಕೋಟಿ ರೂ.). ಇದಲ್ಲದೆ, ನಗದು ವರ್ಗಾವಣೆಯಡಿ ಜಿಲ್ಲೆಗೆ 370.16 ಕೋಟಿ ರೂ. ನೀಡಲಾಗಿದೆ. ಶಕ್ತಿ ಯೋಜನೆಯಡಿ ಮಹಿಳೆಯರ ಓಡಾಟಕ್ಕೆ ವೇಗ ನೀಡಿರುವ ಈ ಯೋಜನೆಯು ಪ್ರವಾಸೋದ್ಯಮ ಮತ್ತು ವ್ಯಾಪಾರಕ್ಕೂ ಉತ್ತೇಜನ ನೀಡಿದೆ. ರಾಜ್ಯಮಟ್ಟದಲ್ಲಿ 2026ರ ಫೆ.12ರ ಅಂತ್ಯಕ್ಕೆ ರಾಜ್ಯಾದ್ಯಂತ 668 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಇದರ ಒಟ್ಟು ವೆಚ್ಚ 17,303 ಕೋಟಿ ರೂ. ಆಗಿದೆ. ಹಾವೇರಿ ಜಿಲ್ಲೆಯೊಂದರಲ್ಲೇ 17.02 ಕೋಟಿ ಮಹಿಳೆಯರು ಇದುವರೆಗೆ 515 ಕೋಟಿ ರೂ. ಮೌಲ್ಯದ ಉಚಿತ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ. ಜತೆಗೆ, ವಿಶೇಷವಾಗಿ, ಯುವ ನಿಧಿ (ನಿರುದ್ಯೋಗ ಭತ್ಯೆ) ಯೋಜನೆಯಡಿ ರಾಜ್ಯಮಟ್ಟದಲ್ಲಿ 3.08 ಲಕ್ಷ ನಿರುದ್ಯೋಗಿ ಯುವಕರಿಗೆ 912 ಕೋಟಿ ರೂ. ಭತ್ಯೆ ವಿತರಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿ 8,988 ಯುವಕರು ಈ ಯೋಜನೆಯಡಿ ನೋಂದಾಯಿತರಾಗಿದ್ದು, ನವೆಂಬರ್ 2025 ರವರೆಗೆ 26.69 ಕೋಟಿ ರೂ. ಸಹಾಯಧನ ಪಡೆದಿದ್ದಾರೆ. ಆ ಮೂಲಕ ರಾಜ್ಯದ ತಳಮಟ್ಟದಲ್ಲಿರುವ ಕುಟುಂಬಗಳಿಗೆ ಯೋಜನೆಗಳು ಸಾಕಷ್ಟು ನೆರವಾಗಿದ್ದು, ತಲಾದಾಯ ವೃದ್ಧಿಗೂ ಸಾಕಷ್ಟು ಸಹಕಾರಿಯಾಗಿದೆ.

ಅಲ್ಪಸಂಖ್ಯಾತರಿಗೆ ವರದಾನ : ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರ ಏಳ್ಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ಕಾಣಬಹುದಾಗಿದೆ. ಅಹಿಂದ ನಾಯಕರೆಂದೇ ಕರೆಸಿಕೊಳ್ಳುವ ಸಿದ್ದರಾಮಯ್ಯನವರ ಸರ್ಕಾರ ಅಲ್ಪಸಂಖ್ಯಾತರ ಕಲ್ಯಾಣಕ್ಕೆಂದು ನಾನಾ ಯೋಜನೆಗಳನ್ನು ಜನರಿಗೆ ಅರ್ಪಿಸಿದೆ. ಮಂಗಳೂರಿನಲ್ಲಿ ಹಜ್ ಭವನ ನಿರ್ಮಾಣ, 2024-25 ನೇ ಸಾಲಿನಲ್ಲಿ ಜೈನರ ಪ್ರಮುಖ ಧಾರ್ಮಿಕ ಸ್ಥಳಗಳ ಅಭಿವೃದ್ಧಿಗಾಗಿ ₹ 50 ಕೋಟಿ ಅನುದಾನ, ಅಲ್ಪಸಂಖ್ಯಾತರ 169 ವಸತಿ ಶಾಲೆ / ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 25,000 ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ, ಉಳ್ಳಾಲದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರಿಗಾಗಿ ವಸತಿ ಸಹಿತ ಪಿಯು ಕಾಲೇಜುಗಳ ಸ್ಥಾಪನೆ, 50 ಹೊಸ ಮೌಲಾನಾ ಆಜಾದ್ ಶಾಲೆಗಳು ಆರಂಭ, ಕೆಪಿಎಸ್ ಮಾದರಿಯಲ್ಲಿ ಉರ್ದು ಶಾಲೆಗಳ ಅಭಿವೃದ್ಧಿ, ಬೆಂಗಳೂರಿನಲ್ಲಿ ಹಜ್ ಭವನಕ್ಕೆ ಬರುವ ಪ್ರವಾಸಿಗರಿಗೆ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲು ಈ ಬಾರಿ ರೂ 10 ಕೋಟಿ ಅನುದಾನ ಸೇರಿದಂತೆ ನಾನಾ ಅನುದಾನಗಳ ಮೂಲಕ ಅಲ್ಪಸಂಖ್ಯಾತ ಸಮುದಾಯದ ಪ್ರಗತಿಗೆ ವಿಶೇಷ ಒತ್ತು ನೀಡಿದೆ.

ಗ್ಯಾರಂಟಿ ಸಾಧನೆಯ ವಿವರ

- ಗೃಹಲಕ್ಷ್ಮಿ : 1.24ಕೋಟಿ ಫಲಾನುಭವಿಗಳು, ರೂ.59,863 ಕೋಟಿ ವೆಚ್ಚ.(2025ರ ಅಕ್ಟೋಬರ್ ಅಂತ್ಯಕ್ಕೆ)
- ಗೃಹಜ್ಯೋತಿ : 1.65 ಕೋಟಿ ಫಲಾನುಭವಿಗಳು, ರೂ.22,839 ಕೋಟಿ ವೆಚ್ಚ.(2025ರ ಡಿಸೆಂಬರ್ ಅಂತ್ಯಕ್ಕೆ)
- ಯುವನಿಧಿ : 3.08ಕೋಟಿ ಯುವಕರು, ರೂ.912 ಕೋಟಿ ವೆಚ್ಚ(2025ರ ನವೆಂಬರ್ ಅಂತ್ಯಕ್ಕೆ)
- ಶಕ್ತಿ ಯೋಜನೆ : 668 ಕೋಟಿ ಫಲಾನುಭವಿಗಳು, 17,303ಕೋಟಿ ವೆಚ್ಚ(2026ರ ಫೆ.12ರ ಅಂತ್ಯಕ್ಕೆ)
- ಅನ್ನಭಾಗ್ಯ ಯೋಜನೆ : 72.02ಕೋಟಿ ಫಲಾನುಭವಿಗಳು, 11,821.17 ಕೋಟಿ ವೆಚ್ಚ(2024ರ ಡಿಸೆಂಬರ್ ಅಂತ್ಯಕ್ಕೆ)

ಸರ್ಕಾರಿ ಜಮೀನಿನ ರಕ್ಷಣೆ ಮತ್ತು ರೈತರಿಗೆ ನೆರವು

ಸರ್ಕಾರಿ ಭೂಮಿಯನ್ನು ಅತಿಕ್ರಮಣದಿಂದ ಮುಕ್ತಗೊಳಿಸಲು 'ಲ್ಯಾಂಡ್ ಬೀಟ್' ಎಂಬ ಆಧುನಿಕ ತಂತ್ರಜ್ಞಾನ ಬಳಸಲಾಗುತ್ತಿದೆ. ಇದರ ಮೂಲಕ 13.5 ಲಕ್ಷ ಎಕರೆ ಸರ್ಕಾರಿ ಜಮೀನನ್ನು ಸರ್ವೆ ಮಾಡಿ ಸಂರಕ್ಷಿಸಲಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲು 'ಪರಿಹಾರ 2.0' ಮೂಲಕ ಬರಗಾಲ ಮತ್ತು ನೆರೆಯ ಸಂದರ್ಭದಲ್ಲಿ 3,700 ಕೋಟಿಗೂ ಅಧಿಕ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ಜಮೆ ಮಾಡಲಾಗಿದೆ. ಒಟ್ಟಾರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವ ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡರ ಮಾರ್ಗದರ್ಶನದಲ್ಲಿ ರಾಜ್ಯವಿಂದು ಕಂದಾಯ ಸೇವೆಯಲ್ಲಿ ದೇಶಕ್ಕೆ ಮಾದರಿ ರಾಜ್ಯವಾಗಿ ಹೊರಹೊಮ್ಮುತ್ತಿದೆ. ಈ ಸಂಭ್ರಮಾಚರಣೆಯ ಭಾಗವಾಗಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶವನ್ನು ಹಾವೇರಿಯಲ್ಲಿ ಆಯೋಜಿಸಲಾಗುತ್ತಿರುವುದು ವಿಶೇಷ.

ಕೃಷಿ ಮತ್ತು ಕ್ಷೀರಾಭಿವೃದ್ಧಿ ಸಾಧನೆಗಳು

- ಹಾಲು ಉತ್ಪಾದನೆ: ರಾಜ್ಯದಲ್ಲಿ ವಾರ್ಷಿಕ ವಹಿವಾಟು ₹25,000 ಕೋಟಿ ಜೊತೆಗೆ ಪ್ರತಿದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ.
- ಕ್ಷೀರಧಾರೆ ಯೋಜನೆ: ಈ ಯೋಜನೆಯಡಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ₹5 ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.
- ಬೆಳೆ ಸಾಲ ವಿತರಣೆ: ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ಬಂಡವಾಳ ಒದಗಿಸಲು ಮಾರ್ಚ್ 2025ರ ಅಂತ್ಯಕ್ಕೆ 59.39 ಲಕ್ಷ ರೈತರಿಗೆ ಬೆಳೆ ಸಾಲ ವಿತರಣೆ ಮಾಡಲಾಗುತ್ತಿದೆ (ಒಟ್ಟು ಮೊತ್ತ ₹50,114 ಕೋಟಿ).
- ಬಡ್ಡಿ ಸಹಾಯಧನ: ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ ಯೋಜನೆಯಡಿ ₹63.47 ಲಕ್ಷ ರೈತರಿಗೆ ಆರ್ಥಿಕ ನೆರವು ನೀಡಲಾಗಿದೆ (ಒಟ್ಟು ಮೊತ್ತ ₹2,605 ಕೋಟಿ).
- ಮಹಿಳಾ ಸ್ವಾವಲಂಬನೆ: ಮಹಿಳೆಯರ ಬದುಕಿಗೆ ಬೆಂಬಲ ನೀಡಲು ಕಳೆದ ಎರಡು ವರ್ಷಗಳಲ್ಲಿ 42,341 ಸ್ವಸಹಾಯ ಗುಂಪುಗಳಿಗೆ ₹1,817 ಕೋಟಿ ಸಾಲ ವಿತರಣೆ ಮಾಡಲಾಗಿದೆ.
- ಬೆಂಬಲ ಬೆಲೆ ಯೋಜನೆ: 2024-25ನೇ ಸಾಲಿನಲ್ಲಿ ಸೂರ್ಯಕಾಂತಿ, ಶೇಂಗಾ, ಹೆಸರುಕಾಳು, ಭತ್ತ ಸೇರಿದಂತೆ ಹಲವು ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದ್ದು, ಒಟ್ಟು 2,56,433 ರೈತರು ಇದರ ಫಲಾನುಭವಿಗಳಾಗಿದ್ದಾರೆ.
- ಕಟ್ಟುನಿಟ್ಟಿನ ಕ್ರಮ: ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ ಇರಿಸಲಾಗಿದೆ.
- ಉದ್ಯೋಗಾವಕಾಶ: ಸಹಕಾರ ಸಂಘಗಳ ನೇಮಕಾತಿಗಳಲ್ಲಿ ಸಹಕಾರ ಡಿಪ್ಲೋಮಾ ಹಾಗೂ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುತ್ತಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರೈತಪರ ಕಾಳಜಿಯ ಸರ್ಕಾರ

ರಾಜ್ಯದ ಹಸಿವು ನೀಗಿಸುವ ಕೈಗಳಿಗೆ ಆಸರೆಯಾಗಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಹಲವಾರು ಕ್ರಾಂತಿಕಾರಿ ಯೋಜನೆಗಳನ್ನು ಘೋಷಿಸಿದೆ. ಕೃಷಿ ಕ್ಷೇತ್ರವನ್ನು ಬಲಪಡಿಸಲು ಮತ್ತು ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸರ್ಕಾರವು ಹೊಸ ಹೆಜ್ಜೆಗಳನ್ನು ಇರಿಸಿದೆ.

- ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ : ಬೀಜೋತ್ಪಾದನೆ, ರೈತ ಸಂಪರ್ಕ, ಕೃಷಿ ತರಬೇತಿ ಮತ್ತು ಜೈವಿಕ ಪ್ರಯೋಗಾಲಯಗಳನ್ನು ಒಂದೇ ಸೂರಿನಡಿ ತರಲು ಈ ಏಜೆನ್ಸಿಯನ್ನು ಸ್ಥಾಪಿಸಲಾಗಿದೆ.
- ಕೃಷಿ ಭಾಗ್ಯ ಯೋಜನೆ: ಹಿಂದಿನ ಸರ್ಕಾರ ಸ್ಥಗಿತಗೊಳಿಸಿದ್ದ ಜನಪ್ರಿಯ 'ಕೃಷಿ ಭಾಗ್ಯ' ಯೋಜನೆಯನ್ನು ಪ್ರಸ್ತುತ ಸರ್ಕಾರವು ಪುನರಾರಂಭಿಸಿದೆ.
- ಬೆಂಬಲ ಬೆಲೆ ಮತ್ತು ಮಾರುಕಟ್ಟೆ: ಸಿರಿಧಾನ್ಯ ಬೆಳೆಯಲು ಪ್ರೋತ್ಸಾಹ, ಸಕಾಲದಲ್ಲಿ ಬೆಂಬಲ ಬೆಲೆ ಖರೀದಿ ಕೇಂದ್ರಗಳ ಸ್ಥಾಪನೆ ಹಾಗೂ ಕಬ್ಬಿಗೆ ಪ್ರತಿ ಟನ್‌ಗೆ ₹3,300 ದರ ನಿಗದಿಪಡಿಸಲಾಗಿದೆ.
- ಇ-ಹರಾಜು ಪದ್ಧತಿ: ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವಂತೆ ಕ್ಯಾಲನೂರು ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ಇ-ಹರಾಜು ವ್ಯವಸ್ಥೆ ಜಾರಿಗೆ ತರಲಾಗಿದೆ.
- ವಿದ್ಯುತ್ ಸಬ್ಸಿಡಿ: ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ಸರ್ಕಾರವು ವಾರ್ಷಿಕವಾಗಿ ₹19,000 ಕೋಟಿ ಸಬ್ಸಿಡಿ ನೀಡುತ್ತಿದೆ.
- ಬಡ್ಡಿ ರಹಿತ ಸಾಲ: ₹5 ಲಕ್ಷದವರೆಗೆ ನೀಡಲಾಗುವ ಶೂನ್ಯ ಬಡ್ಡಿ ಸಾಲ ಸೌಲಭ್ಯವನ್ನು ಸಹಕಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಿಗೂ ವಿಸ್ತರಿಸಲಾಗಿದೆ.
- ಬೆಳೆ ಹಾನಿ ಪರಿಹಾರ: ಭಾರೀ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ 12.82 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ಹೆಚ್ಚಿನ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ.
- ಕೃಷ್ಣಾ ಮೇಲ್ದಂಡೆ ಯೋಜನೆಗೆ ಜಮೀನು ನೀಡಿದ ರೈತರಿಗೆ ಎಕರೆಗೆ ₹40 ಲಕ್ಷ (ನೀರಾವರಿ ಜಮೀನು) ಮತ್ತು ₹30 ಲಕ್ಷ (ಖುಷ್ಕಿ ಭೂಮಿ) ಪರಿಹಾರ ಘೋಷಿಸಲಾಗಿದೆ. ಅಲ್ಲದೆ, ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣದ ಸುತ್ತಮುತ್ತಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವ ಮೂಲಕ ರೈತರ ಪರ ನಿಲುವನ್ನು ಸರ್ಕಾರ ಪ್ರಕಟಿಸಿದೆ.
- ಸಾವಯವ ಕೃಷಿಗೆ ಉತ್ತೇಜನ ನೀಡಲು 15 ಪ್ರಾಂತೀಯ ಒಕ್ಕೂಟಗಳ ರಚನೆ ಮತ್ತು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಕೇಂದ್ರಗಳ ಸ್ಥಾಪನೆಗೂ ಸರ್ಕಾರ ಒತ್ತು ನೀಡಿದೆ. ಒಟ್ಟಾರೆಯಾಗಿ, ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಮತೋಲನಗೊಳಿಸುವ ಮೂಲಕ ಸರ್ಕಾರವು ರೈತರ ವಿಶ್ವಾಸ ಗಳಿಸಲು ಮುಂದಾಗಿದೆ.

ನನ್ನ ಆಸ್ತಿ ಆಂದೋಲನ

ರಾಜ್ಯಾದ್ಯಂತ ಪೌತಿ ಖಾತೆಗೆ ಜನಸಾಮಾನ್ಯರು ಕಂದಾಯ ಇಲಾಖೆಗೆ ಅಲೆಯುವುದನ್ನು ತಪ್ಪಿಸುವ ಸದುದ್ದೇಶದಿಂದಾಗಿ ಸರ್ಕಾರ ನನ್ನ ಆಸ್ತಿ ಯೋಜನೆಯನ್ನು ಆರಂಭ ಮಾಡಿದೆ. ಈ ಯೋಜನೆಯಡಿ 'ಇ-ಪೌತಿ' ಆಂದೋಲನ ಸಾಕಷ್ಟು ಯಶಸ್ಸು ಕಂಡು, ಲಕ್ಷಾಂತರ ಜನರಿಗೆ ನೆರವಾಗಿದೆ. ವಿಶೇಷವಾಗಿ ರೈತಾಪಿ ವರ್ಗದ ಜಮೀನುಗಳ ಖಾತೆಗಳಿಗೆ ಸಾಕಷ್ಟು ನೆರವಾಗಿದೆ. ಈ ಆಂದೋಲನದ ಭಾಗವಾಗಿ ರೈತರು ಕಂದಾಯ ಇಲಾಖೆಗೆ ಅಲೆಯದಂತೆ ಸೌಕರ್ಯ ತಪ್ಪಿಸಲು ನನ್ನ ಆಸ್ತಿ ಯೋಜನೆಯಡಿ ಜಮೀನುಗಳಿಗೆ ಆಧಾರ್ ಜೋಡಣೆಯನ್ನು ಮಾಡಲಾಗಿದೆ. ಆಧಾರ್ ಜೋಡಣೆಯಿಂದ ಗುರುತಿಸಲಾದ 50 ಲಕ್ಷ ಪೌತಿ ಪ್ರಕರಣಗಳಲ್ಲಿ, ಗ್ರಾಮ ಆಡಳಿತ ಅಧಿಕಾರಿಗಳೇ ನೇರವಾಗಿ ಜನರ ಮನೆಗೆ ತೆರಳಿ ಪೌತಿ ಖಾತೆ ಮಾಡುತ್ತಿದ್ದಾರೆ. ಆ ಮೂಲಕ ಈವರೆಗೆ 13 ಲಕ್ಷ ಪ್ರಕರಣಗಳನ್ನು 'ಇ-ಪೌತಿ' ಆಂದೋಲನದ ಮೂಲಕ ವಿಲೇವಾರಿ ಮಾಡಲಾಗಿದೆ. ಜತೆಗೆ, ಕಂದಾಯ ನ್ಯಾಯಾಲಯಗಳನ್ನು ಆನ್‌ಲೈನ್ ವ್ಯಾಪ್ತಿಗೆ ತರಲಾಗಿದ್ದು, ಒಟ್ಟು 2,99,610 ಪ್ರಕರಣಗಳ ಪೈಕಿ 2,69,132 ಪ್ರಕರಣಗಳನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ. ಈ ಕ್ರಮಗಳಿಂದಾಗಿ ಜನರು ಭೂ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಚೇರಿ ಅಲೆದಾಟಗಳಿಗೆ ಮುಕ್ತಿ ಸಿಗಲಿದೆ.

ಆರೋಗ್ಯಕ್ಕೊಂದು ಪ್ರತ್ಯೇಕ ಗ್ಯಾರಂಟಿ



ರಾಜ್ಯದಲ್ಲಿ ಬಡತನ ನಿವಾರಣೆ, ಆರ್ಥಿಕ ಪ್ರಗತಿಗೆ ಸಂಬಂಧಿಸಿದಂತೆ ಕ್ರಾಂತಿಕಾರಕ ಬದಲಾವಣೆಗೆ ಪಂಚಗ್ಯಾರಂಟಿಗಳು ಸಾಕಷ್ಟು ಕೊಡುಗೆ ನೀಡುತ್ತಿವೆ. ಈ ನಡುವೆ ರಾಜ್ಯ ಸರ್ಕಾರದಿಂದ ಆರೋಗ್ಯಕ್ಕೂ ಪ್ರತ್ಯೇಕ ಗ್ಯಾರಂಟಿ ಯೋಜನೆಯೊಂದು ಸೇರ್ಪಡೆಯಾಗುತ್ತಿದೆ. ಹೌದು, ಆರೋಗ್ಯ ಕ್ಷೇತ್ರದಲ್ಲಿ ಬಡವರಿಗೆ ನೆರವಾಗುವ ಅನೇಕ ಯೋಜನೆಗಳನ್ನು ಗ್ಯಾರಂಟಿ ಸ್ವರೂಪದಲ್ಲಿ ರಾಜ್ಯದ ಜನರಿಗೆ ಸರ್ಕಾರ ಅರ್ಪಿಸುತ್ತಿದೆ. ಹೃದಯಾಘಾತ ತಡೆಗೆ ಡಾ. ಪುನೀತ್ ರಾಜ್‌ಕುಮಾರ್ ಹದಯಜ್ಯೋತಿ ಯೋಜನೆ ಜಾರಿ, ಅಂಧತ್ವ ಮುಕ್ತ ಕರ್ನಾಟಕ ನಿರ್ಮಾಣಕ್ಕಾಗಿ ಆಶಾಕಿರಣ ಯೋಜನೆ, ಬೆಂಗಳೂರು ನಗರದ ಸರ್ಕಾರಿ ಆಸ್ಪತ್ರೆಗಳಿಗೆ ಪೌಷ್ಟಿಕ ಆಹಾರ ಪೂರೈಕೆ, ತಾಯಿ ಮತ್ತು ಶಿಶು ಮರಣ ಇಳಿಕೆಗೆ ತಾಲ್ಲೂಕು ಆಸ್ಪತ್ರೆಗಳಲ್ಲಿ ತ್ರಿವಳಿ ತಜ್ಞರ ನಿಯೋಜನೆ, ಮೂತ್ರಪಿಂಡ, ಹೃದಯ, ಯಕೃತ್ ಮತ್ತು ಬಹು ಅಂಗಾಂಗ ವೈಫಲ್ಯಕ್ಕೆ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತ ಕಸಿ ಚಿಕಿತ್ಸೆ, ದೇಶದಲ್ಲೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳ ನೌಕರರು, ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ₹.5 ಲಕ್ಷದ ವರೆಗೆ ನಗದು ರಹಿತ ಚಿಕಿತ್ಸೆಯ ಸೌಲಭ್ಯ, ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ 24x7 ಆರೋಗ್ಯ ಸೇವೆ, ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿಕೇಂದ್ರಗಳ ಸ್ಥಾಪನೆ, ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟಲು 14 ವರ್ಷದ ಹೆಣ್ಣು ಮಕ್ಕಳಿಗೆ HPV ಲಸಿಕೆ ಸೇರಿದಂತೆ ನಾನಾ ಯೋಜನೆಗಳ ಮೂಲಕ ಜನಾರೋಗ್ಯಕ್ಕೆ ಸರ್ಕಾರ ಅಭಯ ನೀಡುತ್ತಿದೆ.

ಹಾವೇರಿ ಕಾರ್ಯಕ್ರಮದ ವಿವರ

ಎಲ್ಲಿ? : ಹಾವೇರಿ | ದಿನಾಂಕ : ಫೆ.14, ಶನಿವಾರ | ಬೆಳಗ್ಗೆ 11ಕ್ಕೆ

ಏನಿದು ಕಾರ್ಯಕ್ರಮ? ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ

ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದ ಉದ್ದೇಶವೇನು?

ಉದ್ದೇಶ

ಜನಾನುರಾಗಿ ಮುಖ್ಯಮಂತ್ರಿಗಳಿಗೆ ಮನದಾಳದ ಅಭಿನಂದನೆಗಳು

ಗೌರವಾನ್ವಿತ ಶ್ರೀಸಿದ್ದರಾಮಯ್ಯನವರೇ,

2026ರ ಜ.6ಕ್ಕೆ ಯಶಸ್ವಿಯಾಗಿ 2793 ದಿನಗಳನ್ನು ಪೂರೈಸುವ ಮೂಲಕ ರಾಜ್ಯದ ಇತಿಹಾಸದಲ್ಲಿ ಅತಿಹೆಚ್ಚು ಅವಧಿಗೆ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ ಕೀರ್ತಿಗೆ ಪಾತ್ರರಾಗಿ, ಮುಂದುವರೆಯುತ್ತಿರುವುದು ಹರ್ಷದ ಸಂಗತಿಯಾಗಿದೆ. ಇದೇ ರೀತಿ 2023ರ ಮೇ.20ರಂದು ಎರಡನೇ ಬಾರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ತಾವು, 2026ರ ಫೆ.14ಕ್ಕೆ 1000 ದಿನಗಳನ್ನು ಯಶಸ್ವಿಯಾಗಿ ಪೂರೈಸಿರುವುದು ರಾಜ್ಯದ ಜನತೆಗೆ ಹೆಮ್ಮೆಯ ವಿಚಾರವಾಗಿದೆ. ಭಾಗ್ಯಗಳ ಸರದಾರ ಎಂದೇ ಖ್ಯಾತಿ ಪಡೆದಿರುವ ತಮಗೆ ಈ ಶುಭ ಸಂದರ್ಭದಲ್ಲಿ ತುಂಬು ಹೃದಯದ ಅಭಿನಂದನೆಗಳು.

ಮೂಲತಃ ಬಡ ರೈತ ಕುಟುಂಬದಿಂದ ಬಂದಿರುವ ತಾವು ಹಸಿವಿನ ಬೇಗೆಯನ್ನು ಸ್ವತಃ ಅನುಭವಿಸಿದವರು. ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ 24 ಗಂಟೆಗಳೊಳಗೆ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದು ಹಸಿವು ಮುಕ್ತ ಕರ್ನಾಟಕ ನಿರ್ಮಾಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟವರು. ಮುಖ್ಯವಾಗಿ ದೇಶದಲ್ಲಿ ಆಹಾರ ಭದ್ರತಾ ಕಾಯ್ದೆ ಜಾರಿಗೆ ಬರಲು ನಿಮ್ಮ ವಿಚಾರ ಧಾರೆ ಪ್ರಮುಖ ಕಾರಣವಾಗಿದೆ. "ಜನಸೇವೆಯೇ ಜನಾರ್ಧನ ಸೇವೆ" ಎಂಬ ತತ್ವವನ್ನು ಜೀವನದ ಮಾರ್ಗದರ್ಶಕ ತತ್ವವನ್ನಾಗಿಸಿಕೊಂಡು, ರಾಜಕೀಯ ಬದುಕನ್ನು ಸಾಗಿಸುತ್ತಾ, 1983ರಲ್ಲಿ ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ, ಅಲ್ಲಿಂದ ಇಂದಿನವರೆಗೆ ಸತತವಾಗಿ ಎಂಟು ಬಾರಿ ಶಾಸಕರಾಗಿ, (ಒಂಭತ್ತು ಬಾರಿ ಆಯ್ಕೆಯಾಗಿ), ಸಚಿವರಾಗಿ, ಉಪಮುಖ್ಯಮಂತ್ರಿಗಳಾಗಿ, ವಿರೋಧ ಪಕ್ಷದ ನಾಯಕರಾಗಿ, ಹಾಗೂ ಮುಖ್ಯಮಂತ್ರಿಗಳಾಗಿ ಜನಸೇವೆಯಲ್ಲಿ ತೊಡಗಿಸಿಕೊಂಡಿರುವ ಕಾಯಕಯೋಗಿ.

ವಿಶೇಷವಾಗಿ ತಾವು ತಮ್ಮ ರಾಜಕೀಯ ಜೀವನದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಕಾಯಕ ತತ್ವಗಳನ್ನು ಅಳವಡಿಸಿಕೊಂಡು ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದೀರಿ. ವಿಶೇಷವಾಗಿ ಬಸವ ಜಯಂತಿಯಂದು ಮೊದಲ ಬಾರಿಗೆ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವುದು ಹೆಮ್ಮೆಯ ವಿಷಯ. ಕರ್ನಾಟಕ ಸರ್ಕಾರದಿಂದ 'ವಿಶ್ವಗುರು ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ" ಎಂದು ಘೋಷಿಸುವ ಮೂಲಕ ರಾಜ್ಯಾದ್ಯಂತ ಬಸವತತ್ವ ಪಸರಿಸುವಂತೆ ಮಾಡಿದ್ದೀರಿ. ಜತೆಗೆ, ವಿಧಾನಸೌಧದಲ್ಲಿ ಮತ್ತು ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಅನಾವರಣಗೊಳಿಸಲಾಗಿದೆ. 'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ, ಇವನಮ್ಮವ, ಇವನಮ್ಮವ, ಇವನಮ್ಮವನೆಂದಿನಿಸಯ್ಯಾ. ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ' ಎಂಬ ವಚನದ ಪರಿಪಾಲಕರಾಗಿ ತಮ್ಮ ಜೀವನದುದ್ದಕ್ಕೂ ಬಸವಣ್ಣನವರ ನುಡಿಗಳನ್ನು ಅಳವಡಿಸಿಕೊಂಡು ಎಲ್ಲಾ ಜಾತಿ ಮತ ಪಂಥಗಳ ಜನರೊಟ್ಟಿಗೆ ನಡೆಯುತ್ತಿರುವದು ನಿಮ್ಮ ಜಾತ್ಯಾತೀತ ಮನೋಭಾವನೆಯನ್ನು ತೋರುತ್ತದೆ. ಬಸವ ತತ್ವದ ಜೊತೆಗೆ ಅಂಬೇಡ್ಕರ್ ಹಾಗೂ ಸಂವಿಧಾನದ ಮೇಲೆ ಅಪಾರ ನಂಬಿಕೆ ಇಟ್ಟವರು ನೀವು. ಭಾರತದ ಸಂವಿಧಾನ ಶಿಲ್ಪಿ ಮತ್ತು ಅರ್ಥಶಾಸ್ತ್ರಜ್ಞರಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಸ್ಮರಣಾರ್ಥ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ (BASE) ವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಜತೆಗೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆ ಅನುಗುಣವಾಗಿ ಆಯವ್ಯಯದಲ್ಲಿ ಅಭಿವೃದ್ಧಿಗಾಗಿ ಹಾಗು ಮೀಸಲಾತಿ ಮಾಡಲಾಗಿದೆ. ಇದು ದಲಿತ ಪರ ನಿಮ್ಮ ಕಾಳಜಿಗೆ ನಿದರ್ಶನವಾಗಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 136 ಸದಸ್ಯರ ಬಲದೊಂದಿಗೆ ಅಧಿಕಾರಕ್ಕೆ ಬರಲು ನಿಮ್ಮ ಮಾಸ್ ಲೀಡರ್ ಶಿಪ್ ಪ್ರಮುಖ ಕಾರಣವಾಗಿದೆ. ಅದೇ ರೀತಿ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಅವರ ಸಂಘಟನೆ ಚಾತುರ್ಯ, ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನ ಹಾಗೂ ಸನ್ಮಾನ್ಯ ಶ್ರೀ ರಾಹುಲ್ ಗಾಂಧಿಯವರ ವಿಚಾರಧಾರೆಗಳು ಕೂಡಾ ಮಹತ್ವಪೂರ್ಣವಾದವುಗಳು. ಸಂಡೂರು, ಶಿಗ್ಗಾವಿ ಮತ್ತು ಚನ್ನಪಟ್ಟಣ ಉಪಚುನಾವಣೆಯಲ್ಲಿ ನಿಮ್ಮ ಜನಪರ ಯೋಜನೆಗಳನ್ನು ಮೆಚ್ಚಿ, ಆ ಮುಂಚೆ ಬಿಜೆಪಿ ಹಾಗೂ ಜೆಡಿಎಸ್ ಹಿಡಿತದಲ್ಲಿದ್ದ ಕ್ಷೇತ್ರಗಳಲ್ಲಿಯೂ ಕೂಡಾ ಕಾಂಗ್ರೆಸ್ ಪಕ್ಷಕ್ಕೆ ಜನಮನ್ನಣೆ ದೊರೆತಿದ್ದು ಮರೆಯುವಂತಿಲ್ಲ. ಎರಡನೇ ಬಾರಿ ಅಧಿಕಾರಕ್ಕೆ ಬಂದ ತಕ್ಷಣ ಪಂಚ ಗ್ಯಾರಂಟಿ ಯೋಜನೆಗಳ ಐತಿಹಾಸಿಕ ನಿರ್ಧಾರ ಕೈಗೊಂಡು ಅನ್ನಭಾಗ್ಯ ಗೃಹಲಕ್ಷ್ಮಿ ಗ್ರಹಜ್ಯೋತಿ, ಶಕ್ತಿ ಮತ್ತು ಯುವನಿಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೀರಿ. ಗೃಹಲಕ್ಷ್ಮಿ ಯೋಜನೆಯಡಿ 1.25 ಕೋಟಿ ಫಲಾನುಭವಿಗಳಿಗೆ ಪ್ರತಿ ತಿಂಗಳು ರೂ. 2,000ನಂತೆ ಇದುವರೆಗೆ ರೂ.47,773 ಕೋಟಿ ವೆಚ್ಚ ಮಾಡಲಾಗಿದೆ. ಗೃಹಜ್ಯೋತಿ ಯೋಜನೆಯಡಿ 1.68 ಕೋಟಿ ಫಲಾನುಭವಿಗಳಿಗೆ ರೂ.18,900 ಕೋಟಿ ವೆಚ್ಚವಾಗಿದೆ. ಅನ್ನಭಾಗ್ಯ ಯೋಜನೆಯಡಿ 4.4 ಕೋಟಿ ಫಲಾನುಭವಿಗಳು ಪ್ರತಿ ತಿಂಗಳು 10 ಕೆಜಿ ಅಕ್ಕಿ ಪಡೆಯುತ್ತಿದ್ದಾರೆ. ಮುಂದಿನ ತಿಂಗಳಿಂದ ಪ್ರತಿ ವ್ಯಕ್ತಿಗೆ 5 ಕೆಜಿ ಅಕ್ಕಿಯ ಜೊತೆಗೆ 1 ಕಜಿ ತೊಗರಿಬೇಳೆ, 1 ಕೆಜಿ ಕಡಲೆಬೇಳೆ, 1 ಕೆಜಿ ಸಕ್ಕರೆ, 1 ಕೆಜಿ ಉಪ್ಪು ಹಾಗೂ 1 ಕೆಜಿ ಅಡಿಗೆ ಎಣ್ಣೆ ಕಿಟ್ ನೀಡುವ ಯೋಜನೆ ರೂಪಿಸಲಾಗಿದೆ. ಶಕ್ತಿ ಯೋಜನೆಯಡಿ ಕಳೆದ ಎರಡೂವರೆ ವರ್ಷಗಳಲ್ಲಿ ಸುಮಾರು 680 ಕೋಟಿ ಮಹಿಳೆಯರು ಉಚಿತ ಬಸ್ ಪ್ರಯಾಣ ಮಾಡಿದ್ದು ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಪುಸ್ತಕದಲ್ಲಿ ದಾಖಲಾಗಿದೆ. ಇದರ ವಚ್ಚ ರೂ.8,815 ಕೋಟಿ. ಇದಲ್ಲದೇ, ಯುವನಿಧಿ ಯೋಜನೆಯಡಿ 3.7 ಲಕ್ಷ ಫಲಾನುಭವಿಗಳಿಗೆ ರೂ.4375 ಕೋಟಿ ವೆಚ್ಚ ಮಾಡಲಾಗಿದೆ. ಈ ಎಲ್ಲಾ ಯೋಜನೆಗಳಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸಿಕೊಂಡು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

2024-25ರ ಆರ್ಥಿಕ ಸಮೀಕ್ಷೆಯ ಪ್ರಕಾರ ಕರ್ನಾಟಕವು ಭಾರತದಲ್ಲೇ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ರಾಜ್ಯವಾಗಿ ಹೊರಹೊಮ್ಮಿದ್ದು, ವಾರ್ಷಿಕ ತಲಾ ಆದಾಯ ರೂ.2,04,605 ದಾಟಿದೆ. ಕಳೆದ ದಶಕದಲ್ಲಿ ಶೇ. 93.6ರಷ್ಟು ಬೆಳವಣಿಗೆ ಸಾಧಿಸಿರುವ ರಾಜ್ಯವು ದೇಶದ ಸರಾಸರಿ ಆದಾಯಕ್ಕಿಂತ ಹೆಚ್ಚಿನ ಸಾಧನೆ ದಾಖಲಿಸಿದೆ. ಆದರೆ ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರಗಳು ಇಂತಹ ಯೋಜನೆಗಳನ್ನು ಭರವಸೆ ನೀಡಿದರೂ ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿವೆ. ಕೃಷ್ಣ ಮೇಲ್ದಂಡೆ ಯೋಜನೆ (UKP3) ಅಡಿಯಲ್ಲಿ ಕೃಷ್ಣ ವಾಟರ್ ಟ್ರಿಬ್ಯುನಲ್-2ನ 166 ಟಿಎಂಸಿ ನೀರಿನ ಸದ್ಬಳಕೆಗೆ 1 ಲಕ್ಷ 32 ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಒಣಭೂಮಿಗೆ 35 ಲಕ್ಷ ಹಾಗೂ ನೀರಾವರಿ ಜಮೀನಿಗೆ ₹40 ಲಕ್ಷ ಪರಿಹಾರ ನೀಡಲು ನಿರ್ಧರಿಸಿರುವುದು ಒಂದು ಐತಿಹಾಸಿಕ ನಿರ್ಧಾರ. ಭದ್ರಾ ಮೇಲ್ದಂಡ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ರೂ.5,300 ಕೋಟಿ ನೀಡುವುದಾಗಿ ಬಜೆಟ್‌ನಲ್ಲಿ ಘೋಷಿಸಿದರೂ ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ. ಹಾಗೂ 15ನೇ ಹಣಕಾಸಿನ ಆಯೋಗದ ಶಿಫಾರಸ್ಸಿನಂತೆ ರೂ.11,495 ಕೋಟಿಗಳ ವಿಶೇಷ ಅನುದಾನ ಇದುವರೆಗೂ ನೀಡಿರುವುದಿಲ್ಲ. ಇದಕ್ಕೆಲ್ಲಾ ಕೇಂದ್ರ ಸರ್ಕಾರದ ಅಸಹಕಾರವಿದ್ದರೂ ರಾಜ್ಯದ ಅಭಿವೃದ್ಧಿಗೆ ಹಣಕಾಸಿನ ತೊಂದರೆಯಾಗದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೀರಿ. ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ರೂ.5,000 ಕೋಟಿ ಅನುದಾನ ನೀಡುತ್ತಿದ್ದಾರೆ. ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಸುಮಾರು 100 ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಎಸ್‌ಸಿ/ಎಸ್‌ಟಿ ಜನರಿಗೆ ಜನಸಂಖ್ಯೆ ಆಧಾರಿತ ಅನುದಾನ ನೀಡಲು ಕಾನೂನು ತಂದು ರೂ.43 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ಐತಿಹಾಸಿಕ. ಆದರೆ ಕೇಂದ್ರ ಸರ್ಕಾರ ಈ ಯೋಜನೆಗೆ ಹಣ ಮೀಸಲಿಡದೆ ಅನ್ಯಾಯ ಮಾಡುತ್ತಿದೆ.

ಕೆಎಂಎಫ್ ಅಭಿವೃದ್ಧಿಗೆ ಮುಖ್ಯಮಂತ್ರಿಗಳಾದ ತಾವು ಅಪಾರ ಕೊಡುಗೆ ನೀಡುತ್ತಿದ್ದೀರಿ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ.15 ಪ್ರೋತ್ಸಾಹಧನ ನೀಡುವ ಮೂಲಕ ರೈತರ ಆದಾಯ ಹೆಚ್ಚಿಸಿರುವಿರಿ. ಹಾಲು ಉತ್ಪಾದಕ ಸಹಕಾರಿ ಸಂಘಗಳ ಮೂಲಸೌಕರ್ಯ ಸುಧಾರಣೆ ಮತ್ತು ನೇರ ಪಾವತಿ (DBT) ವ್ಯವಸ್ಥೆ ಬಲಪಡಿಸಲಾಗಿದೆ. ಗ್ರಾಮೀಣ ಮಹಿಳೆಯರು ಮತ್ತು ಹಾಲು ಉತ್ಪಾದಕರಿಗೆ ವಿವಿಧ ಬೆಂಬಲ ಯೋಜನೆಗಳಿಂದ ರೈತರ ಆರ್ಥಿಕ ಸ್ಥಿತಿ ಸುಧಾರಿಸಿದೆ. 2013ರಿಂದ 2018ರವರೆಗೆ ಹಾಗೂ 2023ರಿಂದ ಇಂದಿನವರೆಗೆ ಆಡಳಿತದಲ್ಲಿ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಬಡವರ, ಮಹಿಳೆಯರ, ದೀನದುರ್ಬಲರ, ರೈತರ ಹಾಗೂ ಯುವಕರ ಧ್ವನಿಯಾಗಿ ರಾಜ್ಯವನ್ನು ಮುನ್ನಡೆಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಕೇಂದ್ರ ಸರ್ಕಾರದ ಅಸಹಕಾರ, ಮಲತಾಯಿ ಧೋರಣೆ ಇದ್ದರೂ ಹಾಗು ಪ್ರತಿ ವರ್ಷಕ್ಕೆ 2.5 ಲಕ್ಷ ಜನ ಬೆಂಗಳೂರು ನಗರಕ್ಕೆ ವಲಸೆ ಬರುತ್ತಿರುವುದರಿಂದಾಗಿ ಅನಿಯಂತ್ರಿತವಾಗಿ ಬೆಳೆಯುತ್ತಿರುವ ಬೆಂಗಳೂರಿನ ಅಭಿವೃದ್ಧಿಗೆ ರೂ.6,000 ಕೋಟಿ ಹಾಗೂ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ರೂ.5,400 ಕೋಟಿ ವಿಶೇಷ ಅನುದಾನವನ್ನು ಕೇಂದ್ರ ಸರ್ಕಾರ ನೀಡದಿದ್ದರೂ ಸಹ ತಾವು ಸಮರ್ಥವಾಗಿ ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ. ದೇಶದಲ್ಲೇ ದಾಖಲೆಯ ಅತಿ ಹೆಚ್ಚು 16 ಬಜೆಟ್ ಮಂಡಿಸಿದ ಕೀರ್ತಿ ತಮಗೇ ಸಲ್ಲುತ್ತದೆ. ಮುಂದಿನ ತಿಂಗಳು ದಾಖಲೆಯ 17ನೇ ಬಜೆಟ್ ಮಂಡಿಸಲು ಸಿದ್ಧರಾಗಿದ್ದು, ರಾಜ್ಯದ ಜನತೆ ಅಪಾರ ಭರವಸೆ ಇಟ್ಟುಕೊಂಡಿದ್ದಾರೆ. ಈ ಬಜೆಟ್ ಸಿದ್ಧತೆಯ ಭಾಗವಾಗಿ ನಾನು ಕೂಡಾ ತಮಗೆ ಆರ್ಥಿಕ ಸಲಹೆಗಾರರಾಗಿ ಭಾಗವಹಿಸುತ್ತಿರುವುದು ನನಗೂ ಹೆಮ್ಮೆಯ ಸಂಗತಿ.

ಇಂದು 1000 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ ಈ ಶುಭ ಸಂದರ್ಭದಲ್ಲಿ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮುಂದಿನ ಎರಡುವರೆ ವರ್ಷಗಳ ಕಾಲ ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಿರೆಂಬ ಅಚಲ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಧನ್ಯವಾದಗಳನ್ನು ಅರ್ಪಿಸುತ್ತೇನೆ.

-ಶ್ರೀ ಬಸವರಾಜ ರಾಯರೆಡ್ಡಿ,
ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು,
ಕರ್ನಾಟಕ ಸರ್ಕಾರ.

ಮೊಬೈಲ್ ಲೋಕದ ಸರಿ, ತಪ್ಪಿನ ಲೆಕ್ಕಾಚಾರ

ಕೆಲ ವರ್ಷಗಳ ಹಿಂದೆ ಕಾಣಿಸಿಕೊಂಡ ಕೊರೊನಾ ಜಗತ್ತಿನ ದಿಕ್ಕನ್ನು ಬದಲಿಸಿತು. ಅದರಿಂದ ಹಲವರ ಬದುಕಿನಲ್ಲಿ ಏರಿಳಿತಗಳಾದವು. ವಿಶೇಷವಾಗಿ ಸಣ್ಣಪುಟ್ಟ ವಹಿವಾಟು ನಡೆಸಿಕೊಂಡಿದ್ದ ಬಡ ಕುಟುಂಬಗಳು ಬೀದಿಗೆ ಬಿದ್ದವು. ಅಂಥದ್ದೇ ಒಂದು ಕುಟುಂಬದ ಕಥೆಯನ್ನು ಹೊಂದಿರುವ ಚಿತ್ರ 'ಮಗ್ಗಿ ಪುಸ್ತಕ'. ಗರ್ಭಿಣಿಯೊಬ್ಬಳು ಬೀದಿಗೆ ಬೀಳುತ್ತಾಳೆ. ಆಕೆಗೊಂದು ಹೆಣ್ಣುಮಗು ಜನಿಸುತ್ತದೆ. ಆ ಮಗುವೇ ಕಥಾನಾಯಕಿ ಭಾಗ್ಯ. ಆಕೆಯ ಕಥೆಯಿಂದ ಸಿನಿಮಾ ಪ್ರಾರಂಭವಾಗುತ್ತದೆ.

ಪ್ರಾರಂಭದಲ್ಲಿ ಇದೊಂದು ಮಹಿಳಾ ಪ್ರಧಾನ ಸಿನಿಮಾವಿರಬಹುದು ಎನ್ನಿಸಿದರೂ, ನಂತರ ಇಡೀ ಸಿನಿಮಾ ಕೊರೊನಾ ಕಾಲಘಟ್ಟ ಮತ್ತು ಮೊಬೈಲ್‌ಗೆ ಸಂಬಂಧಿಸಿದ ಕಥೆಯಾಗಿ ಪರಿವರ್ತನೆಗೊಳ್ಳುತ್ತದೆ. ಕೊರೊನಾ ಸಮಯದಲ್ಲಿ ಭಾಗ್ಯಳ ಕುಟುಂಬ ಅನುಭವಿಸುವ ನೋವು, ಸಂಕಟಗಳನ್ನು ಹೇಳಲಾಗಿದೆ. ಜತೆಗೆ ಆನ್‌ಲೈನ್ ತರಗತಿಯಿಂದ ಭಾಗ್ಯಳ ಮಗಳ ಕೈಗೊಂದು ಮೊಬೈಲ್ ಬರುತ್ತದೆ. ಒಂದು ಬಡ ಕುಟುಂಬ ಮೊಬೈಲ್ ಖರೀದಿಸಲು ಎಷ್ಟೆಲ್ಲ ಕಷ್ಟಪಡುತ್ತದೆ ಎಂಬುದನ್ನೂ ತೋರಿಸಲಾಗಿದೆ.

ಮೊಬೈಲ್‌ನಿಂದ ಎಷ್ಟು ಉಪಯೋಗವಿದೆಯೋ ಅಷ್ಟೇ ಅಪಾಯವೂ ಇದೆ. ಬಡ ಕುಟುಂಬದ ಹೆಣ್ಣುಮಗುವೊಂದು ಮೊಬೈಲ್‌ನಿಂದ ಏನೆಲ್ಲ ಅಪಾಯಕ್ಕೆ ಸಿಲುಕಿಕೊಳ್ಳುತ್ತಾಳೆ, ಅದರಿಂದ ಕುಟುಂಬದ ಮೇಲೆ ಯಾವ ರೀತಿ ಪರಿಣಾಮಗಳಾಗುತ್ತವೆ ಎಂಬುದೇ ನಂತರದ ಕಥೆ. ಆ ಮೊಬೈಲ್‌ಗೆ ಬರುವ ಕರೆಗಳ ಸಂಖ್ಯೆಗೂ, ಮಗ್ಗಿ ಪುಸ್ತಕಕ್ಕೂ ಸಂಬಂಧ ಕಲ್ಪಿಸಿ ಶೀರ್ಷಿಕೆಯನ್ನು ಸಮರ್ಥಿಸಿಕೊಳ್ಳುವ ಯತ್ನವನ್ನು ನಿರ್ದೇಶಕರು ಮಾಡಿದ್ದಾರೆ.

ಕನ್ನಡದ ಅಕ್ಷರಮಾಲೆ, ಸಂಖ್ಯೆಗಳು, ಶ್ಲೋಕಗಳು, ಕಾಗುಣಿತ, ಸರಳ ಗಣಿತ...ಎಲ್ಲವೂ ಮಗ್ಗಿ ಪುಸ್ತಕದಲ್ಲಿ ಅಡಕವಾಗಿರುತ್ತಿತ್ತು. ಅದನ್ನು ನೆನಪಿಸಿಕೊಳ್ಳಲೆಂಬಂತೆ ರೂಪಕವಾಗಿ ಮಗ್ಗಿ ಪುಸ್ತಕ ಅಲ್ಲಲ್ಲಿ ಬರುತ್ತದೆ. ಜೀವನವೂ ಕೂಡ ಮಗ್ಗಿ ಪುಸ್ತಕದಂತೆ ಎನ್ನುವ ನಿರ್ದೇಶಕರು, ಬದುಕಿನಲ್ಲಿ ಯಾವುದನ್ನು ಕಳೆಯಬೇಕು, ಕೂಡಬೇಕು, ಭಾಗಿಸಿಕೊಳ್ಳಬೇಕು ಎಂಬುದನ್ನು ಮನವರಿಕೆ ಮಾಡಲು ಚಿತ್ರದುದ್ದಕ್ಕೂ ಯತ್ನಿಸಿದ್ದಾರೆ.

ನಿರೂಪಣೆ ಮತ್ತು ಕಥೆಯಿಂದ ಕಲಾತ್ಮಕ ಚಿತ್ರ ಎನ್ನಿಸುತ್ತದೆ. ಆದಾಗ್ಯೂ ಹಾಡುಗಳಿಂದ, ಕೆಲ ದೃಶ್ಯಗಳಿಂದ ಚಿತ್ರಕ್ಕೆ ಕಮರ್ಷಿಯಲ್ ರೂಪ ಕೊಡಲು ನಿರ್ದೇಶಕರು ಯತ್ನಿಸಿರುವುದು ಎದ್ದು ಕಾಣುತ್ತದೆ. ಅಪ್ಪನ ಕುರಿತಾಗಿ, ಅಮ್ಮನ ಬಗೆಗಿನ ಹಾಡುಗಳ ಭಾವನಾತ್ಮಕವಾಗಿವೆ. ಚಿತ್ರದ ದೊಡ್ಡ ಶಕ್ತಿ ಒಳ್ಳೊಳ್ಳೆ ಗಾಯಕರು ಹಾಡಿರುವ ಹಾಡುಗಳು. ಆದರೆ ಅವುಗಳಲ್ಲಿ ಕೆಲವು ಸನ್ನಿವೇಶಗಳಿಗೆ ಪೂರಕವಾಗಿಲ್ಲ ಎಂಬ ಭಾವನೆ ಮೂಡಿಸುತ್ತವೆ. ಒಂದಷ್ಟು ಅನವಶ್ಯ ದೃಶ್ಯಗಳಿಗೆ ಕತ್ತರಿ ಹಾಕಿ ಕಥೆಯನ್ನು ಇನ್ನಷ್ಟು ಗಟ್ಟಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಚಿತ್ರಕಥೆಗೆ ಇನ್ನಷ್ಟು ಒತ್ತುಕೊಡಬಹುದಿತ್ತು.

ನಾವು ನೋಡಿದ ಸಿನಿಮಾ

ಮಗ್ಗಿ ಪುಸ್ತಕ
- ನಿರ್ಮಾಣ: ಸಿ.ಯತಿರಾಜ್
- ನಿರ್ದೇಶನ: ಹರಿವರಾಸನಂ
- ತಾರಾಗಣ: ರಂಜನ್ ಕಾಸರಗೋಡು, ರಾನ್ವಿ ಶೇಖರ್, ರಕ್ಷಾ ಗೌಡ ಮತ್ತಿತರರು

ಭಾಗ್ಯ ಆಗಿ ರಕ್ಷಾ ಗೌಡ ಇಷ್ಟವಾಗುತ್ತಾರೆ. ಆಕೆಯ ತಾಯಿಯಾಗಿ ಮೇಘಶ್ರೀ, ತಾತನಾಗಿ ಮೈಸೂರು ರಮಾನಂದ್ ಗಮನ ಸೆಳೆಯುತ್ತಾರೆ. ರಂಜನ್, ರಾನ್ವಿ ಶೇಖರ್ ಈ ಕಾಲಘಟ್ಟದ ಹುಡುಗರನ್ನು ಪ್ರತಿನಿಧಿಸುತ್ತಾರೆ. ಯಶಸ್ ನಾಚಪ್ಪ ಸಂಗೀತ ಉತ್ತಮವಾಗಿದೆ. ಛಾಯಾಚಿತ್ರಗ್ರಹಣ ಇನ್ನಷ್ಟು ಸೊಗಸಾಗಬಹುದಿತ್ತು.

ವಿನಾಯಕ ಕೆ.ಎಸ್

'...ಸೀತಾರಾಮ'ನ ಟ್ರೇಲರ್ ಬಿಡುಗಡೆ

2021ರಲ್ಲಿ ತೆರೆಕಂಡ ವಿಜಯ ರಾಘವೇಂದ್ರ ನಟನೆಯ 'ಸೀತಾರಾಮ್ ಬಿನೋಯ್' ಚಿತ್ರ ಒಂದು ಮಟ್ಟಿನ ಯಶಸ್ಸು ಗಳಿಸಿತ್ತು. ಅದರ ಸೀಕ್ವೆಲ್ ಕಥೆಯನ್ನು ಹೊಂದಿರುವ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದೇವಿಪ್ರಸಾದ್ ಶೆಟ್ಟಿ ನಿರ್ದೇಶನದ ಈ ಚಿತ್ರ ಫೆ.20ರಂದು ತೆರೆಗೆ ಬರಲಿದೆ.

'ಸೀತಾರಾಮ್ ಬಿನೋಯ್' ನನ್ನ ವೃತ್ತಿಜೀವನಕ್ಕೆ ವಿಶೇಷ ಬಲ ಕೊಟ್ಟ ಸಿನಿಮಾ. ಆ ಚಿತ್ರದ ಬರವಣಿಗೆ, ಪ್ರಸ್ತುತಿ ಎಲ್ಲವೂ ಶಕ್ತಿ ನೀಡಿತ್ತು. ನಂತರ ಅದೇ ತಂಡ ಒಟ್ಟಾಗಿ 'ಕೇಸ್ ಆಫ್ ಕೊಂಡಾಣ' ಮಾಡಿದೆವು. ಈಗ ಅದೇ ಜಾನರ್‌ನ ಮತ್ತೊಂದು ಕಥೆಯೊಂದಿಗೆ ಬಂದಿದ್ದೇವೆ. ನಿರ್ದೇಶಕರು ಒಳ್ಳೆಯ ಸ್ಕ್ರಿಪ್ಟ್ ಬರೆದಿದ್ದಾರೆ. ನಿರ್ಮಾಪಕ ಸಾತ್ವಿಕ್ ಅದಕ್ಕೆ ಬಲವಾಗಿ ನಿಂತಿದ್ದಾರೆ. ನವನೀತ್ ಶ್ಯಾಮ್ ಸಂಗೀತ ಚಿತ್ರದ ಜೀವಾಳ. ಚಿತ್ರ ಮಾಡುವುದು ಎಷ್ಟು ಕಷ್ಟವೋ, ಬಿಡುಗಡೆ ಕೂಡ ಅಷ್ಟೇ ಕಷ್ಟ. ಈ ಚಿತ್ರದ ಬಿಡುಗಡೆಗೆ ಪವನ್ ಒಡೆಯರ್ ಬೆಂಬಲವಾಗಿ ನಿಂತಿದ್ದಾರೆ' ಎಂದರು ವಿಜಯ ರಾಘವೇಂದ್ರ.

ಗೋಪಾಲಕೃಷ್ಣ ದೇಶಪಾಂಡೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಹೇಮಂತ್ ಆಚಾರ್ಯ ಛಾಯಾಚಿತ್ರಗ್ರಹಣ, ಶಶಾಂಕ್ ಸಂಕಲನ ಚಿತ್ರಕ್ಕಿದೆ.

ವಿಜಯ ರಾಘವೇಂದ್ರ

50ನೇ ಚಿತ್ರದಲಿ ಕಿಂಗ್ ಆದ ಯೋಗಿ

ಲೂಸ್ ಮಾದ ಯೋಗಿ ಅವರ 50ನೇ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿದೆ. ಚಿತ್ರಕ್ಕೆ 'ಕಿಂಗ್' ಎಂದು ಹೆಸರಿಡಲಾಗಿದ್ದು, ನಟ ಶಿವರಾಜ್‌ಕುಮಾರ್ ಶೀರ್ಷಿಕೆ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರಕ್ಕೆ ಜಾಕ್ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಸಂತೋಷ್ ಬಸವರಾಜ್ ಮತ್ತು ಗೆಳೆಯರು ಬಂಡವಾಳ ಹೂಡುತ್ತಿದ್ದಾರೆ.

'ಯೋಗಿಯನ್ನು ಚಿಕ್ಕವರಿದ್ದಾಗಿನಿಂದ ನೋಡಿಕೊಂಡು ಬಂದಿದ್ದೇನೆ. 'ಜೋಗಿ' ಸಿನಿಮಾದಲ್ಲಿ ಸಣ್ಣ ಪಾತ್ರ ಮಾಡಿದ್ದ ಇವರು ಇವತ್ತು ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ನನ್ನ ಜತೆ ಸಾಕಷ್ಟು ಸಿನಿಮಾಗಳಲ್ಲಿ ನಟಿಸಿದ್ದಾರೆ. ಪವನ್ ಒಡೆಯರ್ ನಿರ್ದೇಶನದ 'ಬೇಲ್' ಸಿನಿಮಾದಲ್ಲಿಯೂ ನನ್ನ ಎದುರು ಖಳನಾಯಕನಾಗಿ ನಟಿಸುತ್ತಿದ್ದಾರೆ. ಬಹಳ ಶ್ರಮಪಟ್ಟು ಮೇಲಕ್ಕೆ ಬಂದ ಇವರ 50ನೇ ಸಿನಿಮಾಕ್ಕೆ ಶುಭವಾಗಲಿ. ಪುನೀತ್ ಚಿತ್ರಗಳಲ್ಲಿಯೂ ಅಭಿನಯಿಸಿರುವ ಯೋಗಿ ನಮ್ಮ ಕುಟುಂಬದ ಹುಡುಗನಿದ್ದಂತೆ. ಅವರ 'ನಂದ ಲವ್ಸ್ ನಂದಿತಾ' ಚಿತ್ರದಂತೆ ಈ ಚಿತ್ರವೂ ದೊಡ್ಡ ಮಟ್ಟದ ಯಶಸ್ಸು ಗಳಿಸಲಿ' ಎಂದರು ಶಿವಣ್ಣ.

ಚಿತ್ರತಂಡದೊಂದಿಗೆ ಶಿವರಾಜ್‌ಕುಮಾರ್

ಕನ್ನಡದ ಜತೆಗೆ ತೆಲುಗು ಮತ್ತು ತಮಿಳು ಭಾಷೆಗಳಲ್ಲಿಯೂ ಚಿತ್ರ ಸಿದ್ಧಗೊಳ್ಳುತ್ತಿದ್ದು, ಟೈಟಲ್ ಟೀಸರ್ ಅನ್ನು ತಂಡ ಬಿಡುಗಡೆಗೊಳಿಸಿದೆ. 'ಶಿವಣ್ಣ ಮತ್ತು ಅವರ ಕುಟುಂಬ ನನಗೆ ತಮ್ಮನ ಸ್ಥಾನ ನೀಡಿದೆ. ಅವರಿಂದ ಈ ಚಿತ್ರದ ಶೀರ್ಷಿಕೆ ಬಿಡುಗಡೆಗೊಂಡಿದ್ದು ಅತ್ಯಂತ ಸಂತಸದ ಸಂಗತಿ. ನನ್ನ ಸಿನಿಪಯಣದಲ್ಲಿ ಇದುವರೆಗೂ ಒಂದು ಲೆಕ್ಕ, ಇನ್ಮುಂದೆ ಮತ್ತೊಂದು ಲೆಕ್ಕ. ಈ ಚಿತ್ರದಲ್ಲಿ ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಂಡಿದ್ದೇನೆ. ಈ ಸಿನಿಮಾದಲ್ಲಿ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಚಿಕ್ಕ ವಯಸ್ಸಿನಲ್ಲಿಯೇ ನಾಯಕನಾದೆ. ಸೋಲು, ಗೆಲುವು ಎಲ್ಲವನ್ನೂ ಕಂಡೆ. ಮತ್ತೆ ಪುಟಿದೇಳಲು ಸಿದ್ಧನಾಗಿದ್ದೇನೆ' ಎಂದರು ಯೋಗಿ.

'ಚಿತ್ರದಲ್ಲಿ ಬಾಲಿವುಡ್ ಸೇರಿದಂತೆ ತೆಲುಗು, ತಮಿಳು ಮತ್ತು ಮಲಯಾಳ ಭಾಷೆಯ ಕಲಾವಿದರು ನಟಿಸಲಿದ್ದಾರೆ. ದೊಡ್ಡ ಬಜೆಟ್ ಸಿನಿಮಾ. ಮೈಸೂರು, ಮಂಗಳೂರು, ಚೆನ್ನೈ ಸೇರಿದಂತೆ ವಿವಿಧೆಡೆ ಚಿತ್ರೀಕರಣ ಮಾಡುವ ಯೋಜನೆಯಿದೆ. ಮಾರ್ಚ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಬರೀ ಆ್ಯಕ್ಷನ್ ಅಷ್ಟೇ ಅಲ್ಲ, ಕಣ್ಣೀರಿನ ಕಥೆಯೂ ಚಿತ್ರದಲ್ಲಿದೆ. ಮುಂದಿನ ದಿನಗಳಲ್ಲಿ ಉಳಿದ ಮಾಹಿತಿ ನೀಡುತ್ತೇವೆ' ಎಂದರು ನಿರ್ದೇಶಕ. ಚಿತ್ರಕ್ಕೆ ಶಶಾಂಕ್ ಶೇಷಗಿರಿ ಸಂಗೀತವಿದೆ.

ಟಿವಿಕೆ ಪಕ್ಷವು ಸೇಲಂನಲ್ಲಿ ಶುಕ್ರವಾರ ಆಯೋಜಿಸಿದ್ದ ರ‍್ಯಾಲಿಯಲ್ಲಿ ಭಾಗವಹಿಸಿದ್ದ ಜನಸ್ತೋಮ ಪಿಟಿಐ ಚಿತ್ರ

ಟಿವಿಕೆ ರ‍್ಯಾಲಿ; ಕುಸಿದುಬಿದ್ದು ವ್ಯಕ್ತಿ ಸಾವು

ಸೇಲಂ, ತಮಿಳುನಾಡು (ಪಿಟಿಐ): ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸ್ಥಾಪಕ, ನಟ ವಿಜಯ್ ನೇತೃತ್ವದಲ್ಲಿ ಶುಕ್ರವಾರ ಇಲ್ಲಿ ನಡೆದ ರ‍್ಯಾಲಿಯಲ್ಲಿ ಭಾಗವಹಿಸಿದ್ದ 37 ವರ್ಷದ ವ್ಯಕ್ತಿಯೊಬ್ಬರು ಕುಸಿದು ಬಿದ್ದು, ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ.

ಮೃತರನ್ನು ಸೂರಜ್ ಎಂದು ಗುರುತಿಸಲಾಗಿದೆ. ಮಹಾರಾಷ್ಟ್ರ ಮೂಲದ ನಿವಾಸಿಯಾಗಿದ್ದ ಇವರು ರ‍್ಯಾಲಿಯಲ್ಲಿ ಭಾಗವಹಿಸಿದ್ದ ವೇಳೆ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಸ್ಪತ್ರೆಗೆ ಕರೆತರುವ ವೇಳೆಗಾಗಲೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸೂರಜ್ ಕೆಲ ತಿಂಗಳ ಹಿಂದೆ ಆ್ಯಂಜಿಯೊಪ್ಲಾಸ್ಟಿಗೆ ಒಳಗಾಗಿದ್ದರು.

'ಸೂರಜ್ ಅವರು ನಟ ವಿಜಯ್ ಅವರನ್ನು ನೋಡಲು ರ‍್ಯಾಲಿಗೆ ಹೋಗಿದ್ದರು. ಅಲ್ಲಿಗೆ ಬಂದ ಕೆಲ ಹೊತ್ತಿನಲ್ಲೇ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಕರೆತರುವ ಮುನ್ನವೇ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು' ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2025-26/ 1836 ದಿನಾಂಕ: 13.02.2026
ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1,2 & 3
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: (1)Pck. No.YDG-SRP-01-2025-26 (3 Worsk) 1. ಸುರಪುರ ತಾಲ್ಲೂಕಿನ ಕೋಡೆಕಲ್ ಗ್ರಾಮದಲ್ಲಿ ಅಂಗನವಾಡಿ-02 ಕಟ್ಟಡ ನಿರ್ಮಾಣ. 2.ಹುಣಸಗಿ ತಾಲ್ಲೂಕಿನ ದೇವಾಪೂರ ಗ್ರಾಮದ ಅಂಗನವಾಡಿ ಕಟ್ಟಡ ನಿರ್ಮಾಣ. 3.ಸುರಪುರ ತಾಲ್ಲೂಕಿನ ರಾಯನಗೋಳ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. RDPR/2025-26/BD/WORK_INDENT23514/CALL-2 Other 2) Pck. No.YDG-SHP-01-2025-26 (3 Worsk) (1) ಶಹಾಪೂರ ತಾಲ್ಲೂಕಿನ ಆಲ್ದಾಳ ಗ್ರಾಮದ ಅಂಗನವಾಡಿ ಕಟ್ಟಡ ನಿರ್ಮಾಣ.2. ಶಹಾಪೂರ ತಾಲ್ಲೂಕಿನ ಉಕ್ಕಿನಾಳ ಗ್ರಾಮದ ಅಂಗನವಾಡಿ ಕಟ್ಟಡ ನಿರ್ಮಾಣ.3. ಶಹಾಪೂರ ತಾಲ್ಲೂಕಿನ ಕರಕಳ್ಳಿ ತಾಂಡದ ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_ IN-DENT 23207 CALL-2 CAT-II(A)Bidders Only (3) ಶಹಾಪೂರ ತಾಲ್ಲೂಕಿನ ತಡಬಿಡಿ ಗ್ರಾಮದ ಅಂಗನವಾಡಿ-04 ಕಟ್ಟಡ ನಿರ್ಮಾಣ. RDPR/2025-26/BD/WORK_INDENT23217CALL-2 Other (4) ಶಹಾಪೂರ ತಾಲ್ಲೂಕಿನ ತಂಗಡಗಿ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ. RDPR/2025-26/BD/WORK_INDENT23216CALL-2 Other 5) Pck. No.YDG-YDG-01-2025-26 (4 Worsk) (1)ಯಾದಗಿರಿ ತಾಲ್ಲೂಕಿನ ಗೌಡಗೇರಾ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ. (2) ಗುರುಮಿಠಕಲ್ ತಾಲ್ಲೂಕಿನ ಹೊನಗೇರಾ ಗ್ರಾಮದ ಅಂಗನಾವಡಿ-03 ಕಟ್ಟಡ ನಿರ್ಮಾಣ. (3) ಗುರುಮಿಠಕಲ್ ತಾಲ್ಲೂಕಿನ ಶಿವಪೂರ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ.(4) ಯಾದಗಿರಿ ತಾಲ್ಲೂಕಿನ ಕೌಳೂರು ಗ್ರಾಮದ ಅಂಗನವಾಡಿ-03 ಕಟ್ಟಡ ನಿರ್ಮಾಣ. RDPR/2025-26/BD/WORK_INDENT24509 CAT-I Bidders Only 6) Pck. No.YDG-YDG-02-2025-26 (4 Worsk) (1) ಗುರುಮಿಠಕಲ್ ತಾಲ್ಲೂಕಿನ ಚಿನ್ನಾಕಾರ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. (2)ಗುರುಮಿಠಕಲ್ ತಾಲ್ಲೂಕಿನ ತೋರಣತಿಪ್ಪ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. (3)ಗುರುಮಿಠಕಲ್ ತಾಲ್ಲೂಕಿನ ತೋರಣತಿಪ್ಪ ಗ್ರಾಮದ ಅಂಗನವಾಡಿ -01 ಕಟ್ಟಡ ನಿರ್ಮಾಣ. (4) ಗುರುಮಿಠಕಲ್ ತಾಲ್ಲೂಕಿನ ಬೆಟ್ಟದಳ್ಳಿ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. RDPR/2025-26/BD/WORK_INDENT24511 CAT-II(A) Bidders Only 2) ಲೆಕ್ಕ ಶೀರ್ಷಿಕೆ: 2025-26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ 17.00 ಮತ್ತು ಗರಿಷ್ಠ ರೂ. 64.00 ಲಕ್ಷ 4) ಗುತ್ತಿಗೆದಾರರ ದರ್ಜೆ: 4ನೆ ಮತ್ತು 3ನೇ ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 17.02.2026 ರಿಂದ 24.02.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 24.02.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ (ಕೆ.ಡಬ್ಲ್ಯೂ- 3):26.02.2026 ಬೆಳ್ಳಿಗೆ 11:00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್(ಕೆ.ಡಬ್ಲ್ಯೂ- 1 & 2): 26.02.2026 ಬೆಳ್ಳಿಗೆ 11:00 ನಂತರ 10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್(ಕೆ.ಡಬ್ಲ್ಯೂ- 3): 04.03.2026 ಬೆಳ್ಳಿಗೆ 11:00 ನಂತರ 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 12) ಅಂತರಜಾಲ ತಾಣದ ವಿಳಾಸ: https://kppp.karnataka.gov.in
ಸೂಚನೆ :- ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).
ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.
ವಾ.ಸಾ.ಸಂ.ಇ/ಯಾದಗಿರ/528/ಕೆ.ಎಸ್.ಎಂ.ಸಿ.&ಎ/2025-26

ಪ್ರಧಾನಿ ಕಚೇರಿ ಈಗ 'ಸೇವಾ ತೀರ್ಥ'

95 ವರ್ಷದ ಬಳಿಕ ಪಿಎಂಒ ಸ್ಥಳಾಂತರ
ಮಹಿಳೆ, ರೈತರ ಕಲ್ಯಾಣಕ್ಕೆ ಹಲವು ನಿರ್ಣಯ

ನವದೆಹಲಿ(ಪಿಟಿಐ): ಪ್ರಧಾನ ಮಂತ್ರಿ ಕಚೇರಿಯನ್ನು(ಪಿಎಂಒ) ನೂತನ ಕಟ್ಟಡ 'ಸೇವಾ ತೀರ್ಥ'ಕ್ಕೆ ಶುಕ್ರವಾರ ಸ್ಥಳಾಂತರಗೊಳಿಸಲಾಯಿತು. ಇನ್ನು ಮುಂದೆ 'ಪ್ರಧಾನ ಮಂತ್ರಿ ಕಚೇರಿ'ಯನ್ನು 'ಸೇವಾ ತೀರ್ಥ' ಎಂದೇ ಕರೆಯಲಾಗುತ್ತದೆ.

ಈ ಮೊದಲು ರಾಷ್ಟ್ರಪತಿ ಭವನ ಬಳಿಯ ಸೌತ್ ಬ್ಲಾಕ್‌ನಲ್ಲಿ ಈ ಕಚೇರಿ ಇತ್ತು. 95 ವರ್ಷಗಳ ನಂತರ ಪಿಎಂಒ ಸ್ಥಳಾಂತರಗೊಳಿಸಿದಂತಾಗಿದೆ.

ಕೇಂದ್ರೀಯ ಸಚಿವಾಲಯ ಎರಡು ಕಟ್ಟಡ ಹೊಂದಿದ್ದು, ಇವನ್ನು 'ಕರ್ತವ್ಯ ಭವನ 1' ಹಾಗೂ 'ಕರ್ತವ್ಯ ಭವನ 2' ಎಂಬುದಾಗಿ ಕರೆಯಲಾಗುತ್ತದೆ.

1931ರ ಫೆಬ್ರುವರಿ 13ರಂದು ನವದೆಹಲಿಯನ್ನು ಭಾರತದ ರಾಜಧಾನಿಯಾಗಿ ಘೋಷಿಸಲಾಗಿತ್ತು. 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವಸಾಹತುಶಾಹಿ ಕಾಲದ ಪ್ರತೀಕಗಳನ್ನು ಬದಲಾಯಿಸಿ, ದೇಸಿತನಕ್ಕೆ ಒತ್ತು ನೀಡುತ್ತಿರುವ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಮನೋಹರ ಲಾಲ್ ಖಟ್ಟರ್, ಜಿತೇಂದ್ರ ಸಿಂಗ್ ಹಾಗೂ ಪಿಎಂಒದ ಉನ್ನತ ಅಧಿಕಾರಿಗಳಿದ್ದ ವಾಹನಗಳು ಸೌತ್ ಬ್ಲಾಕ್‌ನಿಂದ ಹೊರಟು 'ಸೇವಾ ತೀರ್ಥ' ತಲುಪಿದವು.

ನೂತನ ಕಚೇರಿಯಲ್ಲಿ ಪಿಎಂಒ, ರಾಷ್ಟ್ರೀಯ ಭದ್ರತಾ ಪರಿಷತ್ತಿನ ಸಚಿವಾಲಯ ಹಾಗೂ ಸಂಪುಟ ಸಚಿವಾಲಯ ಕಚೇರಿಗಳನ್ನು ಮೋದಿ ಉದ್ಘಾಟಿಸಿದರು.

ನೂತನ ಕಚೇರಿಗೆ ಪ್ರವೇಶಿಸಿದ ಬಳಿಕ ಅಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮೋದಿ ಪೂಜೆ ಸಲ್ಲಿಸಿದರು. 'ಸೇವಾ ತೀರ್ಥ' ಎಂದು ದೇವನಾಗರಿ ಲಿಪಿಯಲ್ಲಿ ಬರೆದಿರುವ ಫಲಕವನ್ನು ಇದೇ ವೇಳೆ ಅವರು ಅನಾವರಣಗೊಳಿಸಿದರು. 'ನಾಗರಿಕ ದೇವೋ ಭವ' ಎಂಬ ಅಡಿಬರಹವೂ ಇದೇ ಫಲಕದಲ್ಲಿದೆ.

ಬಳಿಕ, ಮಹಿಳೆಯರು, ರೈತರು, ಯುವ ಜನ, ಹಿರಿಯ ನಾಗರಿಕರ ಕಲ್ಯಾಣ ಕುರಿತ ಯೋಜನೆಗಳಿಗೆ ಸಂಬಂಧಿಸಿ ಹಲವು ನಿರ್ಧಾರ ತೆಗೆದುಕೊಂಡರು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ.ಮಿಶ್ರಾ, ಶಕ್ತಿಕಾಂತ ದಾಸ್ ಇದ್ದರು.

ಹಲವು ದಶಕಗಳಿಂದ ಕೇಂದ್ರ ಸರ್ಕಾರದ ಪ್ರಮುಖ ಕಚೇರಿಗಳು ಹಾಗೂ ಸಚಿವಾಲಯಗಳು ಸೆಂಟ್ರಲ್ ವಿಸ್ತಾ ಪ್ರದೇಶದಲ್ಲಿನ ವಿವಿಧ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅನೇಕ ಕಟ್ಟಡಗಳು ಶಿಥಿಲವಾಗಿದ್ದವು.

ಹೊಸ ಕಟ್ಟಡಗಳಿಗೆ ಕಚೇರಿಗಳನ್ನು/ಸಚಿವಾಲಯಗಳನ್ನು ಸ್ಥಳಾಂತರಗೊಳಿಸುವ ಜೊತೆಗೆ, ಅವುಗಳ ಹೆಸರುಗಳನ್ನು ಕೂಡ ಬದಲಾಯಿಸುವುದಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಇದರ ಭಾಗವಾಗಿ, ಪ್ರಧಾನಿಯ ಗೃಹ ಕಚೇರಿ ಇರುವ 'ರೇಸ್ ಕೋರ್ಸ್ ರಸ್ತೆ'ಯನ್ನು 'ಲೋಕ ಕಲ್ಯಾಣ ಮಾರ್ಗ' ಎಂದು ಬದಲಾಯಿಸಲಾಗಿದೆ. ಕೇಂದ್ರ ಸಚಿವಾಲಯದ ಕಚೇರಿಗಳಿರುವ ಕಟ್ಟಡವನ್ನು 'ಕರ್ತವ್ಯ ಭವನ' ಹಾಗೂ ರಾಜಪಥವನ್ನು 'ಕರ್ತವ್ಯ ಪಥ' ಎಂಬುದಾಗಿ ಬದಲಾಯಿಸಲಾಗಿದೆ.

ರಾಜಭವನ ಹಾಗೂ ರಾಜನಿವಾಸಗಳ ಹೆಸರುಗಳನ್ನು ಸಹ ಬದಲಾಯಿಸಲಾಗಿದೆ.

ನವದೆಹಲಿಯಲ್ಲಿ ಪ್ರಧಾನ ಮಂತ್ರಿ ಕಚೇರಿ ನೂತನ ಕಟ್ಟಡ 'ಸೇವಾ ತೀರ್ಥ'ವನ್ನು ಶುಕ್ರವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕಚೇರಿಯ ನಾಮಫಲಕವನ್ನು ಅನಾವರಣಗೊಳಿಸಿದರು ಪಿಟಿಐ ಚಿತ್ರ

'ಬದ್ಧತೆಯ ಪ್ರತೀಕ'

'ಪ್ರಧಾನ ಮಂತ್ರಿ ಕಚೇರಿ(ಸೇವಾ ತೀರ್ಥ) ಹಾಗೂ ಕೇಂದ್ರೀಯ ಸಚಿವಾಲಯ(ಕರ್ತವ್ಯ ಭವನ) ಒಳಗೊಂಡಿರುವ ಹೊಸ ಕಟ್ಟಡಗಳು ವಿಕಸಿತ ಭಾರತದತ್ತ ದೇಶ ಕೈಗೊಂಡಿರುವ ಪಯಣದಲ್ಲಿ ಮಹತ್ವದ ಮೈಲುಗಲ್ಲುಗಳಾಗಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಸೇವಾ ತೀರ್ಥ' ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, 'ಈ ಕಟ್ಟಡಗಳು ನಾಗರಿಕ ಕೇಂದ್ರಿತ ಆಡಳಿತ ಮತ್ತು ದೇಶದ ಅಭಿವೃದ್ಧಿ ಕುರಿತು ನಮ್ಮ ಸರ್ಕಾರ ಹೊಂದಿರುವ ಬದ್ಧತೆಯನ್ನು ಪ್ರತಿಫಲಿಸುತ್ತವೆ' ಎಂದರು.

'ರಕ್ಷಣಾ, ಗೃಹ ಹಾಗೂ ಹಣಕಾಸು ಸಚಿವಾಲಯಗಳಿರುವ ಐತಿಹಾಸಿಕ ಕಟ್ಟಡಗಳಾದ ಸೌತ್ ಬ್ಲಾಕ್ ಹಾಗೂ ನಾರ್ತ್ ಬ್ಲಾಕ್ ಬ್ರಿಟಿಷ್ ಸಾಮ್ರಾಜ್ಯದ ಆದರ್ಶಗಳ ಅಭಿವ್ಯಕ್ತಿಯಂತಿದ್ದವು. ಸೇವಾ ತೀರ್ಥ ಹಾಗೂ ಕರ್ತವ್ಯ ಭವನಗಳನ್ನು ದೇಶದ ಪ್ರಜೆಗಳ ಆಶೋತ್ತರಗಳನ್ನು ಸಾಕಾರಗೊಳಿಸುವುದಕ್ಕಾಗಿ ನಿರ್ಮಿಸಲಾಗಿದೆ' ಎಂದು ಹೇಳಿದರು.

ಸೇವಾ ತೀರ್ಥದ ಉದ್ಘಾಟನೆ ಸ್ಮರಣಾರ್ಥ ಅದರ ಚಿತ್ರವಿರುವ ಅಂಚೆ ಚೀಟಿ ಹಾಗೂ ನಾಣ್ಯವನ್ನು ಇದೇ ವೇಳೆ ಮೋದಿ ಬಿಡುಗಡೆ ಮಾಡಿದರು.

ಪ್ರಮುಖ ನಿರ್ಧಾರಗಳು

- 'ಪ್ರಧಾನ ಮಂತ್ರಿ ರಾಹತ್' ಯೋಜನೆಗೆ ಪ್ರಧಾನಿ ಅನುಮೋದನೆ ನೀಡಿದರು. ಅಪಘಾತಗಳು ಸಂಭವಿಸಿದ ವೇಳೆ, ಸಂತ್ರಸ್ತರಿಗೆ ₹1.5 ಲಕ್ಷ ಮೊತ್ತದಷ್ಟು ನಗದುರಹಿತ ಚಿಕಿತ್ಸೆ ನೀಡುವ ಯೋಜನೆ ಇದಾಗಿದೆ. ಅಪಘಾತಗಳ ಸಂದರ್ಭದಲ್ಲಿ ತಕ್ಷಣಕ್ಕೆ ವೈದ್ಯಕೀಯ ನೆರವು ಸಿಗದ ಕಾರಣಕ್ಕಾಗಿ ಜೀವ ಹಾನಿ ಆಗುವುದನ್ನು ತಪ್ಪಿಸುವುದು ಈ ಯೋಜನೆ ಉದ್ದೇಶವಾಗಿದೆ
- 'ಲಖ್‌ಪತಿ ದೀದಿ'ಗಳ ಸಂಖ್ಯೆಯನ್ನು 6 ಕೋಟಿಗೆ ಹೆಚ್ಚಿಸುವ ಗುರಿಯನ್ನು ನಿಗದಿಪಡಿಸುವ ಕಡತಕ್ಕೆ ಮೋದಿ ಸಹಿ ಹಾಕಿದರು. ಈ ಮೊದಲು ಮಾರ್ಚ್ 2027ರ ಒಳಗಾಗಿ 'ಲಖ್‌ಪತಿ ದೀದಿಗಳ ಸಂಖ್ಯೆಯನ್ನು 3 ಕೋಟಿಗೆ ತಲುಪುವ ಗುರಿ ನಿಗದಿಪಡಿಸಲಾಗಿತ್ತು. ಅವಧಿಗಿಂತಲೂ ಮೊದಲೇ ಗುರಿ ಸಾಧಿಸಲಾಗಿರುವ ಕಾರಣ, 2029ರ ಮಾರ್ಚ್ ಒಳಗಾಗಿ ಇವರ ಸಂಖ್ಯೆಯನ್ನು 6 ಕೋಟಿಗೆ ತಲುಪಿಸುವ ಗುರಿಯನ್ನು ನಿಗದಿಪಡಿಸಲಾಗಿದೆ
- ರೈತರಿಗೆ ಉತ್ತೇಜನ ನೀಡುವುದಕ್ಕಾಗಿ 'ಕೃಷಿ ಮೂಲಸೌಕರ್ಯ ನಿಧಿ'ಯ ಮೊತ್ತವನ್ನು ₹2 ಲಕ್ಷ ಕೋಟಿಗೆ ಹೆಚ್ಚಿಸುವ ನಿರ್ಧಾರಕ್ಕೆ ಸಹಿ ಹಾಕಿದ್ದಾರೆ
- ಸ್ಟಾರ್ಟ್‌ಅಪ್ ಇಂಡಿಯಾ ಫಂಡ್ ಆಫ್ ಫಂಡ್ಸ್ 2.0ಗೆ ಅನುಮೋದನೆ ನೀಡಿ, ₹10 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ಇದರಿಂದ ಡೀಪ್ ಟೆಕ್, ತಯಾರಿಕಾ ಮತ್ತು ನವೀನ ತಂತ್ರಜ್ಞಾನಗಳ ಕ್ಷೇತ್ರಕ್ಕೆ ಬಲ ತುಂಬುವಿಕೆ.

ರಾಹುಲ್ ವಿರುದ್ಧ ಗೊತ್ತುವಳಿ ಇಲ್ಲ: ಕೇಂದ್ರ

ನವದೆಹಲಿ(ಪಿಟಿಐ): ಪ್ರಧಾನಿ ವಿರುದ್ಧ ಅಸಂಸದೀಯ ಭಾಷೆ ಬಳಸಿದ್ದಕ್ಕಾಗಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಸರ್ಕಾರ ಯಾವುದೇ ಗೊತ್ತುವಳಿ ಮಂಡಿಸುವುದಿಲ್ಲ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಶುಕ್ರವಾರ ಹೇಳಿದ್ದಾರೆ.

ಬಿಜೆಪಿ ಸಂಸದರೊಬ್ಬರು 'ಸ್ವತಂತ್ರ ನಿರ್ಣಯ'ದ ನೋಟಿಸ್ ಸಲ್ಲಿಸಿದ್ದಾರೆ. ಈ ವಿಚಾರವಾಗಿ ಮತ್ತೊಂದು ಗೊತ್ತುವಳಿ ಮಂಡಿಸುವ ಯೋಜನೆಯನ್ನು ಸರ್ಕಾರ ಕೈಬಿಟ್ಟಿದೆ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, 'ಸಂಸದ ನಿಶಿಕಾಂತ್ ದುಬೆ ಸಲ್ಲಿಸಿರುವ ನೋಟಿಸ್ ಅನ್ನು ಹಕ್ಕು ಬಾಧ್ಯತಾ ಸಮಿತಿ ಅಥವಾ ನೈತಿಕ ಸಮಿತಿಗೆ ಕಳುಹಿಸಬೇಕೇ ಇಲ್ಲವೇ ನೇರವಾಗಿ ಲೋಕಸಭೆಯಲ್ಲಿ ಮಂಡಿಸಬೇಕೇ ಎಂಬ ಬಗ್ಗೆ ಸ್ಪೀಕರ್ ಜೊತೆ ಸಮಾಲೋಚಿಸಲಾಗುವುದು' ಎಂದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ಬೆಳಗಾವಿ ವಿಭಾಗ, ಬೆಳಗಾವಿ-590 016.
Phone No.: 0831-2467103 E-Mail: eepwdbgm01@gmail.com
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2025-26/7396 ದಿನಾಂಕ: 13-02-2026
ಟೆಂಡರ್ ಅಧಿಸೂಚನೆ (ಕೆ.ಪಿ.ಪಿ. ನಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1, 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025-26ನೇ ಸಾಲಿನ 2059-ಇಲಾಖಾ ಕಟ್ಟಡಗಳ ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 3054- ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ, 4059 ಮುಖ್ಯಮಂತ್ರಿ ಮೂಲ ಸೌಕರ್ಯ ಬಂಡವಾಳ ವೆಚ್ಚ, 4059 ಇಲಾಖಾ ಮತ್ತು ನ್ಯಾಯಾಂಗ ವಸತಿ ಗೃಹಗಳ ನಿರ್ವಹಣೆ, 5054- ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿಯಲ್ಲಿ ಸೇರಿ ಒಟ್ಟು 10 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 12.71 ಲಕ್ಷಗಳು ಹಾಗೂ ರೂ. 149.05 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 16,000/- ಹಾಗೂ ರೂ. 2,23,600/- ಇರುತ್ತದೆ. ಭಾಗ-1 : ಟೆಂಡರ್ ಸ್ವೀಕರಿಸುವ ದಿನಾಂಕ 20.02.2026ರ ಸಂಜೆ 4.30 ಗಂಟೆಯರೆಗೆ, ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 21.02.2026 ರ ಸಂಜೆ 4.45 ಗಂಟೆ ನಂತರ ಭಾಗ-2 : ಟೆಂಡರ್ ಸ್ವೀಕರಿಸುವ ದಿನಾಂಕ 06.03.2026 ರ ಸಂಜೆ 4.30 ಗಂಟೆಯರೆಗೆ, ಟೆಂಡರ್ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 09.03.2026 ರ ಸಂಜೆ 4.45 ಗಂಟೆ ನಂತರ, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 13.02.2026 ರ ನಂತರ ಪಡೆಯಬಹುದು
ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/1842/2025-26/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು - 560009
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.16 & 17/2025-26 ದಿನಾಂಕ: 12.02.2026
ಕೆ.ಪಿ.ಪಿ. ಪೋರ್ಟಲ್ ಮುಖಾಂತರ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ಹಾಗೂ ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ಪ್ರಕಟಣೆ ಸಂ. 16/2025-26ರ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕಶೀರ್ಷಿಕೆ ಹಾಗೂ ಟೆಂಡರ್ ಪ್ರಕಟಣೆ ಸಂ. 17/2025-26ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (CMIDP) ಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2026 ಸಂಜೆ 5.30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/-
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್
ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.

'ಲಡ್ಡು ಕಲಬೆರಕೆ : ಅಪಚಾರಕ್ಕೆ ಸಮ'

ಅಮರಾವತಿ(ಪಿಟಿಐ): ತಿರುಪತಿ ಲಡ್ಡು ವಿರುದ್ಧದ ಕಲಬೆರಕೆ ಆರೋಪವನ್ನು ಬಹಿರಂಗ ಪಡಿಸಿರುವ ತಮ್ಮ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಇದನ್ನು ಮುಚ್ಚಿಡುವುದು ಆ ಸ್ಥಳವನ್ನು ಅಪವಿತ್ರಗೊಳಿಸುವುದಕ್ಕೆ ಸಮನಾಗುತ್ತದೆ ಎಂದು ಪ್ರತಿಪಾದಿಸಿದರು.

ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿದ ಅವರು, 'ಇಂಥ ವಿಚಾರ ತಡೆಹಿಡಿಯುವುದು ಜನರ ನಂಬಿಕೆಗೆ ದ್ರೋಹವಾಗುತ್ತದೆ' ಎಂದು ಹೇಳಿದರು.

‘ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?’ ಎಂಬ ಕವಿವಾಣಿ ನಮ್ಮೆಲ್ಲರ ಬದುಕಿನಲ್ಲಿ ಪ್ರೀತಿಯ ಮಹತ್ವವನ್ನು ಮನಗಾಣಿಸುತ್ತದೆ. ‘ಪ್ರೇಮಿಗಳ ದಿನಾಚರಣೆ’ಯ (ಫೆ. 14) ಈ ಹೊತ್ತಿನಲ್ಲಿ, ಎರಡು ಹೃದಯಗಳು ತಮ್ಮ ಸಂಗಾತಿಗಾಗಿ ಬರೆದಿರುವ ಒಲವಿನ ಪತ್ರಗಳು ಇಲ್ಲಿವೆ. ಸುಖಮಯ ದಾಂಪತ್ಯಕ್ಕೆ ಪ್ರೀತಿಯ ಒರತೆ ಬತ್ತದಂತೆ ಸದಾ ಕಾಪಿಟ್ಟುಕೊಳ್ಳಬೇಕಾದ ಅಗತ್ಯವನ್ನು ಎತ್ತಿಹಿಡಿದಿವೆ.

ಅಬ್ಬಬ್ಬಾ!... ಈ ಪ್ರೀತಿ

ಒಲಿದ ಸಂಗೀತಾ ಒಲವಿನ ಸಂಗಾತ

ಸುದರ್ಶನ್ ರಂಗಪ್ರಸಾದ್ ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್, ಹವ್ಯಾಸಿ ನಟ. ಕಿರುತೆರೆ–ರಂಗಭೂಮಿ–ಸಿನಿಮಾದಲ್ಲಿ ತ್ರಿಕೋನ ಪಯಣ ಅವರದು. ‘ಪ್ರೀತಿ ಗೀತಿ ಇತ್ಯಾದಿ’ ಸಿನಿಮಾದಲ್ಲಿ ನಟಿಸುತ್ತಿದ್ದ ಸಂದರ್ಭದಲ್ಲಿ ಚಿತ್ರದ ನಾಯಕಿ ಸಂಗೀತಾ ಭಟ್ ಅವರ ಜೊತೆ ಪ್ರೀತಿ ಚಿಗುರಿ, ಅವರೊಂದಿಗೆ ದಾಂಪತ್ಯದ ಬದುಕಿಗೆ ಅಡಿ ಇಟ್ಟವರು ಅವರು.

ಪ್ರಿಯ ಸಂಗೀತಾ...

ನಿನ್ನನ್ನು ಭೇಟಿ ಮಾಡಿದ ಕ್ಷಣದಿಂದಲೆ, ಪ್ರೀತಿಯ ಬಗ್ಗೆ ನನಗಿದ್ದ ಕಲ್ಪನೆ ಮತ್ತು ವ್ಯಾಖ್ಯಾನಗಳೇ ಬದಲಾದವು. ಪೂರ್ಣಿಮೆಯ ಚಂದ್ರನಂತಹ ನಿನ್ನ ಕಣ್ಣ ಬಿಂಬದಲ್ಲಿ ಇಣುಕುತ್ತಿದ್ದ ಪ್ರೀತಿಯ ನೋಟವು ಅದಕ್ಕೆ ಹೊಸ ರೂಪ, ಲಾವಣ್ಯವನ್ನು ತುಂಬಿತು.

ಕಲೆಯ ಒಲವು ನಮ್ಮ ಬದುಕಿನ ಕ್ಯಾಮೆರಾ ಕಣ್ಣಿನಲ್ಲಿ ಒಂದಾಗಿ ಬೆಸೆದು ನಮ್ಮನ್ನು ಸೆರೆ ಹಿಡಿಯಿತು. ಚಿತ್ರೀಕರಣಕ್ಕೆ ಎಂದು ಬಂದ ನಮ್ಮ ನಡುವೆ, ಆ ಸಂದರ್ಭದಲ್ಲೇ ಪ್ರೇಮ ಹುಟ್ಟಿದ್ದು ಕಥೆಯಂತೆಯೇ ಇದೆ, ಅಲ್ಲವೆ? ಎಂತಹ ಕಾಕತಾಳೀಯ... ನಮ್ಮ ಒಲವಿನಂತೆಯೆ ನಿಲುವೂ ಒಂದೇ ಆಗಿದ್ದರಿಂದ ಪ್ರೀತಿ ಮತ್ತಷ್ಟು, ಇನ್ನಷ್ಟು ಹೆಚ್ಚಲು ಕಾರಣವಾಯಿತು. ನಾವಿಬ್ಬರೂ ಪರಸ್ಪರ ಇಷ್ಟಪಟ್ಟ ಆ ದಿನಗಳು ಒಮ್ಮೆ ನೆನಪಾದರೆ ಸಾಕು, ಈಗಲೂ ಏನೋ ಒಂದು ಬಗೆಯ ರೋಮಾಂಚನ ಹುಟ್ಟುತ್ತದೆ. ಆಗ ಪುಳಕದಲ್ಲಿ ಹುಟ್ಟುತ್ತಿದ್ದದ್ದು ಮಾತು, ಮಾತು, ಬರೀ ಮಾತು... ನಿರಂತರ ಝರಿಯ ವರತೆಯಂತೆ ಆ ಮಾತು ಸರಾಗವಾಗಿ ಜುಳು ಜುಳು ಹರಿಯುತ್ತಿತ್ತು. ಅದರ ನಿನಾದ ಈಗಲೂ ಕಿವಿಯಲ್ಲಿ ಪ್ರೇಮಗೀತೆಯೊಂದನ್ನು ಹೇಳುತ್ತಿರುವಂತೆ ಭಾಸವಾಗುತ್ತದೆ. ಅದೇ ಸಂಗೀತಾ... ಅಲ್ಲವೇ...?

ಮಾತು ಮಾತಿನ ನಡುವಿನ ಮೌನವೂ ಕೃತಕವಲ್ಲದ ನಗುವನ್ನು ಎಷ್ಟು ಸಹಜವಾಗಿ ಸೂಸುತ್ತಿತ್ತು. ಅದು ಬಿರು ಬೇಸಿಗೆಯ ಸಂಜೆಯಲ್ಲಿ ದುಂಡು ಮಲ್ಲಿಗೆಯ ಕಂಪನ್ನು ಹೊಮ್ಮಿಸಿದ ಸಹಜ ಸೊಬಗಿನಂತೆಯೇ ಇತ್ತು ಬಿಡು. ನಾವು ಒಬ್ಬರ-ನ್ನೊಬ್ಬರು ಹೇಗೆ ನೋಡುತ್ತಿದ್ದೆವು, ಹೇಗೆ ಮಾತನಾಡುತ್ತಿದ್ದೆವು... ಅದೇ ಪ್ರೀತಿ ಪಾಠದ ಮೊದಲ ಅಧ್ಯಾಯ ಇರಬಹುದೇ ಎಂದು ಈಗಲೂ ಅನ್ನಿಸುತ್ತದೆ. ನಮ್ಮ ಆ ಗೆಳೆತನದ, ಹೊಸತನದ ಆಕರ್ಷಣೆ, ಮತ್ತೆ ಮತ್ತೆ ನೋಡಬೇಕು ಎನ್ನಿಸುತ್ತಿದ್ದ ತವಕದ ಕ್ಷಣಗಳು ಈಗಲೂ ನನ್ನೊಳಗೆ ಉತ್ಸಾಹವನ್ನು ತುಂಬುತ್ತವೆ.

ಸಾಂಗತ್ಯದ ಬದುಕಿನ ಪಲ್ಲವಿಗೆ ಮದುವೆ ಮುನ್ನುಡಿ ಬರೆಯಿತು. ನಂತರ, ಕುಟುಂಬದ ಜವಾಬ್ದಾರಿಗಳು, ವೃತ್ತಿಜೀವನ, ಬದುಕಿನ ಒತ್ತಡಗಳು, ಆರೋಗ್ಯ ಮತ್ತು ಆರ್ಥಿಕ ಏರುಪೇರು ಒಡ್ಡುತ್ತಿದ್ದ ಸವಾಲುಗಳು ನಮ್ಮ ಪ್ರೀತಿಯನ್ನು ಮತ್ತಷ್ಟು ಹೃದಯದಾಳಕ್ಕೆ ಇಳಿಸಿ ಮಗದಷ್ಟು ಗಾಢಗೊಳಿಸಿದವು. ಯಾವತ್ತೂ ನಮ್ಮ ಪ್ರೀತಿಗೆ ಉಡುಗೊರೆ, ಪ್ರವಾಸ, ಸಂತೋಷಕೂಟದಂತಹವು ಮುಖ್ಯ ಆಗಲೇ ಇಲ್ಲ. ಎಂತಹ ಕಷ್ಟದ ದಿನಗಳಲ್ಲಿಯೂ ನಿನ್ನ ಸಾಂತ್ವನ ಮತ್ತು ಗಟ್ಟಿ ನಿಲುವಿನ ಬೆಂಬಲ ನನಗೆ ಆತ್ಮಸ್ಥೈರ್ಯವನ್ನು ತುಂಬಿದೆ. ಅದು ಪರಸ್ಪರರ ಗೆಲುವಿಗೆ ಸಹಕಾರಿ ಆಗಿದೆ. ಒಬ್ಬರನ್ನೊಬ್ಬರು ಆಯ್ಕೆ ಮಾಡಿಕೊಂಡಿದ್ದರಲ್ಲಿ ಎಂತಹ ಅದೃಷ್ಟವಂತರು ನಾವು ಎಂದು ಯಾವಾಗಲೂ ಅನ್ನಿಸುತ್ತದೆ. ನಿಜಕ್ಕೂ ನಾನಂತೂ ಆ ವಿಷಯದಲ್ಲಿ ಭಾಗ್ಯಶಾಲಿ. ನನ್ನ ಬದುಕ ಆಸರೆಯಾಗಿರುವ ನಿನ್ನ ಬಗ್ಗೆ ಯಾವತ್ತೂ ನನಗೆ ಹೆಮ್ಮೆ ಅನ್ನಿಸುತ್ತದೆ.

ಎಂತಹ ಸಂಕಷ್ಟದ ಪರಿಸ್ಥಿತಿಯಲ್ಲಿಯೂ ನಿನ್ನ ಪ್ರೀತಿ ಕಿಂಚಿತ್ತೂ ಕಡಿಮೆ ಆಗಲಿಲ್ಲ. ನನ್ನ ಸೋಲು, ನೋವಿನ ಸಂದರ್ಭಗಳಲ್ಲಿ ಅದುವೇ ಸ್ಫೂರ್ತಿಯನ್ನು ನೀಡಿದೆ, ಬದುಕಿಗೆ ಭರವಸೆ, ಉತ್ಸಾಹವನ್ನು ತುಂಬಿದೆ. ನಿನ್ನ ಆ ಬದ್ಧತೆ, ವಿಶ್ವಾಸಕ್ಕೆ ಕೃತಜ್ಞತೆಯ ಮಾತು ತೀರಾ ಚಿಕ್ಕದಾಗುತ್ತದೆ. ಒಂದು ಹಂತದಲ್ಲಿ, ‘ನೀನು ಮತ್ತು ನಾನು’ ಆಗಿದ್ದೆವು, ಈಗ ‘ನಾವು’ ಆದೆವು. ಅದು, ಒಟ್ಟಂದದಲ್ಲಿ ಬದುಕನ್ನು ಚಂದಗೊಳಿಸಿದೆ.

ನಿನ್ನನ್ನು ನಾನು ಪ್ರೀತಿಸುವುದು ಅದು ‘ನೀನು’ ಎಂಬುದಕ್ಕಷ್ಟೇ ಅಲ್ಲ; ನಮ್ಮಿಬ್ಬರ ಸುಂದರ ಬದುಕಿಗೊಂದು ಅರ್ಥವೇ ಅದರಲ್ಲಿದೆ ಎನ್ನುವುದಕ್ಕೆ...

ಹ್ಯಾಪಿ ವ್ಯಾಲೆಂಟೈನ್ಸ್ ಡೇ ಡಿಯರ್ ಸಂಗೀತಾ

ಎಂದಿಗೂ ನಿನ್ನವನು
ಸುದರ್ಶನ

ನಿರೂಪಣೆ: ರಾಘವೇಂದ್ರ ಕೆ. ತೊಗರ್ಸಿ

ರಾಧಾ–ಕೃಷ್ಣ ಆನ್‌ಲೈನ್ ಸಲ್ಲಾಪ!

ಅಮರಪ್ರೇಮದ ಸಂಕೇತವಾದ ರಾಧಾ–ಕೃಷ್ಣ ಈ ಕಾಲದಲ್ಲಿ ಇದ್ದಿದ್ದರೆ, ಅವರ ಪ್ರೇಮ ಸಲ್ಲಾಪ ಹೇಗಿರುತ್ತಿತ್ತು?! ಜೆನ್–ಝೀ ಪೀಳಿಗೆಯ ಅವರ ವಾಟ್ಸ್‌ಆ್ಯಪ್ ‘ಹ್ಯಾಕ್’ ಆಗಿ, ಅವರ ರಸಗಳಿಗೆಯ ಮೆಸೇಜ್‌ಗಳು ಸೋರಿಕೆಯಾಗಿದ್ದರೆ? ಅಂತಹದ್ದೊಂದು ಕಾಲ್ಪನಿಕ ‘ಒಲವಿನ ಲೋಕ’ದೊಳಗೊಂದು ತುಂಟ ಇಣುಕುನೋಟ ಹರಿಸೋಣವೇ?

ಜ.ನಾ.ತೇಜಶ್ರೀ

My crush Krish...

ಓಯ್ ಕೃಷ್ಣ, ನೆನ್ನೆಯಿಂದ ಯಾವ ಮೆಸೇಜಿಗೂ ರಿಪ್ಲೈ ಇಲ್ಲ ಯಾಕೆ?

ಅಯ್ಯೋ ಜನರ ಸಮಸ್ಯೆಗಳನ್ನ ನೋಡ್ತಾ, ಕೇಳ್ತಾ ಫೋನ್ ಮುಟ್ಟೋಕೂ ಟೈಮೇ ಇಲ್ಲ ಬಂಗಾರಿ.

ಅಂ! ದ್ವಾಪರದಿಂದ ಕಲಿಯುಗಕ್ಕೆ ಬಂದರೂ ನಿನ್ನ ನೂರೆಂಟು ತಾಪತ್ರಯ ಮುಗೀಲೆ ಇಲ್ಲ, ಬಂಗಾರಿ ಅಂತೆ ಬಂಗಾರಿ.

ಬಂಗಾರದ ಬೆಲೆ ಇಷ್ಟೊಂದಾಗಿದೆ, ಕೊಂಡು ತಂದು ಕೊಡೋಕಂತೂ ಆಗಲ್ಲ, ಮುತ್ತಲ್ಲೇ ನಿನ್ನ ಸಿಂಗಾರ ಮಾಡಿ ಸಂತೋಷ ಪಡೋದು ಅಂತ... ನನ್ನ ಬ್ಯಾಂಗಲ್ ಬಂಗಾರಿ.

ಆಗಿಂದಲೂ ಇದೇ ಆಯ್ತಲ್ಲೋ ನಿಂದು, ಥಳುಕು ಬಳುಕು ಕವಿತೆ ಹೇಳೋದು, ಯಾಮಾರಿಸೋದು.

ಅಯ್ಯೋ ನಿನ್ನ! ಕವಿತೆಯಿಂದ ಯಾಮಾರೋದೆಲ್ಲ ದ್ವಾಪರಕ್ಕೇ ಮುಗೀತು ಚಿನ್ನ, ಅಂಥಾ ತಪ್ಪು ಕಲ್ಪನೆಯೆಲ್ಲ ಈ ಕಾಲಕ್ಕೆ ಇಟ್ಕೊಬೇಡ.

ಇದೆಲ್ಲ ಬಿಟ್ಹಾಕು, ಎಲ್ಲಾದ್ರು ಮೀಟ್ ಆಗೋಣ್ವ? ಎಷ್ಟೊಂದು ದಿನ ಆಯ್ತು ಕ್ರಿಶ್...

ಎಲ್ಲಿಗಂತ ಹೋಗ್ತೀಯ ಮಾರಾಯ್ತಿ... ಎಲ್ಲಿ ನೋಡಿದ್ರೂ ಬಿಲ್ಡಿಂಗು, ಜನ, ವೆಹಿಕಲ್ಸು, ಟ್ರಾಫಿಕ್ಕು. ಕಾಡಿಗೆ ಹೋಗೋಣ ಅಂತ ಮಾತ್ರ ಹೇಳಬೇಡ ನೋಡು. ಯಾಕಂದ್ರೆ ಆನೆ ಕಾಟ! ಓಯ್... ಯಾಕೆ ಮೌನವಾದೆ? ಮಾತಾಡ್ ಮಾತಾಡು ಮಲ್ಲಿಗೆ.

ಗಂಡಸಿಗೇಕೆ ಗೌರಿ ದುಃಖ ಅಂತ ಗಾದೆನೇ ಇಲ್ವ, ಬಿಟ್ಹಾಕು.

ಕೋಪ ಬಂತ? ನಂಗೂ ನಿನ್ನ ನೋಡೋ ಆಸೆ ಇಲ್ವ ಹೇಳು. ಈ ವಿರಹ ನನ್ನ ಮನವನು ಕಡೆಯುತಿದೆ ರಾ... ರಾ...ಧೆ.

ಸಾಕು ಸುಮ್ನಿರಪ್ಪ, ಯಾರಿಗೆ ಬೇಕು ನಿನ್ನ ಕವಿತಾ, ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿದೆ ಭಾವಗೀತಾ

ಅಬ್ಬಬ್ಬಾ! ಕವಿತೆ ಸಾಕು ಅಂದವರೇ ಕವಿತೆ ಹೇಳ್ತಾ ಇದ್ದಾರೆ! ಇದಪ್ಪ ವರಸೆ. ರಾಧಮ್ಮೋರೆ... ಒಂದು ಪ್ರಶ್ನೆ. ರಾಧೆಗೆ ಕೃಷ್ಣ ಏಕೆ ಒಲಿದ, ಹೇಳಿ.

ಪ್ರಶ್ನೆನಾದ್ರೂ ಸರಿಯಾಗಿ ಕೇಳು ಮುರಳೀಧರ.

ಓಹೋ ಹಾಗಾ... ಹೇಳೇ ನನ್ನ ಕೊಳಲೇ, ಏನದು ಪ್ರಶ್ನೆ?

ರಾಧೆಯೇಕೆ ಕೃಷ್ಣನಿಗೆ ಒಲಿದಳು?

ಚೆನ್ನಾಗಿದೆ ನಿನ್ನಾಟ. ಆಡದೇ ಕಾಣಬೇಕು ನಿನ್ನೊಳಗ ನಾ, ನನ್ನೊಳಗ ನೀ.

ನಿನ್ನ ಈ ಬೆಡಗಿನ ಮಾತೆಲ್ಲ ನಂಗೆ ಅರ್ಥ ಆಗಲ್ಲಪ್ಪ...

ಅರ್ಥ ಆಗಲ್ಲ ಅಂತಲೇ ಯುಗಯುಗಗಳ ದಾಟಿ ಬಂತಲ್ಲ ಈ ಪ್ರೀತಿ, ನನ್ನ ಶ್ರೀಮತಿ! ನಿನ್ ಡಿ.ಪಿ ಫೋಟೊ ಮಾತ್ರ ಸೂಪರ್ ಇದೆ...ಹಸಿರು ಸೀರೆಯಲಿ ಮುಡಿ ಬಿಚ್ಚಿದ ಚೆಲುವೆ, ಪ್ರಕೃತಿಯೇ ಹೆಣ್ಣಾಗಿ ನಿಂತಂತೆ, ಎಳೆ ಮಾವಿನ ಚಿಗುರೇ...

ಕನಸಿನುಣಿಸನು ಕೊಟ್ಟು ಕಾದುಕೊಂಡವನೇ, ಸಾಕು ಈ ವರ್ಣನೆ.

ಆಹಾ... ಚಿಟಕಿಯಷ್ಟು ಸೆಡವು, ಚಟಾಕಿನಷ್ಟು ಕೋಪ, ಉಳಿದಂತೆ ಪರಿಪೂರ್ಣ ಈ ಹೆಣ್ಣು, ನನ್ನೊಳಗಿನ ಟೊಳ್ಳು ಸಿಗಿವ ಕೊಡಲಿ. ಈ ನಕಲಿ ಸಂತೆಯ ಲೋಕ, ಮುಖವಾಡದ ಮಂದಿಯ ನಡುವೆ ನೀನೇ ನಿಜದ ಆಸರೆ...

ಮತ್ತೆ ಅದೇ ಲೋಕದ ಮಾತು, ಬಿಟ್ಹಾಕು ಮಾರಾಯ.

ಈ ಮೊದ್ದು ಹುಡುಗನಿಗೆ ಒಲಿದು ಬಂದವಳೇ, ಇಡಿಯಾಗಿ ಹೆಡೆಯಾಗಿ ಕವಿದುಕೊಂಡವಳೇ... ಪ್ರೇಮಿಗಳು ಈ ಲೋಕ ಬಿಡುವ ಮಾತಾಡಬಾರದು ಬಂಗಾರಿ. ಆಗೀಗ ಅಷ್ಟಿಷ್ಟು ಅದ ಹಿಡಿಯೋಣ. ‘ಸನ್ಯಾಸ ಸೀಯಲಿ, ಸಂಸಾರ ಸೈ ಎಂದಾಗಲಿ’ ಅನ್ನಲಿಲ್ಲವೇ ಜನಪದರು? ಎಲ್ಲ ಗಂಡುಜೀವಗಳ ದಿಕ್ಸೂಚಿ ರಾಧೆ ಎಂದು ಮನಗಾಣಿಸುವ ಈ ಲೋಕವ ಬಿಟ್ಹಾಕೋದು ಹೇಗೆ ರಾಧ?

ಕೃಷ್ಣ... ಜಗದ ಎಲ್ಲ ಗಂಡಿನ ಕೋಶದಲ್ಲೂ ಕುಳಿತ ಧ್ಯಾನದ ಲಂಗರೇ...

ಪ್ರತಿಕಾಲದ ಪ್ರತಿಯೊಂದು ಪ್ರೇಮಕ್ಕೂ ಅದರದ್ದೇ ಶ್ರುತಿ, ಪ್ರತಿ ಪ್ರೇಮಿಯೂ ಅದರ ಹುಡುಕಾಟದಲ್ಲಿ ತೊಡಗಿದ ಕೃತಿ...

ಆಹಾ...

ಹೆಂಗೆ ನನ್ನ ಕವಿತೆ?

ನಿನ್ನ ಪ್ರೀತಿಯ ಪಾಕದಲ್ಲಿ ಮುಳುಗಿದ ನನ್ನಂತೆ!

Send message

ಚಿತ್ರ: ಸಂತೋಷ್ ಸಸಿಹಿತ್ಲು

‘ಕ್ರಿಸ್ಮಿ’ ಜೋಡಿಯ ಲವ್ ಮಾಕ್ಟೇಲ್

ಸ್ಯಾಂಡಲ್‌ವುಡ್‌ನಲ್ಲಿ ‘ಕ್ರಿಸ್ಮಿ’ ಎಂದೇ ಖ್ಯಾತಿ ಪಡೆದಿರುವ ಡಾರ್ಲಿಂಗ್ ಕೃಷ್ಣ–ಮಿಲನಾ ನಾಗರಾಜ್ ‘ಲವ್ ಮಾಕ್ಟೇಲ್’ ಸಿನಿಮಾ ಸರಣಿ ಮೂಲಕ ಜನರಿಗೆ ಹತ್ತಿರವಾದವರು. ‘ನಮ್ ದುನಿಯಾ ನಮ್ ಸ್ಟೈಲ್’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ ಮಿಲನಾ ಹಾಗೂ ಕೃಷ್ಣ ಅವರದ್ದು ಲವ್ ಮ್ಯಾರೇಜ್. 2021ರಲ್ಲಿ ಪ್ರೇಮಿಗಳ ದಿನದಂದೇ ಹಸೆಮಣೆ ಏರಿದ ಈ ಜೋಡಿ, ಲವ್ ಮಾಕ್ಟೇಲ್, ಲವ್ ಬರ್ಡ್ಸ್ ಹಾಗೂ ಕೌಸಲ್ಯಾ ಸುಪ್ರಜಾ ರಾಮ ಸಿನಿಮಾಗಳಲ್ಲೂ ಜೋಡಿಯಾಗಿಯೇ ನಟಿಸಿರುವುದು ವಿಶೇಷ.

ಪ್ರೀತಿಯ ಬೇಬು

ನೆನಪಿರಬಹುದು, ನಿಮ್ಮನ್ನು ಮೊದಲ ಬಾರಿ ನೋಡಿದ್ದು 2012ರ ವರ್ಷಾಂತ್ಯದಲ್ಲಿ, ನನ್ನ ಮೊದಲ ಸಿನಿಮಾ ‘ನಮ್ ದುನಿಯಾ ನಮ್ ಸ್ಟೈಲ್’ನ ಕಚೇರಿಯಲ್ಲಿ. ಧಾರಾವಾಹಿ ಕ್ಷೇತ್ರದಿಂದ ಬಂದ ನಿಮಗೆ ನಟನೆ ಕರಗತವಾಗಿತ್ತು. ಕ್ರೀಡಾ ಕ್ಷೇತ್ರದಿಂದ ಬಂದ ನಾನು ನಟನೆಗೆ ಸಂಬಂಧಿಸಿದ ವಿಷಯಗಳ ಸಲಹೆಗಳನ್ನು ನಿಮ್ಮಿಂದ ಪಡೆದುಕೊಂಡಿದ್ದು ಮನಸ್ಸಿನಲ್ಲಿ ಇನ್ನೂ ಹಸುರಾಗಿದೆ. ಆಗ ನಾವಿಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದೆವು.

ಈ ಸ್ನೇಹ ಪ್ರೀತಿಗೆ ತಿರುಗಿದ್ದು 2014ರಲ್ಲಿ ಅಲ್ಲವೇ? ನಮ್ಮಿಬ್ಬರನ್ನು ಮತ್ತಷ್ಟು ಹತ್ತಿರ ಮಾಡಿದ್ದು ‘ಚಾರ್ಲಿ’ ಸಿನಿಮಾ. ನನಗೆ ನೀವು ಪ್ರೊಪೋಸ್ ಮಾಡಿದಾಗ ನಮ್ಮಿಬ್ಬರ ಸ್ನೇಹಕ್ಕೆ ಎರಡು ವರ್ಷವಾಗಿತ್ತು. ನೀವೇ ನೇರವಾಗಿ ಮದುವೆಯ ಪ್ರಸ್ತಾಪ ಇರಿಸಿದ್ರಿ; ನೆನಪಿಸಿಕೊಳ್ಳಿ. ಕೆಲಸದ ಮೇಲೆ ನಿಮಗಿದ್ದ ನಿಷ್ಠೆ, ಪ್ರೀತಿ, ಶಿಸ್ತು ನನ್ನನ್ನು ಮೊದಲು ಆಕರ್ಷಿಸಿದ ನಿಮ್ಮ ಗುಣಗಳು. ಯಾವ ವಿಷಯವನ್ನೂ ನೀವು ಸುಲಭವಾಗಿ ತೆಗೆದುಕೊಳ್ಳುತ್ತಿರ-ಲಿಲ್ಲ. ಸೆಟ್‌ಗೆ ನೀವು ತಡವಾಗಿ ಬಂದದ್ದನ್ನು ನಾನೆಂದೂ ನೋಡಿಲ್ಲ. ನಿಮ್ಮ ಈ ಸಮಯಪಾಲನೆ ಇಷ್ಟವಾಯಿತು. ನನ್ನನ್ನು ಬಹಳ ಶಿಸ್ತಿನಿಂದ ಬೆಳೆಸಿದ್ದರು. ಹೀಗಾಗಿಯೇ ಈ ರೀತಿಯ ಶಿಸ್ತು ಬೆಳೆಸಿಕೊಂಡಿರುವ ನಿಮ್ಮನ್ನು ಮನಸಾರೆ ಒಪ್ಪಿಕೊಂಡೆ.

ನಮ್ಮ ಕನಸಿನ ಕೂಸನ್ನು ಕೈಗೆತ್ತಿಕೊಂಡಾಗ ನಾವಿಬ್ಬರೂ ಪ್ರೀತಿಯಲ್ಲಿದ್ದೆವು. ಆಗ ನಮ್ಮಿಬ್ಬರ ಗುರಿ ಒಂದೇ ಆಗಿತ್ತು. ಅದುವೇ ‘ಲವ್ ಮಾಕ್ಟೇಲ್’. ಇಬ್ಬರೂ ಒಂದೇ ದಾರಿಯಲ್ಲಿ ಹೆಜ್ಜೆ ಹಾಕಿ ಯಶಸ್ಸನ್ನು ಕಂಡೆವು. ಕಥೆ ಬರೆಯುವುದರಿಂದ ಹಿಡಿದು ಸಿನಿಮಾವನ್ನು ತೆರೆಗೆ ತಂದ ದಿನದವರೆಗಿನ ಅವಧಿ ಇತ್ತಲ್ಲವೇ ಅದು ನಮ್ಮ ಜೀವನಕ್ಕೂ ಪಾಠವಾಯಿತು. ಅದೆಷ್ಟೋ ಬಾರಿ ನಾವಿಬ್ಬರು ಹಲವು ಗಂಟೆ ಜೊತೆಯಾಗಿ ಕುಳಿತು ಕಥೆ ಬರೆದಿದ್ದೇವೆ, ಸಿನಿಮಾದ ವಿಷಯಕ್ಕಾಗಿ ಚರ್ಚೆ ಮಾಡಿದ್ದೇವೆ, ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯಗಳೂ ಹುಟ್ಟಿಕೊಂಡಿದ್ದವು, ತಾಳ್ಮೆಯ ಪರೀಕ್ಷೆಗಳೂ ಆಗಿದ್ದವು. ಅವೆಲ್ಲವನ್ನೂ ಮಾತಿನಲ್ಲೇ ನಿಭಾಯಿಸಿದೆವು. ನಾನು ಸಿನಿಮಾ ನಿರ್ಮಾಣಕ್ಕೆ ಇಳಿಯಲು ನಿಮ್ಮ ಬೆಂಬಲ, ಪ್ರೋತ್ಸಾಹ ಹೆಚ್ಚೇ ಇತ್ತು. ಈ ಕೆಲಸಗಳು ನಮ್ಮಿಬ್ಬ-ರನ್ನು ಮತ್ತಷ್ಟು ಹತ್ತಿರ ತಂದವು. ನಾವು ಜನರ ಕಣ್ಣಲ್ಲಿ ‘ಕ್ರಿಸ್ಮಿ’ ಜೋಡಿಯಾದೆವು. 2021 ಫೆ. 14, ಪ್ರೇಮಿಗಳ ದಿನದಂದೇ ನಮ್ಮಿಬ್ಬರ ಮದುವೆಯಾಗಿದ್ದು ವಿಶೇಷವಲ್ಲದೆ ಮತ್ತೇನು?

ಬೇಬು, ನಿಮಗೊಂದು ಥ್ಯಾಂಕ್ಸ್ ಹೇಳಬೇಕು. ಏಕೆ ಗೊತ್ತೇ? ನಟಿಯಾಗಿ ನನಗೆ ಬಹಳ ಅಭದ್ರತೆ ಕಾಡುತ್ತಿದ್ದ ಸಮಯವದು. ಬಂದ ಅವಕಾಶಗಳಲ್ಲಿ ಸಿನಿಮಾ ಮಾಡುತ್ತಿದ್ದವಳು ನಾನು. ನಾನಾಗಿ ಹೋಗಿ ಅವಕಾಶ ಕೇಳಿದ್ದಿಲ್ಲ. ನನಗೆ ಬ್ರೇಕ್ ಸಿಕ್ಕಿದ್ದು 28ನೇ ವಯಸ್ಸಿನಲ್ಲಿ. ನನ್ನೊಳಗಿನ ಸಿನಿಮಾ ತುಡಿತ ಕಡಿಮೆಯಾಗದಂತೆ ನೋಡಿಕೊಂಡಿದ್ದು ನೀವು. ಮನಃಸ್ಥಿತಿ ದೃಢವಾಗಿರದೇ ಇದ್ದಾಗ ಭಾವನಾತ್ಮಕವಾಗಿ ನನ್ನ ಬೆಂಬಲಕ್ಕೆ ನಿಂತಿರಿ, ನನ್ನ ಮನೋಬಲ ಹಿಗ್ಗಿಸಿದಿರಿ. ‘ಜೀವನದಲ್ಲಿ ಯಶಸ್ಸು ಸಿಗುವುದಕ್ಕೆ ಒಂದು ಕಾಲ ಎಂಬುದಿಲ್ಲ. ಆ ಕಾಲ ಬಂದಾಗ ಆ ಕ್ಷೇತ್ರದಲ್ಲಿ ನೀನಿರಬೇಕು ಹಾಗೂ ಅದಕ್ಕಾಗಿ ಸಿದ್ಧಳಾಗಿರಬೇಕು’ ಎಂಬ ನಿಮ್ಮ ಸಲಹೆ ನನ್ನನ್ನು ಹುರಿದುಂಬಿಸುತ್ತಾ ಬಂದಿದೆ. ಇದು ನನಗೊಬ್ಬಳಿಗೇ ಅಲ್ಲ, ಎಲ್ಲರಿಗೂ ಪಾಠದಂತಿದೆ.

‘ಲವ್ ಮಾಕ್ಟೇಲ್’ ಮೂರನೇ ಕೂಸು (ಪಾರ್ಟ್ 3) ಇದೇ ಏ. 10ಕ್ಕೆ ಬರುತ್ತಿದೆ. ಈ ಕೂಸಿನ ಜೊತೆ ನಾವು ಹೆಜ್ಜೆ ಹಾಕುತ್ತಾ ಎಂಟು ವರ್ಷಗಳನ್ನು ಕಳೆದಿದ್ದೇವೆ ಎಂದರೆ ನಂಬಲಾಗುತ್ತಿಲ್ಲ. ಒಂದು ಕಂಪನಿಯ ವಹಿವಾಟು ಸರಾಗವಾಗಿ ನಡೆಯುತ್ತಿರುವಂತೆ ನಮ್ಮಿಬ್ಬರ ಈ ಸಿನಿಮಾ ಕೆಲಸ ಸಾಗುತ್ತಿದೆ. ಅಕ್ಷರಮಟ್ಟಿಗೆ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡಿದ್ದೇವೆ.

ಶೇ 3–5ರಷ್ಟು ಯಶಸ್ಸನ್ನಷ್ಟೇ ಕಾಣುತ್ತಿರುವ ಈ ಚಿತ್ರರಂಗದಲ್ಲಿ ನಮ್ಮಿಬ್ಬರ ಸಿನಿಮಾಗಾಗಿ ಜನ ಕಾಯುತ್ತಿರುವುದನ್ನು ನೋಡಿದಾಗ ಖುಷಿಯಾಗುತ್ತದೆ. ಇದು ನಮ್ಮಿಬ್ಬರಿಗೂ ಸವಾಲೂ ಆಗಿದೆ ಅಲ್ಲವೇ? ‘ಲವ್ ಮಾಕ್ಟೇಲ್’ ಎಂಬ ಚಂದದ ಶೀರ್ಷಿಕೆಯಿಟ್ಟು ನಾವು ಕೇವಲ ಪ್ರೀತಿಯ ಬಗ್ಗೆಯಷ್ಟೇ ಹೇಳದೆ, ಜೀವನದ ವಿವಿಧ ಹಂತ, ಭಾವನೆಗಳ ಬಗ್ಗೆ ಹೇಳುತ್ತಿದ್ದೇವೆ ಎಂಬ ಸಾರ್ಥಕತೆ ಇದೆ.

ಮಗಳು ಪರಿ ಸಿಟ್ಟು, ಹಟ ಮಾಡುತ್ತಿದ್ದರೆ ನಿಮ್ಮನ್ನೇ ಹೋಲುತ್ತಾಳೆ. ನೀವು ಬಾಲ್ಯದಲ್ಲಿ ಬಹಳ ತುಂಟ ಆಗಿದ್ದಿರಿ ಎಂದು ಕೇಳಿದ್ದೇನೆ. ಈಕೆಯ ತುಂಟತನವೇನೂ ಕಮ್ಮಿ ಇಲ್ಲ. ಆದರೂ ನನ್ನಷ್ಟು ತರ್ಲೆ ಇಲ್ಲ ಬಿಡಿ. ಎಲ್ಲರೂ ನಿಮ್ಮನ್ನು ‘ಡಾರ್ಲಿಂಗ್’ ಎನ್ನುವಾಗ ಖುಷಿಯಾಗುತ್ತದೆ. ನೀವು ಎಲ್ಲರ ಡಾರ್ಲಿಂಗ್ ಅಲ್ಲವೇ ಬೇಬು?

ನಿಮ್ಮ ಪ್ರೀತಿಯ
ಮಿಲನಾ

ಹರ ಹರಾ, ಇದೋ ಫಲಾಹಾರ

• ಗೀತಾ ಪ್ರದೀಪ್

ಅಹಂಕಾರ ತ್ಯಾಗ, ಆತ್ಮಶುದ್ಧಿ ಮತ್ತು ಶಿವಭಕ್ತಿಗೆ ಅರ್ಪಿತವಾದ ಶಿವರಾತ್ರಿಯು ಸಾಮಾನ್ಯವಾಗಿ ಫಾಲ್ಗುಣ ಮಾಸದ ಕೃಷ್ಣಪಕ್ಷದ ಚತುರ್ದಶಿ ದಿನ ಬರುತ್ತದೆ. ಚಳಿಗಾಲದ ಅಂತ್ಯದಲ್ಲಿ ಬರುವ ಶಿವರಾತ್ರಿ, ಸೂರ್ಯ–ಚಂದ್ರರ ಚಲನೆಯಿಂದಾಗುವ ಬದಲಾವಣೆಗೆ ದೇಹವನ್ನು ಹೊಂದಿಸಿಕೊಳ್ಳಲು ಮತ್ತು ಹೆಚ್ಚಿನ ಶಕ್ತಿ ಪಡೆಯಲು ನಮಗೆ ನೆರವಾಗುತ್ತದೆ.

ಭಕ್ತರು ಈ ದಿನದಂದು ಉಪವಾಸವಿದ್ದು, ರಾತ್ರಿಯಿಡೀ ಜಾಗರಣೆ ಮಾಡುತ್ತಾರೆ. ದೇಹಶುದ್ಧಿ, ಮನಃಶುದ್ಧಿಗಾಗಿ ಮಾಡುವ ಉಪವಾಸ ವ್ರತವನ್ನು ಹಲವಾರು ರೀತಿಯಲ್ಲಿ ಆಚರಿಸುತ್ತಾರೆ. ಪ್ರತಿಯೊಬ್ಬರ ಮನೆಯಲ್ಲೂ ಪೂಜೆ, ಉಪವಾಸ, ವ್ರತಕ್ಕೆ ಬಳಸುವ ಸಾಮಗ್ರಿಗಳು ಒಂದೇ ರೀತಿ ಇದ್ದರೂ ಪಾಲಿಸುವ ಪದ್ಧತಿಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಇದ್ದೇ ಇರುತ್ತದೆ. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಸಾಬುದಾನಿ ಅಥವಾ ಸಬ್ಬಕ್ಕಿ ಬಳಸಿದ ತಿಂಡಿ–ತಿನಿಸುಗಳನ್ನು ಅಂದು ಹೆಚ್ಚಾಗಿ ಮಾಡುತ್ತಾರೆ. ಸಾಬುದಾನಿಯಲ್ಲಿ ಕಾರ್ಬೊಹೈಡ್ರೇಟ್ ಅಂಶ ಹೆಚ್ಚಾಗಿ ಇರುವುದರಿಂದ, ಉಪವಾಸದ ಸಮಯದಲ್ಲಿ ದೇಹಕ್ಕೆ ಅಗತ್ಯವಿರುವ ಶಕ್ತಿ ಅದರಿಂದ ಲಭ್ಯವಾಗುತ್ತದೆ.

ತಂಬಿಟ್ಟು, ಶೇಂಗಾ ಉಂಡೆ, ಕಡಲೆಕಾಳು ಉಸುಲಿ, ಹೆಸರುಕಾಳು ಉಸುಲಿಯು ದೇವರ ನೈವೇದ್ಯಕ್ಕೆ ಶ್ರೇಷ್ಠ ಎನಿಸಿಕೊಂಡಿವೆ. ಯಾವುದೇ ಸಿಹಿತಿಂಡಿಯ ನೈವೇದ್ಯ ಮಾಡಲಿ, ಅದಕ್ಕೆ ತುಪ್ಪ, ಬೆಲ್ಲ ಬಳಸುವುದು ಸಾಮಾನ್ಯ.

ಉಪವಾಸದ ಉಪ್ಪು!

ಶಿವರಾತ್ರಿಯ ತಿಂಡಿ–ತಿನಿಸುಗಳಲ್ಲಿ ‘ಉಪವಾಸದ ಉಪ್ಪು’ ಅಂದರೆ ಸೈಂಧವ ಲವಣ ಬಳಸುವುದು ಕಡ್ಡಾಯ. ಇದನ್ನು ಶುದ್ಧ, ಸಾತ್ವಿಕ ಉಪ್ಪು ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಸೈಂಧವ ಲವಣವು ದೇಹದ ನೀರಿನ ಸಮತೋಲನವನ್ನು ಕಾಯುತ್ತದೆ. ಅಷ್ಟೇ ಅಲ್ಲ ಉಪವಾಸದಿಂದ ಆಗಬಹುದಾದ ತಲೆಸುತ್ತು, ದೇಹ ದುರ್ಬಲಗೊಳ್ಳುವುದನ್ನು ತಪ್ಪಿಸಲು ಸಹಾಯಕ ಎನ್ನಲಾಗಿದೆ.

ರಸಾಸ್ವಾದ

ಸಾಬುದಾನಿ ಚೂಡಾ

ಬೇಕಾಗುವ ಸಾಮಗ್ರಿ: ನೈಲಾನ್ ಸಾಬುದಾನಿ / ಸಬ್ಬಕ್ಕಿ, ಸಣ್ಣದಾಗಿ ಕತ್ತರಿಸಿದ ಹಸಿಮೆಣಸಿನಕಾಯಿ, ಶೇಂಗಾ, ಕರಿಬೇವು, ಸ್ವಲ್ಪ ಗೋಡಂಬಿ ಮತ್ತು ಒಣದ್ರಾಕ್ಷಿ, ಕರಿಯಲು ಬೇಕಾದಷ್ಟು ಎಣ್ಣೆ, ಸೈಂಧವ ಲವಣ, ಸ್ವಲ್ಪ ಸಕ್ಕರೆ ಪುಡಿ.

ವಿಧಾನ: ಮೊದಲು ಎಣ್ಣೆಯಲ್ಲಿ ಸ್ವಲ್ಪ ಸ್ವಲ್ಪ ನೈಲಾನ್ ಸಾಬುದಾನಿಯನ್ನು ಹಾಕಿ ದೊಡ್ಡ ಉರಿಯಲ್ಲಿ ಕರಿಯಬೇಕು. ಚಟಪಟ ಎಂದು ಸಿಡಿಯುವ ಶಬ್ದ ನಿಂತಿತು ಎಂದರೆ ಸಬ್ಬಕ್ಕಿ ಚೆನ್ನಾಗಿ ಅರಳಿದೆ ಎಂದರ್ಥ. ಎಣ್ಣೆಯಿಂದ ಚೆನ್ನಾಗಿ ಬಸಿದು ತೆಗೆದು ಒಂದು ಟಿಶ್ಯೂ ಪೇಪರ್ ಮೇಲೆ ಹಾಕಬೇಕು. ಎಣ್ಣೆಯಲ್ಲಿ ಒಟ್ಟಿಗೆ ಜಾಸ್ತಿ ಸಾಬುದಾನಿ ಹಾಕಿ ಫ್ರೈ ಮಾಡಬಾರದು. ಆಗ ಅವು ಚೆನ್ನಾಗಿ ಅರಳುವುದಿಲ್ಲ. ಇದೇ ರೀತಿ ಉಳಿದ ಸಾಬುದಾನಿಯನ್ನು ಕೂಡಾ ಕರಿಯಬೇಕು. ನಂತರ ಅದೇ ಎಣ್ಣೆಯಲ್ಲಿ ಕಡಲೆಬೀಜವನ್ನು ಕರಿದು ತೆಗೆಯಿರಿ. ಬಳಿಕ ಗೋಡಂಬಿ, ಒಣದ್ರಾಕ್ಷಿ, ಸಣ್ಣದಾಗಿ ಕತ್ತರಿಸಿದ ಹಸಿಮೆಣಸಿನಕಾಯಿ, ಕರಿಬೇವು ಹೀಗೆ ಒಂದೊಂದಾಗಿ ಎಲ್ಲ ಸಾಮಗ್ರಿಗಳನ್ನು ಫ್ರೈ ಮಾಡಬೇಕು. ಕರಿದ ಸಾಬುದಾನಿ ತಣ್ಣಗಾದ ಮೇಲೆ ಅದರಲ್ಲಿ ಸ್ವಲ್ಪ ಸಕ್ಕರೆ ಪುಡಿ, ರುಚಿಗೆ ತಕ್ಕಷ್ಟು ಸೈಂಧವ ಉಪ್ಪು ಹಾಕಿ ನಿಧಾನವಾಗಿ ಚೆನ್ನಾಗಿ ಮಿಕ್ಸ್ ಮಾಡಬೇಕು. ನಂತರ ಉಳಿದ ಎಲ್ಲಾ ಸಾಮಗ್ರಿಗಳನ್ನು ಹಾಕಿ ಮತ್ತೆ ಒಂದು ಬಾರಿ ಚೆನ್ನಾಗಿ ಕಲಸಿದರೆ ಗರಿಗರಿಯಾದ ಚೂಡಾ ಸಿದ್ಧ. ಗಾಳಿ ಆಡದ ಡಬ್ಬದಲ್ಲಿ ಒಂದು ತಿಂಗಳವರೆಗೆ ಶೇಖರಿಸಿ ಇಡಬಹುದು.

ಹುರಿಗಡಲೆ ತಂಬಿಟ್ಟು

ಬೇಕಾಗುವ ಸಾಮಗ್ರಿ: 1 ಬಟ್ಟಲು ಪುಟಾಣಿ ಅಥವಾ ಹುರಿಗಡಲೆ ಪುಡಿ, ಅರ್ಧ ಬಟ್ಟಲು ತುರಿದ ಒಣಕೊಬ್ಬರಿ, ಅರ್ಧ ಬಟ್ಟಲು ಹುರಿದ ಶೇಂಗಾ ಪುಡಿ (ತರಿತರಿ), ಕಾಲು ಚಮಚ ಏಲಕ್ಕಿ ಪುಡಿ, 1 ಚಮಚ ತುಪ್ಪ, 2 ದೊಡ್ಡ ಚಮಚ ಹುರಿದ ಎಳ್ಳು, ಮುಕ್ಕಾಲು ಬಟ್ಟಲು ಬೆಲ್ಲ (ತುರಿದದ್ದು).

ಹೀಗೆ ಮಾಡಿ: ಅಗಲವಾದ ಪಾತ್ರೆಯಲ್ಲಿ ಹುರಿಗಡಲೆ ಪುಡಿ, ಶೇಂಗಾ ಪುಡಿ, ಹುರಿದ ಒಣಕೊಬ್ಬರಿ, ಹುರಿದ ಎಳ್ಳು ಮತ್ತು ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಪಕ್ಕಕ್ಕೆ ಇಡಿ. ನಂತರ ಒಲೆಯ ಮೇಲೆ ಒಂದು ಪಾತ್ರೆಯಲ್ಲಿ ಬೆಲ್ಲ ಹಾಕಿ ಅದು ಮುಳುಗುವಷ್ಟು ನೀರು ಹಾಕಿ ಕಾಯಿಸಿ. ಬೆಲ್ಲ ಕರಗುವವರೆಗೆ ಕೈಬಿಡದೆ ತಿರುವುತ್ತಾ ಇರಬೇಕು. ಬೆಲ್ಲ ಸಂಪೂರ್ಣ ಕರಗಿದರೆ ಸಾಕು, ಒಲೆ ಆರಿಸಿ (ಪಾಕ ತೆಗೆಯುವ ಅವಶ್ಯಕತೆ ಇಲ್ಲ). ಕರಗಿಸಿದ ಬೆಲ್ಲವನ್ನು ಸೋಸಿಕೊಳ್ಳಿ. ಮೊದಲು ಸಿದ್ಧ ಮಾಡಿ ಇಟ್ಟುಕೊಂಡಿರುವ ಹುರಿಗಡಲೆ ಪುಡಿಯಲ್ಲಿ ಸೋಸಿದ ಬೆಲ್ಲದ ನೀರನ್ನು ಸ್ವಲ್ಪ ಸ್ವಲ್ಪ ಹಾಕುತ್ತಾ ಕಲಸಬೇಕು. 1– 2 ಚಮಚ ಕರಗಿಸಿದ ತುಪ್ಪ ಸೇರಿಸಿ ಸರಿಯಾಗಿ ನಾದಿ. ಆ ಮಿಶ್ರಣವನ್ನು ತೆಗೆದುಕೊಂಡು ಚೆನ್ನಾಗಿ ಒತ್ತಿ ಉಂಡೆ ಕಟ್ಟಿದರೆ ಆಯಿತು, ತಂಬಿಟ್ಟು ನೈವೇದ್ಯಕ್ಕೆ ಸಿದ್ಧ. ಗಾಳಿ ಆಡದ ಡಬ್ಬದಲ್ಲಿ 4– 5 ದಿನ ಸಂಗ್ರಹಿಸಿ ಇಡಬಹುದು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅನುಭವ ಹೆಚ್ಚಾದಂತೆ ಜಗತ್ತು ನಿಮ್ಮೆದುರು ತೆರೆದುಕೊಳ್ಳುತ್ತಾ ಹೋಗುತ್ತದೆ.

–ಕನ್‌ಫ್ಯೂಷಿಯಸ್

ಸಂಪಾದಕೀಯ

ಸಂಸತ್ ಕಲಾಪದ ಮಹತ್ವ–ಘನತೆ ಸಂರಕ್ಷಿಸಲು ಸಭಾಧ್ಯಕ್ಷಪೀಠ ವಿಫಲ

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿ ಪಕ್ಷಗಳು ಮಂಡಿಸಿರುವ ಅವಿಶ್ವಾಸ ಗೊತ್ತುವಳಿಯು ಸಂಖ್ಯಾಬಲದ ಕೊರತೆಯಿಂದಾಗಿ ವಿಫಲವಾಗುವುದು ಖಚಿತ. ಆದರೆ, ಆ ನಿರೀಕ್ಷಿತ ಫಲಿತಾಂಶವು ಅವಿಶ್ವಾಸ ನಿರ್ಣಯಕ್ಕೆ ಕಾರಣವಾಗಿರುವ ಮುಖ್ಯ ವಿಷಯದ ಮಹತ್ವ ಕಡಿಮೆ ಆಗಲು ಕಾರಣವಾಗಬಾರದು. ಸ್ಪೀಕರ್ ಅವರ ನಡವಳಿಕೆಯು ಸಭಾಧ್ಯಕ್ಷರು ಎತ್ತಿಹಿಡಿಯಬೇಕಾದ ಅತ್ಯುತ್ತಮ ಮಾನದಂಡಗಳಿಗೆ ಅನುಗುಣವಾಗಿಲ್ಲ; ಹಿಂದಿನ ಕೆಲವು ಸ್ಪೀಕರ್‌ಗಳು ರೂಪಿಸಿಕೊಟ್ಟ ಅನುಸರಣೀಯ ಪೂರ್ವ ನಿದರ್ಶನಗಳ ಮಾದರಿಗೆ ಅನುಗುಣವಾಗಿಯೂ ಇಲ್ಲ. ಶುಕ್ರವಾರ ಕೊನೆಗೊಂಡ ಬಜೆಟ್ ಅಧಿವೇಶನದ ಮೊದಲ ಹಂತದ ಕಲಾಪದಲ್ಲಿನ ಸ್ಪೀಕರ್ ಅವರ ನಡವಳಿಕೆಯು ಅವಿಶ್ವಾಸ ನಿರ್ಣಯಕ್ಕೆ ತಕ್ಷಣದ ಪ್ರಚೋದನೆ ಒದಗಿಸಿದ್ದರೂ, ಈ ಹಿಂದೆಯೂ ಓಂ ಬಿರ್ಲಾ ಅವರು ಸದನವನ್ನು ನಿರ್ವಹಿಸಿರುವ ರೀತಿ ಬಗ್ಗೆ ಪ್ರತಿಪಕ್ಷಗಳು ಆತಂಕ, ಅಸಮಾಧಾನ ವ್ಯಕ್ತಪಡಿಸಿವೆ. ಕಲಾಪಗಳು ನ್ಯಾಯೋಚಿತವಾಗಿ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಮಾದರಿಯ ಅತ್ಯುತ್ತಮ ಸಂಪ್ರದಾಯವನ್ನು ಅನುಸರಿಸುವಂತೆ ನೋಡಿಕೊಳ್ಳುವುದು ಸಭಾಧ್ಯಕ್ಷರ ಹೊಣೆಗಾರಿಕೆಯಾಗಿದೆ. ಆದರೆ, ಈ ಬಗ್ಗೆ ಬಿರ್ಲಾ ಅವರಿಗೆ ಯಾವುದೇ ಸ್ಪಷ್ಟ ಅರಿವಿರುವಂತೆ ಕಾಣಿಸುತ್ತಿಲ್ಲ. ಸದನವನ್ನು ಅವರು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಪ್ರತಿಪಕ್ಷಗಳು ವ್ಯಕ್ತಪಡಿಸಿರುವ ಕಳವಳವನ್ನು ನಿವಾರಿಸುವಲ್ಲಿ ಅವರ ಸ್ಪಂದನ ನಿರಾಶಾದಾಯಕವಾಗಿದೆ.



> ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಕಾರ್ಯವಿಧಾನ ಸದನದ ಅತ್ಯುತ್ತಮ ಮಾನದಂಡಗಳಿಗೆ ಹಾಗೂ ಸಭಾಧ್ಯಕ್ಷರ ಪ್ರೌಢಿಮೆಯ ಪೂರ್ವ ನಿದರ್ಶನಗಳ ಮೇಲ್ಪಂಕ್ತಿಗೆ ತಕ್ಕನಾಗಿಲ್ಲ.

ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ನೆನಪುಗಳ ಅಪ್ರಕಟಿತ ಕೃತಿಯ ಆಯ್ದ ಭಾಗಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅನುಮತಿ ನಿರಾಕರಿಸಿದ ಸ್ಪೀಕರ್ ಅವರ ನಿರ್ಧಾರ ವಿವಾದಕ್ಕೆ ಕಾರಣವಾಯಿತು. ರಾಷ್ಟ್ರೀಯ ಭದ್ರತೆಯ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಸೇನೆಯ ಮಾಜಿ ಮುಖ್ಯಸ್ಥರು ಗಮನಿಸಿರುವ ಅಂಶಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಹಕ್ಕು ರಾಹುಲ್ ಗಾಂಧಿ ಅವರಿಗಿದೆ. ಕಲಾಪಕ್ಕೆ ಸಂಬಂಧಿಸಿಲ್ಲದ ಪಠ್ಯಗಳನ್ನು ಸದನದಲ್ಲಿ ಓದುವುದನ್ನು ನಿಯಮಗಳು ನಿರ್ಬಂಧಿಸುತ್ತವಾದರೂ, ಪಠ್ಯದ ನೈಜತೆಯನ್ನು ಪ್ರಮಾಣೀಕರಿಸುವ ಮೂಲಕ ಸಂಸದರು ಸದನದಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶವಿದೆ. ಹಾಗಾಗಿ, ರಾಹುಲ್ ಅವರಿಗೆ ನರವಣೆ ಅವರ ಪುಸ್ತಕದಲ್ಲಿನ ವಿವರಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಸಭಾಧ್ಯಕ್ಷರು ಅನುಮತಿ ನೀಡಬೇಕಿತ್ತು. ಸಂಸತ್ತಿನ ಪರಂಪರೆಯಲ್ಲಿ, ಲೋಕಸಭೆಯ ಪ್ರತಿಪಕ್ಷದ ನಾಯಕರು ಮಾತನಾಡುವುದನ್ನು ನಿರ್ಬಂಧಿಸಿದ್ದು ಒಪ್ಪುವಂಥದ್ದಲ್ಲ. ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪ್ರಧಾನಿ ಅವರು ಮಾತನಾಡಲಿಲ್ಲ. ಈ ಸಂದರ್ಭದಲ್ಲಿ ಸದನಕ್ಕೆ ಗೈರುಹಾಜರಾಗುವಂತೆ ಪ್ರಧಾನಿ ಅವರನ್ನು ಸ್ಪೀಕರ್ ವಿನಂತಿಸಿದ್ದು ವಿವಾದಾಸ್ಪದವಾಗಿದೆ. ತಮ್ಮ ನಡವಳಿಕೆಗೆ ಸಮರ್ಥನೆಯಾಗಿ, ಮಹಿಳಾ ಸದಸ್ಯರಿಂದ ಪ್ರಧಾನಿ ಮೇಲೆ ದಾಳಿ ನಡೆಯುವ ಸಾಧ್ಯತೆ ಇತ್ತು ಎಂದು ಸ್ಪೀಕರ್ ಹೇಳಿದ್ದಾರೆ. ಪ್ರಧಾನಿ ಅವರ ಮೇಲೆ ದಾಳಿ ನಡೆಸುವ ಯೋಜನೆಯಿದ್ದುದರ ಬಗ್ಗೆ ವಿಶ್ವಾಸಾರ್ಹ ಮಾಹಿತಿಯಿತ್ತು ಎಂದಿರುವ ಸ್ಪೀಕರ್, ಅದಕ್ಕೆ ಪುರಾವೆ ಒದಗಿಸಿಲ್ಲ. ಪ್ರಧಾನಿ ಅವರ ಸುರಕ್ಷತೆಯ ಬಗ್ಗೆ ಆತಂಕವಿದ್ದರೆ, ಆ ಕುರಿತು ಸದನದ ನಾಯಕರೊಂದಿಗೆ ಚರ್ಚಿಸಬಹುದಿತ್ತು. ಮಹಿಳಾ ಸದಸ್ಯರ ಬಗ್ಗೆ ಸ್ಪೀಕರ್ ಆಡಿದ ಮಾತುಗಳು ಸದಸ್ಯರ ಘನತೆಗೆ ಚ್ಯುತಿ ತರುವಂತಿವೆ. ಸಭಾಧ್ಯಕ್ಷರು ನಿಷ್ಪಕ್ಷಪಾತವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸೋತಾಗ, ಕಲಾಪ ಅರ್ಥಪೂರ್ಣವಾಗಿ ಸಾಗುವುದಕ್ಕೆ ಅಗತ್ಯವಾದ ಅತ್ಯುತ್ತಮ ಮಾನದಂಡಗಳು ಹಾಗೂ ಸಂಪ್ರದಾಯಗಳನ್ನು ನಿರ್ಲಜ್ಜೆಯಿಂದ ನಿರ್ಲಕ್ಷಿಸಿದಾಗ, ಈ ಕುಸಿತ ಮತ್ತಷ್ಟು ಆತಂಕ ಹುಟ್ಟಿಸುವಂತಹದ್ದಾಗುತ್ತದೆ. ಅವಿಶ್ವಾಸ ಗೊತ್ತುವಳಿ ಮಂಡನೆಯ ಸಂದರ್ಭವನ್ನು ಬಿರ್ಲಾ ಅವರು ಸ್ವತಃ ಆಹ್ವಾನಿಸಿಕೊಂಡಿದ್ದಾರೆ. ಬಜೆಟ್ ಅಧಿವೇಶನದ ಎರಡನೇ ಹಂತ ಮಾರ್ಚ್ 9ರಿಂದ ಪ್ರಾರಂಭವಾಗಲಿದ್ದು, ಸ್ಪೀಕರ್ ಕಾರ್ಯವಿಧಾನದ ಪರಾಮರ್ಶೆ ಹಾಗೂ ಸದನದ ಘನತೆಯನ್ನು ಸಂರಕ್ಷಿಸುವ ಕುರಿತಾದ ಅರ್ಥಪೂರ್ಣ ಚರ್ಚೆ ನಡೆಯಬೇಕಾಗಿದೆ.

ಜಾಲಡಿ: ಆಡಳಿತಕ್ಕೆ ಕಿವುಡು

ಕರ್ನಾಟಕದ ಕೆಎಎಸ್ ಆಕಾಂಕ್ಷಿಗಳು ಮತ್ತು ಲೋಕಸಭೆಯಲ್ಲಿ ವಾದಿಸುವ ರಾಹುಲ್ ಗಾಂಧಿ, ಇಬ್ಬರದೂ ಒಂದೇ ಸ್ಥಿತಿ. ಎಷ್ಟೇ, ವಾಸ್ತವಿಕವಾಗಿ ದಾಖಲೆಗಳ ಸಮೇತ ಮಾತನಾಡಿದರೂ, ಆಳುವವರು ಕಿವಿಗೊಡುವುದಿಲ್ಲ.

ಪ್ರವೀಣ್ ಎಂ. ಮಗದುಮ್, ಲೇಖಕ, ‘ಎಕ್ಸ್’ನಿಂದ

ಕಿಡಿನುಡಿ

ಭಾರತವು ಮಾರಾಟವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂಸತ್‌ನಲ್ಲಿ ಅಬ್ಬರಿಸುತ್ತಾರೆ. ಆದರೆ, ಕರ್ನಾಟಕದಲ್ಲಿ ನಡೆದಿರುವ ಅಬಕಾರಿ ಇಲಾಖೆಯ ಲಂಚ ಪ್ರಕರಣದ ಬಗ್ಗೆ ಮೌನವಾಗಿರುವುದೇಕೆ?

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 14-2-2001

• ಪ್ರತಿಕೂಲ ಪರಿಣಾಮ ಬೀರುವ ಹೊಸ ಕಂಪ್ಯೂಟರ್ ವೈರಸ್

ಬೆಂಗಳೂರು, ಫೆ. 13– ಹೋದ ವರ್ಷವಷ್ಟೆ ‘ಐ ಲವ್ ಯೂ’ ಎಂಬ ವೈರಸ್ ಆಕ್ರಮಣದಿಂದ ಕಂಗೆಟ್ಟಿದ್ದ ಕಂಪ್ಯೂಟರ್ ರಂಗ, ಈಗ ಇನ್ನೊಂದು ಹೊಸ ವೈರಸ್‌ಗೆ ತುತ್ತಾಗಿದೆ.

‘ವಿಬಿಎಸ್/ ಎಸ್‌ಎಸ್‌ಟಿ’ ಎಂಬ ವೈರಸ್ ದಾಳಿ ಇಟ್ಟಿದ್ದು, ಇದು ಸೋಮವಾರ ಅಮೆರಿಕದಲ್ಲಿ ಪತ್ತೆ ಆಗುವ ಮೂಲಕ ಕಂಪ್ಯೂಟರ್ ತಜ್ಞರ ನಿದ್ರೆ ಕೆಡಿಸಿದೆ. ಟೆನಿಸ್ ತಾರೆ ಅನ್ನಾ ಕುರ್ನಿಕೋವಾ ಅವರ ಚಿತ್ರವನ್ನು ತೆರೆದು ತೋರಿಸುವ ಆಮಿಷ ಒಡ್ಡುವ ಈ ಹೊಸ ವೈರಸ್‌ನಿಂದ ‘ಇ–ಮೇಲ್’ ಸೇವೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ ಎಂಬ ಭಯ ವ್ಯಕ್ತವಾಗಿದೆ.

• ಭೀಮಾ: ರಾಜ್ಯದಿಂದಲೇ ಬ್ಯಾರೇಜ್‌ಗೆ ಕೃಷ್ಣ ಸಲಹೆ

ಕಲ್ಬುರ್ಗಿ, ಫೆ. 13– ಬತ್ತಿರುವ ಭೀಮಾ ನದಿಗೆ ಮಹಾರಾಷ್ಟ್ರವಲ್ಲದೆ ರಾಜ್ಯದ ನಾರಾಯಣಪುರ ಅಣೆಕಟ್ಟೆಯಿಂದಲೂ ನೀರು ಬಿಡಿಸುವುದಾಗಿ ಹೇಳಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಮಹಾರಾಷ್ಟ್ರಕ್ಕೆ ತೊಂದರೆ ಕೊಡದಿರಲು ಕೆಲವು ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಿ ನಾವೇ ನೀರು ಪೂರೈಸುವ ಕಾರ್ಯ ಮಾಡಬೇಕು ಎಂದು ಸಲಹೆ ನೀಡಿದರು.

ನಾರಾಯಣಪುರ ಅಣೆಕಟ್ಟೆಯಿಂದ ನೀರು ಬಿಡಲಾಗುವುದೇ? ಎಂದು ವರದಿಗಾರರು ಪ್ರಶ್ನೆ ಕೇಳಿದಾಗ, ಅಲ್ಲಿಂದಲೂ ಬಿಡಿಸುವುದಾಗಿ ಮುಖ್ಯಮಂತ್ರಿ ಕೃಷ್ಣ ಅವರು ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 14-2-1951

• ಐವತ್ತು ಸಹಸ್ರ ಕಮ್ಯುನಿಸ್ಟರ ಉಗ್ರ ಪ್ರತಿದಾಳಿ

ಟೋಕಿಯೋ, ಫೆ. 13– ಮಧ್ಯರಂಗದಲ್ಲಿ ಐವತ್ತು ಸಹಸ್ರವನ್ನೂ ಮೀರಿದ ಕಮ್ಯುನಿಸ್ಟ್ ಸೇನಾ ಪಡೆ ಭಾರಿ ಪ್ರತಿಭಟನೆ ಕೈಗೊಂಡು ವಿಶ್ವಸಂಸ್ಥೆ ಸಾಲಿನೊಳಕ್ಕೆ ಏಳು ಮೈಲಿ ದೂರ ನುಗ್ಗಿವೆ.

ವೊನ್ಜವಿಗೆ 10 ಮೈಲಿ ಉತ್ತರದಲ್ಲಿರುವ ಹೊಯಂಗ್ಯಂಗ್ ಮತ್ತು 18 ಮೈಲಿ ಪಶ್ಚಿಮದಲ್ಲಿರುವ ಚಿಪ್ಯಾಂಗ್ ಮಧ್ಯದಲ್ಲಿರುವ ವಿಶ್ವಸಂಸ್ಥೆಯ ಸೇನಾ ನೆಲೆಗಳ ಮಧ್ಯೆ ಕಮ್ಯುನಿಸ್ಟರು ಬಿರುಗಾಳಿಯಂತೆ ರಭಸದಿಂದ ನುಗ್ಗಿ ಬಂದರು. ಭಾರಿ ಪ್ರಮಾಣದಲ್ಲಿ ವಿಮಾನ ದಾಳಿ ಹಾಗೂ ಫಿರಂಗಿ ಗುಂಡಿನ ಮಳೆ ಆಗುತ್ತಿದ್ದರೂ ಲೆಕ್ಕಿಸದೆ ಸುಮಾರು 4ರಿಂದ 6 ಡಿವಿಜನ್‌ಗಳಷ್ಟು ಚೀಣೀ ಮತ್ತು ಉತ್ತರ ಕೊರಿಯನ್ ಸೈನಿಕರು ಹಾಂಗ್‌ಚಾನ್‌ನಿಂದ ದಕ್ಷಿಣಕ್ಕೆ ಪರ್ವತಗಳ ಕಣಿವೆಯಲ್ಲಿ ನುಗ್ಗಿ ಬಂದರು.

ಮಸಣಮೌನದಲ್ಲಿ ಗಾಜಾದ ದನಿ

ವಿಶ್ಲೇಷಣೆ

ರಘುನಂದನ

ಕೇರಳದ ಅಂತರರಾಷ್ಟ್ರೀಯ ನಾಟಕೋತ್ಸವ, ಇಂಟರ್‌ನ್ಯಾಷನಲ್ ಥಿಯೇಟರ್ ಫೆಸ್ಟಿವಲ್ ಆಫ್ ಕೇರಳ (ಐಟಿಎಫ್‌ಒಕೆ) ನಮ್ಮ ದೇಶದಲ್ಲಿ ನಡೆಯುವ ನಾಟಕೋತ್ಸವಗಳಲ್ಲಿ ಪ್ರಮುಖವಾದದ್ದು. ಈ ವರ್ಷದ ಜನವರಿ 27ರಂದು ಅದರಲ್ಲಿ ಇಸ್ರೇಲಿನ ‘ದ ಲಾಸ್ಟ್ ಪ್ಲೇ ಇನ್ ಗಾಜಾ’ ಎಂಬ ನಾಟಕದ ಎರಡು ಆಟಗಳು ನಡೆಯಬೇಕಿತ್ತು. ಆದರೆ, ಆ ರಂಗತಂಡಕ್ಕೂ ಆ ನಾಟಕವನ್ನು ಬರೆದು, ನಿರ್ದೇಶಿಸಿದ ಎಯ್ನಾಟ್ ವೆಯ್‌ಟ್‌ಸ್‌ಮನ್ ಎಂಬಾಕೆಗೆ ನಮ್ಮ ಒಕ್ಕೂಟದ ಸರ್ಕಾರವು ವೀಸಾ ಕೊಡಲಿಲ್ಲ.

ಐವತ್ತೆರಡು ವರ್ಷ ವಯಸ್ಸಿನ ಎಯ್ನಾಟ್ ವೆಯ್‌ಟ್‌ಸ್‌ಮನ್ ಯಹೂದ್ಯರು; ಇಸ್ರೇಲಿನ ನಾಗರಿಕರು; ದೇಶದ ರಾಜಧಾನಿ ಟೆಲ್ ಅವಿವ್‌ನಲ್ಲಿ ಇರುವವರು; ಇಸ್ರೇಲ್ ರಾಷ್ಟ್ರಪ್ರಭುತ್ವದ ಯಹೂದ್ಯ ಪಾರಮ್ಯದ ಜ಼ಯೊನಿಸ್ಟ್ ನೀತಿಗೆ ಎದುರಾಗಿ ಪ್ಯಾಲೆಸ್ಟೀನಿಯರ ಹಕ್ಕುಗಳ ಪರವಾದ ರಂಗಕೃತಿಗಳನ್ನು ರಚಿಸುತ್ತ, ಆಡುತ್ತ, ಆಡಿಸುತ್ತ ಬಂದವರು; ದಬ್ಬಾಳಿಕೆಗೆ ಸಿಲುಕಿದ ಬೇರೆಡೆಯ ಜನತೆಯ ಪರವಾಗಿಯೂ ಹಾಗೆಯೇ ಮಾಡುತ್ತ ಬಂದವರು. ಆದರೆ, ಆಕೆಗೂ ಆಕೆಯ ತಂಡಕ್ಕೂ ನಮ್ಮ ದೇಶದ ವೀಸಾ ಸಿಗಲಿಲ್ಲ.

ಆದರೇನು? ಜ. 27ರಂದು ಆಕೆಯ ತಂಡದ ನಾಟಕದ ಆಟ ನಡೆಯಬೇಕಿದ್ದ ಆ ಎರಡೂ ವೇಳೆಗಳಲ್ಲಿ, ತ್ರಿಶ್ಶೂರಿನ ರಂಗಮಂದಿರವು ತುಂಬಿತ್ತು; ರಂಗದ ಮೇಲೆ, ಮಲಯಾಳ ಕವಿಗಳಾದ ಪಿ.ಎನ್. ಗೋಪಿಕೃಷ್ಣನ್, ಅನ್ವರ್ ಅಲಿ ಹಾಗೂ ಪಿ. ರಾಮನ್ ಅವರು ಗಾಜಾ–ಪ್ಯಾಲೆಸ್ಟೀನ್ ಕುರಿತ ಕವಿತೆಗಳನ್ನು ಓದಿದರು; ಅವರ ಓದಿಗೆ ಕೇರಳದ ವಾದ್ಯ ಸಂಗೀತಗಾರ ಥಾಮಸ್ ಜೋ ಅವರ ಸ್ಯಾಕ್ಸೊಫೋನಿನ ಘನಶೋಕದ ಸ್ವರಮೇಳವಿತ್ತು; ಕೇರಳ ಸಂಗೀತ ನಾಟಕ ಅಕಾಡೆಮಿಯ ಕಾರ್ಯದರ್ಶಿ ಕರಿವೆಳ್ಳೂರ್ ಮುರಳಿಯವರು ಮುಖ್ಯಭಾಷಣ ಮಾಡಿದರು; ಪ್ಯಾಲೆಸ್ಟೀನಿನ ಸ್ವಾತಂತ್ರ್ಯದ ಬಯಕೆಯ ಮೂರ್ತಿಯೇ ತಾನಾಗಿದ್ದ ಆ ನಾಡಿನ ಮಹಾಕವಿ ಮಹಮೂದ್ ದಾರ್ವಿಷ್ ಅವರ ಕವನಗಳನ್ನು ಓದಲಾಯಿತು. ಎಯ್ನಾಟ್ ವೆಯ್‌ಟ್‌ಸ್‌ಮನ್ ಅವರ ಬರೆದು ಕಳಿಸಿದ ಸಂದೇಶವನ್ನು ಶ್ರೀಲಂಕಾದ ರಂಗನಿರ್ದೇಶಕಿ ರುವಾಂತಿ ಡಿ. ಚಿಕೇರಾ ಅವರು ಓದಿದರು. ಅಳಿವು ಅಳಿಯಿತು. ರಂಗಸ್ಥಳ, ರಂಗಮಂದಿರ ಮತ್ತು ಕೇಳುನೋಡುಗರೆದೆಯಲ್ಲಿ ಗಾಜಾ–ಪ್ಯಾಲೆಸ್ಟೀನ್ ತುಂಬಿಬಂತು.

ಕೇರಳದ ಎಡಪಂಥೀಯ ಸರ್ಕಾರದವರು ಹಾಗೂ ಉತ್ಸವದ ಸಂಘಟಕರು ಅದೆಲ್ಲ ಹಾಗಾಗುವಂತೆ ನೋಡಿಕೊಂಡರು. ಈ ವಿದ್ಯಮಾನವನ್ನು ಮೊನ್ನೆಯಷ್ಟೇ ನಡೆದುಹೋದ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಆದುದಕ್ಕೆ ಹೋಲಿಸಿ ನೋಡಿ. ಇಲ್ಲಿ ಪ್ಯಾಲೆಸ್ಟೀನಿನ ಬವಣೆಯನ್ನು ಕಾಣಿಸುವ ಸಿನಿಮಾಗಳ ದೇಖಾವೆಗೆ ದೇಶದ ಒಕ್ಕೂಟ ಸರ್ಕಾರದ ಪರವಾನಗಿ ದೊರಕಲಿಲ್ಲ. ಆದರೆ, ಕರ್ನಾಟಕ ಸರ್ಕಾರವಾಗಲಿ, ಉತ್ಸವದ ಸಂಘಟಕರಾಗಲಿ, ಅಲ್ಲಿ ನೆರೆಯುತ್ತಿದ್ದ ಸಿನಿಮಾ ಮಂದಿ, ಸಾಹಿತಿಗಳಾಗಲಿ ಆ ದುಷ್ಟಕ್ರಮದಿಂದಾದ ಶೂನ್ಯವನ್ನು ತುಂಬಿ, ಪ್ಯಾಲೆಸ್ಟೀನನ್ನು ನಮ್ಮ ಮನದಲ್ಲಿ ಉದ್ದೀಪಿಸಲು ಬೇಕಾದ ಧರ್ಮ ಪ್ರಜ್ಞೆ, ದಿಟ್ಟತನ ತೋರಲಿಲ್ಲ. ಇನ್ನು ನಮ್ಮಲ್ಲಿ ನಡೆಯುವ ಸಾಹಿತ್ಯಬ್ರಹ್ಮರ ಜಾತ್ರೆಗಳು, ಕವಿತೆಯ ಸಂಜೆಗಳು, ಕಲೆಗಳೊಂದಿಗಿನ ಮಾತುಕತೆಗಳು, ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ ಹಾಗೂ ಅಭಿನಂದನೆಯ ಸಮಾರಂಭಗಳು, ರಾಜಧಾನಿ ಮತ್ತು ಜಿಲ್ಲಾ ಹಬ್ಬ ಹಾಗೂ ನಾಟಕೋತ್ಸವಗಳು, ಮತ್ತು ಅವುಗಳಲ್ಲಿ ಪಾಲ್ಗೊಳ್ಳುವವರು – ಇವರ, ಇವುಗಳ ಆತ್ಮಲೋಲುಪತೆಯ ಬಗ್ಗೆ ಹೇಳಲು ಏನೂ ಉಳಿದಿಲ್ಲ.

ಉಳಿದೆಲ್ಲವನ್ನೂ ಎಯ್ನಾಟ್ ವೆಯ್‌ಟ್‌ಸ್‌ಮನ್ ಅವರ ಸಂದೇಶವೇ ಹೇಳುತ್ತದೆ. ಅವರ ಇಡಿಯ ಬರಹದ ಇಂಗ್ಲಿಷ್ ಅನುವಾದವು ‘ದ ವಯರ್’ ಜಾಲಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು, ಇಲ್ಲಿ ಅದರ ಸಾರಾಂಶವನ್ನು ಕನ್ನಡಕ್ಕೆ ಒಗ್ಗಿಸಿ ಕೊಟ್ಟಿದೆ:

“ನಮ್ಮ ನಾಟಕವು ವಿಧ್ವಂಸಗೊಂಡಿರುವ ಗಾಜಾವನ್ನು ರಂಗಭೂಮಿಯ ಮೂಲಕ ಮತ್ತೊಮ್ಮೆ ಕಟ್ಟಿಕೊಳ್ಳುವುದರ ಕಡೆಗಿನ ಒಂದು ಆರ್ತ ಪ್ರಯತ್ನವಾಗಿದೆ.

> ಮನುಷ್ಯವಿರೋಧಿ ಕೃತ್ಯಗಳನ್ನು ಅಡಗಿಸಿಡುವ ವಿದ್ಯಮಾನಗಳ ಭಾಗವಾಗಿ ಪ್ಯಾಲೆಸ್ಟೀನ್‌ನ ಸಂಕಟಗಳನ್ನು ಅನಾವರಣಗೊಳಿಸುವ ಕಲಾ ಅಭಿವ್ಯಕ್ತಿಗಳ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾಗುತ್ತಿದೆ. ಆದರೆ, ಈ ನಿರ್ಬಂಧಕ್ಕೆ ಕೇರಳದ ಬರಹಗಾರರು ಹಾಗೂ ಕಲಾವಿದರು ಕಂಡುಕೊಂಡ ಸೃಜನಶೀಲ ಪ್ರತಿರೋಧದ ದಾರಿ ‘ಅಳಿಸುವ ಪ್ರಯತ್ನವನ್ನು ಅಳಿಸಿಹಾಕು’ವಂತಿತ್ತು.

ಕೇರಳದ ಈ ನಾಟಕೋತ್ಸವದ ವಸ್ತುವು ‘ಮಸಣಮೌನದ ನಡುವಿನ ದನಿಗಳು’ ಎಂಬುದು. ಆದ್ದರಿಂದ ಇಲ್ಲಿ ನಾಟಕ ಆಡಲು ನಾವು ಹಾತೊರೆದೆವು. ಆದರೆ, ನಮಗೆ ವೀಸಾ ಸಿಗಲಿಲ್ಲ. ಮೇಲ್ಮನವಿ ಸಲ್ಲಿಸಿದೆವು. ನಮ್ಮ ನಾಟಕ ಯಾಕೆ ಅಪಾಯಕಾರಿ ಅಲ್ಲ, ಒಂದಿಡೀ ಜನತೆಯ ನರಮೇಧ ಮತ್ತು ಕಗ್ಗೊಲೆ ವಿರುದ್ಧದ ನಮ್ಮ ನಿಲವು ಯಾಕೆ ನ್ಯಾಯಪರವಾದದ್ದು ಎಂದು ನಾವು ವಿವರಿಸಬೇಕಾಯಿತು. ನಮ್ಮ ವಿವರಣೆ ಮತ್ತು ಕೋರಿಕೆಗೆ ತಾತ್ತ್ವಿಕವಾದ ಒಪ್ಪಿಗೆ ಸಿಕ್ಕಿತು. ವೀಸಾ ಸಿಗಲಿಲ್ಲ. ತಾತ್ತ್ವಿಕವಾದ ಒಪ್ಪಿಗೆ! ಹೊಸ ಥರದ ಕಾಫ್ಕಾಲೋಕದ ಉಪಾಧಿ; ಅಡ್ಡಗೋಡೆ ಮೇಲೆ ತುದಿಗಾಲಲ್ಲಿ ನಿಲ್ಲೆಂದು ನೀಡುವ ಚಿತ್ರಹಿಂಸೆ.

ಭಾರತದ ಇಂದಿನ ಸರ್ಕಾರ ಇಸ್ರೇಲನ್ನು ಬೆಂಬಲಿಸುತ್ತಿದೆ ಹೌದಾದರೂ, ಈ ದೇಶಕ್ಕೆ ವಸಾಹತುಶಾಹಿಯ ವಿರುದ್ಧ ಹೋರಾಡಿದ ದೊಡ್ಡ ಪರಂಪರೆಯೇ ಇದೆ. ಒಂದು ಕಾಲದಲ್ಲಿ ಭಾರತವು ಅಲಿಪ್ತ ರಾಷ್ಟ್ರಗಳ ಕೂಟದ ಮುಂಚೂಣಿಯಲ್ಲಿತ್ತು; ಪ್ರಪಂಚದ ಬೇರೆ ಬೇರೆ ದೇಶಗಳ ಸ್ವಾತಂತ್ರ್ಯ ಹೋರಾಟಗಳನ್ನು ಬೆಂಬಲಿಸಿತು; ಪ್ಯಾಲೆಸ್ಟೀನ್ ತಾನೊಂದು ಸ್ವತಂತ್ರ ದೇಶ ಅನ್ನುವುದಕ್ಕೆ 1988ರಷ್ಟು ಹಿಂದೆಯೇ ಅಧಿಕೃತ ಮನ್ನಣೆ ನೀಡಿತು. ಆದರೆ, ಈಚಿನ ದಶಕಗಳಲ್ಲಿ– ಅದರಲ್ಲೂ ಮೋದಿ ಅವರು ಪ್ರಧಾನಿಯಾದ ಮೇಲೆ– ಅದು ಇಸ್ರೇಲಿನೊಂದಿಗೆ ಅಧಿಕೃತ ಅನುಸಂಧಾನ–ಅನುಷ್ಠಾನದಲ್ಲಿ ತೊಡಗಿದೆ. ಭಾರತಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ದೇಶಗಳ ಪೈಕಿ ಇಸ್ರೇಲ್ ಮೂರನೆಯ ಸ್ಥಾನದಲ್ಲಿದೆ. ಭಾರತದ ಸರ್ಕಾರವು ಅಲ್ಪಸಂಖ್ಯಾತರನ್ನು– ವಿಶೇಷವಾಗಿ ಕಾಶ್ಮೀರದಲ್ಲಿರುವವರನ್ನು ಮತ್ತಿತರ ಮುಸಲ್ಮಾನರನ್ನು– ಹತ್ತಿಕ್ಕಲು ಇಸ್ರೇಲಿನ ಸರ್ವೇಕ್ಷಣ ಹಾಗೂ ಬೇಹುಗಾರಿಕೆಯ ತಂತ್ರಜ್ಞಾನವನ್ನು ಬಳಸುತ್ತಿದೆ.

ಇದೆಲ್ಲವೂ ಸೃಜನಶೀಲ ಕಲೆಯ ಮೇಲೆ ನಿಗಾ ಇಟ್ಟು ಕಲಾವಿದರ ಸ್ವೇಚ್ಛೆಯನ್ನು ನಿಗ್ರಹಿಸುವ ಸೆನ್ಸಾರು ಕೆಲಸವಷ್ಟೇ ಎಂದು ತಿಳಿಯಬಾರದು. ದುರಧಿಕಾರದ ಗಳಿಕೆ ಮತ್ತು ರಕ್ಷಣೆ ಹಾಗೂ ದೌರ್ಜನ್ಯವೇ ಅಡಿಪಾಯವಾದ ರಾಷ್ಟ್ರಗಳ ದುಷ್ಟಕೂಟಗಳಿಂದಾಗಿ ನಮ್ಮ ಕಣ್ಣೆದುರು ಜಗತ್ತಿನಲ್ಲಿ ಮೈದಾಳುತ್ತಿರುವ ಹೊಸದೊಂದು ಏರ್ಪಾಡಿನ ಆಳಕಳವಳಕಾರಿಯಾದ ಕುರುಹು ಇದು. ಭಾರತ, ಇಸ್ರೇಲ್‌ಗಳ– ಜ಼ಯೊನಿಸಂ ಮತ್ತು ಹಿಂದೂತ್ವಗಳ– ನಡುವೆ ದಿನದಿನಕ್ಕೂ ಹೆಚ್ಚು ಬಿಗಿಯಾಗುತ್ತ ಬಂದಿರುವ ಜೋಡಾಟದೊಂದು ದಿಗಣ ಇದು, ಸೊಕ್ಕುಸೊಕ್ಕಿನ ಕುಮ್ಮಿಚಟ್ಟು: ಈ ಜೋಡಿಯಾಟ ನಡೆಯುತ್ತಿರುವುದು ಸೈನ್ಯಗಳ ಸಜಾವಣೆ ಮತ್ತು ಶಸ್ತ್ರಾಸ್ತ್ರಗಳ ವಿಷಯ, ಆರ್ಥಿಕತೆಯ ವಲಯ, ಹಾಗೂ ತಂತ್ರಜ್ಞಾನ ಹಂಚಿಕೆ ಹಾಗೂ ಸಹಕಾರದ ವಿಷಯದಲ್ಲಿ ಮಾತ್ರವಲ್ಲ. ಅದೆಲ್ಲವುದರಾಚೆಗೆ (ವರ್ಣಭೇದ ನೀತಿಯನ್ನೂ ಮತ್ತೆಲ್ಲ ರೀತಿಯ ದೌರ್ಜನ್ಯವನ್ನೂ ಎತ್ತಿಹಿಡಿಯುವ ರಾಷ್ಟ್ರೀಯತಾವಾದಗಳು, ಸಾತ್ತ್ವಿಕ ರಾಜಕೀಯ ಮತ್ತು ಕಲೆಗಳ ದನಿಯನ್ನು ನಿರ್ನಾಮ ಮಾಡುವ ಹುನ್ನಾರಗಳು – ಇವು ಕೂಡ ಸುಸಂಸ್ಕೃತಿಯೇ ಎಂದು ನಾವು ಒಪ್ಪಬಲ್ಲೆವಾದರೆ) ‘ನೀ ನಾನೇ, ನಾ ನೀನೇ’ ಎಂಬಂಥ ಈ ನೆಂಟಸ್ತನದ ಆಟ ನಡೆಯುತ್ತಿರುವುದು ಸಂಸ್ಕೃತಿಯ ಕ್ಷೇತ್ರದಲ್ಲಿ. ಭಾರತವು ಇಸ್ರೇಲ್‌ನಿಂದ ಕೊಳ್ಳುತ್ತಿರುವುದು ಶಸ್ತ್ರಾಸ್ತ್ರಗಳನ್ನು ಮಾತ್ರವಲ್ಲ. ಭಾರತದ ಇಸ್ರೇಲ್–ಅಪ್ಪುಗೆ ಅದಕ್ಕಿಂತಲೂ ಬಿಗಿ, ಬಿಸಿಯಾದದ್ದು. ಪ್ರಭುತ್ವಶಕ್ತಿಯೊಂದು ನಿಜ, ಸಹಜ, ದೇಸೀ ಸಂಸ್ಕೃತಿಯ ಜಾಗದಲ್ಲಿ ಭ್ರಾಮಕ ರಾಷ್ಟ್ರೀಯತಾವಾದದ ಸಂಸ್ಕೃತಿಯನ್ನು ಜನತೆಯ ಮೇಲೆ ಹೇಗೆ, ಎಷ್ಟೆಲ್ಲ ಹೇರಬಹುದು ಎಂಬ ಕಡುಜುಲುಮೆಯ ಪಾಠಗಳನ್ನು ಕಲಿಯುತ್ತಿದೆ ಅದು ಇಸ್ರೇಲ್‌ನಿಂದ.

ಈ ಎರಡೂ ದೇಶಗಳ ಸರ್ಕಾರಗಳು ಸಾತ್ತ್ವಿಕವಾದ ವಿರೋಧದ ದನಿಯಡಗಿಸಿ, ಮಟ್ಟಹಾಕಲು ಕೈಜೋಡಿಸಿರುವುದಕ್ಕೆ ಇದೀಗ ನಮ್ಮ ತಂಡಕ್ಕೆ ಆಗಿರುವುದು ಮತ್ತೊಂದು ಉದಾಹರಣೆಯಾಗಿದೆ. ನ್ಯಾಯವಂತಿಕೆಯನ್ನು ಹಂತ ಹಂತವಾಗಿ ನಿರ್ನಾಮ ಮಾಡುವ ಉದ್ಯಮ ಇದು. ಮೊದಲು ಕಲ್ಲುಮಣ್ಣು ಸಿಮೆಂಟುಕಬ್ಬಿಣ ಸಮೇತ ಗಾಜಾ ಎಂಬ ಊರಿಗೆ ಊರನ್ನೇ ನೆಲಸಮಮಾಡುವುದು; ಅಲ್ಲಿನ ಜನರನ್ನು ನರಮೇಧಕ್ಕೆ ಗುರಿಮಾಡಿ, ಇಡೀ ಜನತೆಗೆ ಜನತೆಯ ಹುಟ್ಟನ್ನೇ ಅವರ ರಕ್ತಮಾಂಸಮೂಳೆಗಳ ಸಮೇತ ಅಡಗಿಸಿಬಿಡುವುದು. ಬಳಿಕ ಪತ್ರಕರ್ತ, ಫೋಟೊಗ್ರಾಫರ್‌ಗಳೆಂಬ ನೂರಾರು ಜನ ಸಾಕ್ಷಿದಾರರನ್ನು ಕೊಲ್ಲುವುದು; ಅವರು ಒದಗಿಸುವ ಸಾಕ್ಷ್ಯಗಳನ್ನು ಸುಟ್ಟುಹಾಕುವುದು; ದಾಖಲೆ–ಮಾಹಿತಿಯ ಕೇಂದ್ರಗಳೆಂಬ ಇತಿಹಾಸದ ಕಾವಲುಗಳ ಮೇಲೆ ಬಾಂಬಿನ ಮಳೆಗರೆಯುವುದು; ಆ ಬಳಿಕ, ಕಲೆಯ ಕೊರಳಾದ ಕಲಾವಿದರು, ಸಾಹಿತಿಗಳು, ಕವಿಗಳೆಂಬ ಅಂತಃಸಾಕ್ಷಿಗಳನ್ನು ಸಾಯಿಸುವುದು; ಇನ್ನಿದೀಗ, ನೆನಪಿನ ದುಮ್ಮಾನದೊಂದು ದಾಖಲೆಯೂ ಕಳೆದುಹೋದದ್ದರ ಮರುಗಳಿಕೆಯ ಸಾತ್ತ್ವಿಕ ಪ್ರಯತ್ನವೂ ಆದ ನಮ್ಮ ಈ ನಾಟಕವನ್ನು ಅಡಗಿಸುವುದು. ಅಳಿದುಹೋದದ್ದನ್ನು ನೆನಪಿನಲ್ಲಾದರೂ ಕಾಯ್ದುಕೊಳ್ಳುವುದರ ಪ್ರಯತ್ನವನ್ನೂ, ಅದನ್ನು ಕುರಿತ ಮರುಕವನ್ನೂ ಅಳಿಸಿಹಾಕಲು ಹವಣಿಸುವ ರಾಷ್ಟ್ರಪ್ರಭುತ್ವಗಳ ಒಗ್ಗಟ್ಟಿನ ಉದ್ಯಮ ಇದು.

ಗಾಜಾದಲ್ಲಿ ಆಗುತ್ತ ಬಂದಿರುವ ನರಮೇಧದ ಬಗೆಗೆ ಮೌನ ತಾಳುವುದೆಂದರೆ ಮುಂದೆ ಬೇರೆಲ್ಲೆಲ್ಲೋ ಆಗಲಿರುವ ನರಮೇಧಗಳಿಗೊಂದು ಪರವಾನಗಿ, ಸಮಜಾಯಿಷಿ ನೀಡಿದಂತೆ; ಅಂಥದು ಮತ್ತೆ ಮತ್ತೆ ಆಗಲಿ ಎಂದು ಕರೆ ನೀಡಿದಂತೆ.

ಆದರೆ ಕೇರಳದ ಕಲಾವಿದರು, ಸಾಹಿತಿಗಳು, ಬೇರೆಲ್ಲ ಜನರೂ ನಮ್ಮೊಂದಿಗೆ, ಗಾಜಾ–ಪ್ಯಾಲೆಸ್ಟೀನಿನ ಜನರೊಂದಿಗೆ ನಿಂತರು. ‘ಐಟಿಎಫ್‌ಒಕೆ’ ಉತ್ಸವವು ಎಲ್ಲ ಜುಲುಮೆಯ ನಡುವೆಯೂ ಬಾರದಿದ್ದ, ಆಗದಿದ್ದ ನಾಟಕವೊಂದಕ್ಕೆ ಒಂದಿಡೀ ಸಂಜೆಯನ್ನು ಮುಡಿಪಿಡುವ ನ್ಯಾಯವಂತಿಕೆ ಮತ್ತು ಎದೆಗಾರಿಕೆ ತೋರಿದೆ; ಅಳಿಸುವ ಪ್ರಯತ್ನವನ್ನು ಅಳಿಸಿಹಾಕುವುದರ ಕಡೆಗಿನ ದಮ್ಮಪದ ತಾನಾಗಿದೆ.”



ವಾಚಕರ ವಾಣಿ

ಪಿಂಚಣಿ ಸ್ಥಗಿತ: ಸಂಕಷ್ಟದಲ್ಲಿ ವಿಧವೆಯರು

ವಿಧವೆಯರು ಹಾಗೂ ಹಿರಿಯ ನಾಗರಿಕರಿಗೆ ರಾಜ್ಯ ಸರ್ಕಾರ ಮಾಸಿಕ ಪಿಂಚಣಿ ನೀಡುತ್ತಿರುವುದು ಸರಿಯಷ್ಟೆ. ಆದರೆ, ಸುಮಾರು ಒಂದೂವರೆ ವರ್ಷದಿಂದ ವಿಧವಾ ಪಿಂಚಣಿಯನ್ನು ತಡೆ ಹಿಡಿಯಲಾಗಿದೆ. ಈ ಹಣವನ್ನೇ ನಂಬಿಕೊಂಡಿರುವ ಸಾವಿರಾರು ಫಲಾನುಭವಿಗಳು ಸಂಕಷ್ಟ ಎದುರಿಸುವಂತಾಗಿದೆ. ರಾಜ್ಯ ಮುಖ್ಯ ಕಾರ್ಯದರ್ಶಿ ಅವರು, ಈ ಬಗ್ಗೆ ಪರಿಶೀಲನೆ ನಡೆಸಿ ಬಾಕಿ ಇರುವ ಪಿಂಚಣಿ ಮೊತ್ತ ಪಾವತಿಯ ಜೊತೆಗೆ, ನಿಯಮಿತವಾಗಿ ಪಿಂಚಣಿಯನ್ನು ಪಾವತಿಸಲು ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಬೇಕಿದೆ.

ಬೆಂ.ಮು. ಮಾರುತಿ, ಬೆಂಗಳೂರು

ಪರಭಾಷಾ ಮೋಹ: ಸಂಸದರು ಮರೆತರೆ?

ಮೈಸೂರು ಸ್ಯಾಂಡಲ್ ಸೋಪಿಗೆ ನಟಿ ತಮನ್ನಾ ಭಾಟಿಯಾ ರಾಯಭಾರಿಯಾಗಿದ್ದಾರೆ. ಇದಕ್ಕೆ ಪರ–ವಿರೋಧ ವ್ಯಕ್ತವಾಗುತ್ತಿದೆ. ಸ್ಥಳೀಯ ನಟಿಯರಿಗೆ ಆದ್ಯತೆ ನೀಡಬೇಕಿತ್ತು ಎನ್ನುವುದು ಕೆಲವರ ವಾದ. ಅರ್ಹತೆ ಮತ್ತು ವ್ಯವಹಾರ ಪರಿಗಣನೆಯ ಆಧಾರದ ಮೇಲೆ ತಮನ್ನಾ ಅವರನ್ನು ಆಯ್ಕೆ ಮಾಡಲಾಗಿದೆ ಎನ್ನುವುದು ಸರ್ಕಾರದ ಹೇಳಿಕೆ. ಚಿಕ್ಕಬಳ್ಳಾಪುರದ ಸಂಸದ ಡಾ. ಕೆ. ಸುಧಾಕರ್ ಕೂಡ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವುದು ಸೋಜಿಗ. ಚಿಕ್ಕಬಳ್ಳಾಪುರದ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ನೆರೆಯ ರಾಜ್ಯದ ತೆಲುಗು ನಟ, ನಟಿಯರನ್ನು ಬಳಸಿಕೊಂಡಿದ್ದನ್ನು ಸಂಸದರು ಇಷ್ಟು ಬೇಗ ಮರೆತಿರುವುದು ಹೇಗೆ?

ನೇತ್ರಾರಂಗ, ಬೆಂಗಳೂರು

ಇ–ಸ್ಟ್ಯಾಂಪ್ ಕಮಿಷನ್ ಗೊಂದಲಮಯ

ಸಾರ್ವಜನಿಕರು ಅಫಿಡವಿಟ್, ಬಾಡಿಗೆ–ಭೋಗ್ಯದ ಕರಾರು ಹಾಗೂ ಇತರೆ ಒಪ್ಪಂದ ಪತ್ರಗಳನ್ನು ಕಾನೂನು ಪ್ರಕಾರ ಇಂಡಿಯನ್ ನಾನ್ ಜುಡಿಷಿಯಲ್ ಇ-ಸ್ಟ್ಯಾಂಪ್‌ನಲ್ಲೇ ಮುದ್ರಿಸ ಬೇಕಿದೆ. ಬ್ಯಾಂಕ್‌ನಲ್ಲಿ ಸಾಲ ಪಡೆಯುವಾಗ ಅಡಮಾನ ಪತ್ರಕ್ಕೂ ಇ-ಸ್ಟ್ಯಾಂಪ್ ಸಲ್ಲಿಸಬೇಕಿದೆ. ಆದರೆ, ಸಾರ್ವಜನಿಕರಿಗೆ ಇ-ಸ್ಟ್ಯಾಂಪ್ ಪಡೆಯುವಾಗ ಮೊತ್ತಕ್ಕೆ ಅನುಗುಣವಾಗಿ ನೀಡುವ ಕಮಿಷನ್ ಬಗ್ಗೆ ಗೊತ್ತಿರುವುದಿಲ್ಲ. ಸ್ಟ್ಯಾಂಪ್ ನೀಡುವವರು ಮೌಖಿಕವಾಗಿ ಹೇಳುವ ಮೊತ್ತ ಪಾವತಿಸುತ್ತಾರೆ. ಈ ಕಮಿಷನ್ ಶುಲ್ಕವು ಇ-ಸ್ಟ್ಯಾಂಪ್‌ನಲ್ಲೂ ನಮೂದು ಆಗುವುದಿಲ್ಲ. ಎಷ್ಟು ಮೊತ್ತಕ್ಕೆ ಎಷ್ಟು ಕಮಿಷನ್ ನೀಡಬೇಕು ಎಂಬ ಬಗ್ಗೆ ಅಧಿಕೃತ ಕೇಂದ್ರಗಳಲ್ಲಿ ಪ್ರದರ್ಶಿಸಬೇಕಿದೆ.

ಪುನೀತ್ ಎನ್., ಮೈಸೂರು

‘ಸೌಂದಾಳಾ’ ಮಾದರಿ

ಭಲೇ ಮಹಾರಾಷ್ಟ್ರದ ಸೌಂದಾಳಾ
ಏನು ನಿನ್ನ ಸೌಂದರ್ಯ!
ನೀನಾಗಿರುವೆ ಜಾತಿಮುಕ್ತ ಗ್ರಾಮ
ಹೇಳುವರು ನಿನ್ನೂರಿನವರು
‘ನಮ್ಮದು ಮನುಷ್ಯ ಜಾತಿ’
‘ಮಾನವೀಯತೆ ನಮ್ಮ ಜಾತಿ’ ಎಂದು
ಜಾತಿಧ್ರುವೀಕರಣದ ವಿಷಮ ಕಾಲದಲಿ
ಜಾತಿಸಂಕೋಲೆಯಲಿ ನರಳುವವರಿಗೆ
ನೀನಾಗಿರುವೆ ಮಾದರಿ ಪ್ರೇರಣೆ!

ಸಿ.ಪಿ. ಸಿದ್ಧಾಶ್ರಮ, ಮೈಸೂರು

‘ವಂದೇ ಮಾತರಂ’ ಯುವಜನರಿಗೆ ಸ್ಫೂರ್ತಿ

‘ವಂದೇ ಮಾತರಂ’ ಬರೀ ಗೀತೆಯಲ್ಲ; ಅದು ಸ್ವಾತಂತ್ರ್ಯ ಹೋರಾಟದ ಮಂತ್ರವಾಗಿತ್ತು. ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಹೋರಾಡಲು ಈ ಎರಡು ಪದಗಳು ನೀಡಿದ ಶಕ್ತಿ ಅಪಾರ. ಯುವಪೀಳಿಗೆಗೆ ಈ ಗೀತೆಯ ಹಿಂದಿರುವ ಐತಿಹಾಸಿಕ ಹಿನ್ನೆಲೆ ಮತ್ತು ಭಾವನೆಗಳ ಅರಿವು ಮೂಡಿಸುವ ತುರ್ತಿದೆ. ಬಂಕಿಮಚಂದ್ರರ ‘ಆನಂದಮಠ’ ಕಾದಂಬರಿಯ ಭಾಗವಾಗಿ ಮೂಡಿಬಂದ ಈ ಗೀತೆ ಭಾರತಮಾತೆಯನ್ನು ನೆಲವಾಗಿಯಷ್ಟೇ ನೋಡದೆ, ಪೂಜನೀಯ ಶಕ್ತಿಯಾಗಿ ಬಿಂಬಿಸುತ್ತದೆ. ಶಾಲೆ–ಕಾಲೇಜು, ಸಾರ್ವಜನಿಕ ಸಮಾರಂಭಗಳಲ್ಲಿ ‘ವಂದೇ ಮಾತರಂ’ ಗೀತೆಯನ್ನು ಹಾಡುವುದು ದೇಶಪ್ರೇಮದ ಕೆಚ್ಚನ್ನು ಜಾಗೃತವಾಗಿಡಲು ನೆರವಾಗಲಿದೆ.

ದೇವರಾಜ ಭಂಡಾರಿ, ಬಳಗಾನೂರ

ಜಿಬಿಎ ಅಧಿಕಾರಿಗಳ ಮೇಲೆ ಕ್ರಮ ಏಕಿಲ್ಲ?

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಕಟ್ಟಡದ ವಾಸ್ತವಕ್ಕಿಂತ ಕಡಿಮೆ ಅಳತೆ ನಮೂದಿಸಿ, ತೆರಿಗೆ ವಂಚಿಸಿದವರಿಂದ ₹370 ಕೋಟಿ ಬಾಕಿ ವಸೂಲಿಗೆ ಮುಂದಾಗಿದೆ. ಇದು ಸರಿ. ಆದರೆ, ಇದರಲ್ಲಿ ಅಧಿಕಾರಿಗಳ ಲೋಪವೂ ಇದೆ ಅಲ್ಲವೆ? ಆರು ವರ್ಷಗಳಿಂದ ಕರ್ತವ್ಯಭ್ರಷ್ಟರಾಗಿ ನಿದ್ರಿಸುತ್ತಿದ್ದ ಅಧಿಕಾರಿಗಳಿಗೆ ಹಿಂಬಡ್ತಿ, ವೇತನ ಕಡಿತದಂತಹ ಶಿಕ್ಷೆ ವಿಧಿಸಬೇಕಲ್ಲವೆ? ಹಿಂಬಾಕಿಯನ್ನು 15 ದಿನದೊಳಗೆ ಪಾವತಿಸುವಂತೆ ಸೂಚಿಸಲಾಗಿದೆ. ಬಾಡಿಗೆಯನ್ನೇ ನಂಬಿ ಬದುಕುತ್ತಿರುವ ಹಿರಿಯ ನಾಗರಿಕರು, ಬಡ ಮಧ್ಯಮ ವರ್ಗದ ಕುಟುಂಬದವರು ಇದಕ್ಕಾಗಿ ಸಾಲ ಮಾಡಬೇಕಾಗುತ್ತದೆ. ಏಪ್ರಿಲ್‌ನಲ್ಲಿ ಆದಾಯ ತೆರಿಗೆ, ಮನೆ ಕಂದಾಯ ಪಾವತಿ ಮಾಡಬೇಕಾಗಿದೆ. ಹಾಗಾಗಿ, ಸರ್ಕಾರವು ದಂಡ ಮನ್ನಾ ಮಾಡಿ ಅಳತೆ ವ್ಯತ್ಯಾಸದ ಬಾಕಿಯನ್ನು ಕಂತಿನ ರೂಪದಲ್ಲಿ ಪಾವತಿಸಲು ಅನುಕೂಲ ಕಲ್ಪಿಸಬೇಕಿದೆ.

ಟಿ. ಉಮಾ ಶಂಕರ್ ಲಕ್ಷ್ಮೀಪುರ, ಬೆಂಗಳೂರು

ರಾಜತಾಂತ್ರಿಕ ಬಿಕ್ಕಟ್ಟು ಶಮನಗೊಳ್ಳಲಿ

ವಿಶ್ವಕಪ್ ಟಿ20 ಕ್ರಿಕೆಟ್‌ನಲ್ಲಿ ಭಾರತದ ವಿರುದ್ಧ ಆಡಲು ಪಾಕಿಸ್ತಾನ ಸಮ್ಮತಿಸಿದೆ. ಇದು ಕ್ರೀಡಾಜಗತ್ತಿಗೆ ಸೀಮಿತವಾಗದೆ ರಾಜತಾಂತ್ರಿಕ ಮತ್ತು ಆರ್ಥಿಕ ದೃಷ್ಟಿಯಿಂದಲೂ ಮಹತ್ವದ ನಿರ್ಧಾರ. ಪಾಕಿಸ್ತಾನ ತಂಡ ಮೈದಾನಕ್ಕಿಳಿಯಲು ನಿರ್ಧರಿಸಿರುವುದು ಸ್ವಾಗತಾರ್ಹ. ಇದು ಜಾಹೀರಾತು ವಹಿವಾಟು ಮತ್ತು ಕ್ರೀಡಾ ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡುತ್ತದೆ. ಅಲ್ಲದೆ, ದಶಕಗಳಿಂದ ಹೆಪ್ಪುಗಟ್ಟಿರುವ ಉಭಯ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಮಂಜನ್ನು ಕರಗಿಸುವ ಶಕ್ತಿ ಹೊಂದಿದೆ. ಈ ‘ಕ್ರಿಕೆಟ್ ರಾಜತಾಂತ್ರಿಕತೆ’ಯು ಸದ್ಯ ಸ್ಥಗಿತಗೊಂಡಿರುವ ದ್ವಿಪಕ್ಷೀಯ ಸರಣಿಗಳ ಪುನರಾರಂಭಕ್ಕೆ ಮತ್ತು ಏಷ್ಯಾದಲ್ಲಿ ಕ್ರೀಡಾ ಹೂಡಿಕೆದಾರರ ವಿಶ್ವಾಸ ಹೆಚ್ಚಿಸಲು ಭದ್ರ ತಳಪಾಯವಾಗಬಲ್ಲದು.

ಎಸ್.ಎನ್. ಭಟ್, ಸೈಪಂಗಲ್ಲು

ಚುರುಮುರಿ

ಹಳೆ ಟ್ರಂಕು...

• ತುರುವೇಕೆರೆ ಪ್ರಸಾದ್

‘ಏನ್ರಪ್ಪಾ, ನಮ್ ಕೆಲವ್ರು ಶಾಸಕ್ರು ಈ ಕುರಿ, ಎಮ್ಮೆ, ನಾಯಿ ಬಗ್ಗೆ ಅಧ್ಯಯನ ಮಾಡಕ್ಕೆ ಫಾರಿನ್ಗೆ ಒಂಟವ್ರಲ್ಲ’ ಎಂದ ಗುದ್ಲಿಂಗ.

‘ಅಧ್ಯಯನ ಅಲ್ಲ, ಪರಿಸ್ಥಿತಿ ಇನ್ನೂ ಅಧ್ವಾನ ಆದಾತು ಅಂತ ಓಯ್ತಾವ್ರೆ. ಮ್ಯಾಕೆ, ಎಮ್ಮೆ ಬಗ್ಗೆ ಅಲ್ ಓಗ್ ಏನಾ ತಿಳ್ಕಳದೈತೆ? ಕುದ್ರೆ ಬಗ್ಗೆ ತಿಳ್ಕಳಕ್ಕೆ ಓಯ್ತಾವ್ರೆ’ ಎಂದ ಮಾಲಿಂಗ.

‘ಕುದ್ರೆ ಬಗ್ಗೇನಾ? ಅಂಗಂದ್ರೆ ಏನಾ?’

‘ಲೇಯ್, ಈ ದೇಶೀ ಕುದ್ರೆಗಳು ಅವಾಗವಾಗ ಲಾಯ, ಲಾಯಲ್ಟಿ ಎಲ್ಲಾ ಬದ್ಲಾಯಿಸ್ತಾ ಇರ್ತವೆ. ಅದಕ್ಕೆ ಅವನ್ನ ವಿದೇಶೀ ಲಾಯಕ್ಕೆ ಕಳಿಸ್ತಾವ್ರೆ’.

‘ಅಲ್ಲ, ಇಲ್ಲೇ ನಮ್ಮಲ್ಲೇ ಬೇಕಾದಷ್ಟು ರಾಯಲ್ ಲಾಯಗಳು ಇದ್ವಲ್ಲಪ್ಪ! ಅವನ್ನೆಲ್ಲಾ ಅಲ್ಲೇ ತಾನೇ ಕಟ್ತಾ ಇದ್ದದ್ದು?’

‘ಬಂಡೆ ಕುದ್ರೆ ವ್ಯವಹಾರದಲ್ಲಿ ಸ್ಪೆಷಲಿಸ್ಟು! ಗುಜರಾತು, ಹೈದ್ರಾಬಾದಲ್ಲೆಲ್ಲಾ ಲಾಯ ಮಾಡಿ ಅನುಭವ ಐತೆ. ಅದ್ಕೇ ರಿಸ್ಕ್ ತಗಳಾದು ಬ್ಯಾಡ ಅಂತ ಫಾರಿನ್‌ಗೆ ಕಳಿಸ್ತಾವ್ರೆ. ಅಲ್ ಓಗಿ ಕುದ್ರೆ ಕಣ್ ಕಟ್ಟಿ ಹೈಕಮಾಂಡ್ ಟ್ರಾಕಲ್ಲಿ ಓಡ್ಸಾದು ಎಂಗೆ, ಫಾರಿನ್ನಲ್ಲಿ ಕುದ್ರೆ ಯಾಪಾರ ಎಂಗ್ ಮಾಡ್ತಾರೆ ಅಂತೆಲ್ಲಾ ತಿಳ್ಕಂಡು ಬತ್ತಾರೆ’.

‘ಮತ್ತೆ ದೇಶೀ ಹಿಂಡಿ ಬದ್ಲು ಫಾರಿನ್ ಹುಂಡಿ ಒಡೀಬೇಕು ಅನ್ನು! ಸ್ವಂತ ದುಡ್ಡಲ್ಲಿ ಓಯ್ತಾವ್ರಂತೆ, ಓಗ್ಲಿ ಬುಡು’ ಎಂದು ಹೇಳಿದ ಗುದ್ಲಿಂಗ.

‘ಸುಮ್ಕಿರ್ಲಾ, ಅನುದಾನ ಇಲ್ದೆ ಚುನಾವಣೆಗೆ ಹಾಕಿದ್ ಬಂಡವಾಳನೇ ವಾಪಸ್ ಬಂದಿಲ್ಲ ಅಂತ ಬಡ್ಕತಾವ್ರೆ, ಅಂತಾದ್ರಲ್ಲಿ ಸ್ವಾಮಿಕಾರ್ಯಕ್ಕೆ ಸ್ವಂತ ದುಡ್ಡು ಯಾಕ್ ಬಿಚ್ಚಾರು?’

‘ಅದೂ ದಿಟನೇಯ. ಆದ್ರೆ, ಫಾರಿನ್‌ಗೆ ಹೋಗಾದು ಸದ್ಯಕ್ಕಿಲ್ಲ ಅಂತವ್ರೆ. ಟೂರ್ ಫ್ರಮ್ ಮಾಡ್ತಾರೋ ಏನೋ... ಅದಿರ್ಲಿ, ನಮ್ಮ ಕಮಲ ಪಾಳೆಯ ಕುದ್ರೆ ಯಾಪಾರಕ್ಕೆ ಇಳ್ಯಲ್ವಂತಾ?’

‘ಅಯ್ಯೋ, ಅವರ ಲಾಯಾನೇ ನೆಟ್ಟಗಿಲ್ಲ, ಕಾಲಿ ಟ್ರಂಕ್ ಹಿಡ್ಕಂಡು, ಹಳೇ ಪಾತ್ರೆ ಹಳೇ ಕಬ್ಬಣ, ಹಳೇಪೇಪರ್ ಕಣೋ ಹೋಯಿ ಅಂತ ಭಜನೆ ಮಾಡ್ತಾವ್ರೆ’ ಅಂದ ಪರ್ಮೆಶಿ.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ತತ್ತ್ವಶಾಸ್ತ್ರದ ನಿರ್ಲಕ್ಷ್ಯ, ದುರಂತಕ್ಕೆ ಆಹ್ವಾನ

ವರ್ತಮಾನದ ಬಿಕ್ಕಟ್ಟುಗಳಿಗೆ ತತ್ತ್ವಶಾಸ್ತ್ರದ ನಿರ್ಲಕ್ಷ್ಯವೂ ಒಂದು ಕಾರಣವಾಗಿದೆ. ತತ್ತ್ವಶಾಸ್ತ್ರದ ಗೈರುಹಾಜರಿಯಲ್ಲಿ ಸಂಸ್ಕೃತಿಯ ತಳಹದಿಯು ಸಡಿಲವಾಗುತ್ತದೆ.

• ಚಂದ್ರಶೇಖರ ತಾಳ್ಯ

ತತ್ತ್ವಶಾಸ್ತ್ರವನ್ನು ಕುರಿತು ಖ್ಯಾತ ತತ್ತ್ವಜ್ಞಾನಿ ಬರ್ಟ್ರೆಂಡ್ ರಸೆಲ್ ‘ನೋ ಮ್ಯಾನ್ಸ್ ಲ್ಯಾಂಡ್’ ಎನ್ನುತ್ತಾನೆ. ತತ್ತ್ವಶಾಸ್ತ್ರವು ಕಲೆಯೋ ವಿಜ್ಞಾನವೋ ಎಂಬ ಜಿಜ್ಞಾಸೆಯಲ್ಲಿ, ಅದು ಎರಡೂ ಅಲ್ಲ ಅಥವಾ ಎರಡೂ ಹೌದು ಎನ್ನುವುದಕ್ಕೆ ರಸೆಲ್ ನೀಡಿದ ವ್ಯಾಖ್ಯಾನ ಇದು. ತತ್ತ್ವಶಾಸ್ತ್ರವು ಕಲೆ, ವಿಜ್ಞಾನಗಳೆಲ್ಲದರ ಆಳದಲ್ಲಿ ಅಂತರಗಂಗೆಯಂತೆ ಸದಾ ಚಲನಶೀಲ ಆಗಿರುವಂತಹುದು. ಇದ್ದೂ ಇಲ್ಲದಂತೆ ತನ್ನ ಅಸ್ಮಿತೆಯನ್ನು ಖಚಿತಗೊಳಿಸಿರುತ್ತದೆ. ಅದರ ಸೂಕ್ಷ್ಮ ಇರುವಿಕೆ ಸಾದಾ ಕಣ್ಣುಗಳಿಗೆ ಅಗೋಚರ. ಆದುದರಿಂದಲೇ ಅದನ್ನು ಉಪೇಕ್ಷೆ ಮಾಡುವವರೇ ಹೆಚ್ಚು. ತತ್ತ್ವಶಾಸ್ತ್ರದ ಗಂಭೀರ ಚಿಂತನೆಯ ತಳಹದಿಯಿಲ್ಲದೆ ಯಾವ ವಿಜ್ಞಾನವೂ, ಶಾಸ್ತ್ರವೂ ಪೂರ್ಣ ಎನಿಸಿಕೊಳ್ಳಲಾರವು. ಈ ಕಾರಣದಿಂದಲೇ ಅದನ್ನು ಶಾಸ್ತ್ರಗಳ ಶಾಸ್ತ್ರ, ವಿಜ್ಞಾನಗಳ ವಿಜ್ಞಾನ, ಎಲ್ಲ ಶಾಸ್ತ್ರಗಳ ತಾಯಿಬೇರು ಎನ್ನಲಾಗುತ್ತದೆ. ಆದರೆ, ಪ್ರಸ್ತುತದಲ್ಲಿ ಈ ತಾಯಿಯನ್ನು ಸಲಹುವವರು ಕಾಪಿಡುವವರು ವಿರಳ.

ಭಾರತದಲ್ಲಂತೂ ಈಗ ಅದು ಮುಳುಗುತ್ತಿರುವ ಹಡಗು. ಹಿಂದಿನ ಶತಮಾನದ 70ರ ದಶಕದಿಂದಲೇ ಅದರ ಅವನತಿ ಪ್ರಾರಂಭವಾಯಿತೆನ್ನಬೇಕು. 90ರ ದಶಕದ ತನಕವೂ ಏದುಸಿರುಬಿಡುತ್ತಾ ಹೇಗೋ ಜೀವ ಹಿಡಿದುಕೊಂಡಂತಿದ್ದ ತತ್ತ್ವಶಾಸ್ತ್ರವು ಜಾಗತೀಕರಣದ ರಣಬಿರುಗಾಳಿಗೆ ಸಿಕ್ಕು ಸಂಪೂರ್ಣ ಮಸುಕಾಗಿ ಹೋಯಿತು. ಈಗ ಅದು ಯಾರಿಗೂ ಬೇಡವಾದ ಕೂಸಾಗಿ ಮೂಲೆಯಲ್ಲೆಲ್ಲೋ ಶಾಶ್ವತ ರೋಗಶಯ್ಯೆಯಲ್ಲಿ ದುಪ್ಪಡಿ ಹೊದ್ದು ಮಲಗಿರುವಂತೆ ಕಾಣಿಸುತ್ತದೆ.



ಬದಲಾದ ಜೀವನಶೈಲಿ, ಗ್ರಾಹಕ ಕೇಂದ್ರಿತ ಸಂಸ್ಕೃತಿಯ ನಿಷ್ಠುರ ಬೆಳವಣಿಗೆ, ವ್ಯಾಪಾರೀಕರಣಗೊಂಡ ರಾಜಕಾರಣ ಅಂದರೆ ತತ್ತ್ವರಹಿತ ರಾಜಕಾರಣ, ನೈತಿಕತೆ ಇಲ್ಲದ ಶಿಕ್ಷಣ, ವ್ಯಕ್ತೀಕರಣದ ಅತಿರೇಕಗಳಿಂದಾಗಿ ಜೀವನ ಸಂತೋಷವನ್ನೇ ಅಡವಿಟ್ಟಂತಿರುವ ವಾತಾವರಣದಲ್ಲಿ ತತ್ತ್ವಶಾಸ್ತ್ರದಂತಹ ಅತ್ಯುನ್ನತ ಬೌದ್ಧಿಕ ಕ್ರಿಯೆ ನಡೆಯುವುದು ಅಸಾಧ್ಯವೇ ಸರಿ.

ಮ್ಯಾನೇಜ್‌ಮೆಂಟ್ ಎನ್ನುವ ಪೆಡಂಭೂತದ ಬೆನ್ನುಹತ್ತಿ ವಿದ್ಯಾರ್ಥಿಗಳು, ಅಧ್ಯಾಪಕರು, ವಿಶ್ವವಿದ್ಯಾಲಯಗಳು ಇನ್ನಿಲ್ಲದ ಉತ್ಸಾಹದಿಂದ ಶೈಕ್ಷಣಿಕ ವ್ಯವಹಾರವನ್ನು ಕುದುರಿಸುತ್ತಿರುವಾಗ– ನಾನು ಯಾರು? ನಾನು ವಾಸಿಸುತ್ತಿರುವ ಈ ಸುಂದರ ಭುವನದ ಕರ್ತೃ ಯಾರಿರಬಹುದು? ಈ ಆಕಾಶ, ಈ ತಾರೆ, ಈ ನೀಹಾರಿಕೆಗಳ ಅಸದೃಶ ಚೆಲುವಿನ ಗುಟ್ಟೇನಿರಬಹುದು? ಹಗಲಿರುಳುಗಳ ಆವರ್ತನದ ನಿಯತಗತಿಯ ಆಳದಲ್ಲಿ ಯಾವ ಶಕ್ತಿ ಅಡಗಿದ್ದೀತು? ಮತ-ಧರ್ಮಕ್ಕೂ ಧರ್ಮಕ್ಕೂ ವ್ಯತ್ಯಾಸ ವಿದೆಯೇ? ನಾವು ಆಚರಿಸುವ ಆಚರಣೆಗಳಿಗೆ, ನೇಮಗಳಿಗೆ ಅರ್ಥವಿದೆಯೆ? ಎಂಬಂತಹ ಚಿಂತನಪರವಾದ ತಳದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಕುತೂಹಲ, ತಾಳ್ಮೆ, ವ್ಯವಧಾನ ಈಗಂತೂ ಕಣ್ಮರೆಯಾಗಿ ಹೋಗಿದೆ. ವಿಜ್ಞಾನವು ತತ್ತ್ವಶಾಸ್ತ್ರದ ಸಮಸ್ಪರ್ಧಿ ಯಾಗಿ ಅಥವಾ ಸಹವರ್ತಿಯಾಗಿ ಇಂತಹ ಪ್ರಶ್ನೆಗಳನ್ನು ಕೇಳಿಕೊಂಡ ದ್ದುಂಟು. ಆಗೆಲ್ಲ ವಿಜ್ಞಾನವೂ ಒಂದುಸೊಗಸಾದ ಆಟದಂತೆಯೇ ಇತ್ತು. ಅದೀಗ ಇಂದ್ರಜಾಲ, ಮಾಯಾಜಾಲದಲ್ಲಿ ಮುಳುಗಿದೆ.

ಸೃಷ್ಟಿಯ ಆತ್ಯಂತಿಕ ಸತ್ಯದ ಹುಡುಕಾಟದಲ್ಲಿ ತತ್ತ್ವಶಾಸ್ತ್ರವು ಅನೇಕ ಬಾರಿ ಯತ್ನಿಸಿ ಸೋಲುತ್ತದೆ. ದಾರ್ಶನಿಕರು ಈ ನಿಗೂಢ ವಿಶ್ವದ ವಿದ್ಯಮಾನವನ್ನು ಅರ್ಥೈಸುವಲ್ಲಿ ಅನೇಕ ಪ್ರಸ್ಥಾನಗಳು, ಪ್ರತಿಪ್ರಸ್ಥಾನಗಳು ಹುಟ್ಟಿಕೊಳ್ಳುತ್ತವೆ. ಪ್ರಭುತ್ವಗಳು ಇವನ್ನು ತಮಗೆ ಅನುಕೂಲವಾಗುವಂತೆ ಅರ್ಥೈಸಿಕೊಳ್ಳುತ್ತವೆ. ಅವು ಮತಾಚರಣೆಯ ಅಪಸವ್ಯಗಳಾಗಿ ಧರ್ಮವನ್ನು ಮಲಿನಗೊಳಿಸುತ್ತವೆ. ತತ್ತ್ವಶಾಸ್ತ್ರ ಇದರ ವಿರುದ್ಧ ಸೆಣಸುತ್ತಿರುತ್ತದೆ.

ಏಕ ಚಿಂತನೆ, ಏಕ ಸಂಸ್ಕೃತಿ, ಏಕ ಸಮಾಜ ಎನ್ನುವುದು ಮುನ್ನೆಲೆಯಲ್ಲಿ ಕ್ರಿಯಾಶೀಲವಾಗಿರುವ ಸಂದರ್ಭದಲ್ಲಿ ‘ಅದು ಹಾಗಿಲ್ಲ’ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಭಾರತೀಯ ತತ್ತ್ವಚಿಂತನೆಯ ವೈವಿಧ್ಯವನ್ನೂ, ಅದರ ಸಂಕೀರ್ಣ ಒಳಪದರಗಳನ್ನೂ ಪರಿಗಣಿಸುವುದು ಆರೋಗ್ಯ ಪೂರ್ಣ.

ಭಾರತೀಯ ಚಿಂತನೆಯಲ್ಲಿ ನಡೆದಷ್ಟು ವೈವಿಧ್ಯಮಯವಾದ, ಬಹುತ್ವಪರವಾದ ವಾದ, ವಾಗ್ವಾದ, ಹೊಂದಾಣಿಕೆ, ದರ್ಶನವೊಂದರಲ್ಲೇ ಕಾಣಬರುವ ಅನೇಕ ಸೀಳುಗಳು ನಮ್ಮನ್ನು ದಿಗ್ಭ್ರಮೆಗೊಳಿಸುವಂತಿವೆ. ಹಾಗಾಗಿ, ಇಲ್ಲಿ ಏಕಮುಖದ ಚಿಂತನೆಗೆ ಇಂಬೇ ಇಲ್ಲ. ತತ್ತ್ವಶಾಸ್ತ್ರದ ಪರ್ಯಾಯಗಳಂತೆ ಇರುವ ಅಧ್ಯಾತ್ಮ, ಅನುಭಾವೀ ಪರಂಪರೆಗಳಂತೂ ತಮ್ಮ ಚಿಂತನ ವಿಧಾನಗಳಿಂದಲೇ ವಿಸ್ಮಯಗೊಳಿಸುವಂತಿವೆ. ಅವು ಧರ್ಮವನ್ನು ಅಪವ್ಯಾಖ್ಯಾನಗಳಿಂದ ಮುಕ್ತಗೊಳಿಸುವ, ಮತಾಚರಣೆಗಳಿಂದ ಮುಕ್ತವಾದ ಲೋಕಗ್ರಹಿಕೆಯ ಸರಿಯಾದ ಕ್ರಮಕ್ಕೆ ಆಗ್ರಹಿಸುವ, ರೂಢಿಗತ ವ್ಯವಸ್ಥೆಯ ವಿರುದ್ಧ ದಂಗೆಯೆದ್ದು ಸನ್ಮಾರ್ಗವನ್ನು ತೋರುವ ಮೌಢ್ಯ ವಿರೋಧಿ ಪ್ರಸ್ಥಾನಗಳು. ಈ ಪ್ರಸ್ಥಾನಗಳೇ ತತ್ತ್ವಶಾಸ್ತ್ರದ ನಿಜ ರೂಪಗಳಾಗಿ ಪೌರಾತ್ಯ ಚಿಂತನೆಯಲ್ಲಿ ಸಹಜವಾಗಿಯೇ ರೂಪುಗೊಂಡಂಥವು. ಬದುಕಿನ ಸಮ್ಯಕ್ ಮಾರ್ಗವಾಗಿ ತತ್ತ್ವಶಾಸ್ತ್ರದ ಚಿಂತನೆ ಮಂಡನೆಯಾಗುವ ಪರಿಯೂ ಇದೇ. ಈ ಕಾರಣವೇ ಭಾರತದಲ್ಲಿ ತತ್ತ್ವಶಾಸ್ತ್ರ ಹಾಗೂ ಧರ್ಮ ಪರಸ್ಪರ ಹಾಸುಹೊಕ್ಕಾಗಿ ಸಹಬಾಳ್ವೆ ಮಾಡುತ್ತವೆ. ಆದರೆ, ಪಟ್ಟಭದ್ರ ಹಿತಾಸಕ್ತಿಗಳು ಈ ಸಹಬಾಳ್ವೆಯನ್ನು ಸಹಿಸದೆ ಮತಧರ್ಮವೇ ತತ್ತ್ವ, ಧರ್ಮವೆಂಬ ಭ್ರಮೆಯನ್ನು ಬಿತ್ತುತ್ತವೆ.

ಇದನ್ನು ಮುಂದಿಟ್ಟುಕೊಂಡು ನಮ್ಮ ವಿದ್ಯಾಸಂಸ್ಥೆಗಳು ತಮ್ಮ ಮೂಲ ಕ್ರಿಯಾಶೀಲತೆಗೆ ಹೊರಳಬೇಕೆಂದರೆ ತತ್ತ್ವಶಾಸ್ತ್ರದ ಅಧ್ಯಯನವನ್ನು ಕಡ್ಡಾಯಗೊಳಿಸುವಂತಾಗಬೇಕು. ಅಲ್ಲಿ ಬೋಧನೆ, ಕಲಿಕೆ, ಸಂಶೋಧನೆ, ಪರೀಕ್ಷೆಗಳು ತಮ್ಮ ಸೃಜನಶೀಲತೆಯಲ್ಲಿ ಜೀವಂತಿಕೆಯನ್ನು ಪಡೆದುಕೊಳ್ಳಬೇಕು. ಇಲ್ಲದೇ ಹೋದರೆ ಮರಳು ದಿಣ್ಣೆಯ ಮೇಲೆ ಸಂಸ್ಕೃತಿಯ ಭವ್ಯಸೌಧ ನಿರ್ಮಾಣ ಮಾಡಿದಂತಾಗಿ, ಒಂದು ದಿನ ಅದು ಕುಸಿದುಬೀಳುವುದು ನಿಶ್ಚಿತ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇಂದ್ರದ 2026ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಆಗಿದೆಯೇ ಎನ್ನುವ ಬಗ್ಗೆ ರಾಜ್ಯದ ಇಬ್ಬರು ಮುಖಂಡರ ಅನಿಸಿಕೆಗಳು

ದೇಶದ ಸಂವಿಧಾನವು ಜನರ ಯೋಗಕ್ಷೇಮ ಹಾಗೂ ಅಭಿವೃದ್ಧಿ ಕರ್ತವ್ಯದಲ್ಲಿ 2/3 ಭಾಗದ ಹೊಣೆಯನ್ನು ರಾಜ್ಯಗಳಿಗೆ ವಹಿಸಿದೆ. ಆದರೆ, 2/3ರಷ್ಟು ಆದಾಯವನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ಈ ನಿಯಮ ರಾಜ್ಯಗಳ ಸುಸ್ಥಿರ ಅಭಿವೃದ್ಧಿಗೆ ಮಾರಕ. ಹೆಚ್ಚಿನ ಪ್ರಮಾಣದ ಅಭಿವೃದ್ಧಿ ಕೆಲಸಗಳನ್ನು ರಾಜ್ಯಗಳೇ ಮಾಡಬೇಕು. ಆದರೆ, ಆದಾಯ ಮಾತ್ರ ಕೇಂದ್ರದ ಪಾಲಾದರೆ ರಾಜ್ಯದ ಅಭಿವೃದ್ಧಿ ಹೇಗೆ ಸಾಧ್ಯ? ಸಾರ್ವಜನಿಕರೂ ಅವರ ಯೋಗಕ್ಷೇಮದ ಬೇಡಿಕೆ ಹಾಗೂ ಅಭಿವೃದ್ಧಿ ಅಗತ್ಯಗಳಿಗೆ ರಾಜ್ಯ ಸರ್ಕಾರಗಳನ್ನೇ ಅವಲಂಬಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರವು ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಕೊಕ್ಕೆ ಹಾಕಿ ಕೂತಿರುವುದು ಗಣತಂತ್ರ ಒಕ್ಕೂಟ ವ್ಯವಸ್ಥೆಯ ಅಣಕವಲ್ಲದೆ ಮತ್ತೇನು?

ಗ್ಯಾರಂಟಿ ಯೋಜನೆಗಳ ಪರಿಣಾಮ ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಅತ್ಯಂತ ಕಡಿಮೆ ದುಡ್ಡು ಖರ್ಚು ಮಾಡಲಾಗುತ್ತಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತಗಳಲ್ಲಿ ರಾಜ್ಯಕ್ಕೆ ಹಿನ್ನಡೆಯಾಗಿರುವುದು ತುಂಬಲಾರದ ನಷ್ಟ. ಇದನ್ನು ಸರಿಪಡಿಸಲು ಮುಂದೆ ಬರುವಂತಹ ಸರ್ಕಾರ ಹರಸಾಹಸ ಪಡಬೇಕಾಗುತ್ತದೆ. ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯ ಹೆಚ್ಚು ಸಾಲ ಮಾಡಿದ್ದರು. ಈಗಲೂ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಅವರು ಈ ಅವಧಿಯಲ್ಲಿ ₹6 ಲಕ್ಷ ಕೋಟಿಗಿಂತ ಹೆಚ್ಚು ಹೊರೆಯನ್ನು ರಾಜ್ಯದ ಜನರ ಮೇಲೆ ಹೇರಲಿದ್ದಾರೆ

ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯ ರಾಜ್ಯಕ್ಕೆ ಕಾಂಗ್ರೆಸ್‌ನಿಂದ

• ಕೃಷ್ಣಬೈರೇಗೌಡ



'ವಿಕಸಿತ ಭಾರತ' ಎಂಬ ಪದದ ಅರ್ಥ ಮತ್ತು ವ್ಯಾಪ್ತಿ ಅಗಾಧವಾದದ್ದು. ಆದರೆ, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವ ದಕ್ಷಿಣದ ರಾಜ್ಯಗಳಿಗೆ ಸತತ ಅನ್ಯಾಯವನ್ನಷ್ಟೇ ಎಸಗುತ್ತಿರುವ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರ, ಈ ಪದವನ್ನು ಕೇವಲ ತೋರ್ಪಡಿಕೆಗೆ ಬಳಸುತ್ತಿದೆ; ಅದರ ನಿಜವಾದ ಹೆಜ್ಜೆ ತದ್ವಿರುದ್ಧ ದಿಕ್ಕಿನಲ್ಲಿದೆ. ಅದಕ್ಕೊಂದು ತಾಜಾ ಉದಾಹರಣೆಯೇ ಕೇಂದ್ರದ 2026ರ ಬಜೆಟ್.

ಪ್ರತಿಯೊಂದು ರಾಜ್ಯದ ಸ್ವಾಯತ್ತೆಯು ಸುಸ್ಥಿರ ಆದಾಯದ ಮೇಲೆ ನಿಂತಿದೆ. ಆ ನಿಟ್ಟಿನಲ್ಲಿ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಯಾಗುವವರೆಗೆ ಕರ್ನಾಟಕ ಸೇರಿದಂತೆ ಎಲ್ಲಾ ರಾಜ್ಯಗಳು ಸ್ವಾಯತ್ತವಾಗಿಯೇ ಇದ್ದವು. ಆದರೆ, ಜಿಎಸ್‌ಟಿ ಜಾರಿಯು ರಾಜ್ಯಗಳ ಸ್ವಾಯತ್ತೆಗೆ ಬಿದ್ದ ಮೊದಲ ಕೊಡಲಿ ಪೆಟ್ಟು. ಜಿಎಸ್‌ಟಿಯಿಂದಾಗಿ ರಾಜ್ಯಗಳು ಪ್ರತಿ ವಸ್ತುವಿನ ಮೇಲೆ ತೆರಿಗೆ ನಿರ್ಧರಿಸುವ ಮತ್ತು ಸಂಗ್ರಹಿಸುವ ತನ್ನ ಪರಮಾಧಿಕಾರವನ್ನೇ ಕಳೆದುಕೊಂಡವು. ಅಲ್ಲದೆ, ತೆರಿಗೆ ಸಂಗ್ರಹದಲ್ಲಿ ತಮ್ಮ ಪಾಲು ಪಡೆಯಲು ಕೇಂದ್ರವನ್ನು ಅವಲಂಬಿಸುವಂತಾದವು. ಇದು ದುರದೃಷ್ಟಕರ.

ಜಿಎಸ್‌ಟಿ ಜಾರಿಯಿಂದ ರಾಜ್ಯಕ್ಕೆ ವಾರ್ಷಿಕ ₹20 ಸಾವಿರ ಕೋಟಿಯಿಂದ ₹25 ಸಾವಿರ ಕೋಟಿಯಷ್ಟು ತೆರಿಗೆ ನಷ್ಟ ಉಂಟಾಗಿತ್ತು. ಈ ನಷ್ಟವನ್ನು ಭರಿಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕಳೆದ ವರ್ಷ ಜಿಎಸ್‌ಟಿ ದರದಲ್ಲಿ ಬದಲಾವಣೆಗಳನ್ನು ಮಾಡಿದೆ. ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿದ್ದರೆ, ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿದ್ದರೆ ನಮ್ಮದೇನೂ ತಕರಾರಿಲ್ಲ. ಆದರೆ, ಈ ಜಿಎಸ್‌ಟಿ ಸರಳೀಕರಣದಿಂದ ಜನರಿಗೂ ಲಾಭವಿಲ್ಲ, ರಾಜ್ಯಕ್ಕೂ ವಾರ್ಷಿಕ ಸುಮಾರು ₹15 ಸಾವಿರ ಕೋಟಿಯಿಂದ ₹20 ಸಾವಿರ ಕೋಟಿವರೆಗೆ ಆದಾಯ ಕೊರತೆಯಾಗಿದೆ. ಜಿಎಸ್‌ಟಿ ಬೆಳವಣಿಗೆ ಶೇ 12ರಿಂದ ಶೇ 5ಕ್ಕೆ ಇಳಿಕೆಯಾಗಿದೆ.

ಈ ನಷ್ಟವನ್ನು ತುಂಬಿಕೊಡಲು ಜಿಎಸ್‌ಟಿ ಮಂಡಳಿ ಬಳಿ ಯಾವುದೇ ಪರಿಹಾರದ ಯೋಜನೆ ಇಲ್ಲ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ 'ವಿಕಸಿತ ಭಾರತ' ಬಜೆಟ್‌ನಲ್ಲಿಯೂ ಈ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

ಅಸಲಿಗೆ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಸ್ಥಿರಗೊಳ್ಳುವವರೆಗೆ ಕೇಂದ್ರ ಸರ್ಕಾರ ತನ್ನ ಖಜಾನೆಯಿಂದ ಒಂದು ರೂಪಾಯಿಯನ್ನೂ ನೀಡುವ ಅಗತ್ಯವಿಲ್ಲ. ಬದಲಿಗೆ ಜಿಎಸ್‌ಟಿ ಮಂಡಳಿ ಪರಿಧಿಯಲ್ಲೇ ಪ್ರತಿಯೊಂದು ರಾಜ್ಯಕ್ಕೂ ಪರಿಹಾರ ನೀಡಬಹುದು. ಕೇಂದ್ರ ಸರ್ಕಾರ ಸೆಸ್, ಸರ್‌ಚಾರ್ಜ್ ಮೂಲಕ ಸಂಗ್ರಹಿಸುವ ತೆರಿಗೆ ಹಣವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವುದೇ ಇದಕ್ಕಿರುವ ಏಕೈಕ ಪರಿಹಾರ.

ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 28ರಷ್ಟು ಮಾತ್ರ. ಉಳಿದ ಶೇ 72ರಷ್ಟು ಆದಾಯವನ್ನು ಕೇಂದ್ರ ಸರ್ಕಾರ ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ, ಆದಾಯ ತೆರಿಗೆ, ಕಸ್ಟಮ್ಸ್, ಡಿವಿಡೆಂಡ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯದ ಮೂಲ. ಸೆಸ್ ಮೂಲಕವೇ ಕೇಂದ್ರ ಸರ್ಕಾರ ಶೇ 17ರಿಂದ ಶೇ 20ರಷ್ಟು ಆದಾಯ ಗಳಿಸುತ್ತದೆ. 2024-25ರ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಸೆಸ್ ಮೂಲಕ ₹3.87 ಲಕ್ಷ ಕೋಟಿ ಹಣ ಸಂಗ್ರಹಿಸಿದೆ. ಸರ್‌ಚಾರ್ಜ್ ಮೂಲಕ ₹1.53 ಲಕ್ಷ ಕೋಟಿ ಸೇರಿ ಒಟ್ಟಾರೆ ₹5.40 ಲಕ್ಷ ಕೋಟಿ ಸಂಗ್ರಹಿಸಿದೆ. 2025-26 ನೇ ಸಾಲಿಗೆ ಇದನ್ನು ₹5.91 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದೆ. ಕೇಂದ್ರ ಸರ್ಕಾರ ಸೆಸ್-ಸರ್‌ಚಾರ್ಜ್ ಆದಾಯದಲ್ಲಿ ಒಂದು ರೂಪಾಯಿಯನ್ನೂ ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ತೆರಿಗೆಗಳನ್ನು ವ್ಯವಸ್ಥಿತವಾಗಿ ಸೆಸ್‌ಗಳಿಗೆ ಬದಲಾಯಿಸಿ, ರಾಜ್ಯಗಳಿಗೆ ಅದರಲ್ಲಿ ಏನೂ ಪಾಲು ಕೊಡದೇ ಸಂಪೂರ್ಣ ಹಣವನ್ನು ತಾನೇ ಇಟ್ಟುಕೊಳ್ಳುವ ವ್ಯವಸ್ಥಿತ ಮಾರ್ಗ ಅನುಸರಿಸುತ್ತಿದೆ.

ರಾಜ್ಯಗಳ ಒಟ್ಟು ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 50. ಹೀಗಾಗಿ ಅಭಿವೃದ್ಧಿಗೆ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನೇ ನೆಚ್ಚಿಕೊಂಡಿವೆ.

2022ರಲ್ಲಿ ಜಿಎಸ್‌ಟಿ ತೆರಿಗೆ ನಷ್ಟ ಪರಿಹಾರ ಯೋಜನೆಯನ್ನು ತೆಗೆದುಹಾಕಿದ ನಂತರ ರಾಜ್ಯಗಳ ಆದಾಯದಲ್ಲಿ ಶೇ 25ರಷ್ಟು ಖೋತಾ ಆಗಿದೆ. ಇಂತಹ ಸಂದರ್ಭದಲ್ಲಿ ಜಿಎಸ್‌ಟಿ ಸರಳೀಕರಣ ಎಂಬ ಸೂತ್ರದ ಅಡಿಯಲ್ಲಿ ರಾಜ್ಯಗಳ ಆದಾಯಕ್ಕೆ ಹೆಚ್ಚುವರಿಯಾಗಿ ಶೇ 20ರಷ್ಟು ನಷ್ಟ ಉಂಟುಮಾಡಿದರೆ ರಾಜ್ಯಗಳ ಆರ್ಥಿಕ ಸ್ವಾಯತ್ತೆ ಪ್ರಶ್ನಾರ್ಥಕವಾಗುವುದಿಲ್ಲವೇ? ಇದಕ್ಕೊಂದು ಪರಿಹಾರ ಬೇಡವೇ?

ಜಿಎಸ್‌ಟಿ ಪರಿಚಯಿಸುವಾಗ ಈ ನೂತನ ತೆರಿಗೆ ವ್ಯವಸ್ಥೆ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎನ್ನಲಾಗಿತ್ತು. ಇದು ನಿಜವಾಗಿದ್ದರೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಆದಾಯ ದುಪ್ಪಟ್ಟಾಗಬೇಕಿತ್ತು. ಆದರೆ ಕಳೆದ ಎಳೆಂಟು ವರ್ಷಗಳಲ್ಲಿ ಈ ಹೇಳಿಕೆ ಸುಳ್ಳು ಎಂದು ಸಾಬೀತಾಗಿದೆ. ಪ್ರತಿ ವರ್ಷವೂ ಎಲ್ಲ ರಾಜ್ಯಗಳ ನಿವ್ವಳ ಆದಾಯ ಗಣನೀಯವಾಗಿ ಇಳಿಯುತ್ತಲೇ ಇದೆ. ಜಿಎಸ್‌ಟಿಗೂ ಮುನ್ನ ವ್ಯಾಟ್ ಅಡಿಯಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದ ಕಾಲದಲ್ಲಿ ದೇಶದ ಜಿಡಿಪಿಗೆ ವ್ಯಾಟ್ ಕೊಡುಗೆ ಶೇ 6.1ರಷ್ಟಿತ್ತು. ಆದರೆ, ಈಗ ಜಿಎಸ್‌ಟಿ ಬಳಿಕ ಈ ಪ್ರಮಾಣ ಶೇ 6.1ಕ್ಕೆ ತಲುಪಿಲ್ಲ. ಪ್ರಸ್ತುತ ಜಿಡಿಪಿಗೆ ಜಿಎಸ್‌ಟಿ ಕೊಡುಗೆ ಶೇ 5.9ರಷ್ಟು ಮಾತ್ರ. ಒಟ್ಟಾರೆ ಜಿಎಸ್‌ಟಿಯಿಂದಾಗಿ ರಾಜ್ಯ ಹಾಗೂ ಕೇಂದ್ರಕ್ಕೆ ಆದಾಯ ನಷ್ಟವಾಗುತ್ತಿರುವುದು ಸ್ಪಷ್ಟ. ಜಿಎಸ್‌ಟಿ ವ್ಯವಸ್ಥೆಗೂ ಮುನ್ನ ಇದ್ದ ಆದಾಯ ಹಾಗೂ ಇಂದಿನ ಆದಾಯ ಹೋಲಿಕೆ ಮಾಡಿದರೆ ಕರ್ನಾಟಕದ ಆದಾಯ ಜಿಎಸ್‌ಟಿ ನಂತರ ₹25 ಸಾವಿರ ಕೋಟಿ ಕಡಿಮೆ ಆಗಿದೆ.

ಸಂವಿಧಾನವು ಜನರ ಯೋಗಕ್ಷೇಮ ಹಾಗೂ ಅಭಿವೃದ್ಧಿ ಕರ್ತವ್ಯದಲ್ಲಿ 2/3 ಭಾಗದ ಹೊಣೆಯನ್ನು ರಾಜ್ಯಗಳಿಗೆ ವಹಿಸಿದೆ. ಆದರೆ, 2/3 ರಷ್ಟು ಆದಾಯವನ್ನು ಕೇಂದ್ರಕ್ಕೆ ನೀಡಿದೆ. ಈ ನಿಯಮ ರಾಜ್ಯಗಳ ಸುಸ್ಥಿರ ಅಭಿವೃದ್ಧಿಗೆ ಮಾರಕ. ಹೆಚ್ಚಿನ ಪ್ರಮಾಣದ ಅಭಿವೃದ್ಧಿ ಕೆಲಸಗಳನ್ನು ರಾಜ್ಯಗಳೇ ಮಾಡಬೇಕು. ಆದರೆ, ಆದಾಯ ಮಾತ್ರ ಕೇಂದ್ರದ ಪಾಲಾದರೆ ರಾಜ್ಯದ ಅಭಿವೃದ್ಧಿ ಹೇಗೆ ಸಾಧ್ಯ? ಸಾರ್ವಜನಿಕರೂ ಅವರ ಯೋಗಕ್ಷೇಮದ ಬೇಡಿಕೆ ಹಾಗೂ ಅಭಿವೃದ್ಧಿ ಅಗತ್ಯಗಳಿಗೆ ರಾಜ್ಯ ಸರ್ಕಾರಗಳನ್ನೇ ಅವಲಂಬಿಸಿದ್ದಾರೆ. ಆದರೆ, ಕೇಂದ್ರವು ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಕೊಕ್ಕೆ ಹಾಕಿ ಕೂತಿರುವುದು ಗಣತಂತ್ರ ಒಕ್ಕೂಟ ವ್ಯವಸ್ಥೆಯ ಅಣಕವಲ್ಲದೆ ಮತ್ತೇನು?

ಹಣಕಾಸು ಆಯೋಗವಂತೂ ಹೆಜ್ಜೆ ಹೆಜ್ಜೆಗೂ ಕರ್ನಾಟಕಕ್ಕೆ ಅನ್ಯಾಯವನ್ನಷ್ಟೇ ಮಾಡುತ್ತಿದೆ. 14ನೇ ಹಣಕಾಸು ಆಯೋಗವು ಶೇ 4.71ರಷ್ಟು ಪಾಲನ್ನು ನಮಗೆ ಒದಗಿಸಿತ್ತು. 15ನೇ ಹಣಕಾಸು ಆಯೋಗವು ಇದನ್ನು ಶೇ 3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ರಲ್ಲಿ ಮೊದಲು ಕರ್ನಾಟಕಕ್ಕೆ ₹4.71 ಸಿಗುತ್ತಿದ್ದರೆ, 15ನೇ ಆಯೋಗವು ಅದನ್ನು ₹3.64ಕ್ಕೆ ಇಳಿಸಿತು. ಇದರಿಂದ ರಾಜ್ಯಕ್ಕೆ ನೇರವಾಗಿ ಸುಮಾರು ₹80 ಸಾವಿರ ಕೋಟಿಯಷ್ಟು ಬೃಹತ್ ಪ್ರಮಾಣದ ತೆರಿಗೆ ಪಾಲು ಸಿಗದೆ ಅನ್ಯಾಯವಾಯಿತು.

ಇದಲ್ಲದೆ, ಕಲ್ಯಾಣ ಕರ್ನಾಟಕದ ಹಿಂದುಳಿದ ಪ್ರದೇಶ ಮತ್ತು ಜಾಗತಿಕ ಪರಿಸರ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿಗೆ ವಿಶೇಷ ಹೊಂದಾಣಿಕೆಯ ಅನುದಾನ ನೀಡಬೇಕು; ಬರಪೀಡಿತ ಮಧ್ಯ ಕರ್ನಾಟಕಕ್ಕೆ ನೀರು ಒದಗಿಸಲು ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಈ ಹಿಂದೆಯೇ ಘೋಷಿಸಿದ್ದ ₹5,300 ಕೋಟಿ ಬಿಡುಗಡೆಗೊಳಿಸಬೇಕು, ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಿಗೆ ಅನುಮೋದನೆ ನೀಡಬೇಕು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರ ಗೌರವಧನ ₹5,000 ಮತ್ತು ಅಡುಗೆಯವರು ಮತ್ತು ಸಹಾಯಕರಿಗೆ ₹2,000ಕ್ಕೆ ಹೆಚ್ಚಳಗೊಳಿಸಬೇಕು, ಪ್ರಧಾನ ಮಂತ್ರಿ ಆವಾಜ್ ಯೋಜನೆ ನೆರವನ್ನು ನಗರ ಪ್ರದೇಶದ ಮನೆಗಳಿಗೆ ₹1.5 ಲಕ್ಷದಿಂದ ₹5 ಲಕ್ಷಕ್ಕೆ ಮತ್ತು ಗ್ರಾಮೀಣ ಮನೆಗಳಿಗೆ ₹72 ಸಾವಿರದಿಂದ ₹3 ಲಕ್ಷಕ್ಕೆ ಹೆಚ್ಚಿಸಬೇಕು, ವೃದ್ಧಾಪ್ಯ, ವಿಧವೆಯರು ಮತ್ತು ಅಂಗವಿಕಲರ ಪಿಂಚಣಿ ಹೆಚ್ಚಿಸಬೇಕು ಎಂದು ರಾಜ್ಯ ಸರ್ಕಾರವು ಸಾಲು ಸಾಲು ಬೇಡಿಕೆಗಳನ್ನು ಕೇಂದ್ರದ ಮುಂದೆ ಇಟ್ಟಿತ್ತು. ಆದರೆ, 'ನೀವು ಏನೇ ಬೇಡಿಕೆ ಮುಂದಿಟ್ಟರೂ ನಾವು ನಮ್ಮಿಷ್ಟದಂತೆ ಏನು ಬೇಕೋ ಅದನ್ನೇ ಮಾಡುತ್ತೇವೆ' ಎನ್ನುವ ಕೇಂದ್ರದ ವರ್ತನೆಗೆ ಮತ್ತೊಂದು ಬಜೆಟ್ ಸಾಕ್ಷಿಯಾಗಿದೆಯಷ್ಟೆ. ನಮ್ಮ ಮನವಿಗೆ ಕಿವಿಗೊಡದ ಈ ಬಜೆಟ್ ನಮಗೆ ಅಚ್ಚರಿಯನ್ನೇನೂ ನೀಡಿಲ್ಲ; ಆದರೆ, ತನ್ನ ಬೆವರು ಹರಿಸಿ ಕೇಂದ್ರಕ್ಕೆ ತೆರಿಗೆ ನೀಡುವ ಕನ್ನಡಿಗರಿಗೆ ಆಘಾತವನ್ನು ನೀಡಿರುವುದು ಮಾತ್ರ ಸುಳ್ಳಲ್ಲ.

ಲೇಖಕ: ಕರ್ನಾಟಕದ ಕಂದಾಯ ಸಚಿವ, ರಾಷ್ಟ್ರೀಯ ಜಿಎಸ್‌ಟಿ ಮಂಡಳಿ ಸದಸ್ಯ

ರಾಜ್ಯದ ಬೇಡಿಕೆಗೆ ಕೇಂದ್ರದ ಮೌನ

ದೇಶದ ಆರ್ಥಿಕ ಶಕ್ತಿಯಲ್ಲಿ ಚಾಲಕ ಸ್ಥಾನದಲ್ಲಿರುವ ಕರ್ನಾಟಕ ತಲಾವಾರು ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದೆ. ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ವಾರ್ಷಿಕ ₹4.5 ಲಕ್ಷ ಕೋಟಿಯಿಂದ ₹5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ಕೇಂದ್ರ ಸರ್ಕಾರಕ್ಕೆ ಅತಿಹೆಚ್ಚು ಹಣ ಸಂದಾಯ ಮಾಡುವ ರಾಜ್ಯಗಳ ಪೈಕಿ ಮೊದಲ ಸ್ಥಾನದಲ್ಲಿರುವ ಕರ್ನಾಟಕ ತೆರಿಗೆ ಪಾಲು ಮತ್ತು ಅನುದಾನ ಪಡೆಯುವಲ್ಲಿ ಕೆಳಗಿರುವುದು ದುರದೃಷ್ಟಕರ. ಹೀಗಾಗಿ 14ನೇ ಹಣಕಾಸು ಆಯೋಗ ಶಿಫಾರಸು ಮಾಡಿದಂತೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲನ್ನು ಕರ್ನಾಟಕಕ್ಕೆ ನೀಡಬೇಕು ಹಾಗೂ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದ ₹11,495 ಕೋಟಿ ವಿಶೇಷ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂಬುದು ರಾಜ್ಯ ಸರ್ಕಾರದ ಒತ್ತಾಯವಾಗಿತ್ತು. ಆದರೆ, ಕರ್ನಾಟಕಕ್ಕೆ ಶೇ 4.13 ರಷ್ಟು ಮಾತ್ರ ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ. ಇದರಿಂದಲೇ ಕರ್ನಾಟಕಕ್ಕೆ ವಾರ್ಷಿಕವಾಗಿ ಸುಮಾರು ₹9,000 ಕೋಟಿಯಿಂದ ₹10 ಸಾವಿರ ಕೋಟಿವರೆಗೆ ನಷ್ಟವಾಗಲಿದೆ. 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ವಿಶೇಷ ಅನುದಾನ ಬಿಡುಗಡೆಗೆ ಸಂಬಂಧಿಸಿಯೂ ಕೇಂದ್ರ ಸರ್ಕಾರ ಎಂದಿನ ಅದೇ ಮೌನ ವಹಿಸಿದೆ.



• ಬಸವರಾಜ ಬೊಮ್ಮಾಯಿ



ಹದಿನಾರನೇ ಹಣಕಾಸು ಆಯೋಗ ನೀಡಿರುವ ವರದಿಯನ್ನು ಕೇಂದ್ರ ಸರ್ಕಾರ ಸ್ವೀಕಾರ ಮಾಡಿದೆ. ಈ ಸಂದರ್ಭದಲ್ಲಿ ರಾಜ್ಯದ ಹಣಕಾಸಿನ ಮೇಲೆ ಶಿಫಾರಸುಗಳು ಯಾವ ರೀತಿಯಲ್ಲಿ ಪರಿಣಾಮ ಬೀರಲಿವೆ ಎಂದು ನೋಡುವುದು ಬಹಳ ಮುಖ್ಯ. 16ನೇ ಹಣಕಾಸು ಆಯೋಗವು 15ನೇ ಹಣಕಾಸು ಆಯೋಗಕ್ಕಿಂತ ಬಹಳ ವಿಭಿನ್ನವಾಗಿದೆ. ಹೊಸ ನಿಯಮಗಳು ಮತ್ತು ವಿವಿಧ ಅಂಶಗಳಿಗೆ ನೀಡಿದ ಆದ್ಯತೆಯ (ವೇಟೇಜ್) ಅನುಸಾರ ಕರ್ನಾಟಕ ಸೇರಿದಂತೆ ದೇಶದ ಎಲ್ಲ ರಾಜ್ಯಗಳಿಗೆ ಒಟ್ಟು ₹8 ಲಕ್ಷ ಕೋಟಿ ನೀಡಬೇಕು ಎಂದು ಹಣಕಾಸು ಆಯೋಗ ಶಿಫಾರಸು ಮಾಡಿದೆ. ಈ ಪೈಕಿ ₹4.4 ಲಕ್ಷ ಕೋಟಿಯಷ್ಟನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮತ್ತು ₹3.6 ಲಕ್ಷ ಕೋಟಿ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು ಎಂದು ಆಯೋಗವು ವರದಿಯಲ್ಲಿ ಹೇಳಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯಕ್ಕೆ ಶೇ 3.65ರಷ್ಟು ತೆರಿಗೆ ಪಾಲು ಸಿಕ್ಕಿತ್ತು. 16ನೇ ಹಣಕಾಸು ಆಯೋಗವು ಈ ಪಾಲಿನ ಪ್ರಮಾಣವನ್ನು ಶೇ 4.13ಕ್ಕೆ ಹೆಚ್ಚಿದೆ. ಅಂದರೆ, ಕೇಂದ್ರದಿಂದ ಬರಬೇಕಾದ ಮೊತ್ತದಲ್ಲಿ ಶೇ 15 ರಷ್ಟು ಏರಿಕೆಯಾಗಿದೆ. ಹೀಗಾಗಿ ಕರ್ನಾಟಕಕ್ಕೆ ಹೆಚ್ಚಿನ ಹಣಕಾಸಿನ ನೆರವು ಸಿಗಲಿದೆ. ರಾಜ್ಯಕ್ಕೆ ಈವರೆಗೆ ತೆರಿಗೆ ಪಾಲಾಗಿ ₹55,663 ಕೋಟಿ ಹಣ ಬರುತ್ತಿತ್ತು. 16ನೇ ಹಣಕಾಸು ಆಯೋಗದ ಶಿಫಾರಸಿನಂತೆ ₹63,049 ಕೋಟಿ ಬರಲಿದೆ. ಇದರಿಂದ ರಾಜ್ಯಕ್ಕೆ ₹7,387 ಕೋಟಿ ಹೆಚ್ಚುವರಿಯಾಗಿ ಸಿಗಲಿದೆ. ಇದು ಒಂದು ಭಾಗವಾದರೆ, ಗ್ರ್ಯಾಂಟ್ ಇನ್ ಏಡ್ ಹಂಚಿಕೆಯಲ್ಲೂ ಹೆಚ್ಚಾಗಲಿದೆ. ನೈಸರ್ಗಿಕ ವಿಪತ್ತು ನಿರ್ವಹಣೆಗೆ ₹6,019 ಕೋಟಿ ಮೀಸಲಿಡಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳುವುದು ರಾಜ್ಯ ಸರ್ಕಾರದ ಕೈಯಲ್ಲಿದೆ. ಆದರೆ, ರಾಜ್ಯದ ಸದ್ಯದ ಹಣಕಾಸು ಪರಿಸ್ಥಿತಿ ನೋಡಿದರೆ ಬಹಳ ನಿರಾಸೆಯಾಗುತ್ತದೆ.

2022-23ರಲ್ಲಿ ರಾಜ್ಯದ ರಾಜಸ್ವ ಹೆಚ್ಚಳ ಹೆಚ್ಚು ಇತ್ತು. ಅದನ್ನು ರಾಜಸ್ವ ಕೊರತೆಯ ರಾಜ್ಯ ಮಾಡಿರುವುದು ಈಗಿನ ಸರ್ಕಾರದ ಕೊಡುಗೆ. ರಾಜ್ಯ ಸರ್ಕಾರ ತೀವ್ರ ಸಾಲದ ಸುಳಿಗೆ ಈಗಾಗಲೇ ಸಿಲುಕಿದೆ. ಕಳೆದ ವರ್ಷ ₹1.16 ಲಕ್ಷ ಕೋಟಿ ಸಾಲ ಪಡೆದಿದ್ದರೂ ಬಜೆಟ್‌ನಲ್ಲಿ ಹೇಳಿದಂತೆ ಆ ಮೊತ್ತವನ್ನು ಬಂಡವಾಳ ಹೂಡಿಕೆಗೆ ಬಳಸುವಲ್ಲಿ ವಿಫಲವಾಗಿದೆ. ಹೀಗಾಗಿ ಶಾಲೆ, ಗ್ರಾಮೀಣ ರಸ್ತೆಗಳು, ರಾಜ್ಯ ಮಟ್ಟದ ರಸ್ತೆಗಳ ನಿರ್ಮಾಣ ನಿಧಾನಗತಿಯಲ್ಲಿ ನಡೆಯುತ್ತಿದೆ. ಜೊತೆಗೆ ರಾಜ್ಯ ಸರ್ಕಾರವು ಒಟ್ಟು ರಾಜ್ಯದ ರಾಜಸ್ವ ವೆಚ್ಚದಲ್ಲಿ ಶೇ 9.26ರಷ್ಟು ಮೊತ್ತವನ್ನು ನೇರ ಹಣ ವರ್ಗಾವಣೆ ಮೂಲಕ (ಗ್ಯಾರಂಟಿಗಳಿಗೆ ಕೊಡುತ್ತಿದೆ) ರಾಜಕೀಯ ಲಾಭಕ್ಕಾಗಿ ಮಾಡುತ್ತಿರುವುದು ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ಬಹಳ ದೊಡ್ಡ ಹೊರೆ ಬೀಳುವಂತೆ ಮಾಡಿದೆ. ಜೊತೆಗೆ, ರಾಜ್ಯ ಸರ್ಕಾರ ಪ್ರತಿ ವರ್ಷ ಒಟ್ಟು ಆದಾಯದಲ್ಲಿ ಸಾಲದ ನಿರ್ವಹಣೆಗೆ ಅತಿ ಹೆಚ್ಚು ಖರ್ಚು ಮಾಡುತ್ತಿದೆ. ಒಟ್ಟು ರಾಜಸ್ವ ಆದಾಯದಲ್ಲಿ ಶೇ 14ರಷ್ಟು ಸಾಲದ ಮರುಪಾವತಿಗೆ ವೆಚ್ಚ ಮಾಡುತ್ತಿರುವುದು ಅತ್ಯಂತ ಕಳವಳಕಾರಿ. ಸರ್ಕಾರವು ತನ್ನ ಒಟ್ಟು ಆದಾಯದಲ್ಲಿ ಶೇ 83ರಷ್ಟನ್ನು ರಾಜಸ್ವ ವೆಚ್ಚಕ್ಕೆ ಅಂದರೆ ಸಂಬಳ, ಪಿಂಚಣಿ, ಸಾಲ ತೀರಿಸಲು ಮತ್ತು ಸಬ್ಸಿಡಿಗೆ ಖರ್ಚು ಮಾಡುತ್ತಿರುವುದರಿಂದ ಅಭಿವೃದ್ಧಿಗೆ ಹಣ ಇಲ್ಲದಿರುವುದು ಸ್ಪಷ್ಟವಾಗಿದೆ. ಸಾಲ ಪಡೆದು ಜನಪ್ರಿಯ ಯೋಜನೆಗಳಿಗೆ ಹಣ ಕೊಡುತ್ತಿರುವುದು ರಾಜ್ಯವನ್ನು ಆರ್ಥಿಕ ಬಿಕ್ಕಟ್ಟಿಗೆ ತಳ್ಳುವುದರಲ್ಲಿ ಅನುಮಾನವಿಲ್ಲ. 2025ರ ಮಾರ್ಚ್‌ಗೆ ಕರ್ನಾಟಕದ ವರಮಾನದಲ್ಲಿ ಶೇ 26ಕ್ಕಿಂತ ಹೆಚ್ಚು ಮೊತ್ತ ಸಾಲದಿಂದ ಬರುತ್ತಿರುವುದು ಸರ್ಕಾರ ಮಂಡಿಸಿರುವ ಬಜೆಟ್‌ನಿಂದ ಗೊತ್ತಾಗುತ್ತದೆ. ಹೀಗೆ, ಸಂಪೂರ್ಣವಾಗಿ ಎಲ್ಲ ಗಡಿ ಮೀರಿರುವ ಆರ್ಥಿಕ ನಿರ್ವಹಣೆಯನ್ನು ಸರಿಪಡಿಸದೆ, ಕೇಂದ್ರದ ಮೇಲೆ ಪದೇ ಪದೇ ಟೀಕೆ ಮಾಡುವುದು, ಅನ್ಯಾಯ ಆಗಿದೆ ಅಂತ ಕೂಗು ಹಾಕುವುದರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಸುಳ್ಳನ್ನೇ ನೂರು ಬಾರಿ ಹೇಳಿ ಸತ್ಯ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಜಿಎಸ್‌ಟಿಯಿಂದಾಗಿ ರಾಜ್ಯದ ಆದಾಯ ಕಡಿಮೆ ಆಗಿದೆ ಎಂಬುದು ಅವರು ಮಾಡುವ ಪ್ರಮುಖ ಆಪಾದನೆಗಳಲ್ಲೊಂದು. ಮೊದಲು ಜಾರಿಯಲ್ಲಿದ್ದ ಅಬಕಾರಿ ತೆರಿಗೆ, ಮಾರಾಟ ತೆರಿಗೆ ಹಾಗೂ ಇನ್ನಿತರ ತೆರಿಗೆಗಳು ಒಂದು ರೀತಿಯಲ್ಲಿ ತೆರಿಗೆ ಭಯೋತ್ಪಾದನೆಯಂತಿದ್ದವು. ಹಲವು ತೆರಿಗೆಗಳಿಂದಾಗಿ ವ್ಯಾಪಾರಸ್ಥರಿಗೆ, ತೆರಿಗೆದಾರರಿಗೆ, ಜನಸಾಮಾನ್ಯರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಕಿರುಕುಳ ಆಗುತ್ತಿತ್ತು. ಈಗ ಜಾರಿಯಲ್ಲಿರುವ ಜಿಎಸ್‌ಟಿ ಪರಿಕಲ್ಪನೆ ಬಿಜೆಪಿಯದ್ದಲ್ಲ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವೇ ಜಿಎಸ್‌ಟಿ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡನೆ ಮಾಡಿತ್ತು. ಆದರೆ, ಅದಕ್ಕೆ ಜಾರಿಗೊಳಿಸಲು ಸಾಧ್ಯವಾಗಲಿಲ್ಲ. ಅವರು ಈ ಹಿಂದೆ ಮಂಡಿಸಿದ್ದ ಕಾನೂನನ್ನು ಈಗ ಅವರೇ ವಿರೋಧಿಸುತ್ತಿರುವುದು ಕಾಂಗ್ರೆಸ್‌ನವರ ಹೊಸ ನೀತಿ. ಜಿಎಸ್‌ಟಿ ಜಾರಿಯ ನಂತರದಲ್ಲಿ ರಾಜ್ಯಗಳಿಗೆ ಆಗುತ್ತಿದ್ದ ನಷ್ಟವನ್ನು ತಪ್ಪಿಸುವುದಕ್ಕಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವರಮಾನ ನಷ್ಟ ಪರಿಹಾರವನ್ನು (ಶೇ 14ರಷ್ಟು ವಾರ್ಷಿಕ ಅಭಿವೃದ್ಧಿಯ ಆಧಾರದಲ್ಲಿ) ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಿಗೆ 2022ರವೆಗೆ ಐದು ವರ್ಷ ನೀಡಿದೆ. ಹೀಗಾಗಿ, ಈಗ ಕಾಂಗ್ರೆಸ್‌ನವರು ಮಾಡುತ್ತಿರುವ ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ.

15ನೇ ಹಣಕಾಸಿನ ಆಯೋಗದ ಅನುದಾನದ ಒಟ್ಟು ಮೊತ್ತ 14ನೇ ಹಣಕಾಸಿನ ಆಯೋಗಕ್ಕಿಂತ ದೊಡ್ಡದಿರುವುದರಿಂದ ರಾಜ್ಯಕ್ಕೆ ₹1 ಲಕ್ಷ ಕೋಟಿ ಹೆಚ್ಚು ಹಣ ಬಂದಿದೆ. ಆದರೆ, ರಾಜ್ಯ ಸರ್ಕಾರ ಇದನ್ನು ಮುಚ್ಚಿ ಹಾಕುತ್ತಿದೆ. ತನ್ನ ವೈಫಲ್ಯ ಮರೆಮಾಚಲು ಪ್ರಯತ್ನ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳ ಪರಿಣಾಮ ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಅತ್ಯಂತ ಕಡಿಮೆ ದುಡ್ಡು ಖರ್ಚು ಮಾಡಲಾಗುತ್ತಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತಗಳಲ್ಲಿ ರಾಜ್ಯಕ್ಕೆ ಹಿನ್ನಡೆಯಾಗಿರುವುದು ತುಂಬಲಾರದ ನಷ್ಟ. ಇದನ್ನು ಸರಿಪಡಿಸಲು ಮುಂದೆ ಬರುವಂತಹ ಸರ್ಕಾರ ಹರಸಾಹಸ ಪಡಬೇಕಾಗುತ್ತದೆ. ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚು ಸಾಲ ಮಾಡಿದ್ದರು. ಈಗಲೂ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಈ ಅವಧಿಯಲ್ಲಿ ₹6 ಲಕ್ಷ ಕೋಟಿಗಿಂತ ಹೆಚ್ಚು ಹೊರೆಯನ್ನು ರಾಜ್ಯದ ಜನರ ಮೇಲೆ ಹೇರಲಿದ್ದಾರೆ. ಇದು ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಅತಿ ದೊಡ್ಡ ಅನ್ಯಾಯ.

ಇದನ್ನು ಸರಿಯಾಗಿ ನಿರ್ವಹಿಸಲು ಕೇಂದ್ರ ಸರ್ಕಾರ 50 ವರ್ಷಕ್ಕೆ ಬಂಡವಾಳ ವೆಚ್ಚದ ಮೇಲೆ ಸಾಲ ಕೊಡುತ್ತಿರುವುದನ್ನು ಬಳಸಿಕೊಳ್ಳಬೇಕು. ಬಂಡವಾಳ ವೆಚ್ಚ ಹೆಚ್ಚು ಮಾಡಬೇಕು. ಗ್ಯಾರಂಟಿ ಜೊತೆಗೆ ಗ್ಯಾರಂಟಿ ಉಸ್ತುವಾರಿಗಳಿಗೆ, ಸಾಧನಾ ಸಮಾವೇಶಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. 50ಕ್ಕೂ ಹೆಚ್ಚು ನಿಗಮ ಮಂಡಳಿ ಅಧ್ಯಕ್ಷರಿಗೆ ಸಂಪುಟ ಸಚಿವ ಸ್ಥಾನ ಕೊಟ್ಟು ವೆಚ್ಚ ಮಾಡುತ್ತಿದ್ದಾರೆ. ರಾಜಕೀಯ ವೆಚ್ಚವನ್ನು ಸಂಪೂರ್ಣವಾಗಿ ತೆಗೆದು ಹಾಕಿ, ಅನುಪಯುಕ್ತ ವೆಚ್ಚ ಕಡಿಮೆ ಮಾಡಿ ರಾಜ್ಯದ ಜನರ ಮೇಲೆ ಈಗಾಗಲೇ ₹1 ಲಕ್ಷ ಕೋಟಿ ಹೊಸ ತೆರಿಗೆ ಹಾಕಿದ್ದಾರೆ. ಅದನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಸಿದ್ದರಾಮಯ್ಯ ಪ್ರಯತ್ನ ಮಾಡಬೇಕು. ಕೇಂದ್ರದ ಮೇಲೆ ದೂಷಣೆ ಮಾಡುವುದನ್ನು, ಸುಳ್ಳು ಹೇಳಿ ರಾಜ್ಯದ ಜನರ ದಾರಿ ತಪ್ಪಿಸುವುದನ್ನು ಬಿಡಬೇಕು. ಜನರಿಗೆ ಸತ್ಯ ಹೇಳಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ರಾಜ್ಯಕ್ಕೆ ಹಣಕಾಸಿನ ಸಂಕಷ್ಟ ತಂದಿರುವ ಮುಖ್ಯಮಂತ್ರಿ ಎನ್ನುವ ಅಪಖ್ಯಾತಿಗೆ ಅವರು ಗುರಿಯಾಗಲಿದ್ದಾರೆ. ಇದು ನನ್ನೊಬ್ಬನದ್ದಲ್ಲ; ರಾಜ್ಯದ ಜನಸಾಮಾನ್ಯರ ಅಭಿಪ್ರಾಯವೂ ಹೌದು.

ಲೇಖಕ: ಸಂಸದ, ಮಾಜಿ ಮುಖ್ಯಮಂತ್ರಿ

ಸೆಸ್: ಸುಳ್ಳು ಆರೋಪ

ಅವರು ಮಾಡುತ್ತಿರುವ ಎರಡನೇ ಆರೋಪ ಸೆಸ್‌ನಲ್ಲಿ ರಾಜ್ಯಕ್ಕೆ ಪಾಲಿಲ್ಲ ಎನ್ನುವುದು. ಈ ವ್ಯವಸ್ಥೆ 1960ರಿಂದಲೇ ಜಾರಿಯಲ್ಲಿದೆ. ಸೆಸ್ ಎನ್ನುವುದು ವಿಶೇಷ ಕಾರ್ಯಕ್ರಮಗಳಿಗೆ ಇರುವಂತಹದ್ದು. ಇದನ್ನು ಸಂಸತ್ತಿನ ಮೂಲಕ ಅವತ್ತಿನ ಕಾಂಗ್ರೆಸ್ ಸರ್ಕಾರವೇ ಜಾರಿ ಮಾಡಿದೆ. ಅದು ಸಿ.ಎಂ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲವೆ? ಹಿಂದೆ ಅವರೇ ರೂಪಿಸಿರುವ ಕಾನೂನನ್ನು ಈಗ ಅವರೇ ಟೀಕಿಸುತ್ತಿದ್ದಾರೆ. ಜಿಎಸ್‌ಟಿ ಬಂದ ಮೇಲೆ ಮದ್ಯ, ತಂಬಾಕಿನ ಮೇಲಿನ ಸೆಸ್ ವರಮಾನವನ್ನು ಎಲ್ಲ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ರೂಪದಲ್ಲಿ ಕೊಡಲು ತೀರ್ಮಾನ ಮಾಡಿದ್ದರಿಂದ ಸೆಸ್‌ನಲ್ಲಿ ರಾಜ್ಯದ ಪಾಲು ಇದೆ ಎನ್ನುವುದು ಸ್ಪಷ್ಟ. 15ನೇ ಹಣಕಾಸು ಆಯೋಗದ ವರದಿಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ ಸರ್ಕಾರವೇ ನೇರ ಹೊಣೆ. ಅವರ ಸರ್ಕಾರ ಇದ್ದಾಗಲೇ ವರದಿ ಅಂತಿಮವಾಗಿದ್ದು, ಮತ್ತು 15ನೇ ಹಣಕಾಸು ಆಯೋಗದ ಹಣ ವಿತರಣೆಗೆ ಕರಾರುಗಳನ್ನು ನಿರ್ಧಾರ ಮಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವೇ ಇತ್ತು. ಅವರ ಸರ್ಕಾರದ ಐದು ಜನ ಸಚಿವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಆಗ ಪ್ರತಿಭಟಿಸದೆ ಈಗ ಕೇಂದ್ರದ ಮೇಲೆ ಗೂಬೆ ಕೂರಿಸುವುದು ರಾಜಕೀಯ ಪ್ರೇರಿತವಾದ ನಡೆಯಾಗುತ್ತದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

14 ಫೆಬ್ರುವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಾದಶಿ ಗಂ 16-02 ನಕ್ಷತ್ರ: ಪೂರ್ವಾಷಾಢ ಗಂ.18-16 ಯೋಗ: ಸಿದ್ಧಿ (ಆಸ್ರಿಕ್) ಗಂ. 27-18 ಕರಣ: ತೈತಿಲ ಗಂ 16-02 ಕುಂಭ ಮಾಸದ 02 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 , ಸೂರ್ಯೋದಯ : 06-57 ಸೂರ್ಯಾಸ್ತ : 06-32, ಮುಸ್ಲಿಂ ದಿನಾಂಕ : 25 ಶಬನ್ ,ಅದೃಷ್ಟ ಸಂಖ್ಯೆ : 11, 5

ಮೇಷ: ಕೌಟುಂಬಿಕವಾಗಿ ಜವಾಬ್ದಾರಿಗಳನ್ನು ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ಸಿನಿಮಾ ನಟ ನಟಿಯರಿಗೆ ಅವಕಾಶದ ಶುಭ ಸುದ್ದಿ ಸಿಗುವುದು. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ ಸಿಗಲಿದೆ.

ವೃಷಭ: ಮೊಬೈಲ್ ಫೋನ್‌ಗಳ ಅಥವಾ ಕಂಪ್ಯೂಟರ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಆದಾಯ ಕಂಡುಬರುತ್ತದೆ. ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆ ಪಡೆಯುವಿರಿ.

ಮಿಥುನ: ದಾಖಲೆ ಪರಿಶೀಲನೆ ತೀರ್ಮಾನದಿಂದ ನಿಸ್ಸಂಶಯವಾಗಿ ಮನೋವ್ಯಾಧಿ ದೂರಾಗುತ್ತದೆ. ಕೆಲಸ ಕಾರ್ಯಗಳಲ್ಲಿ ಏಕಾಗ್ರತೆ ಅನಿವಾರ್ಯ. ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭಗೊಳ್ಳಲಿದೆ.

ಕರ್ಕಾಟಕ: ಸ್ವಂತ ಉದ್ಯೋಗದವರು ಅಧಿಕ ಬಂಡವಾಳ ಹಾಕುವುದರಿಂದ ಕೈ ಸುಡುವಂತಾಗುವುದು. ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮಾತನಾಡುವಿರಿ. ಸಂಶೋಧಕರು ಹೆಮ್ಮೆ ಪಡೆಯುವಿರಿ.

ಸಿಂಹ: ಕೌಟುಂಬಿಕವಾಗಿ ಸಹೋದರನ ಏಳಿಗೆ ಸಹಿಸುವ ಮನೋಭಿಲಾಷೆಯನ್ನು ಬೆಳೆಸಿಕೊಳ್ಳಿರಿ. ಜ್ಞಾನಾರ್ಜನೆಯಾಗುವುದು. ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸ ಬೇಕಾಗಬಹುದು.

ಕನ್ಯಾ: ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸ್ನೇಹಿತರಲ್ಲಿ ವ್ಯವಹರಿಸಿ. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ, ಲಾಭವಾಗುವುದು.

ತುಲಾ: ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗ ಪಡಿಸಿಕೊಳ್ಳಿ. ಕೆಲಸದಲ್ಲಿದ್ದ ಸಣ್ಣ ಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಅಭ್ಯಾಸ ಮಾಡಿ.

ವೃಶ್ಚಿಕ: ಮಕ್ಕಳು ಜೀವನದಲ್ಲಿ ಒಂದು ಉತ್ತಮ ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಹಾಗೂ ಸಂತಸ ಪಡುವಂತಾಗುವುದು. ಉತ್ತಮ ಅವಕಾಶಗಳು ಎದುರಾಗಲಿವೆ.

ಧನು: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ನಂಬಿಕಸ್ಥ ಸ್ನೇಹಿತನ ಸಹಾಯದಿಂದ ನಡೆಸಬಹುದು. ವ್ಯಾಪಾರ, ವ್ಯವಹಾರಗಳಲ್ಲಿ ಪೈಪೋಟಿ ಎದುರಾಗಲಿದೆ.

ಮಕರ: ಮನಸ್ಸಿನ ದುಗುಡಗಳು ಕಡಿಮೆಯಾಗಿ ಸಹಾಯ ಮಾಡಿದ ಸ್ನೇಹಿತರ ಪಾತ್ರವೇ ಜೀವನದಲ್ಲಿ ಮುಖ್ಯ ಎನಿಸಲಿದೆ. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಆದಾಯವನ್ನು ಗಳಿಸುವಿರಿ.

ಕುಂಭ: ಜವಾಬ್ದಾರಿಯುತ ಊರಿನ ಸಾರ್ವಜನಿಕ ಕಾರ್ಯಗಳು ಮುಂದಾಳತ್ವದಲ್ಲಿ ನಡೆಯಲಿದೆ. ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾಗಿದೆ.

ಮೀನ: ಆಲೋಚನೆಗಳು ಕಾರ್ಯರೂಪಕ್ಕೆ ಬರಲು ಸಾಧ್ಯವಾಗದೇ ಇರಬಹುದು. ಆಹಾರದಲ್ಲಿ ಎಣ್ಣೆಯ ಪದಾರ್ಥ ಮತ್ತು ಖಾರದ ಪದಾರ್ಥಗಳನ್ನು ಕಡಿಮೆ ಮಾಡಿ. ಗ್ಲಾಸ್‌ಗಳಿಂದ ಗಾಯ ಆಗಬಹುದು.

ಪದಬಂಧ 6315

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3.ಮಗನೊಡನಿರುವ ಪುತ್ರಿ (3)
5.ಅದೇ ತಾನೆ ಲಗ್ನವಾದ ಗಂಡ ಹೆಂಡಿರು (5)
7.ಮಾದರಿ ಇಲ್ಲಿದೆ (3)
9.ರತಿಪತಿಯಿಂದ ಮೂಡಿದ ಆಸೆ (3)
11.ಜಗಳಕ್ಕೊಂದು ಪರ್ಯಾಯ ಪದ (3)
13.ಸಾಯುವ ಸಮಯವಿದು (5)
15.ಸರಿಯಾಗಿರುವ ಕಂಠಾಭರಣ! (3)
16.ಕತ್ತು ಕೊನೆಗಿರಿಸಿ ಮಾಡಿದ ಜೋಡಣೆ (4)

ಮೇಲಿಂದ ಕೆಳಕ್ಕೆ
1.ಓಟನ್ನು ನೀಡುವಿಕೆ (4)
2.ರಸ ಒಸರುವ ನಾಲಿಗೆ (3)
4.ಗರ ಬಡಿದಂತಿರುವ ಪತಿವ್ರತೆ (3)
6.ದಂಡ ನೀಡಿ ಶಿಕ್ಷಿಸುವುದು (3)
8.ಚಿನ್ನ ಬೆಳ್ಳಿ ಲೋಹಗಳನ್ನು ಕರಗಿಸಲು ಬಳಸುವ ಸಾಧನ (2)
9.ಕಾಣದಂತೆ ಇರುವ ಉದ್ದೇಶ! (3)
10.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
12.ಕತ್ತು ಕೊನೆಗಿಟ್ಟಾಗ ನಡೆದ ಘಟನೆ (4)
13.ಮರಿಗೆ ನೀಡಿದ ಕೂಲಿ (3)
14.ಜನಪದರ ಮಾತಲ್ಲಿನ ಸಿರಿದೇವತೆ (3)



6314ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರಮಾನ 3.ವನ್ಯಮೃಗ
5.ದುರಾಸೆ 6.ರವಾನೆ
8.ತವರ 10.ಮಂಕರಿ
11.ಸರಕು 13.ಕಳಸ
15.ಸಹೋದರಿ 16.ಪರದಾಟ

ಮೇಲಿಂದ ಕೆಳಕ್ಕೆ:
1.ವನಚರ 2.ನಗದು
3.ವರಸೆ 4.ಗತ್ಯಂತರ
7.ವಾಚಕ 9.ವಜೀರ
10.ಮಂದಹಾಸ 12.ಕುಡಿನೋಟ
13.ಕಮರಿ 14.ಸಲ್ಲಾಪ

ಸುಡೊಕು 6699

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		7	4	2		8	6
						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	

6698 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,807
ಇಂದಿನ ಅಂತ್ಯ: 25,471
ಪತನ ಕಂಡ ಅಂಶ: 336

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹575
12 ಕ್ಕೆ ₹85
ಮೈಸೂರು: 100 ಕ್ಕೆ ₹577

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)
ಆರ್‌ಎಸ್‌ಎಸ್-4 ₹208
ಆರ್‌ಎಸ್‌ಎಸ್-5 ₹202.50
ಗುಡ್ ಲಾಟ್ ₹190.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಪ್ರತಿ ಕೆ.ಜಿ) ₹600-790
ದ್ವಿತಳಿ (ಪ್ರತಿ ಕೆ.ಜಿ) ₹515-999

ಮುದ್ರಮನ ಕಾಫಿ
ಎಪಿ ₹23650
ಎಸಿ ₹13000
ಆರ್‌ಪಿ ₹18250
ಆರ್‌ಸಿ ₹10125

ಮುಂಬೈ ಖಾದ್ಯ ತೈಲ
ಶೇಂಗಾ (ರಿಫೈನ್ಡ್) ₹1770 (1740)
ಸೋಯಾ (ರಿಫೈನ್ಡ್) ₹1390 (1405)
ಸೂರ್ಯಕಾಂತಿ (ರಿಫೈನ್ಡ್) ₹1615 (1615)
ಪಾಮೋಲಿನ್ ₹1310 (1320)

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2100
ಮಧ್ಯಮ ₹800-1400
ಸಣ್ಣ ₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹9800-9800
ಹಿರಿಯೂರು ₹17000-19000
ಪುತ್ತೂರು ₹6000-22000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಡಾ|| ಜಿ.ಎಲ್. ತಿಮ್ಮಯ್ಯ
14ನೇ ಫೆಬ್ರವರಿ 1990
ಪತ್ನಿ, ಕುಟುಂಬವರ್ಗದವರು ಮತ್ತು ಸ್ನೇಹಿತರು

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಪಿ.ಎಂ. ನಂಜುಂಡಪ್ಪ
ನಿಧನ: 14-02-2016

ವೈಕುಂಠ ಸಮಾರಾಧನೆ

ಶ್ರೀಮತಿ ಹನುಮಕ್ಕನವರು
ದಿ:04-02-2026ರಂದು ... ಫೆ: 14-02-2026ರ ಶನಿವಾರ ಬೆಳಿಗ್ಗೆ 11-00 ಗಂಟೆಗೆ ...
ಇಂತಿ ದುಃಖತಪ್ತರು
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು.

ಬ್ಯಾಂಕ್ ಕನಿಷ್ಠ ಮೊತ್ತ: ದಂಡ ವಿಧಿಸಬೇಡಿ

ಸಂಸದ ಚಂದ್ರಪ್ರಕಾಶ್ ಜೋಶಿ ನೇತೃತ್ವದ ಸಮಿತಿ ಶಿಫಾರಸು; ಮಾರ್ಗಸೂಚಿ ಹೊರಡಿಸಲು ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಕಾರಣಕ್ಕಾಗಿ ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ವಲಯದ ಬ್ಯಾಂಕ್‌ಗಳು 2024–25ನೇ ಸಾಲಿನಲ್ಲಿ ₹4,817.96 ಕೋಟಿ ದಂಡ ವಿಧಿಸಿವೆ. ಬ್ಯಾಂಕ್‌ಗಳು ದಂಡ ವಸೂಲಿ ಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಈ ಸಂಬಂಧ ಆರ್‌ಬಿಐ ಹಾಗೂ ಹಣಕಾಸು ಸೇವಾ ಇಲಾಖೆಯು ಅಗತ್ಯ ಮಾರ್ಗಸೂಚಿ ಹೊರಡಿಸಬೇಕು ಎಂದು ಲೋಕಸಭೆಯ ಅರ್ಜಿಗಳ ಸಮಿತಿ ಶಿಫಾರಸು ಮಾಡಿದೆ.

‘ಬ್ಯಾಂಕ್‌ಗಳು ಗ್ರಾಹಕರಿಗೆ ದಂಡ ವಿಧಿಸುವ ಬದಲು ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವ ಮೂಲಕ ಕನಿಷ್ಠ ಮೊತ್ತ

ಕಾಯ್ದುಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಜತೆಗೆ, ಸ್ಥಿರ ಠೇವಣಿ ನಿರ್ವಹಣೆ ಮಾಡುವವರಿಗೆ ಹೆಚ್ಚಿನ ಬಡ್ಡಿದರ ನೀಡಬಹುದು’ ಎಂದು ಬಿಜೆಪಿ ಸಂಸದ ಚಂದ್ರಪ್ರಕಾಶ್ ಜೋಶಿ ನೇತೃತ್ವದ 15 ಸದಸ್ಯರ ಸಮಿತಿ ಸಲಹೆ ನೀಡಿದೆ.

‘ಸರ್ಕಾರಿ ಸ್ವಾಮ್ಯದ ಬಹುತೇಕ ಬ್ಯಾಂಕ್‌ಗಳು ಈ ದಂಡವನ್ನು ಕೈಬಿಡಲು ನಿರ್ಧರಿಸಿದ್ದರೂ, ಆರ್‌ಬಿಐ ಈ ಬಗ್ಗೆ ಯಾವುದೇ ನಿರ್ದೇಶನ ಅಥವಾ ಮಾರ್ಗಸೂಚಿ ಹೊರಡಿಸಿಲ್ಲ. ಖಾಸಗಿ ವಲಯದ ಬ್ಯಾಂಕ್‌ಗಳು ಇನ್ನೂ ದಂಡ ವಿಧಿಸುತ್ತಿವೆ. ಹೀಗಾಗಿ, ಎಲ್ಲ ಬ್ಯಾಂಕ್‌ಗಳು ಏಕರೂಪದ ನೀತಿಯನ್ನು ಅಳವಡಿಸಿಕೊಳ್ಳಬೇಕು. ಸಹಕಾರ ಬ್ಯಾಂಕ್ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಎಲ್ಲ ಬ್ಯಾಂಕ್‌ಗಳಿಗೆ ಅಗತ್ಯ ಮಾರ್ಗಸೂಚಿ ರೂಪಿಸಬೇಕು’ ಎಂದು ಹೇಳಿದೆ.

ಬೆಂಗಳೂರಿನ ಬಂಬೂಪೆಕರ್ ಕಂಪನಿ ಮಾಲೀಕ ಪರಮೇಶ್ವರನ್ ಕೃಷ್ಣ ಅಯ್ಯರ್ ಅವರು ಸಲ್ಲಿಸಿದ್ದ ದೂರಿನ ಮೇರೆಗೆ ಈ ಶಿಫಾರಸು ಮಾಡಲಾಗಿದೆ.

‘ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಂಡ ಗ್ರಾಹಕರಿಗೆ ಸಿಗುವುದು ಅಲ್ಪ ಬಡ್ಡಿ ದರ ಮಾತ್ರ. ಒಂದು ವೇಳೆ, ಕನಿಷ್ಠ ಮೊತ್ತ ಕಾಯ್ದುಕೊಳ್ಳಲು ವಿಫಲವಾದರೆ ಬ್ಯಾಂಕ್ ವಿಧಿಸುವ ದಂಡವು ಬಡ್ಡಿಗಿಂತ 15ರಿಂದ 20 ಪಟ್ಟು ಹೆಚ್ಚಾಗಿರುತ್ತದೆ. ಬಡ್ಡಿ ಮತ್ತು ದಂಡದ ನಡುವಿನ ಈ ಭಾರಿ ವ್ಯತ್ಯಾಸವು ನ್ಯಾಯಸಮ್ಮತವಲ್ಲ. ಇದರಿಂದ ಗ್ರಾಹಕರ ಮೇಲೆ ಆರ್ಥಿಕ ಹೊರೆ ಬೀಳುತ್ತದೆ’ ಎಂದು ಅಯ್ಯರ್ ಅರ್ಜಿಯಲ್ಲಿ ತಿಳಿಸಿದ್ದರು.

ಈ ದೂರನ್ನು ಪರಿಶೀಲಿಸಿದ ಸಮಿತಿ, ಲೋಕಸಭೆಯಲ್ಲಿ ಗುರುವಾರ ವರದಿಯನ್ನು ಮಂಡಿಸಿದೆ. ಬಿಹಾರದ ಮಹಿಳೆಯೊಬ್ಬರಿಗೆ ಮನರೇಗಾ (ಈಗ ವಿಬಿ–ಜಿ ರಾಮ್ ಜಿ) ಯೋಜನೆಯಡಿ ಬಂದಿದ್ದ ₹500 ಪೈಕಿ ₹440 ಮೊತ್ತವನ್ನು ಬ್ಯಾಂಕ್ ಕಡಿತಗೊಳಿಸಿರುವ ಹಾಗೂ ವ್ಯಕ್ತಿಯೊಬ್ಬರು ತನ್ನ ಮಗನ ಖಾತೆಯಲ್ಲಿ ಠೇವಣಿ ಇಟ್ಟಿದ್ದ ₹5 ಸಾವಿರ ಪೈಕಿ ₹2,500 ಮೊತ್ತವನ್ನು ಮತ್ತೊಂದು ಬ್ಯಾಂಕ್ ಕಡಿತಗೊಳಿಸಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯಾಂಶಗಳು
- ಪರಮೇಶ್ವರನ್ ಕೃಷ್ಣ ಅಯ್ಯರ್ ಸಲ್ಲಿಸಿದ್ದ ದೂರು
- 2024–25ನೇ ಸಾಲಿನಲ್ಲಿ ₹4,817.96 ಕೋಟಿ ದಂಡ ಸಂಗ್ರಹ
- ರಿವಾರ್ಡ್ ಪಾಯಿಂಟ್, ಶುಲ್ಕ ವಿನಾಯಿತಿ ನೀಡುವಂತೆ ಸಲಹೆ

ಅಂಕಿ ಅಂಶಗಳು
₹2,045.21 ಕೋಟಿ
ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ವಿಧಿಸಿದ ದಂಡ
₹2,772.21 ಕೋಟಿ
ಖಾಸಗಿ ವಲಯದ 13 ಬ್ಯಾಂಕ್‌ಗಳು ವಿಧಿಸಿದ ದಂಡ

ವಿದ್ಯಾರ್ಥಿಗಳಿಗೆ ಪ್ರಯಾಣ ಉಚಿತ

ಒಂದನೇ ಪುಟದಿಂದ...

ಅದರಂತೆ ಪರೀಕ್ಷೆ ನಡೆಯುವ ದಿನಗಳಂದು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮತ್ತು ಅಲ್ಲಿಂದ ಹಿಂದಿರುಗುವ ವೇಳೆ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ತೋರಿಸಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

ಕೆಎಸ್‌ಆರ್‌ಟಿಸಿಯ ನಗರ, ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ, ಬಿಎಂಟಿಸಿಯ ಸಾಮಾನ್ಯ ಸೇವೆಯ ಬಸ್‌ಗಳಲ್ಲಿ ಈ ಸೌಲಭ್ಯ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚುವರಿ ಟ್ರಿಪ್‌ಗಳ ಅಗತ್ಯ ಕಂಡುಬಂದಲ್ಲಿ ಹೆಚ್ಚಿನ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

25 ಲಕ್ಷ ಟನ್ ಗೋಧಿ ರಫ್ತಿಗೆ ಒಪ್ಪಿಗೆ

ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತಿಗೂ ಅನುಮೋದನೆ: ಕೇಂದ್ರ

ನವದೆಹಲಿ (ಪಿಟಿಐ): 25 ಲಕ್ಷ ಟನ್‌ನಷ್ಟು ಗೋಧಿ ರಫ್ತು ಮಾಡಲು ಕೇಂದ್ರ ಸರ್ಕಾರ ಶುಕ್ರವಾರ ಅನುಮೋದನೆ ನೀಡಿದೆ. ಇದೇ ವೇಳೆ ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತಿಗೂ ಸಹ ಒಪ್ಪಿಗೆ ನೀಡಿದೆ.

ಪ್ರಸ್ತುತ ಲಭ್ಯತೆ ಇರುವ ದಾಸ್ತಾನು ಮತ್ತು ಬೆಲೆಯ ಸನ್ನಿವೇಶವನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿದ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದು ರೈತರ ಹಿತಾಸಕ್ತಿಗಳನ್ನು ರಕ್ಷಿಸುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಈಗ ಅಂದಾಜು 75 ಲಕ್ಷ ಟನ್ ಗೋಧಿ ದಾಸ್ತಾನು ಇದೆ.

ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ 32 ಲಕ್ಷ ಟನ್‌ಗೂ ಅಧಿಕ ಎಂದು ತಿಳಿಸಿದೆ.

2026ರ ಏಪ್ರಿಲ್ 1ರ ವೇಳೆಗೆ ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಂದಾಜು 182 ಲಕ್ಷ ಟನ್ ಗೋಧಿ ಲಭ್ಯವಾಗುವ ನಿರೀಕ್ಷೆ ಇದೆ. ಹೀಗಾಗಿ, ರಫ್ತು ಅನುಮತಿ ದೇಶದ ಆಹಾರದ ಅಗತ್ಯಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದೆ.

ಕಳೆದ ವರ್ಷದ ಹಿಂಗಾರು ಹಂಗಾಮಿನಲ್ಲಿ ದೇಶದಲ್ಲಿ 328 ಲಕ್ಷ ಹೆಕ್ಟೇರ್‌ನಲ್ಲಿ ಗೋಧಿ ಬಿತ್ತನೆ ಆಗಿತ್ತು. ಅದು ಈ ಬಾರಿ 334 ಲಕ್ಷ ಹೆಕ್ಟೇರ್‌ಗೆ ಹೆಚ್ಚಳವಾಗಿದೆ. ಇದು ಗೋಧಿ ಕೃಷಿಯಲ್ಲಿ ಹೆಚ್ಚುತ್ತಿರುವ ರೈತರ ದೃಢವಾದ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದೆ.

ಹೆಚ್ಚಿನ ಗೋಧಿ ಲಭ್ಯತೆ, ಬೆಲೆ ಇಳಿಕೆ, ಉತ್ಪಾದನೆ ಹೆಚ್ಚುವ ನಿರೀಕ್ಷೆ ಮತ್ತು ಮಾರಾಟದ ಸಮಯದಲ್ಲಿ ಉಂಟಾಗುವ ತೊಂದರೆಯನ್ನು ತಡೆಯಲು ಸರ್ಕಾರವು ರಫ್ತು ನಿರ್ಧಾರವನ್ನು ಕೈಗೊಂಡಿದೆ. ಸರ್ಕಾರದ ನಿರ್ಧಾರವು ದೇಶೀಯ ಮಾರುಕಟ್ಟೆಯಲ್ಲಿ ದರವನ್ನು ಸ್ಥಿರಗೊಳಿಸಲಿದೆ ಮತ್ತು ರೈತರ ಆದಾಯವನ್ನು ಸುಧಾರಿಸಲಿದೆ ಎಂದು ಹೇಳಿದೆ.

2025–26ರ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) ಹೆಚ್ಚುವರಿಯಾಗಿ 5 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಸರ್ಕಾರ ಅನುಮೋದನೆ ನೀಡಿದೆ.

ಸಕ್ಕರೆ ಕಾರ್ಖಾನೆಗಳು ಒದಗಿಸಿದ ಮಾಹಿತಿಯ ಪ್ರಕಾರ, ಜನವರಿ 31ರವರೆಗೆ ಸುಮಾರು 1.97 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ರಫ್ತು ಮಾಡಲಾಗಿದೆ. ಇದರ ಜೊತೆಗೆ, ಇಲ್ಲಿಯವರೆಗೆ ಸಕ್ಕರೆ ಕಾರ್ಖಾನೆಗಳು ಸುಮಾರು 2.72 ಲಕ್ಷ ಟನ್ ಸಕ್ಕರೆ ರಫ್ತಿಗೆ ಒಪ್ಪಂದ ಮಾಡಿಕೊಂಡಿವೆ ಎಂದು ತಿಳಿಸಿದೆ.

ಪ್ರತಿ ಮಹಿಳೆ ಖಾತೆಗೆ ₹5 ಸಾವಿರ: ಸ್ಟಾಲಿನ್

ಚೆನ್ನೈ (ಪಿಟಿಐ): ತಮಿಳುನಾಡು ಸರ್ಕಾರವು ‘ಕಲೈನಾರ್ ಮಹಿಳಾ ಹಕ್ಕುಗಳ ಯೋಜನೆ’ಯಡಿ ರಾಜ್ಯದ 1.31 ಕೋಟಿ ಮಹಿಳಾ ಫಲಾನುಭವಿಗಳ ಖಾತೆಗೆ ತಲಾ ₹5,000 ಜಮಾ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದರು.

ಎಂ.ಕೆ.ಸ್ಟಾಲಿನ್

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಪಕ್ಷ ಅಧಿಕಾರಕ್ಕೆ ಮರಳಿದರೆ, ಈಗ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಿಕ ಅನುದಾನವನ್ನು ದ್ವಿಗುಣಗೊಳಿಸುವುದಾಗಿಯೂ ಮುಖ್ಯಮಂತ್ರಿ ಘೋಷಿಸಿದರು.

‘ಸರ್ಕಾರ ಈ ಯೋಜನೆಯಡಿ ಮಹಿಳೆಯರಿಗೆ ಪ್ರತಿ ತಿಂಗಳು ನೀಡುತ್ತಿರುವ ₹1000 ಆರ್ಥಿಕ ಸೌಲಭ್ಯವನ್ನು ತಡೆಯುವ ಪ್ರಯತ್ನಗಳು ನಡೆಯುತ್ತಿವೆ. ಅದನ್ನು ಎದುರಿಸುವುದಕ್ಕಾಗಿಯೇ ಫೆಬ್ರುವರಿಯಿಂದ ಮೂರು ತಿಂಗಳವರೆಗಿನ ಮೊತ್ತ ಮತ್ತು ಬೇಸಿಗೆ ಅವಧಿಯ ಖರ್ಚು–ವೆಚ್ಚಗಳನ್ನು ಭರಿಸಲು ₹2,000 ನೀಡಲು ನಿರ್ಧರಿಸಲಾಯಿತು’ ಎಂದು ಸ್ಟಾಲಿನ್ ತಮ್ಮ ಅಧಿಕೃತ ‘ಎಕ್ಸ್’ನಲ್ಲಿ ವಿಡಿಯೊ ಸಂದೇಶವನ್ನು ಪೋಸ್ಟ್ ಮಾಡಿದ್ದಾರೆ.

‘ಕಲೈನಾರ್ ಮಹಿಳಾ ಹಕ್ಕುಗಳ ಯೋಜನೆಯ ಪ್ರತಿ ಮಹಿಳಾ ಫಲಾನುಭವಿ ಖಾತೆಗೆ ₹5 ಸಾವಿರ ಜಮೆ ಮಾಡಲಾಗಿದೆ. ಕೆಲವರು (ಪಟ್ಟಭದ್ರ ಹಿತಾಸಕ್ತಿಗಳು) ಮುಂದಿನ ಚುನಾವಣೆಯನ್ನು ನೆಪವಾಗಿಸಿ, ಈ ಯೋಜನೆಯನ್ನು ಸ್ಥಗಿತಗೊಳಿಸಲು ಪ್ರಯತ್ನಿಸುತ್ತಿದ್ದರು. ಅದನ್ನು ಗಮನಿಸಿಯೇ, ಈ ಹಣ ವರ್ಗಾಯಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು’ ಎಂದರು. ವಿಧಾನಸಭಾ ಚುನಾವಣೆಗೆ ತಿಂಗಳುಗಳು ಬಾಕಿ ಇರುವಂತೆ ಡಿಎಂಕೆ ಸರ್ಕಾರ ಘೋಷಿಸಿರುವ ಯೋಜನೆಯನ್ನು ವಿರೋಧ ಪಕ್ಷಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ.

‘ಹಲವು ಟೀಕೆಗಳ ಹೊರತಾಗಿಯೂ, ತಮಿಳುನಾಡು ಸರ್ಕಾರ 2023ರ ಸೆಪ್ಟೆಂಬರ್‌ನಿಂದ ಕಲೈನಾರ್ ಮಹಿಳಾ ಹಕ್ಕುಗಳ ಯೋಜನೆಯಡಿ ಮಹಿಳೆಯರಿಗೆ ಪ್ರತಿ ತಿಂಗಳು ₹1000 ಆರ್ಥಿಕ ನೆರವು ನೀಡುವುದನ್ನು ಯಶಸ್ವಿಯಾಗಿ ಜಾರಿಗೆ ತಂದಿತು. ಆರಂಭದಲ್ಲಿ 1.13 ಕೋಟಿ ಮಹಿಳೆಯರಿಗೆ ಈ ಯೋಜನೆಯನ್ನು ತಲುಪಿಸಲಾಯಿತು. ನಂತರ ಪಡಿತರ ಚೀಟಿ ಹೊಂದಿರುವ ಕುಟುಂಬದ ಯಜಮಾನಿಯನ್ನು ಸೇರಿಸಿಕೊಳ್ಳುವ ಮೂಲಕ ಯೋಜನೆ ವಿಸ್ತರಿಸಲಾಯಿತು. ಪ್ರಸ್ತುತ ಈ ಯೋಜನೆಯಲ್ಲಿ 1.31 ಕೋಟಿ ಫಲಾನುಭವಿಗಳಿದ್ದಾರೆ.

> ‘ಈ ಘೋಷಣೆಗಳು, ಮುಖ್ಯಮಂತ್ರಿಯವರ ಚುನಾವಣಾ ಸೋಲಿನ ಭಯವನ್ನು ಪ್ರತಿಬಿಂಬಿಸುತ್ತದೆ. ಅಧಿಕಾರಕ್ಕೆ ಬಂದ 28 ತಿಂಗಳ ನಂತರವೂ ಈ ಯೋಜನೆ ಜಾರಿಗೆ ತರದ ಸರ್ಕಾರ, ಈಗ ಮೂರು ತಿಂಗಳ ಮೊತ್ತದೊಂದಿಗೆ ಬೇಸಿಗೆಯ ವಿಶೇಷ ಅನುದಾನ ನೀಡುತ್ತಿದೆ. ಮಹಿಳೆಯರು ಹೀಗೆ ತೇಪೆ ಹಾಕುವುದನ್ನು ಒಪ್ಪುವುದಿಲ್ಲ’
> **ಎಡಪ್ಪಾಡಿ ಕೆ. ಪಳನಿಸ್ವಾಮಿ,** ವಿಧಾನಸಭೆಯ ವಿರೋಧ ಪಕ್ಷದ ನಾಯಕ

> ಮುಖ್ಯಮಂತ್ರಿಯವರು ಈ ವರ್ಷ ₹2,000 ವಿಶೇಷ ಅನುದಾನ ಘೋಷಿಸಿದ್ದಾರೆ. ಅಂದರೆ, ಬೇಸಿಗೆ ಈ ವರ್ಷ ಮಾತ್ರ ಬಂದಿದಿಯೇ?
> **ವಿಜಯ್,** ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸಂಸ್ಥಾಪಕ,

ಮುಂಬೈ ಧಾರಣೆ (ಶೇಂಗಾ)
13-02-2026

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1750)
ಒಂದು ವಾರದ ಡೆಲಿವರಿ	1775 (1745)
ಪಾಮ್ ವಾರದ ಡೆಲಿವರಿ	1308 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1525)
ಚಿನ್ನ, ಬೆಳ್ಳಿ (ಜಿಎಸ್‌ಟಿ ಸಹಿತ)	
ಅಪರಂಜಿ ಚಿನ್ನ 10 ಗ್ರಾಂ	1,55,300 (1,55,900)
ಬೆಳ್ಳಿ ಕೆ.ಜಿಗೆ	2,59,700 (2,64,700)

ಆಧಾರ: ಮುಂಬೈ ಚಿನಿವಾರಪೇಟೆ ಧಾರಣೆ

ಸುದ್ದಿ ವಿಶ್ಲೇಷಣೆ prajavani.netಗೆ ಭೇಟಿ ಮಾಡಿ

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 1,048 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಇಳಿಕೆ ಕಂಡಿವೆ.

ಲೋಹ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,048 ಅಂಶ (ಶೇ 1.25) ಇಳಿಕೆಯಾಗಿ, 82,626ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 336 ಅಂಶ (ಶೇ 1.30) ಕಡಿಮೆಯಾಗಿ, 25,471ಕ್ಕೆ ಕೊನೆಗೊಂಡಿದೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹7 ಲಕ್ಷ ಕೋಟಿಯಷ್ಟು ಕರಗಿದೆ.

ಹಿಂದೂಸ್ತಾನ್ ಯೂನಿಲಿವರ್, ಎಟರ್ನಲ್, ಟೈಟನ್, ಟಾಟಾ ಸ್ಟೀಲ್, ಅದಾನಿ ಪೋರ್ಟ್ಸ್, ಟಿಸಿಎಸ್, ಪವರ್ ಗ್ರಿಡ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಏಷ್ಯನ್ ಪೇಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್‌ನ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ.

ಕೃತಕ ಬುದ್ಧಿಮತ್ತೆ ಕಾರಣದಿಂದಾಗಿ ಉಂಟಾಗಬಹುದಾದ ಪಲ್ಲಟಗಳಿಗೆ ಸಂಬಂಧಿಸಿದ ಕಳವಳಗಳು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದವು. ಇದರಿಂದ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸೂಚ್ಯಂಕಗಳು ಇಳಿಕೆಯಾದವು ಎಂದು ಹೇಳಿದ್ದಾರೆ.

ಮಲೇಷ್ಯಾ: ಪ್ರವಾಸಿಗರಿಗೆ ವೀಸಾ ಅಗತ್ಯವಿಲ್ಲ

ಬೆಂಗಳೂರು: ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಈ ವರ್ಷದ ಡಿಸೆಂಬರ್‌ವರೆಗೂ ವೀಸಾ ರದ್ದುಪಡಿಸಿದ್ದು, ಸುಮಾರು 21 ಲಕ್ಷ ಮಂದಿ ಭಾರತೀಯರು ಈ ವರ್ಷ ಮಲೇಷ್ಯಾಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಮಲೇಷ್ಯಾದ ಪ್ರವಾಸೋದ್ಯಮ ಇಲಾಖೆ ಅಂದಾಜಿಸಿದೆ.

ಭಾರತ, ಚೀನಾ, ಆಸಿಯಾನ್ ಮತ್ತಿತರ ದೇಶಗಳಿಂದ ಮಲೇಷ್ಯಾಗೆ ಪ್ರವಾಸಿಗರು ಹೆಚ್ಚಾಗಿ ಬರುತ್ತಾರೆ. ಅವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ವೀಸಾ ರದ್ದುಪಡಿಸಲಾಗಿದೆ ಎಂದು ಮಲೇಷ್ಯಾದ ಪ್ರವಾಸೋದ್ಯಮ ಮಂಡಳಿಯ ಅಧ್ಯಕ್ಷ ಡಿ. ಮನೋಹರನ್ ಅವರು ತಿಳಿಸಿದ್ದಾರೆ.

ಭಾರತದಿಂದ 2025ರಲ್ಲಿ ಸುಮಾರು 15.65 ಲಕ್ಷ ಹಾಗೂ 2024ರಲ್ಲಿ 13.65 ಲಕ್ಷ ಮಂದಿ ಪ್ರವಾಸಿಗರು ಮಲೇಷ್ಯಾಗೆ ಬಂದಿದ್ದರು. 2024ಕ್ಕೆ ಹೋಲಿಸಿದರೆ ಕಳೆದ ವರ್ಷ ಪ್ರವಾಸಿಗರ ಸಂಖ್ಯೆ ಶೇ 14.6ರಷ್ಟು ಹೆಚ್ಚಾಗಿದೆ. ಈ ವರ್ಷ ಭಾರತದಿಂದ ಬರುವ ಪ್ರವಾಸಿಗರ ಸಂಖ್ಯೆ 21 ಲಕ್ಷಕ್ಕೂ ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಬೆಂಗಳೂರಿನಿಂದ ವಾರದಲ್ಲಿ 30 ವಿಮಾನಗಳು ಮಲೇಷ್ಯಾಗೆ ಸಂಚರಿಸುತ್ತವೆ. ರಜಾ ದಿನಗಳನ್ನು ಕಳೆಯಲು, ಮದುವೆ ಸಮಾರಂಭಗಳನ್ನು ಆಯೋಜಿಸಲು ಮಲೇಷ್ಯಾದ ಪ್ರವಾಸಿ ತಾಣಗಳಲ್ಲಿ ಅವಕಾಶವಿದೆ. ಈ ನಿಟ್ಟಿನಲ್ಲಿ ಅರಿವು ಮೂಡಿಸಲು ಮಲೇಷ್ಯಾದ ಪ್ರವಾಸೋದ್ಯಮ ಇಲಾಖೆ ಮತ್ತು ಮಲೇಷ್ಯಾದ ಅಸೋಸಿಯೇಷನ್ ಆಫ್ ಟೂರ್ ಅಂಡ್ ಟ್ರಾವೆಲ್ ಏಜೆಂಟ್ಸ್ ಸಹಭಾಗಿತ್ವದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ ‘ಸೇಲ್ಸ್ ಮಿಷನ್ 2026 ಕಾರ್ಯಕ್ರಮ ಯಶಸ್ವಿಯಾಯಿತು ಎಂದು ಅವರು ತಿಳಿಸಿದ್ದಾರೆ.

ಚೆನ್ನೈನಲ್ಲಿರುವ ಮಲೇಷ್ಯಾದ ಕಾನ್ಸುಲ್ ಜನರಲ್ ಕೆ.ಸರವಣ ಕುಮಾರ್ ಮಾತನಾಡಿ, ಮಲೇಷ್ಯಾ ಮತ್ತು ಭಾರತ ನಡುವಿನ ಸಂಬಂಧ ವೃದ್ಧಿಸುವಲ್ಲಿ ಪ್ರವಾಸೋದ್ಯಮದ ಪಾತ್ರ ಪ್ರಮುಖವಾಗಿದೆ ಎಂದರು.

ಅಡಿಕೆ ಧಾರಣೆ

ಕುಮಟಾ	
ಚಾಲಿ	47999-51689
ಚಿಪ್ಪು	33089-40099
ಕೋಕ	15869-35099
ಫ್ಯಾಕ್ಟರಿ	11069-28339
ಹೊಸಚಾಲಿ	43089-49391
ಪುತ್ತೂರು	
ಕೋಕ	28000-37000
ಹೊಸತು	26000-48000
ಶಿವಮೊಗ್ಗ	
ಬೆಟ್ಟೆ	52009-66800
ಗೊರಬಲು	19200-42170
ರಾಶಿ	43099-58001
ಸರಕು	65859-99396
ಸಿದ್ದಾಪುರ	
ಬಿಳಿಗೋಟು	27109-40239
ಚಾಲಿ	43500-50199
ಕೋಕ	22600-32569
ಹೊಸಚಾಲಿ	40709-46919
ಕೆಂಪುಗೋಟು	30289-36199
ರಾಶಿ	48099-56199
ತಟ್ಟಿಬೆಟ್ಟೆ	38989-50089
ಶಿರಸಿ	
ಬೆಟ್ಟೆ	46699-55218
ಬಿಳಿಗೋಟು	28219-44199
ಚಾಲಿ	44699-48799
ಕೆಂಪುಗೋಟು	28899-40299
ರಾಶಿ	50131-58009
ಯಲ್ಲಾಪುರ	
ಆಪಿ	66468-76218
ಬಿಳಿಗೋಟು	15200-40201
ಕೋಕ	13109-32899
ಹಳೆಚಾಲಿ	37409-50666
ಹೊಸಚಾಲಿ	43319-48888
ಕೆಂಪುಗೋಟು	19899-41569
ರಾಶಿ	50000-61800
ತಟ್ಟಿಬೆಟ್ಟೆ	37819-53179

ಬಾಂಗ್ಲಾ: ಬಿಎನ್‌ಪಿಗೆ ಭಾರಿ ಬಹುಮತ

ಢಾಕಾ (/ಪಿಟಿಐ/ಎಎಫ್‌ಪಿ): ಕಳೆದ ಒಂದು ವರ್ಷಕ್ಕಿಂತ ಅಧಿಕ ಕಾಲದಿಂದ ಬಾಂಗ್ಲಾದೇಶವು ಎದುರಿಸುತ್ತಿದ್ದ ರಾಜಕೀಯ ಅನಿಶ್ಚಿತತೆಯು ಅಂತ್ಯಗೊಂಡಿದೆ. ಗುರುವಾರ ಸಂಸತ್ತಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮೈತ್ರಿಕೂಟವು 212 ಸ್ಥಾನಗಳನ್ನು ಗೆಲ್ಲುವ ಮೂಲಕ ಭಾರಿ ಬಹುಮತದೊಂದಿಗೆ ಅಧಿಕಾರ ವಹಿಸಿಕೊಳ್ಳಲಿದೆ.

ಈ ಮೂಲಕ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರದ ಅಧಿಕಾರಾವಧಿ ಮುಕ್ತಾಯಗೊಂಡಿದೆ. ತಾರಿಕ್ ರೆಹಮಾನ್ ಅವರು ಪ್ರಧಾನಿಯಾಗಲಿದ್ದಾರೆ ಎಂದು ಬಿಎನ್‌ಪಿ ಘೋಷಿಸಿದೆ. ದೇಶದ ಇತಿಹಾಸದಲ್ಲಿ 35 ವರ್ಷಗಳ ಬಳಿಕ ಮೊದಲ ಬಾರಿಗೆ ಪುರುಷರೊಬ್ಬರು ಪ್ರಧಾನಿಯಾಗುತ್ತಿದ್ದಾರೆ.

ಮೀಸಲಾತಿಯಲ್ಲಿ ಅನ್ಯಾಯ ಎಸಗಲಾಗುತ್ತಿದೆ ಎಂದು ಆರೋಪಿಸಿ 2024ರ ಜುಲೈನಲ್ಲಿ ವಿದ್ಯಾರ್ಥಿಗಳಿಂದ ಚಳವಳಿ ನಡೆದಿತ್ತು. ಸಾವಿರಾರು ಜನರ ಮೃತಪಟ್ಟಿದ್ದರು. ಇದರ ಪರಿಣಾಮ ಅವಾಮಿ ಲೀಗ್‌ನ ಶೇಖ್ ಹಸೀನಾ ಅವರ ಸರ್ಕಾರ ಪತನಗೊಂತ್ತು. ಹಸೀನಾ ಅವರು ಬಾಂಗ್ಲಾದಿಂದ ಓಡಿಬಂದು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

ಸುಮಾರು 2 ದಶಕಗಳ ಬಳಿಕ ಬಿಎನ್‌ಪಿ ಮತ್ತೊಮ್ಮೆ ಅಧಿಕಾರದ ಗದ್ದುಗೆಗೆ ಏರುತ್ತಿದೆ. ಈ ಹಿಂದೆ ಬೇರೆ ಬೇರೆ ಅವಧಿಯಲ್ಲಿ ಮೂರು ಬಾರಿ ಈ ಪಕ್ಷ ಅಧಿಕಾರದಲ್ಲಿತ್ತು. ಬಿಎನ್‌ಪಿ ಪಕ್ಷವು 2024ರ ಚುನಾವಣೆಯನ್ನು ಬಹಿಷ್ಕರಿಸಿತ್ತು.

ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಲಾಗಿತ್ತು.

2018ರಲ್ಲಿ ಜಮಾತ್ ಎ ಇಸ್ಲಾಮಿ ಪಕ್ಷವನ್ನು ಹಸೀನಾ ಅವರು ನಿಷೇಧಿಸಿದ್ದರು. ಎಂಟು ವರ್ಷಗಳ ಬಳಿಕ ಈ ಪಕ್ಷವು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇದರೊಂದಿಗೆ ಇನ್ನೂ 11 ಸಣ್ಣ ಸಣ್ಣ ಪಕ್ಷಗಳು ಮೈತ್ರಿ ಮಾಡಿಕೊಂಡಿದ್ದವು. 2001ರಿಂದ 2006ರ ಅವಧಿಯಲ್ಲಿ ಬಿಎನ್‌ಪಿ ನೇತೃತ್ವದ ಸರ್ಕಾರದಲ್ಲಿ ಜಮಾತ್ ಎ ಇಸ್ಲಾಮಿ ಅಧಿಕಾರ ಹಂಚಿಕೊಂಡಿತ್ತು.

> ಭಾರತವೂ ಸೇರಿ ಎಲ್ಲ ದೇಶಗಳೊಂದಿಗೆ ಸಮಾನತೆಯಿಂದ ಕೂಡಿದ ಸಂಬಂಧವನ್ನು ಬಯಸುತ್ತೇವೆ. ವಿಚಾರಣೆ ಎದುರಿಸಲು ಹಸೀನಾ ಅವರನ್ನು ವಾಪಸು ಕಳುಹಿಸಿಕೊಡಿ ಎಂದು ಭಾರತ ಸರ್ಕಾರವನ್ನು ಕೋರಿದ್ದೇವೆ
> **ಸಲಾಹುದ್ದೀನ್ ಅಹಮ್ಮದ್,** ಬಿಎನ್‌ಪಿ ನಾಯಕ

ಪಕ್ಷಗಳ ಬಲಾಬಲ



- 350 ಒಟ್ಟು ಸ್ಥಾನಗಳು
- 300 ಚುನಾವಣೆ ನಡೆಯುವ ಸ್ಥಾನಗಳು
- 50 ನಾಮನಿರ್ದೇಶನದ ಮೂಲಕ ಆಯ್ಕೆಯಾಗುವ ಸಂಸದರ ಸಂಖ್ಯೆ
- 297 ಫಲಿತಾಂಶ ಪ್ರಕಟಗೊಂಡ ಸ್ಥಾನಗಳು
- 2 ಹೈಕೋರ್ಟ್ ಆದೇಶದ ಮೇರೆಗೆ ಫಲಿತಾಂಶ ಬಹಿರಂಗಗೊಳ್ಳದ ಸ್ಥಾನಗಳು
- 1 ಅಭ್ಯರ್ಥಿಯ ನಿಧನದ ಕಾರಣ ಮತದಾನ ಮುಂದೂಡಿದ ಸ್ಥಾನ

ಸ್ವಯಂ ಗಡಿಪಾರಿನಿಂದ ಪ್ರಧಾನಿ ಹುದ್ದೆವರೆಗೆ...

ತಾರಿಕ್ ರೆಹಮಾನ್ ಅವರು ಬಾಂಗ್ಲಾದ ಮುಂದಿನ ಪ್ರಧಾನಿಯಾಗುವ ಹೊಸ್ತಿಲಲ್ಲಿದ್ದಾರೆ. ತಂದೆ ಜಿಯಾ ಉರ್ ರೆಹಮಾನ್ ಅವರು ಬಾಂಗ್ಲಾದ ರಾಷ್ಟ್ರಪತಿಯಾಗಿದ್ದರು. 1978ರಲ್ಲಿ ಬಿಎನ್‌ಪಿ ಪಕ್ಷವನ್ನು ಸ್ಥಾಪಿಸಿದರು. 1981ರಲ್ಲಿ ಇವರನ್ನು ಹತ್ಯೆ ಮಾಡಲಾಯಿತು. ಆ ಬಳಿಕ ತಾಯಿ ಖಾಲಿದಾ ಜಿಯಾ ಅವರು ಪಕ್ಷವನ್ನು ಮುನ್ನಡೆಸಿದರು ಮತ್ತು ಮೂರು ಬಾರಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ಕುಟುಂಬ ರಾಜಕಾರಣದ ಹಿನ್ನೆಲೆಯವರು ಎನ್ನುವುದು ರೆಹಮಾನ್ ಅವರಿಗೆ ವರವಾಗಿಯೂ ವಿರೋಧಿಗಳಿಗೆ ದೋಷವಾಗಿಯೂ ಕಂಡುಬಂದಿದೆ. ಆದರೆ, ರಾಜಕೀಯ ಕುಟುಂಬದ ಕಾರಣದಿಂದಲೇ ಅವರು ಅತ್ಯುತ್ತಮ ರಾಜಕೀಯ ತಂತ್ರಗಾರರಾಗಿಯೂ ಬೆಳೆದಿದ್ದಾರೆ. ಈಗ 17 ವರ್ಷಗಳ ಬಳಿಕ ಮತ್ತೊಮ್ಮೆ ದೇಶದ ರಾಜಕಾರಣದ ಕೇಂದ್ರದಲ್ಲಿ ತಾರಿಕ್ ನಿಂತಿದ್ದಾರೆ. ರಾಜಕೀಯ ಅನಿಶ್ಚಿತತೆಯ ಈ ಕಾಲಘಟ್ಟದಲ್ಲಿ ದೇಶವನ್ನು ಮುನ್ನಡೆಸುವ ಹೊಣೆ ತಾರಿಕ್ ಮೇಲಿದೆ.

2025ರ ಡಿಸೆಂಬರ್‌ನಲ್ಲಿ ತಾಯಿ ಖಾಲಿದಾ ಅವರು ಮೃತಪಟ್ಟರು. ಆ ಬಳಿಕ, ತಾರಿಕ್ ಅವರು ಪಕ್ಷದ ಮುಖ್ಯಸ್ಥರಾಗಿದ್ದಾರೆ. ಬಹಳ ಸಂಕಷ್ಟದ ಕಾಲದಲ್ಲಿ ನೇತೃತ್ವ ವಹಿಸಿಕೊಂಡು ಪಕ್ಷವನ್ನು ಗೆಲುವಿನ ದಡ ಸೇರಿಸಿದರು ಎನ್ನುವ ಗರಿಮೆ ರೆಹಮಾನ್ ಅವರದ್ದು.

ಢಾಕಾದಲ್ಲಿ 1965 ನ.20ರಂದು ತಾರಿಕ್ ಜನಿಸಿದರು. ಬಾಂಗ್ಲಾ ವಿಮೋಚನೆಯ ಸಂದರ್ಭದಲ್ಲಿ ಸಣ್ಣ ವಯಸ್ಸಿನ ಈ ಬಾಲಕನ್ನೂ ಸೇರಿಸಿ ಸೆರೆ ಮನೆಯಲ್ಲಿಡಲಾಗಿತ್ತು. ಢಾಕಾ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಸಂಬಂಧ ಕುರಿತು ಅಧ್ಯಯನ ಮಾಡುತ್ತಿದ್ದ ಅವರು ಅರ್ಧದಲ್ಲಿಯೇ ಶಿಕ್ಷಣ ತೊರೆದರು. 2009ರ ಬಳಿಕ ನಿಧಾನವಾಗಿ ಪಕ್ಷದ ಕಾರ್ಯದಲ್ಲಿ ತೊಡಗಿಸಿಕೊಂಡರು.

ಅವಾಮಿ ಲೀಗ್ ಅಧಿಕಾರಕ್ಕೇರಿದ ಬಳಿಕ ತಾರಿಕ್ ಅವರು ಹಸೀನಾ ಅವರ ಮುಖ್ಯ ಗುರಿಯಾದರು. 2004ರ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಈ ಎಲ್ಲಾ ಆರೋಪಗಳನ್ನು ತಾರಿಕ್ ನಿರಾಕರಿಸಿದರು. ಎಲ್ಲವೂ ರಾಜಕೀಯ ಪ್ರೇರಿತ ಎಂದರು. ಬಳಿಕ, ಇವರು ಲಂಡನ್‌ಗೆ ಹೋಗಿ ನೆಲಸಿದರು. ಮಧ್ಯಂತರ ಸರ್ಕಾರ ಅಧಿಕಾರ ವಹಿಸಿಕೊಂಡ ಬಳಿಕ ತಾರಿಕ್ ಅವರ ಮೇಲಿದ್ದ ಎಲ್ಲ ಪ್ರಕರಣಗಳನ್ನು ಕೈಬಿಡಲಾಗಿತ್ತು.

‘ಶಾಂತಿ, ಪ್ರಗತಿಗೆ ಭಾರತದ ಬದ್ಧತೆ’

ತಾರಿಕ್ ಅವರೊಂದಿಗೆ ಮಾತನಾಡಲು ತುಂಬಾ ಸಂತಸವಾಯಿತು. ಬಾಂಗ್ಲಾದೇಶದ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಕ್ಕೆ ನಾನು ಅವರನ್ನು ಅಭಿನಂದಿಸಿದೆ. ಬಾಂಗ್ಲಾದೇಶದ ಜನರ ಆಕಾಂಕ್ಷೆಗಳನ್ನು ಪೂರೈಸುವ ಅವರ ಪ್ರಯತ್ನಕ್ಕೆ ಬೆಂಬಲ ಸೂಚಿಸಿದ್ದೇನೆ. ನೆರೆಹೊರೆಯವರಾಗಿದ್ದುಕೊಂಡು ಎರಡೂ ದೇಶಗಳ ಜನರ ಶಾಂತಿ, ಪ್ರಗತಿ ಮತ್ತು ಸಮೃದ್ಧಿಗೆ ನಿರಂತರ ಬದ್ಧತೆಯನ್ನು ನಾನು ಪುನರುಚ್ಚರಿಸಿದ್ದೇನೆ
ನರೇಂದ್ರ ಮೋದಿ, ಪ್ರಧಾನಿ (ತಾರಿಕ್ ರೊಂದಿಗೆ ಕರೆ ಮಾಡಿ ಮಾತನಾಡಿದುದದರ ಸಾರಾಂಶ)

ಚಳವಳಿಯಲ್ಲಿ ಗೆದ್ದು, ಚುನಾವಣೆ ಸೋತರು

2024ರ ವಿದ್ಯಾರ್ಥಿಗಳ ಚಳವಳಿಯಿಂದ ಹುಟ್ಟಿಕೊಂಡಿದ್ದು ನ್ಯಾಷನಲ್ ಸಿಟಿಜನ್ ಪಾರ್ಟಿ (ಎನ್‌ಸಿಪಿ). ಈ ಪಕ್ಷವು ಮಧ್ಯಂತರ ಸರ್ಕಾರದ ಭಾಗವಾಗಿತ್ತು. ಚಳವಳಿಯಲ್ಲಿ ಮುಖ್ಯಭೂಮಿಕೆ ವಹಿಸಿದ್ದರೂ, ಭಾರಿ ಜನ ಬೆಂಬಲವಿದ್ದರೂ ಇದು ಚುನಾವಣೆಯಲ್ಲಿ ಗೆದ್ದಿದ್ದು 6 ಸ್ಥಾನಗಳನ್ನು ಮಾತ್ರ. ಸ್ಪರ್ಧಿಸಿದ್ದು 30 ಸ್ಥಾನಗಳಿಗೆ. ಜನಬೆಂಬಲವನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವಲ್ಲಿ ಎನ್‌ಸಿಪಿ ಸಂಪೂರ್ಣ ಸೋತಿದೆ.

ಜಮಾತ್ ಎ ಇಸ್ಲಾಮಿ ಎಂಬ ಸಂಪೂರ್ಣ ಬಲಪಂಥೀಯವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದೇ ಎನ್‌ಸಿಪಿಯ ಹೀನಾಯ ಸೋಲಿಗೆ ಮುಖ್ಯ ಕಾರಣ ಎಂದು ಸ್ವತಃ ಇದೇ ಪಕ್ಷದ ಬೆಂಬಲಿಗರು ಹೇಳುತ್ತಿದ್ದಾರೆ. ಚುನಾವಣೆ ಘೋಷಣೆಯಾದಾಗ ಎಲ್ಲ ಸ್ಥಾನಗಳಲ್ಲಿ ಸ್ಪರ್ಧಿಸಬೇಕು ಎಂದು ಪಕ್ಷ ಚಿಂತನೆ ನಡೆಸಿತ್ತು. ಆದರೆ, ಕೊನೇ ಗಳಿಗೆಯಲ್ಲಿ ಮೈತ್ರಿ ಮಾಡಿಕೊಂಡಿತು.

‘ಚಳವಳಿಯ ಬಳಿಕ ಜನರು ಪಕ್ಷದ ಮೇಲೆ ಇಟ್ಟುಕೊಂಡಿದ್ದ ನಂಬಿಕೆಯನ್ನು ಉಳಿಸಿಕೊಳ್ಳಲು ಎನ್‌ಸಿಪಿಗೆ ಸಾಧ್ಯವಾಗಲಿಲ್ಲ. ಜಮಾತೆ ಪಕ್ಷದೊಂದಿಗೆ ಸೇರಿಕೊಂಡು ಅದು ನಮಗೆ ಮೋಸ ಮಾಡಿತು’ ಎಂದು ವಿದ್ಯಾರ್ಥಿನಿಯೊಬ್ಬರು ಅಭಿಪ್ರಾಯಪಟ್ಟರು.

- ಭಾರಿ ಬಹುಮತದೊಂದಿಗೆ ಗೆಲುವು ಸಾಧಿಸಿದರೂ ಯಾರೂ ವಿಜಯೋತ್ಸವ ಆಚರಿಸುವಂತಿಲ್ಲ. ವಿಶೇಷ ಪ್ರಾರ್ಥನೆ ಮಾಡುವಂತೆ ತಾರಿಕ್ ಅವರು ಕಾರ್ಯಕರ್ತರಿಗೆ, ನಾಯಕರಿಗೆ ಸೂಚಿಸಿದ್ದಾರೆ
- ಫಲಿತಾಂಶದ ಕುರಿತು ಜಮಾತ್ ಎ ಇಸ್ಲಾಮ್ ಮತ್ತು ಎನ್‌ಸಿಪಿ ಪಕ್ಷಗಳು ತಮ್ಮ ತಕರಾರುಗಳನ್ನು ಮುಂದಿಟ್ಟಿದೆ. ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತ ಅನುಮಾನ ವ್ಯಕ್ತಪಡಿಸಿದೆ. ಚುನಾವಣೆಯಲ್ಲಿ ಅಕ್ರಮ ನಡೆದಿದ್ದರೆ, ದೇಶವ್ಯಾಪಿ ಹೋರಾಟ ನಡೆಸುವುದಾಗಿ ಜಮಾತ್ ಹೇಳಿದೆ. ಆದರೆ, ಈ ಎಲ್ಲಾ ಆರೋಪಗಳನ್ನು ಚುನಾವಣಾ ಆಯೋಗ ನಿರಾಕರಿಸಿದೆ
- ಬಿಎನ್‌ಪಿಯ ಹಿರಿಯ ನಾಯಕ, ಅಲ್ಪಸಂಖ್ಯಾತ ಹಿಂದೂ ಸಮುದಾಯಕ್ಕೆ ಸೇರಿದ ಗಾಯೇಶ್ವರ್ ಚಂದ್ರ ರಾಯ್ ಅವರು ಢಾಕಾದ ಕ್ಷೇತ್ರವೊಂದರಲ್ಲಿ ಗೆಲುವು ಸಾಧಿಸಿದರು. ಅಲ್ಪಸಂಖ್ಯಾತ ಹಿಂದೂ ಸಮುದಾಯದವರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ ಎಂಬ ಆರೋಪ ಕೇಳಿಬರುತ್ತಿರುವ ಸಂದರ್ಭದಲ್ಲೇ ಈ ಗೆಲುವು ಬಂದಿದೆ.

ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಸನ್ನದು: ಶೇ 86ರಷ್ಟು ಮತ

ತಮ್ಮ ಮುಂದಿನ ಪ್ರಧಾನಿಯನ್ನು ಆಯ್ಕೆ ಮಾಡುವುದರೊಂದಿಗೆ ‘ಜುಲೈ ನ್ಯಾಷನಲ್ ಚಾರ್ಟರ್’ ಎಂಬ 84 ಅಂಶಗಳ ಸಾಂವಿಧಾನಿಕವಾದ ಕೆಲವು ಬದಲಾವಣೆಗಳನ್ನು ಮಾಡುವ ಸನ್ನದುವಿಗೂ ಮತ ಚಲಾಯಿಸುವಂತೆ ಕೋರಲಾಗಿತ್ತು. ಇದಕ್ಕೆ ಸುಮಾರು ಶೇ 68.1ರಷ್ಟು ಜನರು ‘ಯೆಸ್’ ಎಂದಿದ್ದಾರೆ. ಶೇ 31.9ರಷ್ಟು ಜನರು ‘ನೋ’ ಎಂದಿದ್ದಾರೆ. ಸರ್ಕಾರ ರಚನೆಗೊಂಡ 185 ದಿನಗಳ ಒಳಗೆ ಈ ಎಲ್ಲ ಅಂಶಗಳನ್ನು ಜಾರಿ ಮಾಡಬೇಕು.

ಯೂನುಸ್ ನೇತೃತ್ವದ ಸರ್ಕಾರ ಮತ್ತು ಕೆಲವು ಸಾಂವಿಧಾನಿಕ ಸಂಸ್ಥೆಗಳು ಸೇರಿ ಈ ಸನ್ನದುವನ್ನು ತಯಾರು ಮಾಡಿವೆ. ವ್ಯಕ್ತಿಯೊಬ್ಬರು ಎರಡು ಬಾರಿಗೆ ಮಾತ್ರವೇ ಪ್ರಧಾನಿಯಾಗಬಹುದು, ಸಂಸತ್ತಿನಲ್ಲಿ ಮೇಲ್ಮನೆ ಸ್ಥಾಪನೆ, ರಾಷ್ಟ್ರಪತಿಗೆ ಹೆಚ್ಚಿನ ಅಧಿಕಾರ, ನ್ಯಾಯಾಂಗದ ಸ್ವಾಯತ್ತೆ ಕಾಪಾಡುವುದು, ಸಂಸದೀಯ ಸಮಿತಿಗಳಿಗೆ ವಿರೋಧ ಪಕ್ಷಗಳ ನಾಯಕರನ್ನು ಮುಖ್ಯಸ್ಥರನ್ನಾಗಿಸುವ ಪ್ರವೃತ್ತಿ ಹೆಚ್ಚಿಸುವುದು ಈ ಸನ್ನದುವಿನ ಮುಖ್ಯ ವಿಚಾರಗಳು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers
ಡ್ರೈವರ್ ಬೇಕಾಗಿದ್ದಾರೆ
ಬೆಂಗಳೂರು
ಎಲೆಕ್ಟ್ರಿಕ್ ಬಸ್‌ಗಳಿಗಾಗಿ
₹ 23,150/-
ಸಂಪರ್ಕ: 8438889961 / 8438889963

Walk-in
ಅಸಿಸ್ಟೆಂಟ್ ಲೈನ್ ಆಪರೇಟರ್ ಹುದ್ದೆಗೆ ನೇಮಕಾತಿ ಅರ್ಹತೆ: SSLC/PUC/ITI / ಯಾವುದೇ ಪದವಿ ವಯಸ್ಸು: 18 ರಿಂದ 28 ವರ್ಷದೊಳಗಿನ ಮಹಿಳೆಯರು ವೇತನ: ₹18,100/- ಪ್ರತಿ ತಿಂಗಳು ... 7019660476 / 8073496142

Part-Time Jobs
ಕರ್ನಾಟಕದಾದ್ಯಂತ ಕಂಪನಿಗಳಿಗೆ ... ಸಂಬಳ 19,000 -25,000 ... 9964311522, 9742133993

General
ಉದ್ಯೋಗಾವಕಾಶ
ಟಿವಿಎಸ್, ಭೂತಾನ್, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree, ಸಂಬಳ 16,000-86,000/- (ವಿದ್ಯಾರ್ಹತೆಯ ಅನುಸಾರ) ವಸತಿಯೊಂದಿಗೆ.
9035710381

ಪ್ರವಾಸ
Travel
04.05.2026 ಸಿಂಗಾಪೂರ್ ಮಲೇಷಿಯಾ ಕ್ರೂಸ್ 7/11 ದಿನಗಳು. 21.03.2026
04.04.2026 ಭೂತಾನ್ 8 ದಿನಗಳು. 27.04.2026
ಶ್ರೀಲಂಕಾ 7 ದಿನಗಳು.
23.03.2026 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.04.2026 ಅಸ್ಸಾಂ,ಮೇಘಾಲಯ 9 ದಿನಗಳು.
9448402248
7022547922

ಓದುಗರ ಗಮನಕ್ಕೆ

‘ಈ ತಾಣ ನಮಗೆ ಮನೆ ಇದ್ದಂತೆ’

ಚಿನ್ನಸ್ವಾಮಿ ಕ್ರೀಡಾಂಗಣದ ಬೌಲಿಂಗ್ ಎಂಡ್‌ಗಳಿಗೆ ಕುಂಬ್ಳೆ–ದ್ರಾವಿಡ್ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಪ್ರೇಕ್ಷಕರ ಸ್ಟ್ಯಾಂಡ್ ಮತ್ತು ಎರಡು ಬೌಲಿಂಗ್ ಎಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರ ಹೆಸರುಗಳನ್ನು ಶುಕ್ರವಾರ ನಡೆದ ಸಮಾರಂಭದಲ್ಲಿ ಇಡಲಾಯಿತು.

ಕ್ರೀಡಾಂಗಣದ ಪೆವಿಲಿಯನ್ ಎಂಡ್‌ಗೆ ಮಾಜಿ ಸ್ಪಿನ್ನರ್ ಅನಿಲ್ ಕುಂಬ್ಳೆ ಮತ್ತು ನಾರ್ಥರನ್(ಉತ್ತರ) ಎಂಡ್‌ಗೆ ರಾಹುಲ್ ದ್ರಾವಿಡ್ ಅವರ ಹೆಸರನ್ನು ಇಡಲಾಯಿತು. ಪ್ರೇಕ್ಷಕರ ಗ್ಯಾಲರಿ (ಬಿ ಲೋವರ್ ಸ್ಟ್ಯಾಂಡ್) ಗೆ ಭಾರತ ಮಹಿಳಾ ತಂಡದ ಮೊದಲ ನಾಯಕಿ ಶಾಂತಾ ರಂಗಸ್ವಾಮಿ, ಕೆಎಸ್‌ಸಿಎ ಮಾಜಿ ಆಡಳಿತಗಾರರಾದ ದಿವಂಗತ ಸಿ. ನಾಗರಾಜ್ (ಎಂ3 ಸ್ಟ್ಯಾಂಡ್) ಮತ್ತು ದಿವಂಗತ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ (ಎಂ4 ಸ್ಟ್ಯಾಂಡ್) ಅವರ ಹೆಸರುಗಳನ್ನೂ ಇಡಲಾಯಿತು.

ಹೋದ ವರ್ಷ ಕ್ರೀಡಾಂಗಣದ ಕೆಲವು ಸ್ಟ್ಯಾಂಡ್‌ಗಳಿಗೆ ರಾಜ್ಯದ ದಿಗ್ಗಜ ಆಟಗಾರರ ಹೆಸರುಗಳನ್ನು ಇಡಲಾಗಿತ್ತು.

ಸನ್ಮಾನ ಸ್ವೀಕರಿಸಿದ ರಾಹುಲ್ ದ್ರಾವಿಡ್, ‘ಈ ಕ್ರೀಡಾಂಗಣ ನಮಗೆ ಮನೆ ಇದ್ದಂತೆ. ನಮ್ಮ ಹೆಚ್ಚಿನ ಸಮಯವನ್ನು ಇಲ್ಲಿಯೇ ಕಳೆದಿದ್ದೇವೆ’ ಎಂದರು.

‘ನಾನು ಮೊದಲ ಸಲ ಈ ಕ್ರೀಡಾಂಗಣಕ್ಕೆ ಅಪ್ಪನೊಂದಿಗೆ ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ನೋಡಲು ಬಂದಿದ್ದೆ. ನನ್ನ ಹೀರೊ ಜಿ.ಆರ್. ವಿಶ್ವನಾಥ್ ಅವರ ಬ್ಯಾಟಿಂಗ್ ನೋಡಲು ಬಂದಿದ್ದೆ. ಆ ಪಂದ್ಯದಲ್ಲಿ ಅವರು ಜಾನ್ ಲಿವರ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಆದಾಗ ಬಹಳ ಬೇಸರ ಪಟ್ಟುಕೊಂಡಿದ್ದೆ. 13–14 ವರ್ಷದವನಿದ್ದಾಗ ಇಲ್ಲಿ ನಡೆದ ಬೇಸಿಗೆ ತರಬೇತಿ ಶಿಬಿರದಲ್ಲಿ ಪಾಲ್ಗೊಂಡೆ. ಹೆಸರಾಂತ ತರಬೇತುದಾರರಾದ ಪಿ.ಎಸ್. ವಿಶ್ವನಾಥ್ ಮತ್ತು ಕೆಕಿ ತಾರಾಪುರ್ ಅವರ ಮಾರ್ಗದರ್ಶನ ಲಭಿಸಿತು’ ಎಂದು ರಾಹುಲ್ ನೆನಪಿಸಿಕೊಂಡರು.

‘ಇಲ್ಲಿ ನಾನು ಅಭ್ಯಾಸ ಮಾಡುವಾಗ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಸುನಿಲ್ ಜೋಶಿ, ಡೇವಿಡ್ ಜಾನ್ಸನ್, ದೊಡ್ಡ ಗಣೇಶ್ ಅವರಂತಹ ಖ್ಯಾತನಾಮರು ಬೌಲಿಂಗ್ ಮಾಡುತ್ತಿದ್ದರು. ಸುಜಿತ್ ಸೋಮಸುಂದರ್ ಬ್ಯಾಟಿಂಗ್ ನೋಡಿ ಕಲಿತೆ. ಅಂತಹ ಮಹನೀಯರ ಜೊತೆಗೆ ಅಭ್ಯಾಸ ಮಾಡಿಯೂ ನಾನು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಯದೇ ಹೋಗಿದ್ದರೆ ನನ್ನದೇ ತಪ್ಪಾಗುತ್ತಿತ್ತು’ ಎಂದರು.

ರಣಜಿ ತಂಡಕ್ಕೆ ಕುಂಬ್ಳೆ ಹಾರೈಕೆ: ‘ನಾನು 9 ವರ್ಷದವನಿದ್ದಾಗ ಮೊದಲ ಬಾರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕರ್ನಾಟಕ–ತಮಿಳುನಾಡು ರಣಜಿ ಪಂದ್ಯ ನೋಡಲು ಬಂದಿದ್ದೆ. ಕ್ರೀಡಾಂಗಣ ಜನರಿಂದ ಭರ್ತಿಯಾಗಿತ್ತು. ಆ ಪಂದ್ಯದಲ್ಲಿ ರೋಜರ್ ಬಿನ್ನಿ ಶತಕ ಬಾರಿಸಿದ್ದರು. ಈ ವರ್ಷ ನಮ್ಮ ಕರ್ನಾಟಕ ತಂಡವು ಸೆಮಿಫೈನಲ್‌ಗೆ ಬಂದಿದೆ. ಈ ಬಾರಿ ಚಾಂಪಿಯನ್ ಆಗುವ ಸಾಮರ್ಥ್ಯ ಈ ತಂಡಕ್ಕೆ ಇದೆ ಎಂಬ ವಿಶ್ವಾಸ ನನಗೆ ಇದೆ. ತಂಡಕ್ಕೆ ಶುಭವಾಗಲಿ’ ಎಂದು ಕುಂಬ್ಳೆ ಹಾರೈಸಿದರು.

‘1974ರಲ್ಲಿ ಈ ಕ್ರೀಡಾಂಗಣದಲ್ಲಿ ಮೊದಲ ಟೆಸ್ಟ್ ನಡೆದಿತ್ತು. ಆ ಐತಿಹಾಸಿಕ ದಿನಕ್ಕೆ ಐವತ್ತು ವರ್ಷಗಳು ತುಂಬಿವೆ. ಅದಕ್ಕಾಗಿ ಈ ಕಾರ್ಯಕ್ರಮ ನಡೆಯುತ್ತಿದೆ’ ಎಂದರು.

ಕೆಎಸ್‌ಸಿಎ ಉಪಾಧ್ಯಕ್ಷ ಸುಜಿತ್ ಸೋಮ ಸುಂದರ್, ಕಾರ್ಯದರ್ಶಿ ಸಂತೋಷ್ ಮೆನನ್, ವಕ್ತಾರ ವಿನಯ್ ಮೃತ್ಯುಂಜಯ, ಜಂಟಿ ಕಾರ್ಯದರ್ಶಿ ಬಿ.ಕೆ. ರವಿ ಹಾಗೂ ಮಂಜುನಾಥ್ ಮುಂಬರುವ ಯೋಜನೆಗಳು, ಟೂರ್ನಿಗಳ ಕುರಿತು ವಿವರ ನೀಡಿದರು.

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅನಿಲ್ ಕುಂಬ್ಳೆ, ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಹಾಗೂ ರಾಹುಲ್ ದ್ರಾವಿಡ್ ಪ್ರಜಾವಾಣಿ ಚಿತ್ರ

ಪ್ರೇಕ್ಷಕರ ಸ್ಟ್ಯಾಂಡ್‌ಗೆ ಶಾಂತಾ ಹೆಸರು

ಭಾರತ ಮಹಿಳಾ ಕ್ರಿಕೆಟ್ ತಂಡದ ಮೊದಲ ನಾಯಕಿ ಶಾಂತಾ ರಂಗಸ್ವಾಮಿ ಅವರ ಹೆಸರನ್ನು ಪ್ರೇಕ್ಷಕರ (ಬಿ ಲೋವರ್) ಸ್ಟ್ಯಾಂಡ್‌ಗೆ ಇಡಲಾಯಿತು.

80ರ ದಶಕದಲ್ಲಿ ಅವರು ಇಲ್ಲಿ ಆಡಿದ್ದ ಕ್ರಿಕೆಟ್ ಪಂದ್ಯದಲ್ಲಿ ಸಿಕ್ಸರ್‌ಗೆತ್ತಿದ್ದ ಚೆಂಡು ಈ ಸ್ಟ್ಯಾಂಡ್‌ಗೇ ಬಂದು ಬಿದ್ದಿತ್ತು. ‘ಇಂತಹದೊಂದು ಗೌರವ ನನಗೆ ಸಿಗುವುದರ ಬಗ್ಗೆ ಕನಸು ಕೂಡ ಕಂಡಿರಲಿಲ್ಲ. ತವರಿನಂಗಳದಲ್ಲಿ ಇಂತಹ ಸಮ್ಮಾನ ದೊರೆತಿದ್ದು ಸಂತಸವಾಗಿದೆ. ಮಹಿಳಾ ಕ್ರಿಕೆಟ್ ಇವತ್ತು ದೊಡ್ಡ ಮಟ್ಟಕ್ಕೆ ಬೆಳೆದಿರುವುದೂ ಕೂಡ ಖುಷಿಯ ಸಂಗತಿ’ ಎಂದು ಶಾಂತಾ ಹೇಳಿದರು.

‘ಭಾರತ ಮತ್ತು ಕರ್ನಾಟಕದ ಮಹಿಳಾ ಕ್ರಿಕೆಟ್‌ಗೆ ಶಾಂತಾ ರಂಗಸ್ವಾಮಿ ಅವರ ಕೊಡುಗೆ ಅಪಾರ. ಅವರು ಬಹಳಷ್ಟು ಮಹಿಳಾ ಕ್ರಿಕೆಟಿಗರಿಗೆ ಪ್ರೇರಣೆಯಾಗಿದ್ದಾರೆ’ ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹೇಳಿದರು.

ಹೋದ ವರ್ಷವೂ ನಡೆದಿತ್ತು ನಾಮಕರಣ

ಒಂದು ವರ್ಷದ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದ ಕೆಲವು ಸ್ಟ್ಯಾಂಡ್‌ಗಳಿಗೆ ಕರ್ನಾಟಕದ ಕ್ರಿಕೆಟ್ ದಿಗ್ಗಜರ ಹೆಸರುಗಳನ್ನು ಇಡಲಾಗಿತ್ತು.

ಎರಪಳ್ಳಿ ಪ್ರಸನ್ನ (ಪಿ1 ಸ್ಟ್ಯಾಂಡ್), ಜಿ.ಆರ್. ವಿಶ್ವನಾಥ್ (ಪಿ2 ಸ್ಟ್ಯಾಂಡ್), ಬಿ.ಎಸ್. ಚಂದ್ರಶೇಖರ್ (ಪಿ ಟೆರೆಸ್), ಸೈಯದ್ ಕಿರ್ಮಾನಿ (ಪಿ ಕಾರ್ಪೋರೆಟ್), ಬ್ರಿಜೇಶ್ ಪಟೇಲ್ (ಎಂ1 ಸ್ಟ್ಯಾಂಡ್), ರೋಜರ್ ಬಿನ್ನಿ (ಎಂ2 ಸ್ಟ್ಯಾಂಡ್), ಅನಿಲ್ ಕುಂಬ್ಳೆ (ಡೈಮಂಡ್ ಬಾಕ್ಸ್), ರಾಹುಲ್ ದ್ರಾವಿಡ್ (ಎನ್ ಸ್ಟ್ಯಾಂಡ್), ಜಾವಗಲ್ ಶ್ರೀನಾಥ್ (ಪಿ1 ಎ ಸ್ಟ್ಯಾಂಡ್) ಮತ್ತು ವೆಂಕಟೇಶ್ ಪ್ರಸಾದ್ (ಪಿ4 ಸ್ಟ್ಯಾಂಡ್) ಅವರ ಹೆಸರುಗಳ ಫಲಕಗಳನ್ನು ಅಳವಡಿಸಲಾಗಿತ್ತು. ಕರ್ನಾಟಕ ತಂಡವು 1974ರಲ್ಲಿ ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತ್ತು. ಆಗ ತಂಡದ ನಾಯಕರಾಗಿದ್ದ ಪ್ರಸನ್ನ, ಸ್ಪಿನ್ನರ್ ಬಿ.ಎಸ್. ಚಂದ್ರಶೇಖರ್, ವಿಕೆಟ್‌ಕೀಪರ್ ಸೈಯದ್ ಕಿರ್ಮಾನಿ ಮತ್ತು ಬ್ಯಾಟರ್ ಜಿ.ಆರ್. ವಿಶ್ವನಾಥ್, ಬ್ರಿಜೇಶ್ ಪಟೇಲ್ ಅವರ ಹೆಸರುಗಳನ್ನು ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಸ್ಟ್ಯಾಂಡ್‌ಗಳಿಗೆ ಇಡಬೇಕು ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಹಾಲಿ ಚಾಂಪಿಯನ್ ಮೋಹನ್ ಬಾಗನ್‌ಗೆ ಕೇರಳ ಬ್ಲಾಸ್ಟರ್ಸ್ ಸವಾಲು

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ ಇಂದಿನಿಂದ

ಕೋಲ್ಕತ್ತ (ಪಿಟಿಐ): ದೇಶದ ಅಗ್ರ ಸ್ತರದ ಫುಟ್‌ಬಾಲ್ ಲೀಗ್ ಆಗಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) 2025–26ರ ಋತು ಶನಿವಾರ ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ಮತ್ತು ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಅನಿಶ್ಚಿತತೆ, ಆಡಳಿತಾತ್ಮಕ ಪುನರ್‌ರಚನೆಯ ನಂತರ ಐಎಸ್‌ಎಲ್ ಹೊಸ ಆವೃತ್ತಿಯು ಸುಮಾರು ನಾಲ್ಕು ತಿಂಗಳು ವಿಳಂಬವಾಗಿ ಶುರುವಾಗುತ್ತಿದೆ. 14 ತಂಡಗಳನ್ನು ಒಳಗೊಂಡ ಟೂರ್ನಿಯು ಮೊಟಕುಗೊಂಡ ಸ್ವರೂಪದಲ್ಲಿ ನಡೆಯಲಿದೆ. ಉದ್ಘಾಟನಾ ಪಂದ್ಯವನ್ನು ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಫುಟ್‌ಬಾಲ್ ಕ್ಯಾಲೆಂಡರ್‌ನಲ್ಲಿ ಸೀಮಿತ ಸಮಯ ಉಳಿದಿರುವುದರಿಂದ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಈ ಬಾರಿ ಸಿಂಗಲ್ ರೌಂಡ್ ರಾಬಿನ್ ಮಾದರಿಯನ್ನು ಆರಿಸಿಕೊಂಡಿದೆ. ಎರಡನೇ ಲೆಗ್ ಮತ್ತು ಸಾಂಪ್ರದಾಯಿಕ ಪ್ಲೇಆಫ್ ಹಂತವನ್ನು ರದ್ದುಗೊಳಿಸಿದೆ. ಮೂರು ತಿಂಗಳ ಲೀಗ್‌ನಲ್ಲಿ ಪ್ರತಿ ತಂಡವು 13 ಪಂದ್ಯಗಳನ್ನು ಆಡಲಿದ್ದು, ಅಂಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ತಂಡವು ಚಾಂಪಿಯನ್ ಆಗಲಿದೆ.

ಕಳೆದ ವರ್ಷ ಪ್ರಶಸ್ತಿ ಗೆದ್ದ ಮೋಹನ್ ಬಾಗನ್ ಈ ಬಾರಿಯೂ ನೆಚ್ಚಿನ ತಂಡವಾಗಿ ಕಣಕ್ಕಿಳಿಯಲಿದೆ. ಸೆರ್ಗಿಯೊ ಲೊಬೆರಾ ಮಾರ್ಗದರ್ಶನದ ತಂಡವು ತವರಿನ ಕ್ರೀಡಾಂಗಣದ ಲಾಭ ಪಡೆಯುವ ಹುಮ್ಮಸ್ಸಿನಲ್ಲಿದೆ. ಕೇರಳ ತಂಡವು ಉತ್ತಮ ಪ್ರದರ್ಶನ ತೋರುವ ವಿಶ್ವಾಸದಲ್ಲಿದೆ.

‘ಉದ್ಘಾಟನಾ ಪಂದ್ಯದಲ್ಲಿ ದೇಶದಲ್ಲೇ ಅತ್ಯುತ್ತಮ ತಂಡವನ್ನು ಎದುರಿಸಲಿದ್ದೇವೆ. ಎದುರಾಳಿ ತಂಡವು ಪ್ರಬಲ ಆಟಗಾರರ ಪಡೆಯನ್ನು ಹೊಂದಿದೆ. ಆದರೂ ಆಟದಲ್ಲಿ ಏನೂ ಬೇಕಾದರೂ ನಡೆಯಬಹುದು. ನಮ್ಮ ತಂಡವು ಮೂರು ಅಂಕಗಳನ್ನು ಪಡೆಯಲು ಪ್ರಯತ್ನಿಸಲಿದೆ’ ಎಂದು ಕೇರಳ ಬ್ಲಾಸ್ಟರ್ಸ್ ಮುಖ್ಯ ಕೋಚ್ ಡೇವಿಡ್ ಕ್ಯಾಟಲಾ ಹೇಳಿದ್ದಾರೆ.

ದಿನದ ಎರಡನೇ ಪಂದ್ಯದಲ್ಲಿ ಸೂಪರ್ ಕಪ್ ಚಾಂಪಿಯನ್ ಎಫ್‌ಸಿ ಗೋವಾ ತಂಡವು ಐಎಸ್‌ಎಲ್‌ನಲ್ಲಿ ಮೊದಲ ಬಾರಿ ಸ್ಪರ್ಧಿಸುವ ಇಂಟರ್ ಕಾಶಿ ತಂಡದ ವಿರುದ್ಧ ಫಟೋರ್ಡಾದ ಪಿಜೆಎನ್ ಕ್ರೀಡಾಂಗಣದಲ್ಲಿ ತನ್ನ ಅಭಿಯಾನವನ್ನು ಆರಂಭಿಸಲಿದೆ.

ಇಂದಿನ ಪಂದ್ಯ

ಮೋಹನ್ ಬಾಗನ್	V/s	ಕೇರಳ ಬ್ಲಾಸ್ಟರ್
ಸಂಜೆ 5		
ಎಫ್‌ಸಿ ಗೋವಾ	V/s	ಇಂಟರ್ ಕಾಶಿ
ರಾತ್ರಿ 7.30		
ಲೈವ್: ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್‌ಕೋಡ್		

ಕೊನೆಯ ದಿನವೂ ಭಾರತ ಶೂಟರ್‌ಗಳ ಪ್ರಾಬಲ್ಯ

ಏಷ್ಯನ್ ಶೂಟಿಂಗ್: ಅಮನ್‌ಪ್ರೀತ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ದಿಗ್ಗಜ ಪಿಸ್ತೂಲ್ ಶೂಟರ್ ಅಮನ್‌ಪ್ರೀತ್ ಸಿಂಗ್ ಅವರು ಶುಕ್ರವಾರ ಮುಕ್ತಾಯಗೊಂಡ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 25 ಮೀ. ಸೆಂಟರ್ ಫೈರ್ ಸ್ಪರ್ಧೆಯಲ್ಲಿ ಸ್ವರ್ಣ ಗೆದ್ದು ಬೀಗಿದರು. ಒಲಿಂಪಿಯನ್ ಗುರುಪ್ರೀತ್ ಸಿಂಗ್ ಹಾಗೂ ಅಂಕುರ್ ಗೋಯಲ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಆತಿಥೇಯ ಭಾರತವು ಸೀನಿಯರ್ ವಿಭಾಗದಲ್ಲಿ ಒಟ್ಟು 33 ಪದಕಗಳನ್ನು (13 ಚಿನ್ನ, 11 ಬೆಳ್ಳಿ, 9 ಕಂಚು) ಜಯಿಸಿ, ಪದಕ-ಪಟ್ಟಿಯಲ್ಲಿ ಅಗ್ರಸ್ಥಾನಿಯಾಯಿತು. ಜೂನಿಯರ್ ವಿಭಾಗದಲ್ಲಿ ಆತಿಥೇಯ ಶೂಟರ್‌ಗಳು ಒಟ್ಟು 61 ಪದಕಗಳಿಗೆ (38 ಚಿನ್ನ, 12 ಬೆಳ್ಳಿ, 11 ಕಂಚು) ಗುರಿಯಿಟ್ಟರು.

38 ವರ್ಷ ವಯಸ್ಸಿನ ಅಮನ್‌ಪ್ರೀತ್ ಅವರು ಫೈನಲ್ ಸುತ್ತಿನಲ್ಲಿ 589 ಅಂಕ ಕಲೆಹಾಕಿದರು. ಗುರ್‌ಪ್ರೀತ್ ಹಾಗೂ ಅಂಕುಲ್ ಕ್ರಮವಾಗಿ 584 ಮತ್ತು 570 ಅಂಕ ಪಡೆದರು. ಅದರೊಂದಿಗೆ ಭಾರತದ ಶೂಟರ್‌ಗಳು ಎಲ್ಲ ಮೂರು ಪದಕ ಗೆದ್ದು ಪಾರಮ್ಯ ಮೆರೆದರು.

ಟೀಮ್ ವಿಭಾಗದಲ್ಲಿಯೂ ಆತಿಥೇಯ ಶೂಟರ್‌ಗಳು ಸ್ವರ್ಣ (1,743) ತಮ್ಮದಾಗಿಸಿಕೊಂಡರು. ವಿಯೆಟ್ನಾಂ (1,671) ರಜತ ಪದಕ ಗೆದ್ದುಕೊಂಡಿತು.

ಪರಿಣತ ಶೂಟರ್ ಸಿಫ್ಟ್ ಕೌರ್ ಸಮ್ರಾ ಅವರು ಮಹಿಳೆಯರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಸ್ವಲ್ಪ-ದರಲ್ಲಿಯೇ ಚಿನ್ನ ತಪ್ಪಿಸಿಕೊಂಡರು. ತೀವ್ರ ಪೈಪೋಟಿಯಿದ್ದ ಫೈನಲ್ ಸುತ್ತಿನಲ್ಲಿ ಸಮ್ರಾ 623.2 ಅಂಕ ಸಂಪಾದಿಸಿದರು. ಕಜಾಕಸ್ತಾನದ ಯೆಲಿಝವೆಟಾ ಬೆಝ್ರುಕೊವಾ (623.4) ಸ್ವರ್ಣಕ್ಕೆ ಕೊರಳೊಡ್ಡಿದರೆ, ತೇಜಸ್ವಿನಿ ಸಾವಂತ್ (621) ಕಂಚು ತಮ್ಮದಾಗಿಸಿಕೊಂಡರು.

ಸಮ್ರಾ, ತೇಜಸ್ವಿನಿ ಹಾಗೂ ಮಾನಿನಿ ಕೌಶಿಕ್ ಅವರಿಗೆ (ಒಟ್ಟು 1862.9 ಅಂಕ) ಟೀಮ್ ವಿಭಾಗದಲ್ಲಿ ಸ್ವರ್ಣ ಒಲಿಯಿತು. ಕಜಾಕಸ್ತಾನ (1862.8) ಬೆಳ್ಳಿ ಪದಕ ಗೆದ್ದುಕೊಂಡಿತು. ಜೂನಿಯರ್ ಮಹಿಳೆಯರ ವಿಭಾಗದಲ್ಲಿ ತೆಲಂಗಾಣದ ಧಾಳವಿಕಾ ದೇವಿ (614.1) ಅವರು ಕಂಚು ಗೆದ್ದರು. ಕಜಾಕಸ್ತಾನದ ಟೊಮಿರಿಸ್ ಅಮನೊವಾ (620.1) ಹಾಗೂ ಡಾರ್ಯ ಪೊನೊಮರೆಂಕೊ (615.4) ಅವರು ಕ್ರಮವಾಗಿ ಮೊದಲೆರಡು ಸ್ಥಾನ ಪಡೆದರು.

ಪುರುಷರ 25 ಮೀ. ಸೆಂಟರ್ ಫೈರ್ ಸ್ಪರ್ಧೆಯ ಪದಕ ವಿಜೇತರು: (ಎಡದಿಂದ) ಗುರ್‌ಪ್ರೀತ್ ಸಿಂಗ್, ಅಮನ್‌ಪ್ರೀತ್ ಸಿಂಗ್ ಹಾಗೂ ಅಂಕುಲ್ ಗೋಯಲ್

ಸುಧಾರಣಾ ಕ್ರಮ ಕೈಗೊಳ್ಳಲಿ: ‘ಸುಪ್ರೀಂ’

ನವದೆಹಲಿ (ಪಿಟಿಐ): ‘ಜಿಲ್ಲಾ ಸಂಸ್ಥೆಗಳು ವೃತ್ತಿಪರವಾಗಿ, ಪಾರದರ್ಶಕವಾಗಿ ಮತ್ತು ಕ್ರೀಡೆಯ ಹಿತಾಸಕ್ತಿಗೆ ಅನುಗುಣವಾಗಿ ಕೆಲಸ ಮಾಡುವಂತೆ ರಾಜ್ಯ ಕ್ರಿಕೆಟ್ ಸಂಸ್ಥೆಗಳು ಸುಧಾರಣಾ ಕ್ರಮಗಳನ್ನು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. ‘ಆಟಗಾರರ ಆಯ್ಕೆಯೂ ಪಾರದರ್ಶಕವಾಗಿರುವಂತೆ ನೋಡಿಕೊಳ್ಳುವುದು ಇಂಥ ಸುಧಾರಣೆಗಳಲ್ಲಿ ಸೇರಿರಬೇಕು ಎಂದು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಅಲೋಕ್ ಅರಾಧೆ ಅವರಿದ್ದ ಪೀಠವು ಅಭಿಪ್ರಾಯಪಟ್ಟಿದೆ.

‘ಒಳ್ಳೆಯ ಆಡಳಿತ, ನಿರ್ವಹಣೆ, ಪಾರದರ್ಶಕತೆ ಮತ್ತು ಹಿತಾಸಕ್ತಿ ಸಂಘರ್ಷ ತಪ್ಪಿಸುವಂಥ ಸುಧಾರಣಾ ಕ್ರಮಗಳ ಅನುಷ್ಠಾನದಲ್ಲಿ ಜಿಲ್ಲಾ ಸಂಸ್ಥೆಗಳೂ ಸ್ವಯಂ ಪ್ರೇರಣೆಯಿಂದ ಕಾರ್ಯಪ್ರವೃತ್ತವಾಗಬೇಕು’ ಎಂದೂ ಪೀಠ ಸಲಹೆ ನೀಡಿದೆ.

ಪರಾಗ್ ನಾಯಕ

ನವದೆಹಲಿ (ಪಿಟಿಐ): ಮುಂಬರುವ ಐಪಿಎಲ್ ಋತುವಿಗೆ ರಾಜಸ್ಥಾನ ರಾಯಲ್ಸ್ ತಂಡವು, ಅಸ್ಸಾಮ್‌ನ ಆಲ್‌ರೌಂಡರ್ ರಿಯಾನ್ ಪರಾಗ್ ಅವರನ್ನು ನಾಯಕರನ್ನಾಗಿ ಶುಕ್ರವಾರ ಹೆಸರಿಸಿದೆ. ಈ ಹಿಂದೆ ನಾಯಕರಾಗಿದ್ದ ಸಂಜು ಸ್ಯಾಮ್ಸನ್ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೇರ್ಪಡೆಗೊಂಡಿದ್ದರಿಂದ ಪರಾಗ್ ಅವರಿಗೆ ನಾಯಕತ್ವ ವಹಿಸಲಾಗಿದೆ.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಜೈನ್, ಪಂಜಾಬ್ ವಿ.ವಿ

ಬೆಂಗಳೂರು: ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡವು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿತು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿ.ವಿಯ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಜೈನ್ ತಂಡವು 51–42ರಿಂದ ಎಲ್‌ಎನ್‌ಐಪಿ ವಿ.ವಿ ತಂಡವನ್ನು ಮಣಿಸಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಪಂಜಾಬ್ ವಿ.ವಿ ತಂಡವು 76–63ರಿಂದ ಎಸ್‌ಆರ್‌ಎಂ ವಿ.ವಿ ತಂಡವನ್ನು ಮಣಿಸಿತು.

ಶನಿವಾರ ಫೈನಲ್‌ನಲ್ಲಿ ಪಂಜಾಬ್ ತಂಡವು ಜೈನ್ ತಂಡವನ್ನು ಎದುರಿಸಲಿದೆ. ಮೂರನೇ ಸ್ಥಾನಕ್ಕೆ ನಡೆಯುವ ಪಂದ್ಯದಲ್ಲಿ ಎಲ್‌ಎನ್‌ಐಪಿ ಮತ್ತು ಎಸ್‌ಆರ್‌ಎಂ ತಂಡಗಳು ಸೆಣಸಲಿವೆ.

ಪ್ರಶಸ್ತಿ ಗೆದ್ದ ಮರಿಯನ್ಸ್ ಬಿ.ಸಿ ಚಿಕ್ಕಮಗಳೂರು ತಂಡ. (ನಿಂತವರು) ಎಡದಿಂದ; ಓಂ ಶೆಟ್ಟಿ, ವಿನೋದ್ ಗೌಡ, ಕೋಚ್ ಅಶ್ವಿನ್ ಕುಮಾರ್, ನವೀನ್ ಚಾರ್ಲ್ಸ್, ದಿಲೀಪ್ ಕುಮಾರ್. (ಮಂಡಿಯೂರಿದವರು) ರಿಷಬ್ ಕುಮಾರ್, ಸುಜೋಯ್ ದಾಸ್, ಭರತ್ ಕುಮಾರ್ ಬಿ. ಮತ್ತು ದರ್ಶನ್ ದಾಂಡೇವಾಲೆ. ಚಿತ್ರ: ಪುಷ್ಕರ್ ವಿ.

ಮರಿಯನ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಓಂ ಶೆಟ್ಟಿ ಮತ್ತು ರಿಷಬ್ ಕುಮಾರ್ ಅವರ ಅಮೋಘ ಆಟದ ನೆರವಿನಿಂದ ಮರಿಯನ್ಸ್ ಬಿ.ಸಿ ಚಿಕ್ಕಮಗಳೂರು ತಂಡವು ಕರ್ನಾಟಕ ಗ್ರಾಮೀಣ ಲೀಗ್ ಪುರುಷರ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ನ 7ನೇ ಆವೃತ್ತಿಯ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಮರಿಯನ್ಸ್ ತಂಡವು 85–65ರಿಂದ ನ್ಯಾಷನಲ್ ಎಸ್‌ಸಿ ಮೈಸೂರು ತಂಡವನ್ನು ಮಣಿಸಿತು. ಮಧ್ಯಂತರದ ವೇಳೆಗೆ 11 (44–33) ಅಂಕಗಳಿಂದ ಮುನ್ನಡೆಯಲ್ಲಿದ್ದ ಮೇರಿಯಲ್ಸ್ ತಂಡವು ನಂತರದಲ್ಲೂ ಪ್ರಾಬಲ್ಯ ಸಾಧಿಸಿತು. ಓಂ ಮತ್ತು ರಿಷಬ್ ಕ್ರಮವಾಗಿ 20 ಮತ್ತು 19 ಅಂಕ ಗಳಿಸಿದರು. ನ್ಯಾಷನಲ್ಸ್ ಪರ ರೋನಕ್ 24 ಮತ್ತು ಶ್ಲೋಕ್ 17 ಪಾಯಿಂಟ್ಸ್ ತಂದಿತ್ತರು.

ಚಾಂಪಿಯನ್ ಮರಿಯನ್ಸ್ ತಂಡವು ₹75 ಸಾವಿರ ಮತ್ತು ರನ್ನರ್ಸ್ ಅಪ್ ನ್ಯಾಷನಲ್ ತಂಡವು ₹50 ಸಾವಿರ ಬಹುಮಾನ ತನ್ನದಾಗಿಸಿಕೊಂಡಿತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಮಂಗಳೂರು ಬಿ.ಸಿ 79–77ರಿಂದ ಪ್ರೊಟೆಕ್ ಅಸೋಸಿ ಯೇಷನ್ ಮೈಸೂರು ತಂಡವನ್ನು ಮಣಿಸಿತು. ಮಂಗಳೂರು ತಂಡವು ₹25 ಸಾವಿರ ಬಹುಮಾನ ಪಡೆಯಿತು. ಚಾಂಪಿಯನ್‌ಷಿಪ್‌ನ ಉತ್ತಮ ಆಟಗಾರನಾಗಿ ನ್ಯಾಷನಲ್ಸ್ ತಂಡದ ರೋನಕ್ ಮತ್ತು ಭರವಸೆಯ ಆಟಗಾರನಾಗಿ ಪ್ರೊಟೆಕ್ ತಂಡದ ಕೇಶವ್ ಹೊರಹೊಮ್ಮಿದರು.

ವಿಜೇತ ತಂಡಕ್ಕೆ ರಾಜ್ಯ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್, ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಉಪಾಧ್ಯಕ್ಷ ರಾಜನ್, ಸಹ ಕಾರ್ಯದರ್ಶಿ ಆರ್.ಪ್ರಕಾಶ್ ಬಹುಮಾನ ವಿತರಿಸಿದರು.

ಆಸ್ಟ್ರೇಲಿಯಾಕ್ಕೆ ಜಿಂಬಾಬ್ವೆ ಆಘಾತ

ಸಾಂಘಿಕ ಆಟದ ಪ್ರದರ್ಶನ ನೀಡಿ 23 ರನ್‌ಗಳಿಂದ ಗೆದ್ದ ಸಿಕಂದರ್ ಪಡೆ

ಆಸ್ಟ್ರೇಲಿಯಾ ತಂಡದ ಮ್ಯಾಟ್ ರೆನ್ಶಾ ಅವರ ವಿಕೆಟ್ ಪಡೆದ ಜಿಂಬಾಬ್ವೆ ತಂಡದ ಬ್ಲೆಸಿಂಗ್ ಮುಝರಾಬಾನಿ ಅವರನ್ನು ಸಹ ಆಟಗಾರರು ಅಭಿನಂದಿಸಿದರು ಎಎಫ್‌ಪಿ/ ಎಪಿ ಚಿತ್ರಗಳು

ಕೊಲಂಬೊ (ಪಿಟಿಐ/ ಎಎಫ್‌ಪಿ): ಸಾಂಘಿಕ ಆಟದ ಪ್ರದರ್ಶನ ನೀಡಿದ ಜಿಂಬಾಬ್ವೆ ತಂಡ ಟಿ20 ವಿಶ್ವಕಪ್ ಟೂರ್ನಿ ಪಂದ್ಯದಲ್ಲಿ ಶುಕ್ರವಾರ ಆಸ್ಟ್ರೇಲಿಯಾ ತಂಡಕ್ಕೆ 23 ರನ್‌ಗಳಿಂದ ಆಘಾತ ನೀಡಿತು. ಇದು ಈ ವಿಶ್ವಕಪ್‌ನ ಮೊದಲ ಅಚ್ಚರಿಯ ಫಲಿತಾಂಶವಾಯಿತು.

ಆಫ್ರಿಕಾದ ರಾಷ್ಟ್ರ, ಕ್ರಿಕೆಟ್‌ನ ಸಾಂಪ್ರದಾಯಿಕ 'ಹೆವಿವೇಟ್' ತಂಡವನ್ನು ಸೋಲಿಸಿದ್ದು ಇದು ಎರಡನೇ ಬಾರಿ. 2007ರ ಮೊದಲ ಟಿ20 ವಿಶ್ವಕಪ್‌ನಲ್ಲಿ ಜಿಂಬಾಬ್ವೆ, ಆಸ್ಟ್ರೇಲಿಯಾ ತಂಡವನ್ನು ಕೇಪ್‌ಟೌನ್‌ನಲ್ಲಿ 5 ವಿಕೆಟ್‌ಗಳಿಂದ ಮಣಿಸಿತ್ತು.

ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಜಿಂಬಾಬ್ವೆ ತಂಡವು, ಆರಂಭ ಆಟಗಾರ ಬ್ರಯಾನ್ ಬೆನೆಟ್ ಅವರ ಅಜೇಯ 64 ಮತ್ತು ಇತರ ಆಟಗಾರರ ಉಪಯುಕ್ತ ಕೊಡುಗೆಗಳ ನೆರವಿನಿಂದ 2 ವಿಕೆಟ್‌ಗೆ 169 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಮುಂಚೂಣಿ ಬೌಲರ್‌ಗಳ ಅನುಪಸ್ಥಿತಿ ಎದುರಿಸುತ್ತಿರುವ ಆಸ್ಟ್ರೇಲಿಯಾ ತಂಡ ನಂತರ 19.3 ಓವರುಗಳಲ್ಲಿ 146 ರನ್‌ಗಳಿಗೆ ಕುಸಿಯಿತು.

11ನೇ ಕ್ರಮಾಂಕದ ಜಿಂಬಾಬ್ವೆ ತಂಡವು, ಎರಡನೇ ಕ್ರಮಾಂಕದ ಆಸ್ಟ್ರೇಲಿಯಾ ವಿರುದ್ಧ ಪಂದ್ಯದ ಬಹುಭಾಗ ನಿಯಂತ್ರಣ ಸಾಧಿಸಿತ್ತು. ವೇಗದ ಬೌಲರ್‌ಗಳಾದ ಬ್ಲೆಸಿಂಗ್ ಮುಝರಾಬಾನಿ (4–0–17–4) ಮತ್ತು ಬ್ರಾಡ್ ಇವಾನ್ಸ್ (3.3–0–23–3) ಅವರು ಆಸ್ಟ್ರೇಲಿಯಾದ ಅಗ್ರಸರದಿಯನ್ನು ಧ್ವಂಸಗೊಳಿಸಿದರು. ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮುಝರಾಬಾನಿ 100 ವಿಕೆಟ್ ಮೈಲಿಗಲ್ಲು ತಲುಪಿದರು.

170 ರನ್ ಗುರಿ ಬೆಂಬತ್ತಿದ ಆಸ್ಟ್ರೇಲಿಯಾ ಆರಂಭದಲ್ಲೇ ಕುಸಿತ ಅನುಭವಿಸಿತು. ಜೋಶ್ ಇಂಗ್ಲಿಸ್ (8),

ಅಜೇಯ ಅರ್ಧಶತಕ ಗಳಿಸಿದ ಬ್ರಯಾನ್ ಬೆನೆಟ್

ಟ್ರಾವಿಸ್ ಹೆಡ್ (17), ಕ್ಯಾಮರಾನ್ ಗ್ರೀನ್ (0) ಮತ್ತು ಟಿಮ್ ಡೇವಿಡ್ (0) ಅವರು ಬಲುಬೇಗ ನಿರ್ಗಮಿಸಿದರು. ತಂಡದ ಮೊತ್ತ ಆಗ 4 ವಿಕೆಟ್‌ಗೆ 29. ಪವರ್‌ಪ್ಲೇ ಮುಗಿದಾಗ 4 ವಿಕೆಟ್‌ಗೆ 38.

ಮ್ಯಾಟ್ ರೆನ್ಶಾ ಏಕಾಂಗಿಯಾಗಿ ಪ್ರತಿರೋಧ ತೋರಿ 44 ಎಸೆತಗಳಲ್ಲಿ 65 ರನ್ ಗಳಿಸಿದರು. ಅವರು ಅನುಭವಿ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ (31 ರನ್, 32 ಎಸೆತ) ಜೊತೆ ಐದನೇ ವಿಕೆಟ್‌ಗೆ 9.5 ಓವರುಗಳಲ್ಲಿ 77 ರನ್ ಸೇರಿಸಿದಾಗ ಆಸ್ಟ್ರೇಲಿಯಾಕ್ಕೆ ಗೆಲುವಿನ ಆಸೆ ಚಿಗುರಿತ್ತು. ಆದರೆ ಲೆಗ್ ಸ್ಪಿನ್ನರ್ ರಿಯಾನ್ ಬರ್ಲ್ ಈ ಜೊತೆಯಾಟ ಮುರಿದರು. ವೈಡ್ ಆಗಿದ್ದ ಎಸೆತವನ್ನು ಆಡಲು ಹೋದ ಮ್ಯಾಕ್ಸ್‌ವೆಲ್ ಚೆಂಡನ್ನು ಸ್ಟಂಪ್ಸ್‌ಗೆ ಎಳೆದುಕೊಂಡರು. ಕೊನೆಯ ಐದು ಓವರುಗಳಲ್ಲಿ ಆಸ್ಟ್ರೇಲಿಯಾ ಗೆಲುವಿಗೆ 56 ರನ್‌ಗಳು ಬೇಕಿದ್ದವು. ಬೆಳಿಗ್ಗೆ ಗಾಯಾಳಾಗಿ ಮೈದಾನ ತೊರೆದಿದ್ದ ಸ್ಟೊಯಿನಿಸ್ (6) ಬೇಗ ನಿರ್ಗಮಿಸಿದರು.

ಆಸ್ಟ್ರೇಲಿಯಾದ ಗಾಯಾಳುಗಳ ಪಟ್ಟಿಗೆ ಅವರೂ ಸೇರುವಂತೆ ಕಾಣುತ್ತಿದೆ. 16ನೇ ಓವರಿನ ಐದನೇ ಎಸೆತವನ್ನು ಅವರು ಫುಲ್‌ಟಾಸ್ ಆಗಿ ಎಸೆದಿದ್ದರು. ಚೆಂಡನ್ನು ಬರ್ಲ್ ಬಲವಾಗಿ ಹೊಡೆದಾಗ ಕ್ಯಾಚ್ ಪಡೆಯಲು ಹೋದ ಸ್ಟೊಯಿನಿಸ್ ಹೆಬ್ಬೆರಳಿಗೆ ಏಟಾಯಿತು. ನೋವಿನಿಂದ ನರಳಿದ ಅವರು ಪೆವಿಲಿಯನ್‌ಗೆ ಮರಳಿದ್ದರು.

ಬೆನ್ ದ್ವಾರ್ಷಿಯಸ್ (7) ಅವರು ಬೌಂಡರಿ ಗೆರೆಯ ಬಳಿ ಬೆನೆಟ್ ಹಿಡಿದ ಅಮೋಘ ಕ್ಯಾಚಿಗೆ ಮರಳಿದರು. ಇದು ಇವಾನ್ಸ್‌ಗೆ ಮೂರನೇ ವಿಕೆಟ್. ಜಿಂಬಾಬ್ವೆ ಗೆಲುವು ಖಚಿತವಾಯಿತು.

ಇದಕ್ಕೆ ಮೊದಲು ಜಿಂಬಾಬ್ವೆ ಅಗ್ರ ಆಟಗಾರರು ಸಂಘಟಿತ ಪ್ರದರ್ಶನ ನೀಡಿದರು. ಬೆನೆಟ್ ಏಳು ಬೌಂಡರಿಗಳಿದ್ದ ಅಜೇಯ 64 ರನ್ ಬಾರಿಸಿ ತಂಡಕ್ಕೆ ಭದ್ರ ಬುನಾದಿ ಒದಗಿಸಿದರು. ಮೊದಲ ವಿಕೆಟ್‌ಗೆ 7.3 ಓವರುಗಳಲ್ಲಿ 61 ರನ್‌ಗಳು ಸೇರಿದವು. ವಿಕೆಟ್ ಕೀಪರ್ ತಡಿವನಾಶೆ ಮರುಮಾನಿ ಮತ್ತು ರಿಯಾನ್ ಬರ್ಲ್ ತಲಾ 35 ರನ್ ಗಳಿಸಿದರು. ನಾಯಕ ಸಿಕಂದರ್ ರಝಾ 13 ಎಸೆತಗಳಲ್ಲಿ ಅಜೇಯ 25 ರನ್ ಗಳಿಸಿದರು. ಆಸ್ಟ್ರೇಲಿಯಾ ಕೊನೆಯ ಐದು ಓವರುಗಳಲ್ಲಿ 44 ರನ್ ಅಷ್ಟೇ ನೀಡಿತು.

ಸ್ಕೋರುಗಳು: ಜಿಂಬಾಬ್ವೆ: 20 ಓವರುಗಳಲ್ಲಿ 2 ವಿಕೆಟ್‌ಗೆ 169 (ಬ್ರಯಾನ್ ಬೆನೆಟ್ ಔಟಾಗದೇ 64, ತಡಿವನಾಶೆ ಮರುಮಾನಿ 35, ರಯಾನ್ ಬರ್ಲ್ 35, ಸಿಕಂದರ್ ರಝಾ ಔಟಾಗದೇ 25; ಸ್ಟೊಯಿನಿಸ್ 17ಕ್ಕೆ1, ಗ್ರೀನ್ 6ಕ್ಕೆ1); ಆಸ್ಟ್ರೇಲಿಯಾ: 19.3 ಓವರುಗಳಲ್ಲಿ 146 (ಗ್ಲೆನ್ ಮ್ಯಾಕ್ಸ್‌ವೆಲ್ 31, ಮ್ಯಾಟ್ ರೆನ್ಶಾ 65; ಬ್ಲೆಸಿಂಗ್ ಮುಝರಾಬಾನಿ 17ಕ್ಕೆ4, ಬ್ರಾಡ್ ಇವಾನ್ಸ್ 23ಕ್ಕೆ3, ಬರ್ಲ್ 9ಕ್ಕೆ1. ಪಂದ್ಯದ ಆಟಗಾರ: ಬ್ಲೆಸಿಂಗ್ ಮುಝರಾಬಾನಿ

ಟೂರ್ನಿಯಿಂದ ಹೊರಬಿದ್ದ ಟೇಲರ್

ಕೊಲಂಬೊ (ಪಿಟಿಐ): ಜಿಂಬಾಬ್ವೆ ತಂಡದ ಅನುಭವಿ ವಿಕೆಟ್‌ಕೀಪರ್–ಬ್ಯಾಟರ್ ಬ್ರೆಂಡನ್ ಟೇಲರ್ ಅವರು ಬಲಗಾಲಿನ ಸ್ನಾಯುಸೆಳೆತದಿಂದಾಗಿ ಟಿ20 ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಬೆನ್ ಕರನ್ ಅವರು ಬದಲಿ ಆಟಗಾರನಾಗಿ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ.

ಅಗ್ರ ಕ್ರಮಾಂಕದ ಬ್ಯಾಟರ್ ಬೆನ್ ಅವರು ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಸ್ಯಾಮ್ ಕರನ್ ಅವರ ಸಹೋದರ.

40 ವರ್ಷ ವಯಸ್ಸಿನ ಟೇಲರ್ ಅವರು ಫೆಬ್ರುವರಿ 9ರಂದು ಒಮಾನ್ ವಿರುದ್ಧದ ಪಂದ್ಯದ ವೇಳೆ ಗಾಯಗೊಂಡು, ಅರ್ಧಕ್ಕೇ ಮೈದಾನ ತೊರೆದಿದ್ದರು.

ಟಿ20 ವಿಶ್ವಕಪ್‌ನಲ್ಲಿ ಐಸಿಸಿ ಪೂರ್ಣ ಸದಸ್ಯ ತಂಡದ ವಿರುದ್ಧ ಜಿಂಬಾಬ್ವೆಗೆ ಗೆಲುವು

ಎದುರಾಳಿ	ತಾಣ	ವರ್ಷ
ಆಸ್ಟ್ರೇಲಿಯಾ	ಕೇಪ್‌ಟೌನ್	2007
ಐರ್ಲೆಂಡ್	ಹೋಬರ್ಟ್	2022
ಪಾಕಿಸ್ತಾನ	ಪರ್ತ್	2022
ಆಸ್ಟ್ರೇಲಿಯಾ	ಕೊಲಂಬೊ	2026

ಯುಎಇ ತಂಡಕ್ಕೆ ರೋಚಕ ಜಯ

ನವದೆಹಲಿ (ಪಿಟಿಐ): ಅನುಭವಿ ವೇಗಿ ಜುನೈದ್ ಸಿದ್ದೀಕ್ (35ಕ್ಕೆ 5) ಅವರ ಮಿಂಚಿನ ದಾಳಿ ಬಳಿಕ ಆರಂಭ ಆಟಗಾರ ಆರ್ಯಾನ್ಶ್ ಶರ್ಮಾ (ಔಟಾಗದೇ 74;53ಎ) ಅವರ ಅರ್ಧಶತಕದ ಬಲದಿಂದ ಯುಎಇ ತಂಡವು ಟಿ20 ವಿಶ್ವಕಪ್ ಟೂರ್ನಿಯ ರೋಚಕ ಪಂದ್ಯದಲ್ಲಿ ಐದು ವಿಕೆಟ್‌ಗಳಿಂದ ಕೆನಡಾ ತಂಡವನ್ನು ಮಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಕೆನಡಾ ತಂಡವು ಹರ್ಷ್ ಥಾಕರ್ (50;41ಎ) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 150 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಯುಎಇ ತಂಡವು ಎರಡು ಎಸೆತಗಳು ಬಾಕಿ ಇರುವಂತೆ 5 ವಿಕೆಟ್‌ಗೆ ಗೆಲುವಿನ ರನ್ ಬಾರಿಸಿ ಸಂಭ್ರಮಿಸಿತು. ನ್ಯೂಜಿಲೆಂಡ್ ವಿರುದ್ಧ 10 ವಿಕೆಟ್‌ಗಳಿಂದ ಸೋತಿದ್ದ ಯುಎಇ ತಂಡವು ಹಾಲಿ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ಶಿಸ್ತುಬದ್ಧ ಬೌಲಿಂಗ್ ಸಂಘಟಿಸಿದ ಸಿದ್ದೀಕ್ ವೃತ್ತಿ ಜೀವನದಲ್ಲೇ ಮೊದಲ ಬಾರಿ ಐದು ವಿಕೆಟ್ ಗೊಂಚಲು ಪಡೆದರು. ಅವರ ದಾಳಿಗೆ ತತ್ತರಿಸಿದ ಕೆನಡಾ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು.

ಆದರೆ, ಮಧ್ಯಮ ಕ್ರಮಾಂಕದಲ್ಲಿ ನವನೀತ್ ಧಲಿವಾಲ್ (34;28ಎ) ಮತ್ತು ಹರ್ಷ್ ಕೊಂಚ ಪ್ರತಿರೋಧ ತೋರಿದರು. ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. ನಂತರದಲ್ಲಿ ಶ್ರೇಯಸ್ ಮೊವ್ವಾ (21) ತಂಡವು ಸಾಧಾರಣ ಮೊತ್ತ ಗಳಿಸಲು ನೆರವಾದರು.

ಗುರಿಯನ್ನು ಬೆನ್ನಟ್ಟಿದ ಯುಎಇ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. ತಂಡವು 12 ರನ್ ಗಳಿಸುಷ್ಟರಲ್ಲಿ ನಾಯಕ ಮೊಹಮ್ಮದ್ ವಸೀಂ (4) ಅವರು ಪೆವಿಲಿಯನ್ ಸೇರಿಕೊಂಡರು. 66 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಆರ್ಯಾನ್ಶ್ ಮತ್ತು ಸೊಹೇಬ್ ಖಾನ್ (51;29ಎ) ಅವರು ಮಹತ್ವದ ಚೇತರಿಕೆ ನೀಡಿದರು. ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 84 (43ಎ) ರನ್ ಪೇರಿಸಿ, ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಜಯಕ್ಕೆ ಒಂದು ರನ್ ಬೇಕಿದ್ದಾಗ ಸೊಹೇಬ್ ಔಟಾದರು. ಮುಹಮ್ಮದ್ ಅರ್ಫಾನ್ (ಔಟಾಗದೇ 1) ಗೆಲುವಿನ ಔಪಚಾರ ಪೂರೈಸಿದರು. ಈ ಗೆಲುವಿನೊಂದಿಗೆ ಡಿ ಗುಂಪಿನಲ್ಲಿ ಯುಎಇ ತಂಡವು ಮೂರನೇ ಸ್ಥಾನಕ್ಕೇರಿತು.

ಸಂಕ್ಷಿಪ್ತ ಸ್ಕೋರು: ಕೆನಡಾ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 150 (ನವನೀತ್ ಧಲಿವಾಲ್ 34, ಹರ್ಷ್ ಥಾಕರ್ 50; ಜುನೈದ್ ಸಿದ್ದೀಕ್ 35ಕ್ಕೆ 5). ಯುಎಇ: 19.4 ಓವರ್‌ಗಳಲ್ಲಿ 5 ವಿಕೆಟ್‌ಗೆ 151 (ಆರ್ಯಾನ್ಶ್ ಶರ್ಮಾ ಔಟಾಗದೇ 74, ಸೊಹೇಬ್ ಖಾನ್ 51; ಸಾದ್ ಬಿನ್ ಜಾಫರ್ 14ಕ್ಕೆ 3). ಪಂದ್ಯದ ಆಟಗಾರ: ಜುನೈದ್ ಸಿದ್ದೀಕ್

ಅಜೇಯ ತಂಡಗಳ ಮುಖಾಮುಖಿ

ಅಹಮದಾಬಾದ್ (ಪಿಟಿಐ): ಸೂಪರ್ ಎಂಟರ ಘಟ್ಟಕ್ಕೆ ಅರ್ಹತೆಯನ್ನು ಬಹುತೇಕ ಖಚಿತಪಡಿಸಿಕೊಂಡಿರುವ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಶನಿವಾರ 'ಡಿ' ಗುಂಪಿನ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡವನ್ನೂ ನಿರ್ಧರಿಸಲಿದೆ.

ಉಭಯ ತಂಡಗಳು ಆಡಿರುವ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿವೆ. ಆದರೆ ಭಿನ್ನ ಶೈಲಿಯಲ್ಲಿ. ನ್ಯೂಜಿಲೆಂಡ್ ಪಕ್ಕಾ ವೃತ್ತಿಪರ ರೀತಿಯಲ್ಲಿ ಎದುರಾಳಿಗಳನ್ನು ಸೋಲಿಸಿದೆ. ಅಫ್ಗಾನಿಸ್ತಾನದ ವಿರುದ್ಧ 183 ರನ್ ಗುರಿಯನ್ನು ಕಿವೀಸ್ ಪಡೆ ಕೇವಲ 17.5 ಓವರುಗಳಲ್ಲಿ ತಲುಪಿತ್ತು. ಯುಎಇ ವಿರುದ್ಧ ಹತ್ತು ವಿಕೆಟ್‌ಗಳ ಅಧಿಕಾರಯುತ ಜಯ ಸಾಧಿಸಿತ್ತು. ಆರಂಭ ಆಟಗಾರ ಟಿಮ್ ಸೀಫರ್ಟ್ ಎರಡೂ ಪಂದ್ಯಗಳಲ್ಲಿ ಅರ್ಧ ಶತಕ ಸಿಡಿಸಿದ್ದಾರೆ.

ಒಂದೆಡೆ ಸ್ಯಾಂಟ್ನರ್ ಪಡೆ ಎದುರಾಳಿಗಳನ್ನು ಬಗ್ಗುಬಡಿದರೆ, ದಕ್ಷಿಣ ಆಫ್ರಿಕಾ ತಂಡ ಒತ್ತಡದ ಸನ್ನಿವೇಶ ಎದುರಿಸಿ ಯಶಸ್ಸು ಗಳಿಸಿದೆ. ಕೆನಡಾ ವಿರುದ್ಧ ಗೆಲುವಿಗೆ ಅಷ್ಟೇನೂ ಪ್ರಯಾಸವಾಗದಿದ್ದರೂ, ಅಫ್ಗಾನಿಸ್ತಾನ ವಿರುದ್ಧದ ಪಂದ್ಯ 'ಡಬಲ್ ಸೂಪರ್‌ಓವರ್'ಗೆ ಹೋಗಿತ್ತು. ಡೇವಿಡ್ ಮಿಲ್ಲರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಆಟ ಗೆಲುವಿಗೆ ನೆರವಾಗಿತ್ತು.

ದಕ್ಷಿಣ ಆಫ್ರಿಕಾ ಎರಡೂ ಪಂದ್ಯಗಳನ್ನು ಇದೇ ತಾಣದಲ್ಲಿ ಆಡಿದ್ದು, ಇಲ್ಲಿನ ಪಿಚ್‌ಗೆ ಒಗ್ಗಿಕೊಂಡಿದೆ. ನ್ಯೂಜಿಲೆಂಡ್‌ಗೆ ಈ ವಿಷಯದಲ್ಲಿ ಸವಾಲು ಇದೆ.

ಟಿಮ್ ಸೀಫರ್ಟ್

ಕಗಿಸೊ ರಬಾಡ

ಕಿವೀಸ್ ಪಡೆಯ ಆರಂಭ ಆಟಗಾರರಾದ ಸೀಫರ್ಟ್ ಮತ್ತು ಫಿನ್ ಅಲೆನ್ ಅವರು ಹರಿಣಗಳ ಪಡೆಯ ಆರಂಭಿಕ ವೇಗದ ಬೌಲರ್‌ಗಳಾದ ಕಗಿಸೊ ರಬಾಡ, ಲುಂಗಿ ಎನ್‌ಗಿಡಿ ಅವರನ್ನು ಹೇಗೆ ನಿಭಾಯಿಸಬಲ್ಲರೆಂಬ ಕುತೂಹಲವಿದೆ. ಅದೇ ರೀತಿ ಮ್ಯಾಟ್ ಹೆನ್ರಿ ಮತ್ತು ಲಾಕಿ ಫರ್ಗ್ಯೂಸನ್ ಅವರು ಕ್ವಿಂಟನ್ ಡಿಕಾಕ್ ಮತ್ತು ರಿಯಾನ್ ರಿಕೆಲ್ಟನ್ ಅವರನ್ನು ಪವರ್‌ಪ್ಲೇ ಅವಧಿಯಲ್ಲಿ ನಿಯಂತ್ರಿಸಬಲ್ಲರೇ ಎಂಬ ಆಸಕ್ತಿಯೂ ಇದೆ. ನಾಯಕ ಏಡನ್ ಮರ್ಕರಂ– ಮಿಚೆಲ್ ಸ್ಯಾಂಟ್ನರ್ ಹಣಾಹಣಿಯ ಮೇಲೂ ಕುತೂಹಲದ ಕಣ್ಣುಗಳಿವೆ. ಸ್ಯಾಂಟ್ನರ್ ಅವರು ಯುಎಇ ವಿರುದ್ಧ 4 ಓವರುಗಳಲ್ಲಿ ತೆತ್ತಿದ್ದು 23 ರನ್‌ಗಳನ್ನಷ್ಟೇ.

ಇಂದಿನ ಪಂದ್ಯ

ಐರ್ಲೆಂಡ್ V/s ಒಮಾನ್
ತಾಣ: ಕೊಲಂಬೊ, ಬೆಳಿಗ್ಗೆ 11ರಿಂದ

ಇಂಗ್ಲೆಂಡ್ V/s ಸ್ಕಾಟ್ಲೆಂಡ್
ತಾಣ: ಕೋಲ್ಕತ್ತ, ಮಧ್ಯಾಹ್ನ 3ರಿಂದ

ನ್ಯೂಜಿಲೆಂಡ್ V/s ದಕ್ಷಿಣ ಆಫ್ರಿಕಾ
ತಾಣ: ಅಹಮದಾಬಾದ್, ರಾತ್ರಿ 7ರಿಂದ

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಗುಂಪು ಎ						
1	ಭಾರತ	2	2	0	4	3.050
2	ಪಾಕಿಸ್ತಾನ	2	2	0	4	0.932
3	ಅಮೆರಿಕ	3	1	2	2	0.533
4	ನೆದರ್ಲೆಂಡ್ಸ್	3	1	2	2	-1.352
5	ನಮೀಬಿಯಾ	2	0	2	0	-2.884
ಗುಂಪು ಬಿ						
1	ಶ್ರೀಲಂಕಾ	2	2	0	4	3.125
2	ಜಿಂಬಾಬ್ವೆ	2	2	0	4	1.984
3	ಆಸ್ಟ್ರೇಲಿಯಾ	2	1	1	2	1.100
4	ಐರ್ಲೆಂಡ್	2	0	2	0	-2.175
5	ಒಮಾನ್	2	0	2	0	-4.306
ಗುಂಪು ಸಿ						
1	ವೆಸ್ಟ್ ಇಂಡೀಸ್	2	2	0	4	1.625
2	ಸ್ಕಾಟ್ಲೆಂಡ್	2	1	1	2	0.950
3	ಇಟಲಿ	2	1	1	2	-0.352
4	ಇಂಗ್ಲೆಂಡ್	2	1	1	2	-0.650
5	ನೇಪಾಳ	2	0	2	0	-1.854
ಗುಂಪು ಡಿ						
1	ನ್ಯೂಜಿಲೆಂಡ್	2	2	0	4	1.919
2	ದಕ್ಷಿಣ ಆಫ್ರಿಕಾ	2	2	0	4	1.425
3	ಯುಎಇ	2	1	2	0	-1.030
4	ಅಫ್ಗಾನಿಸ್ತಾನ	2	0	2	0	-0.555
5	ಕೆನಡಾ	2	0	2	0	-1.526

ಸ್ಟರ್ಲಿಂಗ್‌ಗೆ ಗಾಯ: ಸ್ಯಾಮ್‌ಗೆ ಸ್ಥಾನ

ಪೌಲ್ ಸ್ಟರ್ಲಿಂಗ್

ಕೊಲಂಬೊ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಈಗಾಗಲೇ ಎರಡು ಪಂದ್ಯ ಸೋತಿರುವ ಐರ್ಲೆಂಡ್ ತಂಡಕ್ಕೆ ಮತ್ತೊಂದು ಆಘಾತವಾಗಿದೆ. ನಾಯಕ ಪೌಲ್ ಸ್ಟರ್ಲಿಂಗ್ ಅವರು ಬಲಗಾಲಿನ ಮಂಡಿ ನೋವಿನಿಂದಾಗಿ ಟೂರ್ನಿಯಿಂದಲೇ ಹೊರಬಿದ್ದಿದ್ದಾರೆ.

35 ವರ್ಷ ವಯಸ್ಸಿನ ಸ್ಟರ್ಲಿಂಗ್ ಬದಲಿಗೆ ಅನ್‌ಕ್ಯಾಪ್ಡ್ ಆಟಗಾರ ಸ್ಯಾಮ್ ಟಾಪಿಂಗ್ 15 ಸದಸ್ಯರ ತಂಡದಲ್ಲಿ ಸ್ಥಾನಪಡೆದಿದ್ದಾರೆ.

ಬಿ ಗುಂಪಿನಲ್ಲಿರುವ ಐರ್ಲೆಂಡ್ ತಂಡವು ಕೊಲಂಬೊದಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಒಮಾನ್‌ಅನ್ನು ಎದುರಿಸಲಿದೆ.

11ರಂದು ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಕ್ಯಾಚ್ ಪಡೆಯುವ ವೇಳೆ ಸ್ಟರ್ಲಿಂಗ್ ಅವರ ಬಲಗಾಲಿಗೆ ಗಾಯವಾಗಿತ್ತು. ಬಳಿಕ, ಬ್ಯಾಟಿಂಗ್‌ನಲ್ಲಿ ರನ್ ಓಡುವಾಗ ಗಾಯ ಉಲ್ಬಣಿಸಿತ್ತು.

ಅಭಿಷೇಕ್ ಶರ್ಮಾ ಲಭ್ಯತೆ: ಇಂದು ನಿರ್ಧಾರ

ಕೊಲಂಬೊ (ಪಿಟಿಐ): ಹೊಟ್ಟೆಕೆಟ್ಟು ಈಗ ಚೇತರಿಸಿಕೊಳ್ಳುತ್ತಿರುವ ಸ್ಫೋಟಕ ಆರಂಭ ಆಟಗಾರ ಅಭಿಷೇಕ್ ಶರ್ಮಾ ಅವರು ಶುಕ್ರವಾರ ಭಾರತ ತಂಡದ ಜೊತೆ ಇಲ್ಲಿಗೆ ಬಂದಿಳಿದರು. ಪಾಕಿಸ್ತಾನ ವಿರುದ್ಧ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ವಿಶ್ವಕಪ್ ಪಂದ್ಯದಲ್ಲಿ ಅವರು ಆಡಬಹುದೆಂಬ ವಿಶ್ವಾಸಕ್ಕೆ ಇದು ಕಾರಣವಾಗಿದೆ.

ತಂಡ ಶನಿವಾರ ಇಲ್ಲಿ ತಾಲೀಮು ನಡೆಸಲಿದ್ದು, ಇದರ ನಂತರವಷ್ಟೇ ಅವರ ಫಿಟ್ನೆಸ್ ಗಮನಿಸಿ ತಂಡದ ಚಿಂತಕರ ಚಾವಡಿ ನಿರ್ಧಾರ ಕೈಗೊಳ್ಳಲಿದೆ. ಹೊಟ್ಟೆನೋವಿನಿಂದ ಬಳಲಿದ್ದ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಚೇತರಿಕೆ ಪಡೆದು ತಂಡ ಸೇರಿಕೊಂಡರೂ ಅವರು ನಮೀಬಿಯಾ ವಿರುದ್ಧ ಆಡಲು ಆಗಿರಲಿಲ್ಲ.

ಅಭಿಷೇಕ್ ಅವರ ತಂದೆ–ತಾಯಿ ಸಹ ಇಲ್ಲಿಗೆ ಬಂದಿಳಿದಿದ್ದಾರೆ. ರಾಜಕುಮಾರ್ ಶರ್ಮಾ ಅವರು ಅಭಿಷೇಕ್‌ಗೆ ಬಾಲ್ಯದ ಕೋಚ್ ಸಹ ಆಗಿದ್ದರು. ಏಷ್ಯಾ ಕಪ್ ಟೂರ್ನಿಯಲ್ಲೂ ಅಭಿಷೇಕ್ ಪೋಷಕರು ಪಂದ್ಯ ನೋಡಲು ದುಬೈಗೆ ಹೋಗಿದ್ದರು.

ಅಭಿಷೇಕ್ ಅಲಭ್ಯರಾದಲ್ಲಿ ಸಂಜು ಸ್ಯಾಮ್ಸನ್ ಅಥವಾ ಚೇತರಿಸಿಕೊಂಡಿರುವ ವಾಷಿಂಗ್ಟನ್ ಸುಂದರ್ ಅವರು ತಂಡದಲ್ಲಿ ಸ್ಥಾನ ಪಡೆಯುವ ಸಾಧ್ಯತೆಯಿದೆ.

ಅಮೆರಿಕ ತಂಡಕ್ಕೆ ಮೊದಲ ಗೆಲುವು

ಚೆನ್ನೈ (ಪಿಟಿಐ): ಸಾಯಿತೇಜ ಮುಕ್ಕಮಲ್ಲ (79, 51 ಎಸೆತ) ಅರ್ಧಶತಕದ ಆಟವಾಡಿ ಅಮೆರಿಕದ ತಂಡ ದೊಡ್ಡ ಮೊತ್ತ ಗಳಿಸಲು ನೆರವಾದರು. ನಂತರ ಎಡಗೈ ಸ್ಪಿನ್ನರ್ ಹರ್ಮೀತ್ ಸಿಂಗ್ (4–0–21–4) ಅವರು ಪರಿಣಾಮಕಾರಿ ದಾಳಿಯಲ್ಲಿ ಡಚ್ ಪಡೆಯ ಕುಸಿತಕ್ಕೆ ಕಾರಣರಾದರು. ಅಮೆರಿಕ ತಂಡವು, ಟಿ20 ವಿಶ್ವಕಪ್ 'ಎ' ಗುಂಪಿನ ಪಂದ್ಯದಲ್ಲಿ 93 ರನ್‌ಗಳ ಅರ್ಹ ಜಯ ಪಡೆಯಿತು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಟಾಸ್ ಸೋತ ಅಮೆರಿಕ ತಂಡ 6 ವಿಕೆಟ್‌ಗೆ 196 ರನ್‌ಗಳ ಒಳ್ಳೆಯ ಮೊತ್ತ ಪೇರಿಸಿತು. ಮೂರನೇ ಕ್ರಮಾಂಕದಲ್ಲಿ ಮಿಂಚಿದ ಸಾಯಿತೇಜ್ ಐದು ಬೌಂಡರಿ, ನಾಲ್ಕು ಸಿಕ್ಸರ್‌ಗಳನ್ನು ಬಾರಿಸಿದರು. ನಾಯಕ ಮೊನಾಂಕ್ ಪಟೇಲ್ (36) ಜೊತೆ ಎರಡನೇ ವಿಕೆಟ್‌ಗೆ 55 ರನ್ ಸಹ ಸೇರಿಸಿದರು. ಆದರೆ 200ರ ಸಮೀಪದ ಮೊತ್ತ ಗಳಿಸಲು ಶುಭಂ ರಾಂಜನೆ (ಅಜೇಯ 48, 24 ಎಸೆತ) ಅವರ ಬೀಸಾಟ ಕಾರಣವಾಯಿತು. ಸಾಯಿತೇಜ್ ಅವರು ಹೈದರಾಬಾದ್‌ನ ವಿ.ವಿ.ಎಸ್. ಲಕ್ಷ್ಮಣ್ ಅಕಾಡೆಮಿಯಲ್ಲಿ ಬ್ಯಾಟಿಂಗ್ ಕೌಶಲ ಕಲಿತವರು.

4 ವಿಕೆಟ್ ಪಡೆದ ಹರ್ಮೀತ್ ಸಿಂಗ್

ಅಮೆರಿಕನ್ನರ ಸಂಘಟಿತ ದಾಳಿಯೆದುರು ನೆದರ್ಲೆಂಡ್ಸ್ ತಂಡ ಯಾವ ಹಂತದಲ್ಲೂ ಹೋರಾಟ ನೀಡುವಂತೆ ಕಾಣಲಿಲ್ಲ. ತಂಡ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು 15.5 ಓವರುಗಳಲ್ಲಿ 103 ರನ್‌ಗಳಿಗೆ ಕುಸಿಯಿತು. ಆಲ್‌ರೌಂಡರ್ ಬಾಸ್ ಡಿ ಲೀಡ್ (23) ಗರಿಷ್ಠ ವೈಯಕ್ತಿಕ ಮೊತ್ತ ಗಳಿಸಿದರು. ಹರ್ಮೀತ್ ಸಿಂಗ್ ಅವರಿಗೆ ಶಾಡ್ಲಿ ವಾನ್ ಶಾಲ್ವಿಕ್ (21ಕ್ಕೆ3), ಮೊಹಮ್ಮದ್ ಮೊಹ್ಸಿನ್ (19ಕ್ಕೆ2) ಸಮರ್ಥ ಬೆಂಬಲ ನೀಡಿದರು.

ಸಂಕ್ಷಿಪ್ತ ಸ್ಕೋರು: ಅಮೆರಿಕ: 20 ಓವರುಗಳಲ್ಲಿ 6 ವಿಕೆಟ್‌ಗೆ 196 (ಮೊನಾಂಕ್ ಪಟೇಲ್ 36, ಸಾಯಿತೇಜ ಮುಕ್ಕಮಲ್ಲ 79, ಶುಭಂ ರಾಂಜನೆ ಔಟಾಗದೇ 48; ಲೋಗನ್ ವ್ಯಾನ್ ಬೀಕ್ 28ಕ್ಕೆ1, ಬಾಸ್ ಡಿ ಲೀಡ್ 37ಕ್ಕೆ3); ನೆದರ್ಲೆಂಡ್ಸ್: 15.3 ಓವರುಗಳಲ್ಲಿ 103 (ಬಾಸ್ ಡಿ ಲೀಡ್ 23; ಹರ್ಮೀತ್ ಸಿಂಗ್ 21ಕ್ಕೆ4, ಶಾಡ್ಲಿ ವಾನ್ ಶಾಲ್ವಿಕ್ 21ಕ್ಕೆ3, ಮೊಹಮ್ಮದ್ ಮೊಹ್ಸಿನ್ 19ಕ್ಕೆ2). ಪಂದ್ಯದ ಆಟಗಾರ: ಹರ್ಮೀತ್ ಸಿಂಗ್.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

MBS VASUDHA
Find Your Perfect Space, Live Your Best Life

100% ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ
ಮನೆಗಳನ್ನು ನಿರ್ಮಿಸಲು ಸಿದ್ಧವಾಗಿದೆ

BMRDA / NPA APPROVED

ಪ್ರೀಮಿಯಂ ಲಕ್ಸುರಿ ವಿಲ್ಲಾ ಸೈಟುಗಳು

ನೆಲಮಂಗಲ

✓ ನೋಂದಣಿಗೆ ಸಿದ್ಧವಾಗಿದೆ

ಮುಖ್ಯಾಂಶಗಳು
- ತುಮಕೂರು ರಸ್ತೆ NH 4 ರಿಂದ 5 ನಿಮಿಷ ಪ್ರಯಾಣ
- D MART 5 ನಿಮಿಷಗಳ ಪ್ರಯಾಣ • APMC ಯಾರ್ಡ್ 5 ನಿಮಿಷಗಳ ಪ್ರಯಾಣ
- ರೈಲ್ವೆ ನಿಲ್ದಾಣದಿಂದ 2 ಕಿ.ಮೀ • ನೆಲಮಂಗಲ ನಗರ ಕೇಂದ್ರದಿಂದ 4 ಕಿ.ಮೀ
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 40 ಕಿ.ಮೀ • ABB ಹತ್ತಿರವಿದೆ
- ಪ್ರಸ್ತಾಪಿತ ಮೆಟ್ರೋ ನಿಲ್ದಾಣ 4 ಕಿ.ಮೀ
- ನೆಲಮಂಗಲದಿಂದ ದೇವನಹಳ್ಳಿ ಮುಖ್ಯ ರಸ್ತೆ 800 ಮೀಟರ್

ಸೌಕರ್ಯಗಳು
- ಸಿಸಿ ರಸ್ತೆಗಳು
- ಲ್ಯಾಂಡ್‌ಸ್ಕೇಪ್ ಗಾರ್ಡನ್
- ಬೀದಿ ದೀಪ • ಕಿಡ್ಸ್ ಪ್ಲೇ ಏರಿಯಾ
- ಅಂಡರ್ ಗ್ರೌಂಡ್ ಒಳಚರಂಡಿ
- ಅಂಡರ್ ಗ್ರೌಂಡ್ ವಿದ್ಯುತ್
- ಅವೆನ್ಯೂ ಪ್ಲಾಂಟೇಶನ್ಸ್

Call: 6361524339/9008093691/9945450444

Prime Location Premium Plots for Sale



BMRDA ಅನುಮೋದಿತ 'E' ಖಾತಾ ಸೈಟುಗಳು

ದಾಬಸ್ ಪೇಟೆ ಹತ್ತಿರ

ಬೆಂಗಳೂರು-ತುಮಕೂರು (NH-48)
10 ಲೈನ್ ಗ್ರೀನ್ ಎಕ್ಸ್‌ಪ್ರೆಸ್‌ವೇ ಗೆ ಹೊಂಡಿಕೊಂಡಿದೆ

STRR ಗೆ ರಸ್ತೆಗೆ ಸಂಪರ್ಕವಿದೆ ಕ್ವಿನ್ ಸಿಟಿ (ಜ್ಞಾನ ಆರೋಗ್ಯ ನಾವೀನ್ಯತೆ ಸಂಶೋಧನೆ-ನಗರ) ದಾಬಸ್ ಪೇಟೆ ಬಳಿ 40,000 ಕೋಟಿ ರೂಪಾಯಿಗಳ ಮೆಗಾ ಯೋಜನೆ

• ಇಂಡಿವಿಜುಯಲ್ ನೀರಿನ ಸಂಪರ್ಕ • ಮಕ್ಕಳ ಆಟದ ಉದ್ಯಾನ • ಬೀದಿ ದೀಪಗಳು • ಅವೆನ್ಯೂ ಪ್ಲಾಂಟೇಶನ್ • ಗ್ರಾಂಡ್ ವೆಲ್ಕಮ್ ಆರ್ಚ್ • ಚರಂಡಿ ಸಂಸ್ಕರಣಾ ಘಟಕ • 24/7 ಭದ್ರತಾ ನಾಗರಿಕ ಸೌಲಭ್ಯಗಳು • ಗೇಟೆಡ್ ಸಮುದಾಯ ವಿದ್ಯುತ್ ಸರಬರಾಜು • ವಾಸ್ತು ಆಧಾರಿತ ವಿನ್ಯಾಸ • 30 ಮತ್ತು 40 ಅಡಿ ಸಿಸಿ ರಸ್ತೆಗಳು

ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ: 97392 92375, 63601 78209

ಕೇವಲ ಒಂದು ನಿವೇಶನ ಖರೀದಿಸಿದರೆ ಸಾಕಾ?

ಅದು ಶಾಂತಿಯ ತಾಣವಾಗಿರಬೇಕು,
ಬೆಳವಣಿಗೆ ಅವಕಾಶವಾಗಿರಬೇಕು, ಮತ್ತು
ಮುಂದಿನ ಪೀಳಿಗೆಗೆ ಹೂಡಿಕೆಯಾಗಿರಬೇಕು.

ಕಗ್ಗಲೀಪುರ ಸಮೀಪ ವಸತಿ ನಿವೇಶನಗಳು

ಬುಕ್ಕಿಂಗ್‌ಗೆ ಲಭ್ಯ
ಬೆಲೆ ಕೇವಲ
₹13.2 ಲಕ್ಷ ದಿಂದ ಪ್ರಾರಂಭ

ಬಾಕಿ ಹಣವನ್ನು 3 ಕಂತುಗಳಲ್ಲಿ ಪಾವತಿಸಬಹುದು.

ಆಕರ್ಷಕ ಬೆಲೆಗಳಲ್ಲಿ ನಿವೇಶನಗಳು ಲಭ್ಯ

ನಾಳೆ ಬೆಲೆ ಏರುವುದು ಖಚಿತ

ಭೂಮಿ ನಿಮ್ಮದಾಗಿಸೊ **ಸಮಯ ಇದು!**

ಮನೆ ಕಟ್ಟೋದು ಆಗಲೀ, ಇನ್ವೆಸ್ಟ್ ಮಾಡೋದು ಆಗಲೀ, ಇದು ನಿಮ್ಮ ಫ್ಯೂಚರ್‌ಗಾಗಿ ಸೂಪರ್ ಆಯ್ಕೆ.

ಎಲ್ಲಾ ಮೂಲಭೂತ ಸೌಕರ್ಯಗಳು ಅಭಿವೃದ್ಧಿ ಹೊಂದಿದೆ

ಮಕ್ಕಳ ಆಟದ ಮೈದಾನ | ಉತ್ತಮ ಕುಡಿಯುವ ನೀರು | ವಿದ್ಯುತ್ | ಪಾರ್ಕ್ | ಪರಿಸರ ಸ್ನೇಹಿ ವೈಶಿಷ್ಟ್ಯಗಳು | ಉತ್ಕೃಷ್ಟ ಗುಣಮಟ್ಟದ ರಸ್ತೆಗಳು

" ಅನುಮೋದಿತ ಬಡಾವಣೆಗಳು ಲಭ್ಯ "
ಈ ವಾರಾಂತ್ಯದಲ್ಲಿ ಸೈಟ್‌ಗೆ ಬನ್ನಿ — ನೋಡಿ, ನೀವು ಖಂಡಿತಾ ಇಷ್ಟಪಡ್ತೀರಾ!

89700 56056

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

BDA SITE FOR SALE Anjanapura 9th Block 30×40 & Anjanapura 1st Block 40×60 North Contact: 9845090471

SALE ANJANAPURA 80ft Road 50x80 Commercial Site N/F 40x60 Residential 8th Block Genuine Buyers: 9880776950

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

40X60, WEST facing site for sale at, Banashankari 6th stage, 4th B Block, call 9844039482

BANASHANKARI 6TH Stage,4th Block 30x40,North Facing 40 Feet Road Near RV Architect College Contact: 8792784772

Hennur

HENNUR 20X45 North West Corner B ekatha site sale HIREMATH LAYOUT, KOTHANUR Rs.8,000/- 9945033366

BTM Layout

5888 SQFT BBMP E Katha S/F Site For Sale in BTM 4th Stage Devarchikanalli Price 11000/Sqft. Owner: 9620374404

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Kanakapura Road

GUBBALALA SITE for SALE Jayanagar Housing Society 30x40 East Facing, Good Location. Call: 9341050991, 9740148870.

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

SITE 30X40 SF BDA 1Cr 15L Negotiable Nada Prabhu Kempegowda Layout Near 300ft Road Arkavati alternate: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar:- 9945119449

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

Manyata Tech Park

SITE FOR Sale 1200 Sft, 15/40 two sites with A Khata, South Facing, Near upcoming Veeranapalya Metro station/ Manyata Tech Park, 5th B Cross, Kaveri Nagar, Bangalore- 560032. 9844509888

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

Vishweshwariah Layout

"VISVESHWARAIAH LAYOUT 6th Block 40x60 South facing Site for sale Good Location Genuine Buyers Contact: 9845500019/ 7019314962"

***40X60 E/F** BDA SITE* SALE VISHWESHWARAIAH LAYOUT BLOCK-1 Behind 100ft Road, Bank loan Available. 9742681666

'DIRECT OWNER' 30x40 WF Vishveswaraiah Layout 2nd Block, Opposite Park Full Developed Area: 8496030007/ 8310885235

Mysore

PRIME PROPERTY LAND AREA 4500 sqft heart of mysore city for sale. Presently running Hotel (lodge) also suitable for jewellery showroom or outlets. 8217724894/ 9448075617.

House

Basavanagudi

SALE OLD House 40x60 West Facing 30ft Road Vishwabharathi Society 2nd Phase Girinagar Basavanagudi: 8880014616

Magadi Road

15X40 G+2 house East Door, South Road, Kaveripura, Kamakshipalya, Magadi Road, A/E Katha, Price 69L Fixed: 9739957911

Nagasandra

3 BHK NEW DUPLEX HOUSE 1342 Sqft North Facing E-Katha 1.10Cr. Chikkbidrakallu Near Tirumalapura Metro Station. 'Srivaari Properties' 9880443362

Flat

Kanakapura Road

3BHK FLATS 2250sqft Sale Fully Teakwood & Fully Italian Marble Independent Floor Rs. 1.55Cr Near DoddKallasandr Metro Station Narayanngr: 9611144096

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Residential/ Commercial

Devanahalli

GOLDENOPPORTUNITY 24360 Sq.ftPlot 21300 Sq.ftBuiltup Gated ConvertedEkhata 15Furnished ACRooms 15Cr NandiHills road Ph:9677002197

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

J C Road

OFF J.C.ROAD (behind`SBI). South`facing 2,200sft G+4`(3 floors concrete and 4th floor`sheet) commercial building in`excellent condition having`1 passenger lift`and 2 goods`lift. Getting`rent of`Rs.2,30,000. Expecting 6.5CR (negotiable). Call-9844077067

Villas/Bunglows

Kanakapura Road

4 BHK Villa with lift measuring 3150 Sq.ft in Unit No. 02, SWATAH Block, "AXIS TATVAM" at Kaggalipura Village, Uttarahalli Hobli, Bangalore South Taluk, Bangalore. Contact: 9902401486.

Industrial & Factory

Magadi Road

FOR SALE Industrial Building off Magadi road North Facing, 30 Ft Road, Land: 8,000 Sqft, Built up- 16000 Sqft, Power: 200KvA. Contact: 9035609555

Out-Station

BUILT-TO-SUIT AVAILABLE
10 Acres Land
Fit For Warehouse / Industrial Construction
APIIC Industrial Area, Hindupur
Contact: Ravi
63662 36307

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED SITE ANJANAPURA BCCHS Layout Narayan`Nagar Jayanagar Housing Society, Banashankari 6th`Stage 30x40,40x60. Direct Registration. Broker Excuse. Call:9663454878

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

WEEKEND CORNER

ಕ್ಲಾಸಿಫೈಡ್ಸ್

COMMERCIAL BUILDING FOR IMMEDIATE SALE AT KORAMANGALA
Site Area 2900 sq ft, Built up 6350 sq ft, Near Sony World Junction, Behind Oasis Mall, having two side roads front and back, reasonable price
CONTACT: 9886060250

RUNNING SPECIALTY HOSPITAL FOR SALE - SOUTH BENGALURU (J.P.NAGAR)
Well-established, fully operational specialty hospital in South Bengaluru.
- 50+ beds, ICUs, modular OTs
- NABH/ISO compliant
- Excellent occupancy & reputation
- Ideal for hospital groups / investors

Serious buyers only.
Property Champions
CONTACT : 9845950996

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

Vishweshwariah Layout

"WANTED 50X80, 40X60 EAST OR NORTH FACING SITE IN BDA VISHVESHWARAIAH LAYOUT, ULLAL UPKAR LAYOUT CALL: 6366903154"

WANTED BDA Site Vishweshwaria Layout 30x40, 40x60 Contact: 7899570235

JOB
To Place your Classified Ads Contact:
9886213331

RENTAL PROPERTIES

Accommodation Available

Commercial

AVAILABLE OFFICE space fully furnished 3500sqft 50 work stations, 3 Office rooms, 1 Conference room, 1 Server room, 4 toilets with UPS and Generator, 3rd floor M.R.Complex 1st sector, 27th Main, HSR Layout, Bangalore. And 1st floor 3000sqft and 2nd floor 3000sqft Available in Kudlu above Axis Bank. for Rent. 9845539612.

BUILDERS ESSENTIAL

Water Proofing

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

PUBLIC NOTICE

Notice is hereby given that my client is intending to purchase the schedule mentioned property from its owner Smt Gajalakshmi .N Daughter of Sri Narasimha Reddy, Residing at #186, 1st Block Somanahalli, Bangalore-560082.

Any person/s having or claiming any right, title, estate or interest by way of inheritance, mortgage, sale, lease lien, charge, trust, maintenance, easements, transfer, license, possession, gift, encumbrance or in whatsoever manner are hereby required to give notice of the same to the undersigned in the address mentioned below within **10 days** from the date of publication thereof, together with the copies of all documents on the basis of which such claims are made, failing which any such right, title, interest or claim, if any will be deemed to have been waived and not binding on my client and my client will proceed to conclude the transaction of purchase without reference to the same, if any.

SCHEDULE PROPERTY

All that piece and parcel of the agricultural land bearing **Sy. No. 67/B New No. 67/2** measuring **13 guntas** situated at Taralu village, Uttarahalli Hobli, Bangalore South, bounded on the: East by: Land bearing Sy. No. 67/1, West by: Land bearing Sy. No. 68, North by: Road, South by: Sarakari Halla.

Date: 14.02.2026 Place: Mysore

**Sd/- RAKHEE JAIN,
Advocate, #1143, 1st Floor,
Chanakya Circle, Geetha Road,
Chamarajapuram, Mysore-570005**

JOB OPPORTUNITIES

General

WANTED FOR Billing and Godown Incharge Qualification PU Pass With`Basic Computer knowledge Location Wilson-Garden Siddaiah Road Near Shantinagar Bus-stand Call:9845351200 9535218502.

PERSONAL

Lost

DOCUMENT LOST

I, **Pushpalatha J,** Residing at No.584, Kamala Nagar, Shankarnag Bus Stop, 1st Main Road, Bangalore - 79, have lost the **Original Lost My Gift Deed, Document Gift Deed Site No. 508/6 Dated-16/03/2007, Book No. ANK-1-32912-2006-07, Register at Anekal.** while in transit. If found please **Contact No: 9845221867.**

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

DH DECCAN HERALD Classifieds
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS

www.dhclassifieds.com
BOOK NOW
*Conditions apply

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

DH DECCAN HERALD | ಪ್ರಜಾವಾಣಿ

https://dhclassifieds.com

Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment



ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

COLLATERAL

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

THE HINDU GROUP

VAISHNAVI®

Presents

THE HINDU 2026 Livingspaces

Powered By

ORCHIDS® The International School

PARTICIPATE & WIN A FREE GOLD COIN* EVERY HOUR!

Join the contests at the venue and win prizes worth upto ₹10,000.*

PROPERTY SHOPPING SEASON IS HERE!

WALK IN TO BAG THE BEST PROPERTY DEALS IN TOWN.

The Hindu Livingspaces brings you an unmatched range of homes, apartments & commercial investments that best suit your tastes, budget, and dreams. The exhibition features **reputed builders, trusted land developers, and leading financial institutions** under one roof.

FEBRUARY 21&22

CHANDRA SAGARA CONVENTION HALL, JAYANAGAR, NEAR ASHOKA PILLAR BENGALURU

200+ PRESTIGIOUS PROJECTS

To find your dream property, register using the QR code or visit link: newsth.live/LSBL2026PA

FREE ENTRY

FOR QUERIES, CONTACT +91 94483 64925

Title Sponsor: VAISHNAVI

Powered By: ORCHIDS The International School

In Association with: SBR GROUP, DS MAX

Gold Sponsors: Assetz, LivingWalls, KNS INFRA, SOWPARNIKA Delivering Happiness, SENTIENT, ABHEE VENTURES, AMBERSTONE, Sapthagiri, AASHIRVAD, ELEGANT Builders & Developers, MOGG'S ESTATES

Gold Sponsors: NISCHITHA PROPERTIES Pvt.Ltd., HABULUS, ALLIANCE SQUARE PROPERTIES, A&A Realti

Banking Partners: Repco Home Finance, IDBI BANK Bank Aisa Dost Jaisa

Construction Partner: SUDARSHAN

Food Partner: EMPIRE

Jewellery Partner: Prathibha

Beverage Partner: Cothas

NISCHITHA PROPERTIES Pvt.Ltd.
More Than Real Estate

80-90% ಬ್ಯಾಂಕ್ ಸಾಲ ಲಭ್ಯವಿದೆ
A SAFE • SMART • SECURE INVESTMENT

9164009004
www.nischithaproperties.com

Just minutes away from upcoming METRO

BUY TODAY for Growth,
BUILD TOMORROW for Life

LIMITED PERIOD OFFER
₹3999* per sqft
* T&C Apply

₹100 per sqft OFF
SHIVARATHRI SPECIAL OFFER
for SPOT BOOKING

Premium 'A'-Khatha Plots
ನೆಲಮಂಗಲ ಹತ್ತಿರ

Amenities

Guaranteed Best Appreciation
Resale Assistance Available
Buy-Back Option

Location Highlights
- Just 5 mins from NH4
- 2 Km from BH Road
- Close to schools, Colleges & Hospitals
- Great Connectivity to Peenya & Nice Road

Ready for Registration

RAJATHADRI GREEN CITY

ಕೇವಲ 1.5 km ಅಂತರದಲ್ಲಿ
ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್‌ವೇ

Premium & Luxury Plots in
SOUTH BANGALORE
Top notch Developments & Amenities
- Wide Roads - 60 ft, 40ft and 33ft.
- Amphitheatre
- Kids play area
- Semi-Opened out door gym.
- 3 Beautiful parks
- Underground Drainage & Electricity

only
COMMERCIAL PLOTS
available

SRIVEN DAKSHA ELITE

ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಹತ್ತಿರ

Breathe Easy with Ample Ventilation & Natural Light in every Corner!
2 BHK ₹49 LACS*
Gated community with Just
168 units in 1.24 acres
Perfect for Families, IT Professionals & Investors

ROYALE CONCORDE
Build Learn Grow
KALYAN NAGAR | CHAMARAJPET

SCAN HERE TO REGISTER

ADMISSIONS OPEN FOR 2026-27
NURSERY TO GRADE- IX & GRADE XI (CBSE)
PU - SCIENCE |COMMERCE-REGULAR/INTEGRATED

ROYALE CONCORDE INTERNATIONAL SCHOOL & PU COLLEGE
WWW.RCIS.IN
KALYAN NAGAR & CHAMARAJPET
WWW.RCPUC.COM
For Admissions : 8095089580/9036473034

ROYALE CONCORDE AVIATION ACADEMY
(Cabin Crew Training Programs)
For Admissions : 7204805777 / 7204806777

ROYALE CONCORDE GROUP OF INSTITUTIONS
Kalyan Nagar Campus : 6th B Main Rd, Chelekare, Kalyan Nagar, Bengaluru - 560043 | 9036473034 / 9036473030
Chamarajpet Campus : 1st Main Road, Tippu Sultan Palace Rd, Chamrajpet, Bengaluru - 560018 | 8095089580 / 9844781444